വാല്യം 149

മഞ്ചേശ്വരം ബ്ലോക്ക്

(കാസർഗോഡ് ജില്ല)

1. ബേളൂർ
2. കുംപഡാജെ
3. മംഗൽപാടി
4. വോർക്കാടി
5. പുതിഗെ
6. മീഞ്ച
7. മഞ്ചേശ്വരം
8. കുമ്പള
9. പൈവളികെ
10. എന്മകജെ
11. ബദിയടുക്ക



ಒಂಭತ್ತನೆಯ ಜನಕೀಯ ಯೋಜನೆ

ಮೊಂಜ ಗ್ರಾಮ ಪಂಚಾಯತು

ಅಭಿವೃದ್ಧಿ ವರದಿ

1996







Printed at NATIONAL PRESS Mangalore-1 Ph: 440178



ಒಂಭತ್ತನೇ ಯೋಜನೆ ಜನಕೀಯ ಯೋಜನೆ

ಮೊಂಜ ಗ್ರಾಮ ಪಂಚಾಯತ್

ಗ್ರಾಮ ಪಂಚಾಯತ್ ಅಭಿವೃದ್ಧಿ ಸೆಮಿನಾರ್

ಸಮಗ್ರ ಅಭಿವೃದ್ಧಿ ವರದಿ

ಕಾಸರಗೋಡು ಜಿಲ್ಲೆ

"ಭಾರತ ಕೃಷಿ ಪ್ರಧಾನ ದೇಶವಾಗಿದೆ,
ಕೃಷಿಕನೇ ಭಾರತದ ಬೆನ್ನೆಲುಬು
ಸಾಲದ ಹೊರೆಯಿಂದ ಕೃಷಿಕನ ಬೆನ್ನು ಬಾಗಿದೆ
ಕೃಷಿಕನ ತಲೆಯ ಮೇಲಿರುವ ಸಾಲದ ಹೊರೆಯನ್ನು
ತೆಗೆಯದೆ ಆತನ ಬೆನ್ನು ನೆಟ್ಟಗಾಗದು "
ಕೃಷಿಕ ನೆಟ್ಟಗಾಗದೆ ದೇಶನೆಟ್ಟಗಾಗದು

- ಮಹಾತ್ಮ ಗಾಂಧೀಜಿ

ಸಂಪಾದಕರು

ಎನ್. ಸುಂದರ ಶೆಟ್ಟಿ M.A., BEd.,

ಸಂಪಾದಕ ಮಂಡಳಿ

ಎಂ. ಸಂಜೀವ ಶೆಟ್ಟಿ

ಪಿ. ಕಿಟ್ಟು ಮೂಲ್ಯ

ಎಸ್.ಟಿ. ಇಬ್ರಾಹಿಂ, ಬಿ.ಎಸ್.ಸಿ.

ಬಿ. ಮಹಾಲಿಂಗ ನಾಯ್ಕ್

ಮುಖಪುಟ ವಿನ್ಯಾಸ

ಸಾದಿಕ್ ಚಿನಾಲ

ಅಕ್ಷರ ಜೋಡಣೆ

ಮಧುಬನ್ ಗ್ರಾಫಿಕ್ಸ್, ಅಳಕೆ, ಮಂಗಳೂರು - 3 ಫೋನ್ : 33773

ಪ್ರಿಂಟರ್ಸ್ :

ನ್ಯಾಷನಲ್ ಪ್ರಿಂಟರ್ಸ್, ಓಲ್ಡ್‌ಕೆಂಟ್ ರಸ್ತೆ, ಮಂಗಳೂರು

ವಿಷಯಾನುಕ್ರಮಣಿಕೆ

1. ಮುನ್ನುಡಿ

2. ಪಂಚಾಯತಿನ ಸಾರ್ವಜನಿಕ ವಿವರ

3. ಸಾಮಾಜಿಕ - ಸಾಂಸ್ಕೃತಿಕ ಚರಿತ್ರೆ

4. ಭೂಪ್ರಕೃತಿ, ಜಲ ಪ್ರಕೃತಿ, ಜನ ಪ್ರಕೃತಿ

5. ಅಭಿವೃದ್ಧಿ ವಲಯಗಳ ಅವಲೋಕನ

5.1 ಕೃಷಿ ಮತ್ತು ನೀರಾವರಿ

5.2 ಪಶು ಸಂಗೋಪನೆ ಮತ್ತು ಮೀನುಗಾರಿಕೆ

5.3 ವಿದ್ಯಾಭ್ಯಾಸ

5.4 ಕೈಗಾರಿಕೆ

5.5 ಆರೋಗ್ಯ, ಕುಡಿ ನೀರು

5.6 ಸಾರಿಗೆ, ಚೈತನ್ಯ ಮತ್ತು ಮಾರ್ಕೆಟ್

5.7 ಭವನ ನಿರ್ಮಾಣ ಮತ್ತು ಸಾಮಾಜಿಕ ಕ್ಷೇಮ

5.8 ಸಂಸ್ಕೃತಿ

5.9 ವನಿತಾ


5.10 ಸಹಕಾರೀ ವಲಯ

5.11 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ

5.12 ಸಂಪನ್ಮೂಲ ಸಂಗ್ರಹ

6. ಉಪಸಂಹಾರ

ಪಂಚಾಯತಿನ ಮಾಜಿ ಅಧ್ಯಕ್ಷರು



ವಿ. ಅನಂತರಾಮ ತಾಳಿತ್ತಾಯ

ಕಾಲಾವಧಿ 19-12-1963ರಿಂದ 19.10.1984



ಬಿ. ಸದಾಶಿವ ರೈ

ಕಾಲಾವಧಿ 3.2.1988ರಿಂದ 3.10.1995

ಪ್ರಸಕ್ತ ಸಾಲಿನ ಆಡಳಿತ ಮಂಡಳಿ

4.10.1995ರಿಂದ



ಶ್ರೀಮತಿ ಸುಂದರಿ ಕೆ.

ಅಧ್ಯಕ್ಷೆ



ಸಚ್ಚಿಂದ್ರ ಶೆಟ್ಟಿ ಎಂ.

ಉಪಾಧ್ಯಕ್ಷರು




ಕೆ. ಅಬ್ದುಲ್ಲಾ

ಸ್ಥಾಯೀ ಸಮಿತಿ ಅಧ್ಯಕ್ಷರು


ಪಂಚಾಯತು ಸದಸ್ಯರು



ದೊಡ್ಡಪಂಜಿ



ಪದ್ಮನಾಭ ರೈ



ಬಿ. ಮಹಮ್ಮದ್ ಕುಂಞ



ಕೆ. ತಿಮ್ಮಣ್ಣ ಭಟ್




ಶಾಂಭವಿ ಎಂ.



ಚಂದ್ರಿಕಾ ಭಟ್

ಪಂಚಾಯತು ಕಾರ್ಯದರ್ಶಿ



ಶ್ರೀ ಪಿ. ಚಂದ್ರಶೇಖರ ಶೆಟ್ಟಿ

ಮುನ್ನುಡಿ

ಪರಶುರಾಮ ಸೃಷ್ಟಿ ಎಂದೇ ಕರೆಯಲ್ಪಡುವ ಈ ಕೊಂಕಣ ಪ್ರದೇಶ ಪೌರಾಣಿಕ ಕಾಲದಿಂದಲೂ ಧಾರ್ಮಿಕ ಕ್ಷೇತ್ರವಾಗಿತ್ತು. ಯಾವುದೇ ಪ್ರಾಕೃತಿಕ ವಿಕೋಪಕ್ಕೂ ಒಳಗಾಗದೆ ಇಲ್ಲಿಯವರು ಸಂತೃಪ್ತಿಯ ಜೀವನ ಸಾಗಿಸುತ್ತಿದ್ದರು. ಸತ್ಯ, ಧರ್ಮ, ಧೈರ್ಯ ಪರಾಕ್ರಮಗಳ ಮೂಲಕ ಈ ನಾಡಿನ ಕೀರ್ತಿಯನ್ನು ಗಗನದೆತ್ತರಕ್ಕೆ ಹಾರಿಸಿದ ವೀರ ಪುರುಷರಿಗೂ, ವೀರ ಮಹಿಳೆಯರಿಗೂ ಈ ಪುಣ್ಯ ಭೂಮಿ ಜನ್ಮಕೊಟ್ಟಿದೆ. ಹಲವು ಧರ್ಮ ಈ ನಾಡನ್ನು ಪ್ರವೇಶಿಸಿದರೂ ಹಾಲು ನೀರಿನಂತೆ ಒಂದಾಯಿತೇ ವಿನಃ ಎಣ್ಣೆ ನೀರಿನಂತೆ ಬೇರ್ಪಡಲಿಲ್ಲ. ಪರಧರ್ಮ ಸಹಿಷ್ಣುತೆಯೂ ಸೌಹಾರ್ದತೆಯೂ ನಮ್ಮ ಹಿರಿಯರ ಉತ್ತಮ ಗುಣಗಳಾಗಿದ್ದವು.

ಕಾಲಕ್ರಮೇಣ ವಿದೇಶಿಯರ ಆಕ್ರಮಣವಾಯಿತು. ನಮ್ಮವರೇ ದೇಶದ್ರೋಹಿಗಳಾಗಿ ಅಂತಃ ಕಲಹವೇರ್ಪಟ್ಟು ನಮ್ಮ ಒಡೆತನವನ್ನು ನಾವೇ ಆಂಗ್ಲೇಯರಿಗೆ ಮಾರಿಕೊಂಡೆವು. ಸುಮಾರು 250 ವರ್ಷಗಳ ದೀರ್ಘಕಾಲ ಅವರ ಜೀತದಾಳುಗಳಾಗಿ ತಮ್ಮತನವನ್ನು ಕಳಕ್ಕೊಂಡು ನಿರ್ಗತಿಕರಾಗಿ ಕಾಲ ಕಳೆದವು. ಭಾರತದ ಭಾಗ್ಯಾಕಾಶದಲ್ಲಿ ಅರುಣೋದಯವಾಯಿತು. ಮಹಾತ್ಮರೆಂದೇ ಈಗ ಪೂಜೆಗೊಳ್ಳುವ ಗಾಂಧೀಜಿಯವರ ನಿರತ ಹೋರಾಟದ ಮೂಲಕ ಭಾರತಕ್ಕೆ ಸ್ವಾತಂತ್ರ್ಯ ದೊರಕಿತು. "ಗ್ರಾಮರಾಜ್ಯ ರಾಮರಾಜ್ಯ" ಇದು ಗಾಂಧೀಜಿಯವರ ಕನಸಾಗಿತ್ತು. ಗ್ರಾಮ ಸ್ವರಾಜ್ಯದಿಂದಲೇ ಭಾರತದ ದರಿದ್ರ ಜನಕೋಟಿಯ ಉದ್ಧಾರ ಸಾಧ್ಯವೆಂದು ಗಾಂಧೀಜಿಯವರೇ ಹೇಳಿದ್ದರು. ಸ್ವಾತಂತ್ರ್ಯ ದೊರಕಿ 49 ವರುಷಗಳೇ ಸಂದರೂ, ಈ ಉದ್ದೇಶ ಪೂರ್ಣವಾಗಿ ಸಾಧಿಸಲ್ಪಡದಿದ್ದರೂ, ಹಲವು ಕ್ಷೇತ್ರಗಳಲ್ಲಿ ಇದರ ಪ್ರಭಾವ ಕಂಡು ಬರುತ್ತದೆ. ಅದರಲ್ಲಿ ನಮ್ಮ ಮೊಂಜ ಪಂಚಾಯತು ಒಂದಾಗಿದೆ.

ಸಾಕ್ಷರತೆ, ಆರೋಗ್ಯ ವಲಯಗಳಲ್ಲಿ ನಮ್ಮ ಕೇರಳ ಹೆಚ್ಚಿನ ಅಭಿವೃದ್ಧಿ ಸಾಧಿಸಿದ್ದರೂ ಆರ್ಥಿಕ ರಂಗದಲ್ಲಿ ಬಹಳವಾಗಿ ಹಿಂದುಳಿದಿದೆ. ಹಲವು ವಲಯಗಳಲ್ಲಿ ಉಂಟಾದ ಅಸಂತುಳಿತವಾದ ಅಭಿವೃದ್ಧಿಯ ಫಲವಾಗಿ ದಾರಿದ್ರ್ಯ ರೇಖೆಯಿಂದ ಕೆಳಮಟ್ಟದಲ್ಲಿ ವಾಸಿಸುವ ಜನರ ಸಮಸ್ಯೆಗಳು ಇನ್ನೂ ಬಗೆಹರಿದಿಲ್ಲ. ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿದೆ. ದೇಶದ ಅಭಿವೃದ್ಧಿಗಾಗಿಯೇ ರೂಪೀಕರಿಸಲ್ಪಟ್ಟ ಈ ಮೊದಲ 8 ಪಂಚವಾರ್ಷಿಕ ಯೋಜನೆಗಳು ಜನರ ಆಶೋತ್ತರವನ್ನು ಈಡೇರಿಸುವಲ್ಲಿ ಫಲಪ್ರದವಾಗಲಿಲ್ಲ. ಇವುಗಳಲ್ಲಿ ವಿಕಸನ ಯೋಜನೆ ಕುರಿತಾದ ಕಾರ್ಯಕ್ರಮಗಳು ಮೊದಲು ಕೇಂದ್ರದಲ್ಲೂ ಬಳಿಕ ಪ್ರಾಂತ್ಯ ರಾಜಧಾನಿಯಲ್ಲೂ ತೀರ್ಮಾನವಾಗಿ ವಿವಿಧ ಸರಕಾರೀ ಇಲಾಖೆಗಳ ಮೂಲಕ ಕಾರ್ಯಗತಗೊಳಿಸಲಾಗುತ್ತಿತ್ತು. ಈ ವರೆಗೆ ನಡೆಸಿದಂತಹ ಯೋಜನೆಗಳು ಹಾಗೂ ಅಭಿವೃದ್ಧಿ ಪ್ರಕ್ರಿಯೆಗಳು ಪರಸ್ಪರ ಪೂರಕವಾಗಿರಲಿಲ್ಲ. ಅದರ ಫಲವಾಗಿ ಹೆಚ್ಚಿನ ಯೋಜನೆಗಳು ಪುಸ್ತಕಗಳಲ್ಲಿ ಮಾತ್ರ ತೋರಿಬಂದು ಕಾರ್ಯರೂಪದಲ್ಲಿ ಫಲಪ್ರದವಾಗಲಿಲ್ಲ. ಆದುದರಿಂದ ಗ್ರಾಮೀಣ ಜನರ ಆಶೆ ಆಕಾಂಕ್ಷೆಗಳನ್ನು ಪೂರೈಸಲು ಇವು ಸಹಕಾರಿಯಾಗಲಿಲ್ಲ.

ಕಾರ್ಯಕ್ರಮಗಳ ಯೋಜನೆಯಲ್ಲೂ ನಿರ್ವಹಣೆಯಲ್ಲೂ ಜನರ ಸಹಭಾಗಿತ್ವ ಇರಲಿಲ್ಲ. ಇದರಿಂದ ಕಾರ್ಯಕ್ರಮ ನಿರ್ವಹಣೆ ಜನರಿಂದ ದೂರವಾಯಿತು. ಇದು ಪ್ರಾದೇಶಿಕ ಸಂಪನ್ಮೂಲಗಳ ಸಂಗ್ರಹಣೆಯ ಸಾಧ್ಯತೆಗಳನ್ನು ಇಲ್ಲದಾಗಿಸಿತು.

ಕೇರಳ ಇಂದು ಅತ್ಯಂತ ಭೀಕರ ಆರ್ಥಿಕ ಸಮಸ್ಯೆಯನ್ನು ಎದುರಿಸುತ್ತಿದೆ. ಕೃಷಿರಂಗ ನಿರೀಕ್ಷಾನುಸಾರ ಬೆಳೆಯುವುದಿಲ್ಲ. ಕೈಗಾರಿಕಾ ಕ್ಷೇತ್ರ ಬೆಳವಣಿಗೆ ಇಲ್ಲದೆ ಕುಂಠಿತವಾಗಿದೆ. ನಿರುದ್ಯೋಗ ಹೆಚ್ಚುತ್ತಿದೆ. ಸಾರ್ವಜನಿಕ ಸಂಸ್ಥೆಗಳ ಸೇವನಾ ಕುಸಿತ ಜನಜೀವನವನ್ನು ಬಾಧಿಸಿದೆ. ಈ ಸಮಗ್ರ ವಿಕಸನ ಕಾರ್ಯದ ವೈಫಲ್ಯಗಳನ್ನು ಲಕ್ಷಿಸಿದ ಕೇರಳ ಸರಕಾರ 9ನೇಯ ಪಂಚವಾರ್ಷಿಕ ಯೋಜನೆಯನ್ನು ಜನಕೀಯ ಯೋಜನೆಯಾಗಿ ಪರಿವರ್ತಿಸಿದೆ.

ಯೋಜನೆಗಳು ಜನರ ಸಹಭಾಗಿತ್ವದೊಂದಿಗೆ ಸಮಗ್ರವೂ ವಿಕೇಂದ್ರೀಕೃತವೂ ಆಗುವುದು. ಅತ್ಯಂತ ಕೆಳಸ್ತರದಲ್ಲಿರುವ ಗ್ರಾಮ ಪಂಚಾಯತು ಮಟ್ಟದಿಂದ ಈ ಪ್ರಕ್ರಿಯೆ ಪ್ರಾರಂಭವಾಗಬೇಕು.

ಕೇರಳದಲ್ಲಿ ಜ್ಯಾರಿಗೆ ಬರುವ ಯೋಜನಾ ಪ್ರಕ್ರಿಯೆಯು ಒಂದು ಬದಲಾವಣೆಯ ಗಾಳಿ. ಪಂಚಾಯತು ರಾಜ್ ಮಸೂದೆ ಪಾಸಾದ ಬಳಿಕ ಹೆಚ್ಚಿನ ಅಧಿಕಾರಗಳನ್ನು ಪಂಚಾಯತುಗಳು ಪಡೆದಿರುತ್ತವೆ.

9ನೆಯ ಯೋಜನೆಯು 35% ರಿಂದ 45% ಈ ರೀತಿಯಲ್ಲಿ ಕೆಳಸ್ತರಗಳಿಂದ ಆ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂಬುದು ಪ್ಲಾನಿಂಗ್ ಬೋರ್ಡಿನ ದೃಷ್ಟಿಕೋನ. ಮೊದಲಿನ ಕಾರ್ಯಯೋಜನೆಗಳಿಗಿಂತ ಬೇರೆಯೇ ಆಗಿದೆ. ಇಂದಿನ ಯೋಜನೆಯ ಪ್ರಸ್ತಾನ, ಆತ್ಮ ವಿಶ್ವಾಸದಿಂದ ಮತ್ತು ದೃಢತೆಯಿಂದ ಜನರು ಜನರಿಗಾಗಿ ಕಾರ್ಯ ಪ್ರವರ್ತರಾಗಲು ಇದು ಸಹಕಾರಿಯಾಗಿದೆ. ಎಲ್ಲರ ಸಹಭಾಗಿತ್ವದಿಂದ ಗ್ರಾಮ ಸಭೆಗಳನ್ನು ಜರಗಿಸಿ ಅಲ್ಲಿ ನಡೆಸಿದ ಚರ್ಚೆಗಳು ಅದರಿಂದ ಆರಿಸಿದ ವರದಿಗಳು ಮತ್ತು ನಿರ್ದೇಶನಗಳು ಇವೆಲ್ಲ ಈ ಸೆಮಿನಾರಿನಲ್ಲಿ ಸಮರ್ಪಿಸುವ ವಿಕಸನ ರಿಪೋರ್ಟಿನ ಅಡಿಪಾಯಗಳು. ಜನರ ಸಹಭಾಗಿತ್ವ ನಿರ್ಣಾಯಕವಾದುದಾಗಿರಬೇಕು ಕೇರಳದ 9ನೇಯ ಯೋಜನೆ.

ಪಂಚಾಯತಿನ ನಿಯೋಜಕ ಮಂಡಲಗಳಲ್ಲಿ ನಡೆಸಿದ ಗ್ರಾಮ ಸಭೆಗಳಲ್ಲಿ ಆಯಾಯ ಪ್ರದೇಶದ ವಿಕಸನ ಸಮಸ್ಯೆಗಳನ್ನು ತಿಳಿದುಕೊಂಡು ಪಟ್ಟಿ ಮಾಡುವುದು, ಸಾಧ್ಯವಾದ ಪರಿಹಾರ ಮಾರ್ಗಗಳನ್ನು ಕಂಡು ಹುಡುಕುವುದು ಈ ಸಭೆಯ ಪ್ರಧಾನ ಉದ್ದೇಶ. ಗ್ರಾಮ ಸಭೆಗಳಿಂದ ಬರುವ ನಿರ್ದೇಶನಗಳ ಹಾಗೂ ವಿವಿಧ ಸರಕಾರಿ ಆಫೀಸುಗಳಿಂದ ಸಂಗ್ರಹಿಸಿದ ವಿವರಗಳ ಆಧಾರದಲ್ಲಿ ಪಂಚಾಯತಿನ ಒಂದು ವಿಧಗ್ಧ ಸಮಿತಿ ಈ ವಿಕಸನ ರಿಪೋರ್ಟು ತಯಾರಿಸುವಲ್ಲಿ ಶ್ರಮಿಸುತ್ತಿದೆ.

ಕೇವಲ ಒಂದು ಪಂಚಾಯತು ಈ ಘನ ಉದ್ದೇಶವನ್ನು ಪೂರೈಸುವುದು ಸಾಧ್ಯವಿಲ್ಲ. ನಾವೆಲ್ಲರೂ ಒಂದಾಗಿ ಅಣ್ಣ ತಮ್ಮಂದಿರಂತೆ ಪಕ್ಷಭೇದ ಮರೆತು ಕೋಮು ಭಾವನೆಗೆ ಅವಕಾಶ ಕೊಡದೆ ಸೇವಾ ಮನೋಭಾವದಿಂದಲೂ ನಿಸ್ವಾರ್ಥ ಭಾವನೆಯಿಂದಲೂ, ಆತ್ಮಾರ್ಥವಾಗಿಯೂ ದೃಢತೆಯಿಂದ ಸರ್ವಜನರ ಸಹಾಯ ಸಹಕಾರದಿಂದ ಮಾತ್ರವೇ ಇದು ಸಾಧ್ಯ.

ಇದಕ್ಕೆ ಪೂರಕವಾಗಿ ಈ ಮೊದಲು ಜರಗಿದ ಗ್ರಾಮ ಸಭೆಗಳಲ್ಲಿ ಈ ಸೇವಾ ಮನೋಭಾವ, ನಿಸ್ವಾರ್ಥ ಸೇವೆ, ಆತ್ಮ ಸ್ಥೈರ್ಯವನ್ನು ನಾವು ಕಂಡಿದ್ದೇವೆ. ಈ ಉತ್ಸಾಹದ ಚಿಲುಮೆ ಉಕ್ಕಿ ವಿಶಾಲವಾಗಿ ಹರಿದು ಇದರಲ್ಲಿ ಮಿಂದು ಈ ಪಂಚಾಯತಿನ ವಿಜಯೋತ್ಸವದಲ್ಲಿ ನಾವೆಲ್ಲರೂ ಸಹಭಾಗಿಗಳಾಗೋಣವೆಂದು ಆಶಿಸುತ್ತೇವೆ.

ಭವಿಷ್ಯದಲ್ಲಿ ನಮ್ಮ ಪಂಚಾಯತು ವಲಯ ಸಂಪತ್ತು ಅಭಿವೃದ್ಧಿಯಿಂದ ಕೂಡಿ ಮುಂದಿನ ಪೀಳಿಗೆ ಪರರೆಡೆಗೆ ಕೈ ಚಾಚದೇ ಸ್ವತಂತ್ರವಾಗಿ ತನ್ನೀ ಕಾಲ ಮೇಲೆ ನಿಲ್ಲುವಂತಾಗಬೇಕೆಂದು ಹಾರೈಸುತ್ತೇವೆ.

ಮೊಂಜ ಗ್ರಾಮ ಪಂಚಾಯತು : ಸಾರ್ವಜನಿಕ ವಿವರಗಳು

ಪಂಚಾಯತಿನ ಹೆಸರು	:	ಮೊಂಜ ಗ್ರಾಮ ಪಂಚಾಯತು
ಒಳಗೊಳ್ಳುವ ಗ್ರಾಮ ಕಚೇರಿಗಳು	:	ಮೊಂಜ, ಕಡಂಬಾರು
ಒಳಗೊಳ್ಳುವ ಗ್ರಾಮಗಳು	:	ಕುಳೂರು, ಮೊಂಜ, ಮಜಿಬೈಲು, ತಲೇಕಳ, ಕಳಿಯೂರು, ಕೋಳಿಯೂರು, ಮೂಡಂಬೈಲು, ಕಡಂಬಾರು
ಬ್ಲೋಕ್ ಪಂಚಾಯತ್ ವಿಭಾಗ	:	ಮೊಂಜ
ಬ್ಲೋಕ್ ಪಂಚಾಯತು	:	ಮಂಜೇಶ್ವರ
ನಿಯೋಜಕ ಮಂಡಲ	:	ಮಂಜೇಶ್ವರ
ತಾಲೂಕು	:	ಕಾಸರಗೋಡು
ವಿಸ್ತೀರ್ಣ	:	44.91 Sq. K.M.

ಗಡಿಗಳು

ಬಡಗು	:	ವರ್ಕಾಡಿ ಪಂಚಾಯತು
ಮೂಡು	:	ಪೈವಳಿಕೆ ಪಂಚಾಯತು
ತೆಂಕು	:	ಮಂಗಲ್ಪಾಡಿ ಪಂಚಾಯತು
ಪಡು	:	ಮಂಜೇಶ್ವರ ಪಂಚಾಯತು

ಜನಸಂಖ್ಯೆ :

ಪುರುಷರು	:	8937
ಮಹಿಳೆಯರು	:	9309
ಒಟ್ಟು	:	18246

ಅಧ್ಯಕ್ಷರು	:	ಶ್ರೀಮತಿ ಸುಂದರಿ .ಕೆ
ಉಪಾಧ್ಯಕ್ಷರು	:	ಎಂ. ಸಚ್ಚೀಂದ್ರ ಶೆಟ್ಟಿ
ಸ್ಥಾಯೀ ಸಮಿತಿ ಅಧ್ಯಕ್ಷರು	:	ಕೆ. ಅಬ್ದುಲ್ಲ

ಪಂಚಾಯತಿನ ಸಾಮಾಜಿಕ-ಸಾಂಸ್ಕೃತಿಕ ಚರಿತ್ರೆ

ಮದ್ರಾಸು ಸಂಸ್ಥಾನಕ್ಕೆ ಒಳಪಟ್ಟ ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಭಾಗವೇ ಕಾಸರಗೋಡು ತಾಲೂಕು. ಇದಕ್ಕೆ ಹೊಂದಿಕೊಂಡು ದಕ್ಷಿಣಕ್ಕೆ ಮಲಬಾರು ಪ್ರದೇಶವಿದೆ. ಕಾಸರಗೋಡು ತಾಲೂಕಿನ ಉತ್ತರ ಭಾಗದಲ್ಲಿರುವ ಪ್ರದೇಶವೇ ಮಿಂಜ ಪಂಚಾಯತು ವಲಯ.

ಮಿಂಜ ಎಂಬ ಹೆಸರು ಸುಮಾರು ಶತಕದ ಮೊದಲೇ ಈ ಪ್ರದೇಶಕ್ಕೆ ಬಂದಿತ್ತು ಎಂದು ಹಿರಿಯರ ಅಂಬೋಣ. ಮಿಂಜ ಎಂಬ ಹೆಸರಿನ ಬಂಟರ ಮನೆತನವೊಂದು ಇತ್ತು. ಆ ಮನೆಯ ಹಿರಿಯರಾಗಿ ಕಿನ್ನ ಭಂಡಾರಿ ಎಂಬವರಿದ್ದರು. ಅವರ ಮನೆತನಕ್ಕೆ ಇಂಗ್ಲೀಷರ ಕಾಲದಲ್ಲಿ ಪಟೇಲಿಕೆ ಬಂದಿತ್ತು. ಆ ಮನೆಯ ಹೆಸರೇ ಆ ಗ್ರಾಮಕ್ಕೆ ಬಂದು ಮಿಂಜ ಗ್ರಾಮದ ಉದಯವಾಯಿತು. ಆದರೆ ಈಗ ಮಿಂಜ ಎಂಬ ಸ್ಥಳ ಪ್ರಕೃತ ಪೈವಳಿಕೆ ಗ್ರಾಮಕ್ಕೆ ಸೇರಿದೆ. ಮಿಂಜ ಗ್ರಾಮ ಮತ್ತು ಮುನ್ನಿಪ್ಪಾಡಿ ಗ್ರಾಮಗಳು ಸೇರಿ ಈಗಿನ ಮಿಂಜ ಗ್ರಾಮ ವಿಶಾಲವಾಗಿ ಹರಡಿದೆ. ಆಗ ಪಟೇಲಿಕೆ ದರ್ಭೆ ಮನೆತನಕ್ಕೆ ಸೇರಿತ್ತು.

ಮೊದಲು ಒಂದೊಂದು ಗ್ರಾಮ ಒಬ್ಬೊಬ್ಬ ಪಟೇಲನ ಅಧಿಕಾರ ವ್ಯಾಪ್ತಿಗೆ ಸೇರಿಕೊಂಡಿತ್ತು. ಆ ಗ್ರಾಮದ ಆಗು ಹೋಗುಗಳಿಗೆಲ್ಲ ಆ ಪಟೇಲನೇ ಜವಾಬ್ದಾರನು. ಚಿಕ್ಕ ಪುಟ್ಟ ಸಿವಿಲು, ಕ್ರಿಮಿನಲ್ ವ್ಯವಹಾರಗಳನ್ನು ಆ ಪಟೇಲರೇ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ತೀರ್ಮಾನಿಸುತ್ತಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಗ್ರಾಮಗಳಲ್ಲಿ ಪಂಚಾಯತು ಎಂಬ ಸಂಸ್ಥೆ ಇದ್ದುದು ಕೇಳಿ ತಿಳಿದು ಬರುತ್ತದೆ. ಈಗಿನ ಪಂಚಾಯತು ರೆಕಾರ್ಡಿನ ಮೂಲಕ ಮಿಂಜ, ಕುಳೂರು, ಮೂಡಂಬೈಲು ಈ ಗ್ರಾಮಗಳಲ್ಲಿ ಸುಮಾರು 1956ರಲ್ಲಿ ಪಂಚಾಯತುಗಳು ಇದ್ದವು ಎಂದು ತಿಳಿದು ಬರುತ್ತದೆ. ಆದರೆ ಹಿರಿಯರ ಹೇಳಿಕೆಯಂತೆ ಮಿಂಜದಲ್ಲಿ ಪಂಚಾಯತು ಎನ್ನುವುದು ಗ್ರಾಮ ಚಾವಡಿ ಎಂಬ ಹೆಸರಿನಲ್ಲಿ ಬಹಳ ಪೂರ್ವದಲ್ಲಿಯೇ ಕಾರ್ಯ ನಿರ್ವಹಿಸಿತ್ತು ಎಂದು ತಿಳಿದು ಬರುತ್ತದೆ.

1.1.1962ರಲ್ಲಿ ಗ್ರಾಮವನ್ನೊಳಗೊಂಡ ಮಿಂಜ ಪಂಚಾಯತು ಸರಕಾರದಿಂದಲೇ ರೂಪೀಕರಿಸಲ್ಪಟ್ಟಿತು. ಆ ಬಳಿಕವೇ ಮತದಾರರಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳಿಂದ ಕೂಡಿದ ಪಂಚಾಯತು ಆಡಳಿತ ಮಂಡಳಿ ಕಾರ್ಯಾಚರಿಸಲು ತೊಡಗಿತು.

ಇಂಗ್ಲೀಷರ ಕಾಲದಲ್ಲಿ ಹಿರಿಯ ಮನೆತನಕ್ಕೆ ಕೊಡಲ್ಪಟ್ಟಿದ್ದ ಪಟೇಲಿಕೆಯ ವಂಶ ಪಾರಂಪರ್ಯತೆ ಕೊನೆಗೊಂಡು 1957ರಲ್ಲಿ ಈ ಉದ್ಯೋಗಕ್ಕೆ ಸರ್ಕಾರದಿಂದ ನೇರವಾಗಿ ನೇಮಕಾತಿ ಆಗತೊಡಗಿತು. ಈ ಮಿಂಜ ಪಂಚಾಯತು ವಲಯದಲ್ಲಿ ಮಿಂಜ, ಕುಳೂರು, ಮೂಡಂಬೈಲು, ಮಜಿಬೈಲು, ಕಡಂಬಾರು, ತಲೇಕಳ, ಕಳಿಯೂರು ಮತ್ತು ಕೋಳ್ಯೂರುಗಳೆಂಬ ಎಂಟು ಗ್ರಾಮಗಳಿವೆ. ಮಿಂಜ ಗ್ರಾಮವು ಬಹಳ ವಿಶಾಲವಾಗಿದ್ದರಿಂದ ಅದನ್ನು ಎರಡು ನಿಯೋಜಕ ಮಂಡಲಗಳಾಗಿ ಕ್ರಿ.ಶ. 1986ರಲ್ಲಿ ವಿಭಾಗಿಸಲ್ಪಟ್ಟಿತು. ಇದರಿಂದ ಮಿಂಜ ಗ್ರಾಮ ಪಂಚಾಯತಿನಲ್ಲಿ 8 ಗ್ರಾಮಗಳಿದ್ದು 9 ನಿಯೋಜಕ ಮಂಡಲಗಳಿವೆ.

ಮಿಂಜ ಗ್ರಾಮದ ಕೇಂದ್ರ ಸ್ಥಳ ಮಿಯಪದವಿನಲ್ಲಿದೆ. ಈ ಹೆಸರು ಬರುವುದಕ್ಕೆ ಒಂದು ಸ್ಥಳ ಪುರಾಣವನ್ನು ಹಿರಿಯರು ಹೀಗೆ ಹೇಳುತ್ತಾರೆ. ತುಳು ತಿಂಗಳಾದ ಆಟಿಯಲ್ಲಿ ಅಮಾವಾಸ್ಯೆಯ ದಿನ ಹೆಚ್ಚಿನವರು ಸಮುದ್ರ ಸ್ನಾನಕ್ಕೆ ಮಂಜೇಶ್ವರ ಬಳಿಯ ಸಮುದ್ರದ ತಡಿಗೆ ಹೋಗುತ್ತಿದ್ದರು. ಅದು ತೀರ್ಥ ಅಮಾವಾಸ್ಯೆಯ ಸ್ನಾನವೆಂದೇ ಪ್ರಸಿದ್ಧಿ ಪಡೆದಿದೆ. ಹೊಸ ಮದುಮಕ್ಕಳು, ಹಿರಿಯರು, ಕಿರಿಯರು, ಎಲ್ಲರೂ ಕನ್ಯಾನ, ಮಿತ್ತನಡ್ಕ, ಕರುವೋಳು ಕೊಮ್ಮಂಗಳದಿಂದ ರಾತ್ರಿ ಬೇಗನೆ ಹೊರಟು ಮಿಯಪದವು ದಾರಿಯಾಗಿ ಮಂಜೇಶ್ವರ ಬಳಿ ಇರುವ ಸಮುದ್ರಕ್ಕೆ ಸ್ನಾನಕ್ಕೆ ಹೋಗುತ್ತಿದ್ದರು. ಸೂರ್ಯೋದಯಕ್ಕೆ ಮೊದಲಾಗಿಯೇ ಈ ಸ್ನಾನ ಮಾಡಬೇಕೆಂಬ ಪ್ರತೀತಿ ಇದೆ. ದೂರದಿಂದ ಬರುವವರು ನಡೆದು ಬಂದು ಬೆಳಗಾಗುವ ಮೊದಲು ಮಿಯಪದವಿಗೆ ಮಾತ್ರ ತಲಪುವವರೂ ಇದ್ದರು. ಅಲ್ಲಿಂದ ಸೂರ್ಯೋದಯಕ್ಕೆ ಮಂಜೇಶ್ವರಕ್ಕೆ ಹೋಗುವುದು ಅಸಾಧ್ಯವಾದುದರಿಂದ ಮಿಯಪದವಿನಲ್ಲಿರುವ ವಿಶಾಲ ಹಳ್ಳದಲ್ಲಿ ಮಿಂದು ಊರು ಸೇರುತ್ತಿದ್ದರು. ಹೋದವರು "ಎಂಕುಲು ಪದವುಡು ಮಿಯ" (ನಾವು ಪದವಿನಲ್ಲಿ ಸ್ನಾನ ಮಾಡಿದೆವು) ಹೀಗೆ ಮಿಯುವ ಪದವು ಮುಂದೆ ಮಿಯಪದವು ಎಂಬ ಹೆಸರು ಪಡೆಯಿತೆಂದು ಹಿಂದಿನ ಹಿರಿಯರು ಹೇಳುತ್ತಿದ್ದುದು ಇಂದಿನ ಹಿರಿಯರು ಹೇಳುತ್ತಾರೆ.

ಮಿಂಜ ಪಂಚಾಯತು ಮಧ್ಯಭಾಗದಲ್ಲಿದ್ದು ನಾಲ್ಕು ದಿಕ್ಕುಗಳಿಂದಲೂ ಆವರಿಸಿಕೊಂಡಿರುವ ಕುಳೂರು, ಮೂಡಂಬೈಲು, ಮಜಿಬೈಲು, ಕಡಂಬಾರು, ತಲೆಕಳ, ಕಳಿಯೂರು, ಕೋಳ್ಯೂರು ಗ್ರಾಮಗಳಿವೆ. ಮಿಂಜ, ತಲೇಕ್ಕಳ, ಕಳಿಯೂರು, ಕೋಳ್ಯೂರುಗಳಿಗೆ ಮಿಯಪದವು ಕೇಂದ್ರದಲ್ಲಿ ಗ್ರಾಮ ಕಚೇರಿಯಿದೆ. ಕುಳೂರು, ಮೂಡಂಬೈಲು, ಮಜಿಬೈಲು, ಕಡಂಬಾರು ಗ್ರಾಮಗಳಿಗೆ ಕಡಂಬಾರಿನಲ್ಲಿ ಗ್ರಾಮ ಕಛೇರಿಯಿದೆ.

ಈ ಪಂಚಾಯತಿನ ಪೂರ್ವ, ದಕ್ಷಿಣ, ಪಶ್ಚಿಮದಲ್ಲಿ ಹೊಳೆ ನದಿಗಳಿಂದ ಕೂಡಿದ ಬಯಲು ಭಾಗವೂ ಉತ್ತರದಲ್ಲಿ ಸಾನು ಪ್ರದೇಶವೂ ಇದೆ.

ಪರಂಪರಾಗತವಾಗಿ ಬಂದ ಕೃಷಿಯೇ ಜೀವನದ ಮುಖ್ಯ ಭಾಗವಾಗಿದ್ದು ಇತರ ಕುಲ ಕಸಬುಗಳು ಸಾಮಾನ್ಯವಾಗಿ ಉಪಜೀವನದ ಮಾರ್ಗಗಳಾಗಿವೆ. ಅಧಿಕ ಸಂಖ್ಯೆಯಲ್ಲಿ ಇಲ್ಲಿ ಹಿಂದುಗಳೇ ಇದ್ದರೂ ಇಸ್ಲಾಂ ಧರ್ಮ ಮತ್ತು ಕ್ರೈಸ್ತ ಧರ್ಮ ಇಡೀ ಪಂಚಾಯತಿನಲ್ಲಿ ಹರಡಿದೆ.

ಆಗೊಮ್ಮೆ ಈಗೊಮ್ಮೆ ಕೋಮು ಭಾವನೆ ಘರ್ಷಣೆಗೆ ಅವಕಾಶ ಮಾಡಿಕೊಟ್ಟರೂ ಯಾವುದೇ ವಿಷಮತೆ ಕಂಡು ಬರುವುದಿಲ್ಲ. ಅಲ್ಲದೆ ಎಲ್ಲರೂ ಸಹೋದರತೆಯಿಂದ ಒಂದಾಗಿ ಕೂಡಿ ಬಾಳುತ್ತಿರುವುದು ಸಂತೋಷದ ವಿಚಾರ.

ಸನಾತನವಾದ ಸತ್ಯ, ಧರ್ಮ, ನ್ಯಾಯ ಎಲ್ಲರ ಹೃದಯದಲ್ಲೂ ಸ್ಥಿರ ಸ್ಥಾನವನ್ನು ಪಡೆದಿದೆ. ಆದರೆ ಒಮ್ಮೊಮ್ಮೆ ರಾಜಕೀಯ ಅಲೆಗಳ ಮೂಲಕ ಮಸುಳಿಸಿದಂತಾದರೂ ಪುನಃ ತನ್ನ ಸ್ಥಿರತೆಯನ್ನು ತೋರಿಸಿಕೊಡುತ್ತದೆ. ಸರ್ವ ಧರ್ಮಗಳೂ ತನ್ನ ಧಾರ್ಮಿಕ ವಿಚಾರದಲ್ಲಿ ಎಲ್ಲರಿಗೂ ಮಾರ್ಗದರ್ಶಕವಾಗಿದೆ. ಈ ವಲಯದ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳ ಸಂಕ್ಷೇಪವಾದ ವಿವರಣೆ ಇಲ್ಲಿ ಕೊಡಲಾಗುತ್ತದೆ.

ಕೋಳ್ಯೂರಿನಲ್ಲಿ ಶಂಕರನಾರಾಯಣ ದೇವರು ಕೆಲವು ಗ್ರಾಮಗಳವರಿಗೆ ಗ್ರಾಮ ದೇವರಾಗಿ ಪೂಜಿಸಲ್ಪಡುತ್ತಾರೆ. ಈ ದೇವಸ್ಥಾನ ಸಾಧಾರಣ 1450 ವರ್ಷಗಳ ಹಿಂದೆ ಪ್ರತಿಷ್ಠೆಯಾಯಿತೆಂದು ಆಧಾರಗಳಿವೆ. ಹರಿಜನ ಸ್ತ್ರೀಯೊಬ್ಬಳ ಮೂಲಕ ಶ್ರೀ ದೇವರ ಇರುವಿಕೆಯ ಅರಿವು ಊರವರಿಗೆ ಉಂಟಾಯಿತಂತೆ. ದೇವಾಲಯದ ಪಶ್ಚಿಮ ದಿಕ್ಕಿನ ಕೆರೆಯ ಸಮೀಪ ಹೋದ ಆ ಸ್ತ್ರೀ ಮಾಯವಾಗಿರುವಳೆಂಬ ಪ್ರತೀತಿ ಇದೆ. ಹಿರಿಯರ ಪ್ರಾರ್ಥನೆಯ ಸಂದರ್ಭ ಈಗ ದೇವಾಲಯವಿರುವ ಸ್ಥಳದಲ್ಲಿದ್ದ ದೊಡ್ಡ ಗೋಳಿಮರವೂ ಉರುಳಿಬಿದ್ದು ಶ್ರೀ ದೇವರ ಲಿಂಗವು ಉದ್ಭವವಾಯಿತೆಂದು ಹೇಳುತ್ತಾರೆ. ಗೋಳಿಮರದಲ್ಲಿ ದೇವರು ಹುಟ್ಟಿದ ಕಾರಣ "ಗೋಳಿಯೂರೂ" ಎಂದೂ ನಂತರ ಇದೇ ಹೆಸರು "ಕೋಳಿಯೂರು" ಎಂದೂ ಹೆಸರಾಯಿತು. (ಜೀರ್ಣಗೊಂಡ ಈ ದೇವಾಲಯದ ಜೀರ್ಣೋದ್ಧಾರ ಕಾರ್ಯ ಬಹಳ ಶೀಘ್ರಗತಿಯಲ್ಲಿ ನಡೆಯುತ್ತಿದೆ.)

ಪುರಾತನ ದೇವಸ್ಥಾನಗಳಲ್ಲಿ ಕಡಂಬಾರಿನ ಶ್ರೀ ಮಹಾವಿಷ್ಣು ದೇವಸ್ಥಾನ ಒಂದಾಗಿದೆ. ಊರ ಮುಂದಾಳುಗಳಿಂದ ಅಭಿವೃದ್ಧಿ ಸಮಿತಿ ರೂಪಿಸಲ್ಪಟ್ಟು ದೇವಾಲಯದ ನವೀಕರಣ ಕೆಲಸ ನಡೆದು ನಿತ್ಯ ಪೂಜೆ, ವರ್ಷಾವಧಿ ಉತ್ಸವಗಳೆಲ್ಲ ನಡೆಯುತ್ತಿದೆ.

ತಲೆಕಳ ಗ್ರಾಮದ ಸದಾಶಿವ ಗೋಪಾಲಕೃಷ್ಣ ದೇವಸ್ಥಾನ ಹಿಂದೂಗಳ ಆರಾಧನಾ ಸ್ಥಳವಾಗಿದೆ. ಅಲ್ಲದೆ ಗ್ರಾಮ ದೇವರೂ ಆಗಿದ್ದಾರೆ.

ಚಿಗುರುಪಾದೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಬಹಳ ಪ್ರಸಿದ್ಧ ದೇವಸ್ಥಾನವಾಗಿದೆ. ಜೀರ್ಣಾವಸ್ಥೆಯಲ್ಲಿದ್ದ ಈ ದೇವಾಲಯ ಇತ್ತೀಚೆಗೆ ನವೀಕರಣವಾಗಿ ನಿತ್ಯ ಪೂಜೆಗಳು ಕ್ರಮದಂತೆ ನಡೆದು ಬರುತ್ತದೆ. ಉಪ್ಪಳ ಮತ್ತು ಬಲ್ಲಂಗೂಡೆಲು ಭಗವತಿ ಕ್ಷೇತ್ರಗಳು ಪುರಾತನವಾಗಿದ್ದು ಪ್ರಸಿದ್ಧಿ ಹೊಂದಿವೆ. ಮಜಿಬೈಲು ವಿಷ್ಣುಮೂರ್ತಿ ದೇವಸ್ಥಾನ, ಕೊಳಂಚೆ ಶಿವ ದೇವಾಲಯ ಈ ಪ್ರದೇಶದಲ್ಲಿ ಪ್ರಸಿದ್ಧ ದೇವಾಲಯಗಳು.

ಕುಳೂರು ಕೊಡಿಮಾರಿನಲ್ಲಿರುವ ಶ್ರೀ ಶಾಸ್ತಾವೇಶ್ವರ ದೇವಸ್ಥಾನವು ಪ್ರಸಿದ್ಧವಾಗಿದೆ.

ನಮ್ಮ ಪಂಚಾಯತು ವಲಯದಲ್ಲಿ ಹಲವು ದೈವಸ್ಥಾನಗಳು ಜನರ ಆಶೋತ್ತರಗಳನ್ನು ಪೂರೈಸುವ ಮೂಲಕ ಪ್ರಸಿದ್ಧಿಯನ್ನು ಪಡೆದಿವೆ. ಬಹಳ ಹಿಂದಿನಿಂದಲೇ ಹಲವು ಕಡೆಗಳಲ್ಲಿ ದೈವಸ್ಥಾನಗಳ ಪ್ರತಿಷ್ಠೆಯಾಗಿ ಕಾಲಕ್ಕೆ ಸರಿಯಾದ ನೇಮ ನಡಾವಳಿ, ಉತ್ಸವ, ನಡೆಯುತ್ತಾ ಬರುತ್ತಿತ್ತು. ಕೆಲವು ಪ್ರಸಿದ್ಧ ಮನೆತನಗಳಿಂದಲೇ ಹೆಚ್ಚಿನ ದೈವಸ್ಥಾನಗಳು ಪ್ರತಿಷ್ಠಾಪಿಸಲ್ಪಟ್ಟು ಉತ್ಸವ ಕಾರ್ಯಗಳನ್ನು ಜರಗಿಸುತ್ತಿದ್ದಾರೆ. ಜಮ್ಮಿಗಳು, ಒಕ್ಕಲಿನವರು ಎಂಬ ಪದ್ಧತಿ ಜಾರಿಯಲ್ಲಿದ್ದ ಆ ಕಾಲಗಳಲ್ಲಿ ದೈವಸ್ಥಾನದ ಕೆಲಸದವರಿಗೆ ಉಂಬಳಿಯಾಗಿ ಭೂಮಿಯನ್ನು ಬಿಡುತ್ತಿದ್ದರು. ಇದರಿಂದಾಗಿ ಉತ್ಸವದ ಕಾಲಕ್ಕೆ ಬಿಟ್ಟಿ ಕೆಲಸಗಳು ನಡೆಯುತ್ತಿದ್ದವು. ಈ ಕ್ರಮದ ಹಲವು ಪ್ರಸಿದ್ಧ ದೇವಸ್ಥಾನಗಳನ್ನು ಹೀಗೆ ಗುರುತಿಸಬಹುದು.

ಕಳಿಯೂರು ರಕ್ತೇಶ್ವರಿ ದೈವಸ್ಥಾನ ಸುಮಾರು 1100 ವರ್ಷಗಳ ಹಿಂದೆಯೇ ಕಳಿಯೂರಿನಲ್ಲಿ ಸ್ಥಾಪಿಸಲ್ಪಟ್ಟು ಉತ್ಸವ ಪೂಜೆಗಳು ನಡೆಯುತ್ತಿದ್ದವು. ಕೋಳ್ಯೂರು ಶಂಕರನಾರಾಯಣ ದೇವರ ಅಪ್ಪಣೆಯಂತೆ ಈ ಗ್ರಾಮದ "ಗರ್ಗಲ್ಲಪಾದೆ" ಎಂಬ ಸ್ಥಳದಲ್ಲಿ ನೆಲೆ ನಿಂತ ದೈವಗಳು ಎಂಬ ಪ್ರತೀತಿಯಿದೆ. ಈ ದೈವಸ್ಥಾನ ಕೆಲವು ಕಾಲ ಸಂಪೂರ್ಣ ನಾಶ ಸ್ಥಿತಿಯಲ್ಲಿದ್ದು ಈಗ ಜೀರ್ಣೋದ್ಧಾರಗೊಂಡು ಎಲ್ಲಾ ನೇಮ ಕಾರ್ಯಗಳು ಜರಗುತ್ತಿವೆ.

ಕಡಂಬಾರಿನಲ್ಲಿ ಮಲರಾಯ ಬಂಟ ದೈವಸ್ಥಾನ ತಲೆಕ್ಕಳ ದೂಮಾವತಿ ದೈವಸ್ಥಾನ, ಬೆಜ್ಜ ದೂಮಾವತಿ ಬಂಟ ದೈವಸ್ಥಾನ, ಮಜಿಬೈಲಿನ ಕರಿಬೈಲು, ಕೊಡ್ಡೆ, ತುರ್ತಿ ಸ್ಥಳಗಳಲ್ಲಿ ಮಹಾ ಮಲರಾಯ ದೈವಸ್ಥಾನಗಳು ಪ್ರಸಿದ್ಧಿಗೊಂಡಿದೆ.

ಸೆಂತಡ್ಕ ಅರಸು ಅಂಕಲಾಯ ದೈವಸ್ಥಾನವು ಹಲವು ಕಾಲದಿಂದ ನಾಶಗೊಂಡು ಈಗ ಅದರ ಜೀರ್ಣೋದ್ಧಾರ ಕಾರ್ಯ ಶೀಘ್ರ ಗತಿಯಿಂದ ಸಾಗುತ್ತಿದೆ.

ಅರಿಯಾಳದ ಬುಡ್ಡಿಯ ಎಂಬಲ್ಲಿ ಮಲರಾಯ ದೈವಸ್ಥಾನ, ಮೇಲ್ಕಾರಿನಲ್ಲಿ ಉಳ್ಳಾಲ್ತಿ ಅಣ್ಣ ದೈವಗಳ ಸ್ಥಾನ ಪ್ರಸಿದ್ಧವಾಗಿದೆ. ಕೊರಗ ತನಿಯ ದೈವಸ್ಥಾನ ಚಿಗುರುಪಾದೆ ರಕ್ತೇಶ್ವರಿ ದೈವಸ್ಥಾನ ಕುಳೂರು, ಗ್ರಾಮ ದೈವಗಳಾಗಿ ಪ್ರಸಿದ್ಧಗೊಂಡಿದೆ.

ಕೋಡಿ ರಕ್ತೇಶ್ವರಿ ದೈವಸ್ಥಾನ, ದರ್ಬೆ ಮಲರಾಯ ದೈವಸ್ಥಾನ, ಮಿಯಪದವು ಮುಗೇರರ ದೈವಸ್ಥಾನ ಪ್ರಸಿದ್ಧ ಸ್ಥಳಗಳು. ಇತರ ದೇವಸ್ಥಾನ ದೈವಸ್ಥಾನಗಳ ಹೆಚ್ಚಿನ ವಿವರ ಸಂಸ್ಕೃತಿ ವಿಭಾಗದಲ್ಲಿ ತಿಳಿಸಲಾಗುವುದು.

ತಲೇಕ್ಕಳ ಗ್ರಾಮದ ಮುನ್ನಿಪ್ಪಾಡಿಯಲ್ಲಿರುವ ಜುಮ್ಮಾ ಮಸೀದಿ ಬಹಳ ಪುರಾತನ ಹಾಗೂ ಪ್ರಸಿದ್ಧಿ ಪಡೆದ ಸ್ಥಳವಾಗಿದೆ. ಸುಮಾರು 1200

ವರ್ಷಗಳಷ್ಟು ಹಿಂದಿನ ಐತಿಹ್ಯವಿದೆ.

ಕುಳೂರು ಚಾರ್ಲ ಮಸೀದಿ, ಪಟ್ಟತ್ತೂರು ಜುಮ್ಮಾ ಮಸೀದಿ, ಅಡ್ಕ ಜುಮ್ಮಾ ಮಸೀದಿ, ಕೋಳ್ಯೂರು ಜುಮ್ಮಾ ಮಸೀದಿ, ರಾವಳಿಕೆ ಧರ್ಮನಗರ, ದರ್ಗಾ ಹಾಗೂ ಮಸೀದಿ ಮೂಡಂಬೈಲು ಜುಮ್ಮಾ ಮಸೀದಿ, ಕಡಂಬಾರು ಜುಮ್ಮಾ ಮಸೀದಿ, ಬೇಳ ಜುಮ್ಮಾ ಮಸೀದಿ ಕುಳಬೈಲು, ಜುಮ್ಮಾ ಮಸೀದಿ ಬಾಳ್ಯೂರು, ಜುಮ್ಮ ಮಸೀದಿ ಮಿಯಪದವು ಮಸೀದಿ ಇವುಗಳಲ್ಲದೆ ಕಳಿಯೂರು ಮರತ್ತಡ್ಕ ಸುಫೈದ್ದೀನ್ ದರ್ಗಾ, ಕಳಾಯಿ ಜಾರಾ ದರ್ಗಾ ಇವು ಈ ಪಂಚಾಯತು ವಲಯದ ಮುಸ್ಲಿಂ ಬಾಂಧವರ ಆರಾಧನಾ ಸ್ಥಳವಾಗಿದೆ.

1897ರಲ್ಲಿ ಸ್ಥಾಪಿಸಲ್ಪಟ್ಟ ಸಂತ ಜೋಸೆಫರ ಕಿರು ಹೃದಯದ ಮಂದಿರ (ಚರ್ಚ್) ಕಳಿಯೂರು, ಇದು ನಮ್ಮ ಪಂಚಾಯತು ವಲಯದಲ್ಲೇ ಕ್ರೈಸ್ತ ಬಾಂಧವರ ಪ್ರಮುಖ ಆರಾಧನಾಲಯವಾಗಿದೆ. ಇತ್ತೀಚೆಗೆ ಮಿಯಪದವಿನಲ್ಲಿ ಸಂತ ಫಾತಿಮರ ದೇವಾಲಯ ಸ್ಥಾಪಿಸಲ್ಪಟ್ಟಿದೆ.

ಈ ಪಂಚಾಯತು ವಲಯ 1940ರ ವರೆಗೂ ಶೈಕ್ಷಣಿಕ ರಂಗದಲ್ಲಿ ಬಹಳ ಹಿಂದುಳಿದ ಪ್ರದೇಶವಾಗಿತ್ತು. ಅಷ್ಟರ ವರೆಗೆ ಈ ಪ್ರದೇಶದಲ್ಲಿ 8ನೇ ತರಗತಿ ವರೆಗೆ ಕಲಿತ ಅಕ್ಷರಸ್ಥರೇ ಇರಲಿಲ್ಲವೆಂದಾದರೆ ಶಿಕ್ಷಣರಂಗ ಎಷ್ಟು ಅಧೋಗತಿಯಲ್ಲಿತ್ತೆಂದು ಇದರಿಂದ ಮನವರಿಕೆಯಾಗಬಹುದು.

1936ರ ಮೊದಲು ಮಿಂಜ ತಲೇಕ್ಕಳ ಖಾಸಗೀ ಶಾಲೆಯೊಂದು ಈ ಪ್ರದೇಶದಲ್ಲಿ ಕಾರ್ಯ ಪ್ರವೃತ್ತವಾಗಿತ್ತು. ಅಲ್ಲಿ ಸಂಸ್ಕೃತ ತರಗತಿ ಇತ್ತು. ಯಾವುದೋ ಅವ್ಯವಹಾರದ ದೆಸೆಯಿಂದ ಅದು ಮುಚ್ಚಲ್ಪಟ್ಟಿತು. ಆ ಬಳಿಕ ಮೂಡಂಬೈಲು ದಿ. ನಾರಣಪ್ಪಯ್ಯರ ಪ್ರಯತ್ನದ ಫಲವಾಗಿ ಮಿಯಪದವಿನಲ್ಲಿ ಈಗ ಇರುವ ಶಾಲೆಯ ಸ್ಥಳದಲ್ಲೇ ಮುಳಿಹುಲ್ಲಿನ ಕಟ್ಟಡದಲ್ಲಿ 1939ನೇ ಜನವರಿ 15ಕ್ಕೆ ಎಲಿಮೆಂಟರಿ ಶಾಲೆ ಆರಂಭಗೊಂಡಿತ್ತು. ಇದೇ ಶಾಲೆ ಸುಮಾರು 1957ರಲ್ಲಿ ಹೈಯರ್ ಎಲಿಮೆಂಟರಿ ಶಾಲೆಯಾಗಿ ಭಡ್ತಿ ಹೊಂದಿತು. ಅನಂತರ ಸುಮಾರು 1966ರ ದೀರ್ಘ ಕಾಲದ ಮದ್ಯಂತರದ ಬಳಿಕ ಇಲ್ಲಿ ಪ್ರೌಢ ಪ್ರಾಥಮಿಕ ಶಾಲೆಯೊಂದು ಆರಂಭಗೊಂಡಿತು.

1940ರ ಸುಮಾರಿಗೆ ಆಗ ಹರಿಜನರೆಂದು ಕರೆಸಿಕೊಳ್ಳುತ್ತಿದ್ದ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಶಾಲೆಯಲ್ಲಿ ಸಮಾನತೆಯಿರಲಿಲ್ಲ. ಅವರನ್ನು ಬೇರೆಯೇ ಕುಳಿತುಕೊಳ್ಳಿಸಿ ಪಾಠ ಹೇಳುತ್ತಿದ್ದರು. ಅವರನ್ನು ಅಸ್ಪೃಶ್ಯರಂತೆ ಅಧ್ಯಾಪಕರು ಕಾಣುತ್ತಿದ್ದರು.

ಸುಮಾರು ನಾಲ್ಕೈದು ದಶಕಗಳ ಮೊದಲು ಈ ವಲಯದಲ್ಲಿ ಸುಮಾರು 30-40 ಜಮ್ಮಿಗಳ ಮನೆತನಗಳಿರಬಹುದು. ಉಳಿದವರು ಒಕ್ಕಲುಗಳಾಗಿಯೆ ಬಾಳುತ್ತಿದ್ದರು. ಈ ವಲಯದ ಹೊರಗಿನ ನಾಲ್ಕೈದು ಪ್ರಸಿದ್ಧ ಜಮ್ಮಿಗಳಿದ್ದು ಅವರ ಭೂಮಿಯೂ ಅದರಲ್ಲಿ ಒಕ್ಕಲುಗಳೆಲ್ಲಾ ಈ ವಲಯದಲ್ಲಿದ್ದರು. ಆಗ "ಮೂಲ"ದವರೆಂಬ ಕೆಲವು ಮನೆಗಳಿದ್ದವು. ಇವರನ್ನು "ಮೂಲ"ದವರಾಗಿ ಸಾಕುತ್ತಿರುವ ಜಮ್ಮಿಗಳು ಅವರಿಂದ ಕಠಿಣ ಪರಿಶ್ರಮದ ಕೆಲಸಗಳನ್ನು ಮಾಡಿಸಿದರೂ ಬಹಳ ಕಡಿಮೆ ಮಜೂರಿ ಕೊಡುತ್ತಿದ್ದರು. ಅಂದರೆ ಮೂರು ಬಳ್ಳ ಭತ್ತ ಕೊಡುತ್ತಿದ್ದರು. ಅಲ್ಲದೆ ಹೆಚ್ಚಿನ ಕೆಲಸಗಳನ್ನು ಬಿಟ್ಟಿ ಕೆಲಸಗಳಾಗಿ ಮಾಡಿಸಿಕೊಳ್ಳುತ್ತಿದ್ದರು. ಆದರೆ ಅವರ ಮನೆಯಲ್ಲಿ ನಡೆಯುವ ಮದುವೆ ಮುಂತಾದ ಶುಭ ಕಾರ್ಯಗಳಿಗೆ ಧರ್ಮಾರ್ಥ ಸಹಾಯ ಮಾಡುತ್ತಿದ್ದರು. ಅವರಿಗೆ ಜಮ್ಮಿಯವರ ಮನೆಯಲ್ಲಿಯೇ ಊಟ ನಡೆಯುತ್ತಿದ್ದು ಮೂಲದವರ ಮಕ್ಕಳು ಅಲ್ಲೇ ದುಡಿಯಬೇಕಾಗಿತ್ತು. ಶಿಕ್ಷಣಕ್ಕೆ ಯಾವ ಅನುಕೂಲತೆಗಳನ್ನು ಮಾಡುತ್ತಿರಲಿಲ್ಲ.

ಧನಿಗಳು ಒಕ್ಕಲಿನವರಿಗೆ ಸಾಗುವಳಿಗೆ ಭೂಮಿಯನ್ನು ಕೊಡುತ್ತಿದ್ದರೂ ಗೇಣಿಚೀಟು ಬರೆಸಿಕೊಳ್ಳುತ್ತಿರಲಿಲ್ಲ. ಕೊಟ್ಟ ಗೇಣಿಗೆ ರಶೀದಿ ಕೊಡುತ್ತಿರಲಿಲ್ಲ. ಅಲ್ಪಸ್ವಲ್ಪ ಗೇಣಿ ಬಾಕಿಯಾದರೂ ಅವರನ್ನು ಒಕ್ಕಲೆಬ್ಬಿಸುತ್ತಿದ್ದರು. ಆದರೆ ಅತೀವೃಷ್ಟಿ, ಅನಾವೃಷ್ಟಿಯಿಂದಾಗಿ ಉತ್ಪಾದನೆ ಕಡಿಮೆಯಾಗಿ ಗೇಣಿ ಕೊಡಲು ಕಷ್ಟವಾದಾಗ ಆ ಗೇಣಿಯನ್ನು ಬಿಟ್ಟು ಮುಂದಿನ ಬೆಳೆಗೆ ಧನ, ಬೀಜ, ಎತ್ತಿನ ಸಹಾಯ ಮಾಡುತ್ತಿದ್ದ ಉದಾರಿ ಧನಿಗಳು ಹಲವರಿದ್ದರು.

ಈ ಸಮಯದಲ್ಲಿ ಅಂದರೆ 1952ರಲ್ಲಿ ರೈತ ಸಂಘದ ಚಳವಳಿ ಆರಂಭವಾಯ್ತು. ಒಕ್ಕಲೆಬ್ಬಿಸುವವರ ವಿರುದ್ಧ ಚಳವಳಿ, ಗೇಣಿಚೀಟಿ ಬರೆಯಿಸುವ ಚಳವಳಿ, ಕೊಟ್ಟ ಗೇಣಿ ರಶೀದಿ ಪಡೆಯುವ ಚಳವಳಿ, ಈ ಕೇಳಿಕೆಗಳನ್ನು ಮುಂದಿಟ್ಟು ರೈತ ಸಂಘದ ಚಟುವಟಿಕೆ ಆರಂಭವಾಯ್ತು. "ಉಳುವವನೇ ಹೊಲದೊಡೆಯ" ಎಂಬ ಕೇಳಿಕೆಯೊಂದಿಗೆ ರೈತಸಂಘದ ಚಳವಳಿಯು ಬಿರುಸುಗೊಂಡಿತು. ಈ ವಲಯದ ಹಲವು ಗಣ್ಯರು ಈ ಚಳವಳಿಯ ನೇತೃತ್ವವನ್ನು ವಹಿಸಿದ್ದರು.

1957ರಲ್ಲಿ ಕೇರಳದಲ್ಲಿ ಕಮ್ಯುನಿಸ್ಟ್ ಸರಕಾರ ಆಳ್ವಿಕೆಗೆ ಬಂದಿತು. ಈ ಸರಕಾರ "ಒಕ್ಕಲೆಬ್ಬಿಸಬಾರದು" ಎಂಬ ಸುಗ್ರೀವಾಜ್ಞೆಯನ್ನು ಹೊರಡಿಸಿತು. ಮುಂದೆ ಸರಕಾರಗಳ ಬದಲಾವಣೆಯಾಗುತ್ತಾ ಬಂದು 1967ರಲ್ಲಿ ಕಾನೂನು ಆದರೂ ಜಾರಿಗೆ ಬರಲಿಲ್ಲ. 1964ರಲ್ಲಿ ಕಮ್ಯೂನಿಸ್ಟ್ ಇಬ್ಭಾಗವಾಗಿ ಪಕ್ಷದ ಶಕ್ತಿಯು ಪರಿಮಿತಗೊಂಡಿತು. 1969ರಲ್ಲಿ ಕಾಂಗ್ರೆಸ್ ಇಬ್ಭಾಗವಾಯ್ತು. ಆಗ ಇಂದಿರಾ ಕಾಂಗ್ರೆಸ್ ಜತೆ ಭಾರತೀಯ ಕಮ್ಯೂನಿಸ್ಟ್ ಶಾಮೀಲಾಯಿತು. 1990ರ ಜನವರಿ 1ರಂದು ಈ ಕಾನೂನು ರಾಷ್ಟ್ರಾಧ್ಯಕ್ಷರ ಸಹಿ ಪಡೆದು ಕೇರಳದಲ್ಲಿ ಭೂಮಸೂದೆ ಜಾರಿಗೆ ಬಂತು. ಭೂಮಸೂದೆ ಜಾರಿಗೆ ತಂದ ಪ್ರಾಂತ್ಯ ಕೇರಳ ಭಾರತದಲ್ಲೇ ಪ್ರಥಮ ಎಂಬ ಪ್ರಸಿದ್ಧಿ ಪಡೆಯಿತು.

1956ರಲ್ಲೂ ಭಾಷಾವಾರು ಪ್ರಾಂತ್ಯದ ರಚನೆಯಾಯ್ತು. ಮದ್ರಾಸು ಪ್ರಾಂತ್ಯದಲ್ಲಿ ಸೇರಿದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದ ದಕ್ಷಿಣ ಭಾಗದ

ಈ ಕಾಸರಗೋಡು ಮಾತ್ರ ಕೇರಳಕ್ಕೆ ಸೇರಿ ಉಳಿದ ಹೆಚ್ಚಿನ ಭಾಗ ಕರ್ನಾಟಕದಲ್ಲಿ ಉಳಿಯಿತು. ಪ್ರಾದೇಶಿಕವಾಗಿಯೂ, ಸಾಂಸ್ಕೃತಿಕವಾಗಿಯೂ ಭಾಷಾ ದೃಷ್ಟಿಯಿಂದಲೂ, ಕರ್ನಾಟಕದಲ್ಲಿರಬೇಕಾದ ಕಾಸರಗೋಡು ಕೇರಳ ಪ್ರಾಂತ್ಯದಲ್ಲಿ ಸೇರಿಕೊಂಡುದು ಇಲ್ಲಿಯ ಕನ್ನಡಿಗರ ದೌರ್ಭಾಗ್ಯವೆನ್ನಬೇಕು.

ಕಾಸರಗೋಡು ಕರ್ನಾಟಕದಲ್ಲಿ ಸೇರ್ಪಡೆಗೊಳಿಸುವುದಕ್ಕಾಗಿ ಹೋರಾಡಲು ಕರ್ನಾಟಕ ಏಕೀಕರಣ ಸಮಿತಿಯಾಯಿತು. ಈ ಸಮಿತಿಯ ಹೆಸರಿನಲ್ಲಿ ಕೇರಳ ವಿಧಾನಸಭೆಗೆ ಎರಡೆರಡು ಸಲ ಗೆದ್ದು ಬಂದವರು ದಿ. ಕಳ್ಳಿಗೆ ಮಹಾಬಲ ಭಂಡಾರಿಯವರು. ಅವರ ಅಕಾಲಮೃತ್ಯು ಇಲ್ಲಿಯ ಕನ್ನಡಿಗರ ಕನಸು ನನಸಾಗದಿರಲು ಕಾರಣವಾಯ್ತು.

ಬಹಳ ಖೇದದ ವಿಚಾರವೆಂದರೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರು ಯಾರೂ ಈ ವಲಯದಲ್ಲಿಲ್ಲ ಎನ್ನುವುದು. "ಉಪ್ಪಿನ ಸತ್ಯಾಗ್ರಹ" "ಭಾರತದಿಂದ ತೊಲಗಿರಿ" ಎಂಬ ಗಾಂಧೀಜಿಯವರ ಯಾವುದೇ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಸ್ವಾತಂತ್ರ್ಯ ಯೋಧರು ಯಾರೂ ಇರಲಿಲ್ಲ ಎಂದರೆ ಇಲ್ಲಿಯವರು ಎಷ್ಟು ಸ್ವಾತಂತ್ರ್ಯ ಪ್ರಿಯರು ಎನ್ನುವುದು ಇದರಿಂದ ವೇದ್ಯವಾಗುತ್ತದೆ.

ಶಿಕ್ಷಣರಂಗದ ಚಿತ್ರಣವನ್ನು ಈ ಮೊದಲು ತಿಳಿಸಿರುವೆವು. ಈಗ ಆರೋಗ್ಯದ ವಿಚಾರವನ್ನು ನೋಡುವ, ಒಂದೆರಡು ದಶಕಗಳ ಹಿಂದೆಯೂ ಈ ವಲಯಗಳಲ್ಲಿ ಹಲವು ನಾಟೀ ವೈದ್ಯರುಗಳಿದ್ದರು. ಕೆಂಪು, ಕಾಮಾಲೆ, ಹಳದಿರೋಗ, ಮುಂತಾದ ರೋಗಗಳಿಗೆ ರಾಮಬಾಣದಂತಹ ನಾಟೀ ಮದ್ದುಗಳಲ್ಲಿ ಪ್ರಸಿದ್ಧರಿದ್ದರು. ದೊಡ್ಡ ದೊಡ್ಡ ಡಿಗ್ರಿ ಪಡೆದ ಡಾಕ್ಟರುಗಳಿಂದಲೂ ಹೆಚ್ಚಿನ ಕೌಶಲದಿಂದ ಹೆರಿಗೆ ಮಾಡಿಸುತ್ತಿದ್ದ ಸೂಲಗಿತ್ತಿಯರಿದ್ದರು. ಈಗಲೂ ಡಾಕ್ಟರರು ಅಂತಹ ಸೋಲಗಿತ್ತಿಯರ ಸಹಾಯ ಪಡೆಯುವುದು ಕಂಡು ಬರುತ್ತದೆ.

ವಿಷಹಾವು ಕಡಿತದ ವಿಷ ಶರೀರವನ್ನು ವ್ಯಾಪಿಸಿದಂತೆ ತಡೆಯುವ ಶಕ್ತಿಯುಳ್ಳ ವಿಷವೈದ್ಯರು ತಮ್ಮ ಸೇವೆ ಸಲ್ಲಿಸುತ್ತಿದ್ದಾರೆ. ಸರಕಾರ ಅವರಿಗೆ ಸಹಕಾರ ಕೊಡುವುದಿಲ್ಲ. ಈಗಿನ ಅಲೋಪತಿ ಒಂದು ರೋಗವನ್ನು ಗುಣಪಡಿಸಿದರೂ ಇನ್ನೊಂದು ರೋಗವನ್ನು ಸೃಷ್ಟಿಸುತ್ತದೆ. ಅದರ ಬದಲು ಆಯುರ್ವೇದ ಅಂದರೆ ನಾಟೀ ಮದ್ದಿಗೆ ಮತ್ತು ನಾಟೀ ವೈದ್ಯರಿಗೆ ಸರಿಯಾದ ಪ್ರೋತ್ಸಾಹವನ್ನು ಕೊಟ್ಟರೆ ಈ ಪಂಚಾಯತು ಆರೋಗ್ಯದಿಂದಿರಲು ಸಾಧ್ಯವಿದೆ. ಔಷಧ ಗಿಡಮೂಲಿಕೆಗಳನ್ನು ಬೆಳೆಸಿ ರಕ್ಷಿಸುವ ಕಾರ್ಯಕ್ರಮವನ್ನು ಪಂಚಾಯತಿಗೆ ವಹಿಸಿಕೊಡುವುದು ಒಳ್ಳೆಯದು.

ಕೇರಳ ರಾಜ್ಯ ಪ್ರಕೃತ ಆರ್ಥಿಕ ರಂಗದಲ್ಲಿ ಬಹಳ ಹಿಂದುಳಿದ ವಿಚಾರ ಗುಟ್ಟೇನು ಅಲ್ಲ. ನಮಗೆ ಬೇಕಾದ ವಸ್ತುಗಳನ್ನು ಆಮದು ಮಾಡಿಕೊಳ್ಳುವುದಕ್ಕಾಗಿ ಇಲ್ಲಿನ ಸಂಪತ್ತು ನೆರೆ ರಾಜ್ಯಗಳಿಗೆ ಹರಿದು ಹೋಗುವುದೇ ಇದಕ್ಕೆ ಮುಖ್ಯ ಕಾರಣ. ಇವುಗಳಲ್ಲಿ ಪ್ರಧಾನವಾದವುಗಳು ಯಾವುದೆಂದು ನೋಡೋಣ.

1. ಸಿದ್ಧ ಉಡುಪುಗಳು : ನಿರುದ್ಯೋಗ ಸಮಸ್ಯೆ ಬಹಳವಾಗಿ ಕಾಡುತ್ತಿದೆ ಎಂದು ಸಿಕ್ಕ ಸಂದರ್ಭಗಳಲ್ಲಿ ಹೇಳುತ್ತಲೇ ಬರುತ್ತಿದ್ದಾರೆ. ಆದರೆ ಅದರ ನಿವಾರಣೆಗೆ ಏನು ಮಾಡಬಹುದೆಂದು ಯಾರೂ ತಲೆಕೆಡಿಸಿಕೊಂಡಿಲ್ಲ. ಕೇರಳದಲ್ಲಿ ಮಹಿಳೆಯರ ಸಹಭಾಗಿತ್ವವುಳ್ಳ ಯಾವುದೇ ಉದ್ದಿಮೆಗಳನ್ನು ಸರಕಾರ ಆರಂಭಿಸುವುದಿಲ್ಲ. ಮಹಿಳೆಯರೇ ನಡೆಸಬಹುದಾದದ ಒಂದು ಉದ್ಯಮವೆಂದರೆ ಸಿದ್ಧ ಉಡುಪುಗಳ ತಯಾರಿ ಮತ್ತು ಮಾರಾಟ.

ಟೈಲರಿಂಗ್ ತರಬೇತಿ ಶಾಲೆಗಳನ್ನು ತೆರೆದು ಅದಕ್ಕೆ ಮಹಿಳೆಯರನ್ನು ಆಕರ್ಷಿಸಲು ಅವರಿಗೆ ಮಿತ ಸಂಬಳ (ಸ್ಟೈಪಂಡ್) ಕೊಡಬಹುದು. ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಉಳಕೊಳ್ಳುವುದಕ್ಕೆ ಹಾಸ್ಟೆಲ್‌ಗಳನ್ನು ಸ್ಥಾಪಿಸಿ ಅಲ್ಲಿ ಉಚಿತ ತರಬೇತಿಯನ್ನು ಕೊಡಬಹುದು ತರಬೇತಿಯ ಬಳಿಕ ಬಡ್ಡಿರಹಿತ ಸಾಲದ ಮೂಲಕ ಹೊಲಿಗೆ ಯಂತ್ರಗಳನ್ನು ಸರಕಾರವೇ ಕೊಡಿಸಬಹುದು. ಪಂಚಾಯತು ಕೇಂದ್ರದಲ್ಲಿ ಸಿದ್ಧ ಉಡುಪುಗಳನ್ನು ತಯಾರಿಸುವ ಮತ್ತು ಮಾರಾಟ ಮಾಡುವ ವ್ಯವಸ್ಥೆಗೆ ಪಂಚಾಯತಿನ ಮೂಲಕ ಸರಕಾರ ಸಹಾಯ ಕೊಡಿಸಬಹುದು. ಅಧಿಕ ಸಂಖ್ಯೆಯಲ್ಲಿ ಇಲ್ಲಿ ತಯಾರಿಸಿದ ಸಿದ್ಧ ಉಡುಪುಗಳನ್ನು ಹೊರಸ್ಥಳಗಳಿಗೆ ಮಾರಾಟ ಮಾಡುವ ಮಾರ್ಕೆಟ್ ವ್ಯವಸ್ಥೆಗಳನ್ನು ಮಾಡುವುದು.

2. ಕೋಳಿಸಾಕಣೆ : ಬೇರೆ ಪ್ರಾಂತ್ಯಗಳಿಂದ ನಾವು ಮಾಂಸದ ಕೋಳಿ, ಮೊಟ್ಟೆ, ಇತ್ಯಾದಿಗಳನ್ನು ಆಮದು ಮಾಡುತ್ತಿದ್ದೇವೆ. ಹೀಗೆ ಹೊರ ಹೋಗುವ ಸಂಪತ್ತನ್ನು ನಮ್ಮಲ್ಲಿ ಉಳಿಸಿಕೊಂಡು ನಮ್ಮಲ್ಲಿಯ ಸಾಂಪತ್ತಿಕ ಅಭಿವೃದ್ಧಿ ಮಾಡಬಹುದು. ಸರಕಾರದ ಸಹಾಯಧನದ ಮೂಲಕ ಸಾಲ ಪಡೆದು ಕೋಳಿ ಸಾಕಣಾ ಕೇಂದ್ರವನ್ನು ವಲಯಗಳಲ್ಲಿ ಸ್ಥಾಪಿಸಬಹುದು. ಇದರಿಂದ ಹೊರಹೋಗುವ ಹಣದ ಉಳಿಕೆ ಮಾತ್ರವಲ್ಲದೆ ಮಾಂಸಕ್ಕಾಗುವ ಉತ್ತಮ ಕೋಳಿಗಳು ಲಭಿಸುವ ಸಾಧ್ಯತೆಯಿದೆ.

3. ತರಕಾರಿ : ಈ ವಲಯದ ನೀರಿನ ಆಶ್ರಯವುಳ್ಳ ಪ್ರದೇಶದಲ್ಲಿ, ಉತ್ತಮ ತಳಿಯ ತರಕಾರಿಗಳನ್ನು ಬೆಳೆಯಿಸುವುದಕ್ಕೆ ಪಂಚಾಯತಿನಲ್ಲಿ ಕೃಷಿಕರಿಗೆ ಸಹಾಯ ಒದಗಿಸಬೇಕು. ಅಲ್ಲದೆ ಅದರ ಮಾರಾಟಕ್ಕೆ ಬೇಕಾದ ಮಾರಾಟ ಕೇಂದ್ರಗಳನ್ನು ಪಂಚಾಯತಿನ ಮೂಲಕ ನಡೆಸಬಹುದು.

4. ಕೈಮಗ್ಗ : ನೇಕಾರರ ಸಹಕಾರೀ ಸಂಘಗಳನ್ನು ಸ್ಥಾಪಿಸಿ, ಕೈ ಮಗ್ಗದಲ್ಲಿ ಬಟ್ಟೆ ತಯಾರಿಸುವ ಉದ್ದಿಮೆಗೆ ಪಂಚಾಯತು ಪ್ರೋತ್ಸಾಹ ನೀಡತಕ್ಕದ್ದು. ಇದರಿಂದಾಗಿ ನಿರುದ್ಯೋಗ ಸಮಸ್ಯೆಗೆ ಪರಿಹಾರ ಸಿಕ್ಕುವುದಲ್ಲದೆ ನಮ್ಮ ಊರಿನ ಹಣ ಇಲ್ಲಿಯೇ ಉಳಿತಾಯವಾದಂತಾಗುತ್ತದೆ.

5. ವಸತಿ : ನಮ್ಮ ಪಂಚಾಯತ್ ವಲಯದಲ್ಲಿ ಭೂರಹಿತ ಮನೆ ಇಲ್ಲದವರು ಭೂಮಿ ಇದ್ದು ವಸತಿ ಇಲ್ಲದವರು ಅಧಿಕ ಸಂಖ್ಯೆಯಲ್ಲಿದ್ದರು.

ಈ ವಸತಿ ರಹಿತರಿಗೆ ಮನೆ ಒದಗಿಸುವ ದೇಶದಲ್ಲೇ ಪ್ರಥಮ ಯೋಜನೆ ಆರಂಭವಾದದ್ದು ಕೇರಳದಲ್ಲಿ. ಮೊತ್ತಮೊದಲು ಲಕ್ಷ ವೀಡುಗಳನ್ನು ನಿರ್ಮಿಸಿ ಬಡವರಿಗೆ ಹಂಚುವ ಮೂಲಕ ವಸತಿ ಯೋಜನೆ ಜ್ಯಾರಿಗೆ ಬಂತು. ಅಂದಿನಿಂದ ಜವಾಹರ್ ರೋಜ್‌ಗಾರ್ ಯೋಜನೆ, ರಾಜೀವ್ ದಶಲಕ್ಷ ಭವನ ಯೋಜನೆ, IRDP ಯೋಜನೆ ಇವುಗಳ ಮೂಲಕ ವಸತಿರಹಿತರಿಗೆ ವಸತಿ ಒದಗಿಸುವ ಬಹುದೊಡ್ಡ ಕಾರ್ಯಕ್ರಮಗಳು ಕೇರಳದಲ್ಲಿ ಈಗ ಪ್ರಸ್ತುತ ನಡೆಯುತ್ತಿವೆ. ಹಿಂದೆ ಇದ್ದಂತಹ, ಸೋಗೆ, ಮುಳಿಹುಲ್ಲಿನ ಮಾಡು ಈಗ ಕಾಣದಾಗಿದೆ. ನಾಡಹಂಚಿನ, ಕಾಂಕ್ರೀಟಿನ ಮನೆಗಳು ಹೆಚ್ಚುತ್ತಿವೆ.

ಸಾರಿಗೆ : ನಮ್ಮ ಈ ಪಂಚಾಯತ್ ವಲಯ ದೂರದ ಊರುಗಳಿಗೆ ಹೋಗಲು ಯಾವುದೇ ಸಂಪರ್ಕ ಮಾರ್ಗಗಳನ್ನು ಹೊಂದಿರಲಿಲ್ಲ. ಮಂಜೇಶ್ವರಕ್ಕೆ ಹೋಗುವ ಒಂದು ಮಣ್ಣಿನ ಮಾರ್ಗ ಇದ್ದದ್ದು ವಿನಹಃ ಇಲ್ಲಿ ಯಾವುದೇ ಬಸ್ಸು ಸೌಕರ್ಯಗಳು 1976ರ ವರೆಗೂ ಇದ್ದಿರಲಿಲ್ಲ. ಇಲ್ಲಿ ಮಂಗಳೂರಿನೊಂದಿಗೆ ಸಂಪರ್ಕವನ್ನು ಹೊಂದಿದ್ದ ಈ ಪ್ರದೇಶವೂ ಆ ಕಾಲದಲ್ಲಿ ಎಂತಹ ಕಷ್ಟಗಳನ್ನು ಅನುಭವಿಸುತ್ತಿದ್ದರು ಎನ್ನುವುದನ್ನು ಊಹಿಸುವುದಕ್ಕೂ ಅಸಾಧ್ಯವಾದುದು. ಮಂಜೇಶ್ವರಕ್ಕೆ ಬಸ್ಸಿಗೋ, ರೈಲಿಗೋ ಹೋಗಬೇಕಾದರೆ ಅಲ್ಲಿಯ ವರೆಗೆ ನಡೆದೇ ಹೋಗಬೇಕಾಗಿತ್ತು. ಆದರೆ ಇದೀಗ 1976ರ ಬಳಿಕ ಒಂದೆರಡು ಬಸ್ಸುಗಳ ಸಂಚಾರ ಆರಂಭವಾಗಿ ಈಗ ಬೇಕಾದಷ್ಟು ಬಸ್ಸು, ಜೀಪುಗಳಿರುವುದು ಸಂತೋಷದ ವಿಚಾರ.

ಪ್ರಕೃತ ನಮ್ಮ ಈ ಪಂಚಾಯತ್ ವಲಯ ಹಲವು ರೀತಿಯ ಅಭಿವೃದ್ಧಿ ರಂಗಗಳಲ್ಲಿ ವೃದ್ಧಿಯಾಗುತ್ತಾ ಇದೆ. ಈ ಮೊದಲ ಎಂಟು ಪಂಚವಾರ್ಷಿಕ ಯೋಜನೆಗಳಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಿಗೆ ಸರಕಾರದ ಸಹಾಯ ದೊರಕಿತ್ತು. ಆದರೂ ಪಂಚಾಯತು ಉತ್ಪಾದನಾ ರಂಗದಲ್ಲಿ ಬಹಳವಾಗಿ ಹಿಂದುಳಿದಿದೆ. ಇಲ್ಲಿಗೆ ಬೇಕಾದ ಆಹಾರ, ಧಾನ್ಯಗಳೆಲ್ಲಾ ಈಗಲೂ ನೆರೆ ರಾಜ್ಯವಾದ ಕರ್ನಾಟಕದಿಂದಲೇ ಇಲ್ಲಿಗೆ ಬರಬೇಕಾಗುತ್ತದೆ. ಸಾರ್ವಜನಿಕ ವಿತರಣಾ ಕೇಂದ್ರಗಳು ಇಲ್ಲಿ ಸರಿಯಾಗಿ ಕೆಲಸ ಮಾಡದಿದ್ದರೆ ಇಲ್ಲಿಯವರು ಆಹಾರಕ್ಕೆ ಪರದಾಡಬೇಕಾದೀತು. ವಿದ್ಯೆ ಕಲಿತವರೆಲ್ಲ ಕೃಷಿ ಕಾರ್ಯವನ್ನು ಹೀನಾಯವಾಗಿ ಕಂಡು ಇತರ ಉದ್ಯೋಗಗಳಿಗಾಗಿ ಬೇರೆ ಕಡೆಗೆ ಹೋಗುತ್ತಿದ್ದಾರೆ. ಮಹಿಳೆಯರ ಸಹಭಾಗಿತ್ವವಿರುವ ಯಾವುದೇ ಸಹಕಾರೀ ರಂಗಗಳಾಗಲೀ ಉದ್ದಿಮೆಗಳಾಗಲೀ ಇಲ್ಲಿ ಇರದಿದ್ದುದರಿಂದ ಮಹಿಳೆಯರ ಅವಗಣನೆ ಮಾಡುತ್ತಿದ್ದೇವೆಂದೇ ಅರ್ಥ. ಮಹಿಳೆಯರಿಗೆ ಇಂತಿಷ್ಟೇ ಮೀಸಲಾತಿ ಇರಬೇಕೆಂಬ ಕಾನೂನುಗಳೇ ಇದ್ದರೂ ಯಾವುದೇ ಕ್ಷೇತ್ರದಲ್ಲಿ ಅವರ ಸಂಖ್ಯೆ ಹೆಚ್ಚಾಗಲಿಲ್ಲ. ಬಹುಶಃ ಪುರುಷರು ಅವರನ್ನು ತಮ್ಮ ಕೆಲಸಗಳಲ್ಲಿ ಸಹಭಾಗಿಗಳಾಗಿ ಉಪಯೋಗಿಸದಿರುವುದೇ ಕಾರಣವಿರಬಹುದು.

ಈ ಪ್ರದೇಶ ಇಂತಹ ಹಲವಾರು ಕಠಿಣ ಸವಾಲುಗಳನ್ನು ಎದುರಿಸುತ್ತಿದ್ದರೂ ಇವುಗಳನ್ನು ಪರಿಹರಿಸಲು ಬೇಕಾದ ಶಕ್ತಿ ನಮ್ಮಲ್ಲಿಯೇ ಇತ್ತು ಮತ್ತು ಇದೆ. ಇದಕ್ಕೆ ಬೇಕಾದುದೇನೆಂದರೆ ಭೂಮಿ ಸಂಪನ್ಮೂಲ, ಜಲಸಂಪತ್ತು, ಮಾನವ ಸಂಪನ್ಮೂಲ ಸಮರ್ಪಕವಾಗಿ ಉತ್ಪಾದನಾ ರಂಗದಲ್ಲಿ ಸಮ್ಮಿಳಿತಗೊಂಡು ಸಂತಸದ ಸಮೃದ್ಧಿಯ ನಾಡಾಗಬೇಕೆಂಬ ಹಂಬಲ ನಮ್ಮಲ್ಲಿದ್ದರೆ ಈ ಕನಸು ನನಸಾಗುವುದಕ್ಕೇ ಹೆಚ್ಚಿನ ಕಾಲಾವಕಾಶ ಇರಲಾರದು.

ಭೂಪ್ರಕೃತಿ, ಜಲಪ್ರಕೃತಿ, ಜನಪ್ರಕೃತಿ

ಈ ಪಂಚಾಯತು ವಲಯದ ಮೂಡುದಿಕ್ಕು ಸಮುದ್ರ ಮಟ್ಟಕ್ಕಿಂತ 480 ಅಡಿ ಎತ್ತರದಲ್ಲಿರುವ ಕೊಮ್ಮಂಗಳದ ಸಮತಟ್ಟಾದ ಸಾನು ಭೂಮಿಯಿಂದ ಆವೃತ್ತವಾಗಿದೆ. ಕೊಮ್ಮಂಗಳದ ಪಶ್ಚಿಮ ದಿಕ್ಕಿನಲ್ಲಿ ಉಪ್ಪಳ ಹೊಳೆಯು ಹರಿದು ಅದರ ಇಕ್ಕೆಲಗಳು ಬಯಲು ಪ್ರದೇಶದಿಂದ ಕೂಡಿದೆ. ದಕ್ಷಿಣ ಭಾಗದಲ್ಲಿ ಉದ್ದಕ್ಕೂ ಉಪ್ಪಳ ಹೊಳೆ ಹರಿದು ಇಕ್ಕೆಲಗಳಲ್ಲಿಯೂ ರಮಣೀಯವಾದ ಬಯಲು ಭೂಮಿ ಕಂಗೊಳಿಸುತ್ತದೆ. ಪಶ್ಚಿಮ ಭಾಗದಲ್ಲಿ ವಿಶಾಲವಾದ ಅರಬೀ ಸಮುದ್ರವಿದ್ದು ಅದಕ್ಕೆ ಸುಮಾರು ಹತ್ತಿರವಾದ ಕರಾವಳಿ ಪ್ರದೇಶ ಇದೆ. ಉತ್ತರ ದಿಕ್ಕಿಗೆ ಬಟ್ಯಪದವು, ಸುಂಕದಕಟ್ಟೆ, ಬೋರ್ಕಳ ಎನ್ನುವ ಸಮುದ್ರ ಮಟ್ಟಕ್ಕಿಂತ ಸುಮಾರು 200 ಅಡಿ ಎತ್ತರಕ್ಕಿಗುವ ಸಮತಟ್ಟು ಪ್ರದೇಶವಿದೆ. ಉಪ್ಪಳ ಹೊಳೆಗೆ ಬೇರೆ ಬೇರೆ ವಾರ್ಡುಗಳಲ್ಲಿ ಹರಿಯುವ ತೋಡುಗಳು ಅಲ್ಲಲ್ಲಿ ಸೇರುತ್ತವೆ. ಈ ತೋಡುಗಳ ಇಕ್ಕೆಲಗಳಲ್ಲೂ ಫಲವತ್ತಾದ ಬಯಲು ಪ್ರದೇಶವಿದ್ದು ಅಲ್ಲಿಯ ಜನರ ಸುಖ ಸಮೃದ್ಧ ಜೀವನಕ್ಕನುಕೂಲವಾಗುವ ಬೆಳೆ ಬೆಳೆಯುವಂತಹ ಫಲವತ್ತಾದ ಮಣ್ಣನ್ನು, ಜಲಸಂಪತ್ತನ್ನು ಒದಗಿಸುತ್ತದೆ. ಈ ಪಂಚಾಯತು ಇರುವ ಮೊಯಪದವು ಎಂಬ ವಿಶಾಲ ಪ್ರದೇಶವೂ, ಒಂದೆರಡು ದಶಕಗಳ ಹಿಂದೆ ಕಾಡಿನಿಂದಾವೃತ್ತವಾಗಿತ್ತು. ಹುಲಿ ಚಿರತೆಗಳು ವಾಸಿಸುತ್ತಿದ್ದ ಪ್ರದೇಶವಾಗಿತ್ತು. ಆದರೆ ಜನಸಂಖ್ಯಾ ಸ್ಫೋಟದಿಂದ ಈಗ ಮರಗಿಡಗಳೆಲ್ಲಾ ನಾಶವಾಗಿ ಕೃಷಿಗೂ ಯೋಗ್ಯವಲ್ಲದ ಪ್ರದೇಶವಾಗಿ ಮಾರ್ಪಾಟಾಗಿದೆ.

ಮೊಂಜ ಪಂಚಾಯತಿನ ಪೂರ್ವಭಾಗದಲ್ಲಿ ನಮ್ಮ ಪಂಚಾಯತ್‌ಗೆ ಸೇರಿದ ಕೊಮ್ಮಂಗಳಕ್ಕೆ ತಾಗಿಕೊಂಡೇ ಪೈವಳಿಕೆ ಪಂಚಾಯತಿನ ಎತ್ತರದ ಸಮತಟ್ಟಾದ ಪ್ರದೇಶವಿದೆ. ದಕ್ಷಿಣ ಭಾಗದಲ್ಲಿ ಪೈವಳಿಕೆ ಮತ್ತು ಮಂಗಲ್ಪಾಡಿ ಪಂಚಾಯತುಗಳು ತಾಗಿಕೊಂಡಿದೆ. ಪಶ್ಚಿಮದಲ್ಲಿ ಕಡಲತೀರದ ಮಂಜೇಶ್ವರ ಪಂಚಾಯತು ಇದಕ್ಕೆ ಗಡಿಪ್ರದೇಶವಾಗಿದೆ. ಉತ್ತರದಲ್ಲಿ ವಿಶಾಲವಾಗಿ ಹರಡಿರುವ ಗುಡ್ಡ ಬೆಟ್ಟಗಳಿಂದಲೂ ಬಯಲು ಪ್ರದೇಶಗಳಿಂದಲೂ ಕಂಗೊಳಿಸುವ ವರ್ಕಾಡಿ ಪಂಚಾಯತು ಪ್ರದೇಶವಾಗಿದೆ.

ಇಲ್ಲಿನ ಭೂಪ್ರಕೃತಿಗನುಗುಣವಾಗಿ ಈ ಪ್ರದೇಶವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು.

1. ಬಯಲು ಪ್ರದೇಶ
2. ಸಣ್ಣ ಇಳಿಜಾರು ಪ್ರದೇಶ
3. ಸಮತಲ ಪ್ರದೇಶ
4. ಎತ್ತರದ ಬೆಟ್ಟ ಪ್ರದೇಶ

2. ಪಟ್ಟಿ 1

ಕ್ರ.ಸಂ.	ವಿಭಾಗ	ಹೆಕ್ಟೇರ್
1	ಬಯಲು ಪ್ರದೇಶ	1310.3 H
2	ಸಣ್ಣ ಇಳಿಜಾರು ಪ್ರದೇಶ	1570
3	ಸಮತಲ ಪ್ರದೇಶ	800
4	ಎತ್ತರದ ಬೆಟ್ಟ ಪ್ರದೇಶ	651

1. ಬಯಲು ಪ್ರದೇಶ

ಬಯಲು ಪ್ರದೇಶವು ಸುಮಾರು 1310.3 ಹೆಕ್ಟೇರ್‌ನಷ್ಟಿದೆ. ಈ ಪ್ರದೇಶದಲ್ಲಿ ಹೊಯ್ಗೆ ಮಿಶ್ರಿತ, ಮೆಕ್ಕಲು ಮಣ್ಣುಗಳಿವೆ. ಈ ಪ್ರದೇಶದಲ್ಲಿ ಹೆಚ್ಚಾಗಿ ಬೆಳೆಯುವ ಬೆಳೆ ಭತ್ತ, ಕಂಗು, ತೆಂಗು ಬಾಳೆ ಈ ಬೆಳೆಗಳೆಲ್ಲಾ ಈ ಪ್ರದೇಶದಲ್ಲಿ ಬೆಳೆದು ಇಲ್ಲಿಯ ಜನರ ಆಶೋತ್ತರಗಳನ್ನು ಪೂರೈಸುವ ಪ್ರದೇಶವಾಗಿದೆ.

2. ಸಣ್ಣ ಇಳಿಜಾರು ಪ್ರದೇಶ

ಸಣ್ಣ ಇಳಿಜಾರು ಪ್ರದೇಶವು ಸುಮಾರು 1570 ಹೆಕ್ಟೇರಿನಷ್ಟು ಪ್ರದೇಶವನ್ನು ಒಳಗೊಂಡಿದೆ. ಈ ಪ್ರದೇಶದಲ್ಲಿ ಕೆಂಪು ಮಣ್ಣು ಕಲ್ಲು ಮಿಶ್ರಿತ

ಕೆಂಪು ಮಣ್ಣುಗಳಿವೆ. ಇಲ್ಲಿ ತೆಂಗು, ಗೇರು ಇತ್ಯಾದಿ ಫಲವೃಕ್ಷಗಳನ್ನು ಬೆಳೆಯುತ್ತಾರೆ. ನೀರಿನ ಇಂಗುವಿಕೆ ಹೆಚ್ಚಾದುದರಿಂದ ಈ ಪ್ರದೇಶದಲ್ಲಿ ಹೆಚ್ಚಾಗಿ ಜಲಕ್ಷಾಮ ಉಂಟಾಗುವುದಿಲ್ಲ. ಕೃಷಿ ಮಾಡದ ಭೂಮಿ ಈ ಪ್ರದೇಶದಲ್ಲಿ ಇಲ್ಲವೆಂದು ಹೇಳಬಹುದು.

3. ಸಮತಲ ಪ್ರದೇಶ

ಸಮತಲ ಪ್ರದೇಶವು, ವಿಸ್ತಾರದಲ್ಲಿ ಸುಮಾರು 800 ಹೆಕ್ಟೇರ್ ಪ್ರದೇಶದಲ್ಲಿದೆ. ಈ ಪ್ರದೇಶದಲ್ಲಿ ಕಲ್ಲುಮಿಶ್ರಿತ ಕೆಂಪು ಮಣ್ಣು ಮತ್ತು ಗಟ್ಟಿ ಮುರ ಮಣ್ಣುಗಳಿವೆ. ಇದು ಸಮುದ್ರ ಮಟ್ಟದಿಂದ ಸುಮಾರು 150ರಿಂದ 200 ಅಡಿಯಷ್ಟು ಉತ್ತರದಲ್ಲಿರುವ ಪ್ರದೇಶವಾಗಿದೆ. ಇಲ್ಲಿ ಸಾಮಾನ್ಯವಾಗಿ ಮಣ್ಣು ಇರುವ ಪ್ರದೇಶದಲ್ಲಿ ಹುಲ್ಲು ಮತ್ತು ಮರಗಿಡಗಳು ಬೆಳೆಯುತ್ತಿದೆ.

4. ಎತ್ತರದ ಬೆಟ್ಟ ಪ್ರದೇಶ

ಇದರಲ್ಲಿ ಹೆಚ್ಚಿನ ಭಾಗ ಗಟ್ಟಿ ಮುರಕಲ್ಲಿನಿಂದ ಕೂಡಿದೆ. ಮರಗಿಡಗಳೆಲ್ಲ ಇದ್ದುದರಿಂದ ಇಲ್ಲಿ ಮಣ್ಣಿನ ಸವೆತವುಂಟಾಗಿ ಇದ್ದ ಮಣ್ಣು ಕೂಡಾ ಕಣ್ಮರೆಯಾಯಿತು. ಅಲ್ಲಲ್ಲಿ ಮರಭೂಮಿಯ ಓಯಸಿಸ್‌ನಂತೆ ಶ್ರಮಪಟ್ಟು ದುಡಿದು ತೋಟಗಾರಿಕೆ ಮಾಡುತ್ತಿದ್ದಾರೆ. ಇದರ ವಿಸ್ತಾರ ಸುಮಾರು 6.07 ಹೆಕ್ಟೇರಿನಷ್ಟಿದೆ.

ಜನಪ್ರಕೃತಿ

1991ರ ಖಾನೇಶುಮಾರಿ (ಜನಗಣತಿ) ಲೆಕ್ಕ ಪ್ರಕಾರ ಜನಸಂಖ್ಯೆ 18246 ಇದರಲ್ಲಿ ಗಂಡಸರು 8937 ಹೆಂಗಸರು 9309 ವಾರ್ಡುವಾರು ಇರುವ ಲೆಕ್ಕಪಟ್ಟಿ 2ರಲ್ಲಿ ಕೊಡಲಾಗಿದೆ. ಒಟ್ಟು ಮನೆಗಳು 4445 ಅಂದರೆ ಮನೆಯೊಂದಕ್ಕೆ 4ರಂತೆ ಜನರಿದ್ದಾರೆ.

ಪಟ್ಟಿ - 2

ಜನಸಂಖ್ಯೆ 1991			
ವಾರ್ಡುನಂಬರು	ಗಂಡಸರು	ಹೆಂಗಸರು	ಒಟ್ಟು
I	1397	1555	2952
II	1050	950	2000
III	1169	1229	2398
IV	863	888	1751
V,	703	743	1446
VI	1105	1106	2211
VII	1074	1149	2223
VIII	687	767	1474
IX	889	902	1791

1991ರ ಜನಗಣತಿಯ ಪ್ರಕಾರ ನಿರಕ್ಷರರ ಸಂಖ್ಯೆ ಮೂರದಲ್ಲಿ ಒಂದರಷ್ಟು ಇದೆ. ಸಾಕ್ಷರತಾ ದರ 66% (ಶೇಕಡಾ) ಇದೆ. ಇಲ್ಲಿ ಪದವೀಧರರು 75 ಮಂದಿ ಇದ್ದಾರೆ. ತಾಂತ್ರಿಕ ವಿದ್ಯಾಭ್ಯಾಸ ಪಡೆದವರು 18 ಮಂದಿ ಇದ್ದಾರೆ. ವಿದ್ಯಾಭ್ಯಾಸವುಳ್ಳ ಹೆಂಗಸರ ಸಂಖ್ಯೆ ಗಂಡಸರ ಸಂಖ್ಯೆಗಿಂತ ಬಹಳ ಕಡಿಮೆ.

ಮೊಂಜ ಪ್ರದೇಶದಲ್ಲಿ ಬೀಡಿ ಕಾರ್ಮಿಕರ ಸಂಖ್ಯೆ ಸುಮಾರು 7,745, ಕಮ್ಮಾರರು ಮತ್ತು ಬಡಗಿಗಳು 78 ಮಂದಿ, ನಿರ್ಮಾಣ ಕಾರ್ಮಿಕರು 671 ಇತರ ಕಾರ್ಮಿಕರು 1838 ಮಂದಿ ಇದ್ದಾರೆ. ಹೆಚ್ಚಿನ ಎಲ್ಲಾ ಕೆಲಸ ಕಾರ್ಯಗಳಲ್ಲೂ ಮಹಿಳೆಯರ ಸಹಭಾಗಿತ್ವ ಕಡಿಮೆ. ಆದರೆ ಗುಡಿ ಕೈಗಾರಿಕೆಯಾದ ಬೀಡಿ ಸುತ್ತುವುದರಲ್ಲಿ ಹೆಂಗಸರ ಸಂಖ್ಯೆ ಗಂಡಸರ ಸಂಖ್ಯೆಗಿಂತ ಅಧಿಕವಾಗಿದೆ. ಇಲ್ಲಿ ಹಿಂದುಗಳ ಸಂಖ್ಯೆ ಶೇಕಡಾ 60ರಷ್ಟು. ಮುಸಲ್ಮಾನರ ಸಂಖ್ಯೆ ಶೇಕಡಾ 30ರಷ್ಟು, ಕ್ರೈಸ್ತರ ಸಂಖ್ಯೆ 10ರಷ್ಟು ಇದ್ದಾರೆ.

ಭೂಮಾಲಕತ್ವ ಭೂ ಪರಿಷ್ಕರಣೆಯಿಂದಾಗಿ ಕಡಿಮೆಯಾಗಿ, ಚಿಕ್ಕ ಹಿಡುವಳಿ ಸಂಖ್ಯೆ ಅಧಿಕವಾಗಿದೆ. ಚಿಕ್ಕ ಹಿಡುವಳಿದಾರರಲ್ಲಿ ಹೆಚ್ಚಿನವರು

ಇತರ ವಲಯಗಳಲ್ಲಿ ಕೂಲಿ ಕೆಲಸಗಳನ್ನು ಮಾಡುತ್ತಿದ್ದಾರೆ. ಇಲ್ಲಿ ಪರಿಶಿಷ್ಟ ವರ್ಗ 174 ಮಂದಿ ಇದ್ದಾರೆ. ಪರಿಶಿಷ್ಟ ಜಾತಿ ಮತ್ತು ವರ್ಗ ನಮ್ಮ ಪಂಚಾಯತಿನ ಒಟ್ಟು ಜನಸಂಖ್ಯೆಯ 7% ಶೇಕಡಾದಷ್ಟಿದ್ದಾರೆ.

ಜಲಸಂಪನ್ಮೂಲ

ನಮ್ಮ ಪ್ರದೇಶ ಮಳೆಯನ್ನೇ ಆಶ್ರಯಿಸಿದ ಕೃಷಿ ವಲಯವಾಗಿದೆ. ಮಳೆಯಿಲ್ಲದಿದ್ದರೆ ಬೆಳೆಯಿಲ್ಲ ಎಂಬ ಪರಿಸ್ಥಿತಿ ಇಲ್ಲಿಯದು. ಈ ವರ್ಷ ಬಿದ್ದ ಮಳೆ ಒಟ್ಟು 3155 ಮಿ.ಮೀ. ಇಲ್ಲಿಯ ಸರಾಸರಿ ಮಳೆಯ ಪ್ರಮಾಣ 3200-3500 ಮಿ.ಮೀ. ಇದರಲ್ಲಿ ಹೆಚ್ಚು ಮಳೆ ಬರುವ ಕಾಲವೆಂದರೆ ವರ್ಷಾ ಕಾಲ ಮಾತ್ರ. ಈ ವರ್ಷ ಹೆಚ್ಚು ಮಳೆ ಬಿದ್ದ ತಿಂಗಳು ಜುಲೈ, ಆಗಸ್ಟ್ ಮತ್ತು ಅಕ್ಟೋಬರ್. ಅದರಲ್ಲೂ ಈ ವರ್ಷದ ಅಧಿಕ ಮಳೆ ಬಿದ್ದ ಜುಲೈ ತಿಂಗಳು. ಉತ್ತಮ ಮಳೆ ಲಭಿಸಬೇಕಾದ ಜೂನ್ ತಿಂಗಳಲ್ಲಿ ಬಿದ್ದ ಮಳೆ ಕೇವಲ 1 ಮಿ.ಮೀ. ಇಲ್ಲಿ ಬೀಳುವ ಮಳೆ ನೇರವಾಗಿ ಹೊಳೆಯ ಮೂಲಕ ಸಮುದ್ರವನ್ನೇ ಸೇರುತ್ತದೆ. ಇಲ್ಲಿ ನೀರನ್ನು ತಡೆಗಟ್ಟಲು ವ್ಯವಸ್ಥಿತ ಕ್ರಮ ಇರದ ಕಾರಣದಿಂದ ಬೇಸಗೆ ಕಾಲದಲ್ಲಿ ನೀರಿನ ಕ್ಷಾಮ ಅನುಭವಿಸುತ್ತೇವೆ.

ಈ ಪ್ರದೇಶದಲ್ಲಿ ಹರಿಯುವ ಪ್ರಧಾನ ನದಿಯೆಂದರೆ ಉಪ್ಪಳ ಹೊಳೆ, ಇದಕ್ಕೆ ಸೇರುವ ಮುಖ್ಯ ತೋಡುಗಳೆಂದರೆ ಕಡಂಬಾರು, ಮಜಿಬೈಲುತೋಡು, ತಲೇಕಳ, ಮೂಡಂಬೈಲು ತೋಡು, ಅರಿಯಾಳ-ಕುಳೂರು ತೋಡು, ಕಳಿಯೂರು, ಮುನ್ನಿಪ್ಪಾಡಿ ತೋಡುಗಳಾಗಿವೆ. ಈ ಹೊಳೆ ತೋಡುಗಳಲ್ಲಿ ಫೆಬ್ರವರಿ ತಿಂಗಳ ನಂತರ ನೀರು ಇರುವುದೇ ಇಲ್ಲ.

ನಮ್ಮ ಪ್ರದೇಶದಲ್ಲಿ ಜಲಾಶಯಕ್ಕೆ ಅನುಕೂಲವಾದ ಹಳ್ಳ, ಕೆರೆ, ಮದಕಗಳು ಬಹಳ ಕಡಿಮೆ.

5. ಅಭಿವೃದ್ಧಿ ವಲಯಗಳ ಅವಲೋಕನ

ಕೃಷಿಯೂ, ಜಲ ಸೇಚನೆಯೂ

ಮೊಂಜ ಪಂಚಾಯತು, ಪೂರ್ಣ ಕೃಷಿ ಭೂಮಿಯಾಗಿದೆ. ಇದರ ಬಯಲು ಪ್ರದೇಶಗಳು ಸಮುದ್ರ ಮಟ್ಟಕ್ಕಿಂತ ನೂರಡಿ ಎತ್ತರದಲ್ಲಿಯೂ ಎತ್ತರದ ಭೂ ಪ್ರದೇಶವು ಸಮುದ್ರ ಮಟ್ಟಕ್ಕಿಂತ ಸುಮಾರು ನಾನ್ನೂರ ಅರವತ್ತು ಅಡಿ ಎತ್ತರಕ್ಕೂ ಇದೆ ಎನ್ನಲಾಗುತ್ತದೆ. ಇಲ್ಲಿಯ ಸಣ್ಣ ಪುಟ್ಟ ತೋಡುಗಳು, ಕೈ ಬೆರಳೆಣಿಕೆಯ ದೊಡ್ಡ ತೋಡುಗಳನ್ನು ಸೇರಿಕೊಂಡು ಪಂಚಾಯತಿನ ಮೂಡು, ದಕ್ಷಿಣ ಭಾಗದಿಂದ ಹರಿದು ಹೋಗುವ ಉಪ್ಪಳ ಹೊಳೆಯನ್ನು ಸೇರಿ ಹರಿದು ಅರಬಿ ಸಮುದ್ರವನ್ನು ಸೇರುತ್ತದೆ. ಹೊಳೆ ತೋಡುಗಳು ಹರಿಯುವ ಬಯಲು ಪ್ರದೇಶಗಳಲ್ಲಿ ಭತ್ತ, ತೆಂಗು, ಅಡಿಕೆ ಇವುಗಳು ಪ್ರಧಾನ ಬೆಳೆಗಳಾಗಿಯೂ ಎಡೆ ಬೆಳೆಯಾಗಿ ಬಾಳೆಯನ್ನೂ, ಎತ್ತರ ಪ್ರದೇಶದ ಫಲವತ್ತಾದ ಮಣ್ಣಿರುವ ಪ್ರದೇಶದಲ್ಲಿ ತೆಂಗು ತರಕಾರಿ ಇತ್ಯಾದಿಗಳನ್ನು ಗೇರು, ಮಾವು, ಮೊದಲಾದ ಹಣ್ಣು ಹಂಪಲುಗಳನ್ನೂ ಹೆಚ್ಚಾಗಿ ಬೆಳೆಯುತ್ತಾರೆ. ಭೂ ಪರಿಷ್ಕರಣೆಯ ಬಳಿಕ ಪ್ರತಿಯೊಂದು ಕುಟುಂಬದ ಹಿಡುವಳಿ ಸಣ್ಣದಾಗಿದೆ. ನಮ್ಮ ಪಂಚಾಯತು ಭತ್ತದ ಕೃಷಿಗೆ ಪ್ರಾಧಾನ್ಯತೆಯನ್ನು ಪಡೆದಿದೆ. ಇಲ್ಲಿಯ ಹೆಚ್ಚಿನ ಬೆಳೆಗಳು ಮಳೆಯ ನೀರನ್ನು ಆಶ್ರಯಿಸಿಕೊಂಡಿದೆ. ಇದರ ಜೊತೆಯಲ್ಲಿ ತೋಡು, ಕೆರೆ, ಹಳ್ಳ, ಮದಕ ಇವುಗಳ ಆಶ್ರಯವನ್ನು ಪಡೆದಿದೆ. ಸುಮಾರು ಐದು ದಶಕಗಳ ಹಿಂದೆ ನಮ್ಮ ಪಂಚಾಯತು ವಲಯಗಳಲ್ಲಿ ಹಲವು ಮದಕಗಳು, ಭೂ ಸಹಜ ಕೆರೆ ಹಳ್ಳಗಳು ಮದಕಗಳು ಇದ್ದು ಅವುಗಳನ್ನು ದುರಸ್ಥಿ ಪಡಿಸಿ ಬೇಸಾಯಕ್ಕೆ ಉಪಯೋಗಿಸಿಕೊಳ್ಳುತ್ತಿದ್ದರು. ಭೂ ಪರಿಷ್ಕಾರ ನಿಯಮ ಜಾರಿಗೆ ಬರುವ ಮೊದಲು ಇಲ್ಲಿ ದೊಡ್ಡ ದೊಡ್ಡ ಭೂಮಾಲಕರಿದ್ದರು. ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಕಾರ್ಮಿಕರೂ ಇದ್ದರು. ಆದರೂ ಶೇಖಡಾ 20ರಷ್ಟುಭತ್ತದ ಕೃಷಿ ಆಗುತ್ತಿತ್ತು. ಆಗ ಮಸ್ಕತ್ತಿ, ಅತೀಕಾರ, ಕಯಮ್ಮೆ, ತಮ್ಮುಂಗ, ಉಬರುಮುಂಡ, ನೆಲ್ಲೂರು, ಕಳಕಜೆ, ಮೊರಂಡ, ತೆಕ್ಕತ್ತವೆ, ತವಳಕಣ್ಣ, ತೊನ್ನೊರು, ಅಲ್ಲಿದೆ ಕಳಮೆ ಗಂಧಶಾಲೆ, ಜೀರ್‌ಶಾಲೆ ಮುಂತಾದ ಪರಿಮಳಯುಕ್ತ ಉತ್ತಮ ಗುಣಮಟ್ಟದ ಭತ್ತದ ತಳಿಗಳನ್ನು ಉಪಯೋಗಿಸುತ್ತಿದ್ದರು. ಮಳೆಗಾಲದಲ್ಲಿ ಗುಡ್ಡೆ ಇಳಿಜಾರು ಪ್ರದೇಶದಲ್ಲಿ ಕುಮೇರು ಭತ್ತದ ಬೆಳೆಗಳನ್ನು ಬೆಳೆಸುತ್ತಿದ್ದರು. ಭತ್ತದ ಬೆಳೆಗಳಿಗೆ ಆ ಸಮಯದಲ್ಲಿ ಹೊಳೆ, ಕೆರೆಗಳಿಂದ ಏತದ ಮೂಲಕ ನೀರು ಹಾಯಿಸುವ ಪದ್ಧತಿಯು ಬಳಕೆಯಲ್ಲಿತ್ತು.

ಸುಮಾರು 1970ರಲ್ಲಿ ಹೊಸ ಬೀಜದ ತಳಿಗಳ ವಿತರಣೆ ಆರಂಭವಾಯಿತು. ಜಪಾನೀ ಕೃಷಿ ಪದ್ಧತಿ. ಆಚರಣೆಯಲ್ಲಿ ಬಂತು. ಜೈವಿಕ ಗೊಬ್ಬರಗಳಲ್ಲದೇ ರಾಸಾಯನಿಕ ಗೊಬ್ಬರಗಳ ಉಪಯೋಗವು ಆರಂಭಿಸಲ್ಪಟ್ಟಿತು. ಜನಸಂಖ್ಯೆ ಸ್ಫೋಟನೆಗೊಂಡುದರಿಂದ ಆಹಾರ ವಸ್ತುಗಳು ಸಾಕಾಗದಂತೆ ಬಂತು. ಆಗ ಹೊಳೆ, ಕೆರೆ, ಬಾವಿಗಳಿಂದ ಪಂಪ್ ಸೆಟ್‌ಗಳನ್ನು ಉಪಯೋಗಿಸಿ ಎತ್ತರ ಪ್ರದೇಶದಲ್ಲಿ ಭತ್ತದ ಕೃಷಿಯನ್ನು ಮಾಡತೊಡಗಿದರು. ತಗ್ಗು ಪ್ರದೇಶಗಳಲ್ಲಿ ತೋಡುಗಳಿಗೆ ತಾತ್ಕಾಲಿಕ ಕಟ್ಟ (ಸೋಪ್ಪು, ನೆರಿಕೆ) ಇವುಗಳ ಮೂಲಕ ನೀರನ್ನು ತಡೆಹಿಡಿದು ಶೇಖರಿಸಿ ಏತ, ಕೊಂತುಗಳ ಮೂಲಕ ನೀರು ಸರಬರಾಜು ಮಾಡುತ್ತಿದ್ದರೆ, ಪಂಪ್‌ಸೆಟ್‌ಗಳ ಉಪಯೋಗ ಆರಂಭಿಸಲ್ಪಟ್ಟ ಬಳಿಕ ಏತ, ಕೊಂತುಗಳ ಪ್ರಯೋಗವು ಕಡಿಮೆಯಾಗುತ್ತಾ ಬಂದು ಈಗ ತೀರಾ ಕಣ್ಮರೆಯಾಗಿದೆ. ಹಿಂದಿನಿಂದಲೇ 1ನೇ ಭತ್ತ ಬೆಳೆಯಾಗುವ ಪ್ರದೇಶದಲ್ಲಿ ಆ ಬೆಳೆಯ ಬಳಿಕವೂ ಎರಡು ಬೆಳೆ ಬೆಳೆಸುವ ಗದ್ದೆಗಳಲ್ಲಿ ಎರಡನೇ ಬೆಳೆಯ ಬಳಿಕವೂ ಹುರುಳೀ, ಹೆಸರು, ಉದ್ದು ಮೊದಲಾದ ದ್ವಿದಳ ದಾನ್ಯಗಳನ್ನು ಬೆಳೆಸುವ ಪದ್ಧತಿ ವ್ಯಾಪಕವಾಗಿತ್ತು. ನೀರು ಲಭ್ಯವಿರುವ ಪ್ರದೇಶಗಳಲ್ಲಿ ಒಂದು ಎರಡನೇಯ ಭತ್ತದ ಬೆಳೆಗಳ ಬಳಿಕ ತರಕಾರಿ, ಗೆಣಸು, ರಾಗಿ, ಮರಗೆಣಸು ಇತ್ಯಾದಿಗಳನ್ನೂ ಬೆಳೆಸುತ್ತಿದ್ದರು. ನಾಲ್ಕು ದಶಕಗಳ ಮೊದಲು ಭತ್ತದ ಬೆಳೆಗೆ ಬಾಧಿಸುವ ಕೀಟ ಬಾಧೆ ರೋಗಗಳಿಗೆ ಕೀಟನಾಶಕ ಔಷಧಿಗಳ ಉಪಯೋಗವಿರಲಿಲ್ಲ. ಆಗ ಭತ್ತದ ಬೆಳೆಯನ್ನು ಕೀಟ ಬಾದೆ, ರೋಗಗಳಿಂದ ರಕ್ಷಿಸಲು ಅರೆಬಿಸಿ ಬೂದಿ ಹರಡುವುದೂ, ಈಚಲು ಮರದ ಗರಿಗಳನ್ನು ಅಲ್ಲಲ್ಲಿ ಭತ್ತದ ಗದ್ದೆಗಳ ಮಧ್ಯೆ ನೆಡುವುದೂ ಸಂಪ್ರದಾಯವಾಗಿತ್ತು. ಆ ಸಮಯದಲ್ಲಿ ಸಾಮಾನ್ಯವಾಗಿ ಅಲ್ಲಲ್ಲಿ ಕೆಲವೇ ಪ್ರದೇಶದಲ್ಲಿ ಅಡಿಕೆ ತೋಟಗಳಿದ್ದವು. ವಾರ್ಷಿಕ ವರಮಾನವು ಜೀವನಕ್ಕೆ ಮತ್ತು ಕೃಷಿಗೆ ಸಾಲದಿದ್ದುದರಿಂದ ಅಡಿಕೆಗಳನ್ನೂ ವಾರ್ಷಿಕ ಫಲ ಗೇಣಿಗೆ ಕೊಡುವ ಪದ್ಧತಿಯಿತ್ತು.

ಭೂ ಪರಿಷ್ಕರಣೆ ಜಾರಿಗೆ ಬಂದ ಬಳಿಕ ಭೂಮಿಯ ಒಡೆತನ ಹೆಚ್ಚಿನವರ ಕೈಗೆ ಬಂತು. ಇದರಿಂದಾಗಿ ಭೂ ಹಿಡುವಳಿಯ ಗಾತ್ರ ಕಡಿಮೆಯಾಯಿತು. ಸಣ್ಣ ಹಿಡುವಳಿದಾರರ ಕುಟುಂಬದ ಕೃಷಿ ವರಮಾನವು ಆ ಕುಟುಂಬದ ಜೀವನಕ್ಕೆ ಸಾಲದೆಂದು ಮನಗಂಡು ಕುಟುಂಬದ ಹಲವು ಸದಸ್ಯರು ಉದ್ಯೋಗವನ್ನೂ ಕೆಲಸವನ್ನೂ ಅರಸುತ್ತಾ ಪಟ್ಟಣದ ಕಡೆಗೆ ತೆರಳಿದರು. ಕೃಷಿ ಕೆಲಸಗಳಿಗೆ ದೊರೆಯುವ ವೇತನಕ್ಕಿಂತ ಹೆಚ್ಚು ವರಮಾನವನ್ನು ಇತರ ಕೆಲಸಗಳನ್ನು ಮಾಡುವ ಮೂಲಕ ಸಂಪಾದಿಸಬಹುದೆಂದು ತಿಳಿದ, ಕೃಷಿಯನ್ನೇ ಅವಲಂಬಿಸಿದ ಕೆಲಸಗಾರರಾಗಿ ಕೃಷಿ ಕೆಲಸಗಳನ್ನು ಬಿಟ್ಟು ಬೇರೆ ಕೆಲಸಗಳನ್ನು ಹುಡುಕಿ ಹೋಗತೊಡಗಿದರು. ಹೀಗಾಗಿ ಕೃಷಿ ಕೆಲಸ ಮಾಡುವ ಕಾರ್ಮಿಕರ ಸಂಖ್ಯೆ ಕಡಿಮೆಯಾಗುತ್ತಾ ಬಂತು. ಕೃಷಿಯಿಂದ ದೊರೆಯುವ ವರಮಾನವು ಕಡಿಮೆಯಾದುದರಿಂದ ಕೃಷಿಯು ಗೌರವವಿಲ್ಲದ ವ್ಯವಸಾಯವಾಗುತ್ತಾ ಬಂತು. ಇದಲ್ಲದೆ ಒಂದಿಷ್ಟು ವಿದ್ಯೆ ಕಲಿತು ವಿದ್ಯಾವಂತರು ಎನಿಸಿಕೊಂಡವರು ಕೃಷಿ ಕೆಲಸ ಮರ್ಯಾದೆ ಇಲ್ಲದ ಕೆಲಸವೆಂದೂ ತಿಳಿಯತೊಡಗಿ ಕೃಷಿ ಕೆಲಸವನ್ನು ಬಿಟ್ಟು ಅನ್ಯ ಕೆಲಸಗಳನ್ನು ಅರಸುತ್ತಾ ಪಟ್ಟಣದತ್ತ ತೆರಳಿದರು. ಹೀಗಾಗಿ ಭತ್ತದ ಕೃಷಿಯು ಕಡಿಮೆಯಾಗುತ್ತಾ ಆಹಾರದ ಉತ್ಪಾದನೆಯು ಕೊರತೆ ಹೆಚ್ಚಾಗತೊಡಗಿತು. ಇದಲ್ಲದೆ ಕೃಷಿ ಕ್ಷೇತ್ರಕ್ಕೆ ಭಾದಿಸುವ ಇನ್ನಷ್ಟು ಸಮಸ್ಯೆಗಳಿವೆ. ಕೃಷಿ ಅವಶ್ಯಕ ವಸ್ತುಗಳ ಬೆಲೆಯು ಏರತೊಡಗಿತು. ಜೀವನದ ಮಟ್ಟ ಏರುತ್ತಾ ಹೋಯಿತು. ಜೀವನಾವಶ್ಯಕ ವಸ್ತುಗಳ ಬೆಲೆಯು ಏರತೊಡಗಿತು. ಇದನ್ನು ಸರಿದೂಗಿಸಲು ಭತ್ತದ ಕೃಷಿ, ಆಹಾರ ವಸ್ತುಗಳ ಕೃಷಿ ಇವುಗಳ ಉತ್ಪಾದನೆಯಿಂದ ದೊರೆಯುವ ವರಮಾನವು ಜನರ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಿಲ್ಲವೆಂದಾಯಿತು. ಹೀಗಾಗಿ ಕೃಷಿಕರು ಆಹಾರ ದಾನ್ಯಗಳ ಉತ್ಪಾದನೆಯಿಂದ ತಮ್ಮ ಲಕ್ಷ್ಯವನ್ನು ವಾಣಿಜ್ಯ ಬೆಳೆಗಳ ಕಡೆಗೆ ಹರಿಸಿದರು. ಆರಂಭದಲ್ಲಿ ಭಾಗಾಯತು ಭೂಮಿಯಲ್ಲಿ ಬಳಿಕ, ನಂಜ ಭೂಮಿಯಲ್ಲೂ ಅಡಿಕೆ, ತೆಂಗು ಇವುಗಳನ್ನು ಬೆಳೆಸುವುದರ ಮೂಲಕ ಭತ್ತದ ಬೆಳೆಯು ಕಡಿಮೆಯಾಗುತ್ತಾ ಬಂತು. ಹೀಗೆ ಭತ್ತದ ಕೃಷಿ ಕಡಿಮೆಯಾಗಿ ಅಡಿಕೆ, ತೆಂಗು ಇವುಗಳ ಕೃಷಿಯೂ ಹೆಚ್ಚಾಗತೊಡಗಿತು. ನೀರಿನ ಲಭ್ಯತೆಯ ಕೊರತೆಯಿಂದಲೂ, ಕೃಷಿ ವೆಚ್ಚ ಹೆಚ್ಚಾದುದರಿಂದಲೂ ಒಂದು ಬೆಳೆ ಬೆಳೆಯುವ ಭತ್ತದ ಕೃಷಿ ಸ್ಥಳಗಳ ಬಹುಭಾಗ ಕೃಷಿ ಇಲ್ಲದೆ ಬಂಜರು ಭೂಮಿಯಾಯಿತು. ನಮ್ಮ ಪಂಚಾಯತಿನ ಒಟ್ಟು ವಿಸ್ತೀರ್ಣ 4504.4 ಹೆಕ್ಟೇರ್. ಈ ಪ್ರದೇಶವು ಬಯಲು ಸಣ್ಣ ಇಳಿಜಾರು ಸಮತಲ ಪ್ರದೇಶ ಎತ್ತರದ ಬೆಟ್ಟ ಪ್ರದೇಶ, ನದಿ ತೋಡುಗಳಿಂದ ಕೂಡಿಕೊಂಡಿದೆ. ಇದನ್ನು ತಖ್ತೆ ಒಂದರಲ್ಲಿ ನಮೂದಿಸಲಾಗಿದೆ.

ತಖ್ತೆ - 1

ನಂಬ್ರ	ಭೂಪ್ರಕೃತಿ	ವಿಸ್ತೀರ್ಣ
1	ಬಯಲು ಪ್ರದೇಶ	1310.3 ಹೆಕ್ಟೇರ್
2	ಸಣ್ಣ ಇಳಿಜಾರು	1460 ಹೆ
3	ಸಮತಲ ಪ್ರದೇಶ	900 ಹೆ
4	ಎತ್ತರದ ಬೆಟ್ಟ ಪ್ರದೇಶ	551 ಹೆ
5	ನದಿ, ತೋಡು ಇತ್ಯಾದಿ	103.7 ಹೆ

ಬಯಲು ಪ್ರದೇಶದಲ್ಲಿ ಮೆಕ್ಕಲು ಮಣ್ಣು. ಈ ಪ್ರದೇಶ ಸುಮಾರು 1310 ಹೆಕ್ಟೇರ್ ವಿಸ್ತೀರ್ಣದಲ್ಲಿದೆ. ಇಳಿಜಾರು ಪ್ರದೇಶವು ಕೆಂಪು ಮಣ್ಣು ಮತ್ತು ಕಲ್ಲು ಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಇದು ಸುಮಾರು 1460 ಹೆಕ್ಟೇರ್ ವಿಸ್ತೀರ್ಣದಲ್ಲಿದೆ. ಈ ಸಮತಲ ಪ್ರದೇಶವು ಸುಮಾರು 900 ಹೆಕ್ಟೇರ್‌ಗಳಷ್ಟು ವಿಸ್ತೀರ್ಣದಲ್ಲಿದ್ದು ಈ ಪ್ರದೇಶವು ಗಟ್ಟಿ ಮುರಮಣ್ಣು ಮತ್ತು ಕಲ್ಲುಮಿಶ್ರಿತ ಕೆಂಪು ಮಣ್ಣಿನಿಂದ ಕೂಡಿದೆ. ಎತ್ತರದ ಬೆಟ್ಟ ಪ್ರದೇಶವು ಸುಮಾರು 551 ಹೆಕ್ಟೇರ್ ವಿಸ್ತೀರ್ಣದ ಸ್ಥಳವನ್ನು ಆವರಿಸಿಕೊಂಡಿದೆ. ಇದು ಹೆಚ್ಚಾಗಿ ಗಟ್ಟಿ ಮುರಕಲ್ಲಿನಿಂದ ಕೂಡಿದೆ.

ಬಯಲು ಪ್ರದೇಶದಲ್ಲಿ ಭತ್ತ, ಅಡಿಕೆ, ತೆಂಗು ಮತ್ತು ಬಾಳೆ, ಎಡೆ ಬೆಳೆಯಾಗಿ ಕೆಲ ಪ್ರದೇಶಗಳಲ್ಲಿ ಸಣ್ಣ ಮಟ್ಟದಲ್ಲಿ ಕರಿಮೆಣಸು ಬೆಳೆಯುತ್ತಿದೆ. ಇಳಿಜಾರು ಪ್ರದೇಶದಲ್ಲಿ ತೆಂಗು, ಗೇರು, ಮಾವು, ಹಲಸು, ರಬ್ಬರ್ ಬೆಳೆಯುತ್ತಿದೆ. ಸಮತಲ ಪ್ರದೇಶದಲ್ಲಿ ತೆಂಗು, ಗೇರು, ಮಾವು, ಹಲಸು ಇವು ಬೆಳೆದರೆ ಎತ್ತರದ ಬೆಟ್ಟ ಪ್ರದೇಶದಲ್ಲಿ ಕೆಲವೆಡೆ ಗಾಳಿಮರ, ಗೇರು ಇತ್ಯಾದಿ ಬೆಳೆಯುತ್ತದೆ.

ವಿವರ ತಖ್ತೆ ನಂಬ್ರ 2ರಲ್ಲಿ ಸೂಚಿಸಲಾಗಿದೆ

ತಖ್ತೆ - 2 (ಭೂ ವಿನಿಯೋಗ)

ನಂಬ್ರ	ವಿನಿಯೋಗ	ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ
1.	ಮಿಶ್ರಬೆಳೆ ಬಾಳೆ, ಕರಿಮೆಣಸು ಇತ್ಯಾದಿ	75.2
2.	ತೆಂಗು	141.4
3.	ರಬ್ಬರ್	18.3
4.	ಗೇರು	188
5.	ಭತ್ತ ಅಡಿಕೆ ಒಟ್ಟು	989.6
6.	ನದಿ, ತೋಡು	103.7
7.	ಕೃಷಿಯೋಗ್ಯವಾದ ಬಂಜರು ಭೂಮಿ	2200
8.	ಕೃಷಿಯೋಗ್ಯವಲ್ಲದ ಬಂಜರು ಭೂಮಿ	651.5

ನಮ್ಮ ಪಂಚಾಯತಿನ ಭತ್ತ ಬೆಳೆಯುತ್ತಿದ್ದ ಭೂಪ್ರದೇಶದ 1/3 ಭಾಗ ವಾಣಿಜ್ಯ ಬೆಳೆಗಳಾದ ಅಡಿಕೆ, ತೆಂಗು ಇತ್ಯಾದಿ ಕೃಷಿಗೂ ಉಪಯೋಗಿಸಲ್ಪಟ್ಟು ಭತ್ತ ಬೆಳೆಯುವ ಪ್ರದೇಶ ಹಿಂದಿಗಿಂತ ಕಡಿಮೆಯಾಗಿದೆ. ಇದಲ್ಲದೆ ಇನ್ನೂ ಕೆಲವು ಭಾಗವು ಭತ್ತದ ಕೃಷಿ ಮಾಡದೆ ಬಂಜರು ಭೂಮಿಯಾಗಿ ಉಳಿದಿದೆ. ಭತ್ತದ ಕೃಷಿ ಮಾಡುವ ಸ್ಥಳಗಳ ವಿವರ ತಖ್ತೆ 3ರಲ್ಲಿ ಸೂಚಿಸಲಾಗಿದೆ.

ತಖ್ತೆ - 3

ಕ್ರ.ಸಂ.	ಬೆಳೆ	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1.	ಭತ್ತ ಒಂದನೇ ಬೆಳೆ	369.4
2.	ಭತ್ತ 2ನೇ ಬೆಳೆ	276.2
3.	ಭತ್ತ 3ನೇ ಬೆಳೆ	76

ನಮ್ಮ ಈ ವಲಯದಲ್ಲಿ ಭತ್ತದ ಬೆಳೆಗೆ ಹೆಚ್ಚಾಗಿ ಊರಿನ ತಳಿಗಳನ್ನೇ ಉಪಯೋಗಿಸುತ್ತಿದ್ದಾರೆ. ಮೂರರಲ್ಲಿ ಒಂದಂಶಕ್ಕಿಂತ ಕಡಿಮೆ ಪ್ರದೇಶದಲ್ಲಿ ಮಾತ್ರ ಅಧಿಕ ಇಳುವರಿ ತಳಿಗಳನ್ನು ಉಪಯೋಗಿಸಿ ಭತ್ತದ ಕೃಷಿ ಮಾಡುತ್ತಾರೆ.

ಊರ ತಳಿಯಲ್ಲಿ ಹೆಕ್ಟೇರಿಗೆ 1600ರಿಂದ 1800 ಕೆ.ಜಿ. ವರೆಗೆ ಭತ್ತದ ಇಳುವರಿ ದೊರೆತರೆ ಅಧಿಕ ಇಳುವರಿ ತಳಿಯಲ್ಲಿ 3000ದಿಂದ 3200 ಕೆ.ಜಿ. ಭತ್ತ ಇಳುವರಿ ಬರುವುದು. 3ನೇ ಬೆಳೆ ಬೆಳೆಯುವ ಪ್ರದೇಶವು ಬಹಳ ಕಡಿಮೆ.

ವ್ಯಾಪಕವಾಗಿ ದ್ವಿದಳ ಧಾನ್ಯಗಳನ್ನು ಬೆಳೆಸುವ ಕ್ರಮವು ಹಿಂದಿನಿಂದಲೇ ನಡೆದುಕೊಂಡು ಬಂದ ಕೃಷಿ ಕ್ರಮವಾಗಿದೆ. ಈಗ ಧಾನ್ಯದ ಬೆಳೆ ಬಹಳ ಕಡಿಮೆಯಾಗಿದೆ. ತರಕಾರಿ ಕೃಷಿಯೂ ಹಿಂದಿಗಿಂತ ಬಹಳಷ್ಟು ಕಡಿಮೆಯಾಗುತ್ತಾ ಬಂದಿದೆ. ಭತ್ತ ಹೊರತು ಇತರ ಬೆಳೆಗಳು ನಮ್ಮ ಪಂಚಾಯತಿನಲ್ಲಿ ಬೆಳೆಯುವ ಬಗ್ಗೆ ವಿವರವನ್ನು ತಖ್ತೆ 4ರಲ್ಲಿ ಸೂಚಿಸಲಾಗಿದೆ.

ತಖ್ತೆ 4 ಇತರ ಬೆಳೆಗಳು

ನಂಬ್ರ	ಬೆಳೆ	ವಿಸ್ತೀರ್ಣ (ಹೆಕ್ಟೇರುಗಳಲ್ಲಿ)
1.	ಧಾನ್ಯಗಳು	15.00
2.	ಧಾನ್ಯಗಳು	2.00
3.	ಬಾಳೆ	49.6
4.	ಕರಿಮೆಣಸು	22.6
5.	ಅಡಿಕೆ	619.6
6.	ತೆಂಗು	370.0

ಮೂರು ದಶಕಗಳ ಹಿಂದೆ ಈ ಪ್ರದೇಶದಲ್ಲಿ ಸಾಕಷ್ಟು ಹಸುರೆಲೆ, ಹಟ್ಟಿಗೊಬ್ಬರ ಇತ್ಯಾದಿ ಜೈವಿಕ ಗೊಬ್ಬರಗಳು ದೊರಕುತ್ತಿದ್ದವು. ಜೈವಿಕ ಗೊಬ್ಬರದ ಲಭ್ಯತೆ ಕಡಿಮೆಯಾಗುವುದರೊಂದಿಗೆ ರಾಸಾಯನಿಕ ಗೊಬ್ಬರದ ಬಳಕೆ ಹೆಚ್ಚುತ್ತಾ ಬಂತು. ಆದರೆ ಮಣ್ಣಿನ ಸಾರವನ್ನು ಅರಿತು ಕೃತಕಗೊಬ್ಬರ ಉಪಯೋಗಿಸುವ ಸಂಪ್ರದಾಯವೇ ನಮ್ಮಲ್ಲಿಲ್ಲ. ಯಾವ ಗುಣದ ಮಣ್ಣಿಗೆ ಯಾವ ರೀತಿಯ ರಾಸಾಯನಿಕ ಗೊಬ್ಬರ ಬಳಸಬಹುದೆಂಬ ಪರಿಜ್ಞಾನವೂ ಕೃಷಿಕರಿಗೆ ಏನೂ ಇಲ್ಲ. ಆದ್ದರಿಂದ ಸಿಕ್ಕಿದ ಗೊಬ್ಬರವನ್ನು ಕೃಷಿಗೆ ಉಪಯೋಗಿಸುತ್ತಾರೆ. ಹೀಗಾಗಿ ಮಣ್ಣಿನ ಗುಣವು ಹದಗೆಟ್ಟಿದೆಯಲ್ಲದೆ ಬೆಳೆಗೆ ದುಷ್ಪರಿಣಾಮ ಉಂಟಾಗುತ್ತದೆ. ಹೀಗೆಯೇ ಕೀಟನಾಶಕಗಳು ಕೂಡಾ. ಶಾಸ್ತ್ರೀಯವಾಗಿ ಕೀಟನಾಶಕಗಳನ್ನು ಬಳಸುವ ಅರಿವು ಇಲ್ಲದಿರುವುದರಿಂದ ಬೆಳೆಗೆ ಕೆಟ್ಟ ಪರಿಣಾಮ ಉಂಟಾಗುತ್ತದೆ.

ಈ ಪಂಚಾಯತ್ ಪ್ರದೇಶದ ಒಳಗಡೆಯಿರುವ ಸಹಕಾರಿ ಸಂಸ್ಥೆಗಳು ದಶಕದ ಹಿಂದೆ ಕೃತಕ ಗೊಬ್ಬರ ಮತ್ತು ಕೀಟನಾಶಕಗಳ ವಿತರಣೆಯನ್ನು ನಡೆಸುತ್ತಿದ್ದವು. ಸದ್ರಿ ವಿತರಣೆಯು ಲಾಭದಾಯಕವಲ್ಲದ್ದರಿಂದ ಇದನ್ನು ಸಹಕಾರಿ ಸಂಘಗಳು ನಿಲ್ಲಿಸಿದವು. ಈಗ ಈ ಪಂಚಾಯತ್ ಪ್ರದೇಶದಲ್ಲಿ ರಾಸಾಯನಿಕ ಗೊಬ್ಬರ ಕೀಟನಾಶಕಗಳ ವಿತರಣೆಯು ಖಾಸಗಿ ಅಥವಾ ಸಹಕಾರೀ ರಂಗಗಳಲ್ಲಿಯೇ ಇಲ್ಲ. ಇವುಗಳಿಗಾಗಿ ಈ ಪಂಚಾಯತ್ ಪ್ರದೇಶದ ಕೃಷಿಕರು ನೆರೆ ಪಂಚಾಯತಿನ ಖಾಸಗೀ ವಿತರಣೆದಾರರನ್ನು ಆಶ್ರಯಿಸಬೇಕಾಗುತ್ತದೆ.

ನಮ್ಮ ಪಂಚಾಯತ್‌ನ್ನು ಕೇಂದ್ರೀಕರಿಸಿ ಮಿಂಜ ಕೃಷಿ ಭವನವು ಕಾರ್ಯಾಚರಿಸುತ್ತದೆ. ಈ ಕೃಷಿ ಭವನದಲ್ಲಿ ಹೆಚ್ಚಿನ ಸಮಯಗಳಲ್ಲಿ ಸ್ಥಿರವಾದ ಕೃಷಿ ಅಧಿಕಾರಿಗಳು ಇಲ್ಲದೆ ಅನ್ಯ ಕೃಷಿ ಭವನಗಳ ಕೃಷಿ ಅಧಿಕಾರಿಗಳಿಗೆ ಹೆಚ್ಚುವರಿ ಜವಾಬ್ದಾರಿಯನ್ನು ನಿರ್ವಹಿಸಿಕೊಟ್ಟು ಅಂತಹ ಅಧಿಕಾರಿಗಳು ಕೆಲವು ವರ್ಷಗಳಿಂದ ಈಚೆಗೆ ಇಲ್ಲಿ ಕಾರ್ಯಾಚರಿಸುತ್ತಿರುವುದು ಈ ಪ್ರದೇಶದ ಕೃಷಿ ಅಭಿವೃದ್ಧಿಗೆ ಬಹಳ ತೊಡಕುಂಟಾಗುತ್ತದೆ. ಈ ಕೃಷಿಭವನದಲ್ಲಿ ನೇಮಿಸಲ್ಪಡುವ ಕೃಷಿ ಅಧಿಕಾರಿಗಳೂ ನೌಕರರೂ ಪ್ರಾದೇಶಿಕ ಭಾಷೆಯ ಅರಿವಿಲ್ಲದವರಾಗುವುದರಿಂದ ಈ ಪ್ರದೇಶದ ಕೃಷಿಕರ ಸಮಸ್ಯೆಗಳನ್ನು ಅರಿತು ಅವುಗಳಿಗೆ ಸೂಕ್ತ ಪರಿಹಾರ ಒದಗಿಸುವರೇ ಸಾಧ್ಯವಾಗುವುದಿಲ್ಲ. ಇದು ಕೂಡಾ ಕೃಷಿ ಅಭಿವೃದ್ಧಿಗೆ ಉಂಟಾಗುವ ತೊಡಕಾಗುತ್ತದೆ.

ಈ ಪಂಚಾಯತಿನ ಪರಿಧಿಯಲ್ಲಿ ಎಂಟು ಪಾಡಶೇಖರ ಸಮಿತಿಗಳಿವೆ. ಈ ಪಾಡಶೇಖರ ಸಮಿತಿಗಳು ಕೂಟಕೃಷಿಗೆ ಪ್ರೋತ್ಸಾಹ ನೀಡಿದರೂ ಭತ್ತದ ಬೆಳೆಯು ಲಾಭದಾಯಕವಲ್ಲದ್ದರಿಂದ ಕೃಷಿಕರು ಈ ಕೃಷಿಯ ಬಗ್ಗೆ ಆಸಕ್ತಿ ತೋರಿಸುವುದಿಲ್ಲ. ಭತ್ತದ ಬೆಳೆಗೆ ಸರಿಯಾದ ಪ್ರೋತ್ಸಾಹ ಒದಗಿಸಿ ಕೃಷಿಕರನ್ನು ಪ್ರೋತ್ಸಾಹಿಸದ ಹೊರತು ಈ ಕೃಷಿ ಅಭಿವೃದ್ಧಿ ಹೊಂದಲಾರದು.

ಪಾಡಶೇಖರ ಸಮಿತಿಗಳ ಮೂಲಕ ಮಣ್ಣು ಪರೀಎಯ ವ್ಯವಸ್ಥೆ ಇದ್ದರೂ ಪರೀಕ್ಷೆಗಾಗಿ ಕಳುಹಿಸಿದ ಮಣ್ಣು ಮಾದರಿಗಳು ವರ್ಷಗಳು ಕಳೆದರೂ ಕೆಲವೊಮ್ಮೆ ದೊರಕದಿರುವುದೂ ಇದೆ. ಮಣ್ಣು ಪರೀಕ್ಷೆಗೆ ಸಂಚಾರಿ ಮಣ್ಣು ಪರೀಕ್ಷಾ ಪ್ರಯೋಗಾಲಯದ ವ್ಯವಸ್ಥೆಯನ್ನು ಸಕ್ರಿಯಗೊಳಿಸುವ ಮೂಲಕ ಮಣ್ಣಿನ ಗುಣಮಟ್ಟವನ್ನು ಅರಿಯುವಂತೆ ಮಾಡಬೇಕಾಗಿದೆ. ಕೆಲವು ವರ್ಷಗಳ ಮೊದಲು ಮಣ್ಣಿಗೆ ಸುಣ್ಣ ಉಪಯೋಗಿಸುವ ಪದ್ಧತಿ ಚಾರಿಯಲ್ಲಿತ್ತು. ಈಗ ಆ ವ್ಯವಸ್ಥೆಯು ಇಲ್ಲದಾಗಿದೆ. ಪಾಡಶೇಖರ ಸಮಿತಿಗಳ ಮೂಲಕ ಸಹಾಯಧನದ ವ್ಯವಸ್ಥೆಯಲ್ಲಿ ಔಷಧಿ ಸಿಂಪಡಿಸುವ ಯಂತ್ರ, ಪಂಪುಸೆಟ್ಟುಗಳ ವಿತರಣೆ. ನೀರಾವರಿ ಕೆರೆಗಳ ನಿರ್ಮಾಣಕ್ಕೆ ಸಹಾಯ ಮುಂತಾದ ಅನುಕೂಲತೆಗಳು ಸಣ್ಣ ಮಟ್ಟಿಗೆ ದೊರಕುತ್ತವೆ. ಭತ್ತದ ಬೆಳೆಗೆ ನೀಡಲಾಗುವ ಪ್ರೋತ್ಸಾಹ ಸಹಾಯವು ನಷ್ಟದ ಹಾದಿಯಲ್ಲಿ ಮುಂದುವರಿಯುತ್ತಿರುವ ಭತ್ತದ ಕೃಷಿಯನ್ನು ರಕ್ಷಿಸಿ ಅಭಿವೃದ್ಧಿಗೊಳಿಸಲು ಏನೇನೂ ಸಾಲದು.

ಕೃಷಿ ಕೆಲಸಗಳಿಗೆ ಬೇಕಾದಷ್ಟು ಕೃಷಿ ಕಾರ್ಮಿಕರು ದೊರೆಯುವುದಿಲ್ಲ. ಕೃಷಿ ವರಮಾನವನ್ನು ಹೋಲಿಸಿದಲ್ಲಿ ಅವರಿಗೆ ನೀಡಬೇಕಾದ ವೇತನವು ಬಹಳ ಹೆಚ್ಚು. ಭತ್ತದ ಕೃಷಿ ಕೈಗೊಳ್ಳಬೇಕಾದ ಆವಶ್ಯಕತೆ ಮತ್ತು ಅದರ ಮಹತ್ವ ಅಲ್ಲದೆ ಸಂಘಟಿತ ಕೃಷಿಯ ಉದ್ದೇಶಗಳು ಮತ್ತು ಪ್ರಯೋಜನಗಳ ಕುರಿತು ಕೃಷಿಕರಿಗೆ ಮಾಹಿತಿ ನೀಡುವ ಕಾರ್ಯಕ್ರಮ ಕೈಗೊಳ್ಳಬೇಕು.

ಪಾದಶೇಖರ ಸಮಿತಿಗಳ ವಿವರವನ್ನು ತಖ್ತೆ 5ರಲ್ಲಿ ಸೂಚಿಸಲಾಗಿದೆ.

ತಖ್ತೆ - 5 ಪಾಡಶೇಖರ ಸಮಿತಿಯೂ ವಿಸ್ತೀರ್ಣವೂ

(ಹೆಕ್ಟೇರುಗಳಲ್ಲಿ)

ನಂಬ್ರ	ಹೆಸರು	ಒಂದನೇ ಬೆಳೆ	ಎರಡನೇ ಬೆಳೆ	ಮೂರನೇ ಬೆಳೆ
1.	ಕಡಂಬಾರು	35.00	32.00	—
2.	ಕುಳೂರು	24.00	25.00	10.00
3.	ಮಜಿಬೈಲು	26.00	24.00	8.00
4.	ಕಳಿಯೂರು	24.00	20.00	—
5.	ಪಜಿಂಗಾರು	15.00	12.00	—
6.	ಮೊಂಜ	28.00	16.00	8.00
7.	ತಲೆಕ್ಕಳ	40.00	37.00	12.00
8.	ಬೆಜ್ಜ	25.00	22.00	—

ಕೃಷಿ ಸಾಲಗಳು ಈ ಪಂಚಾಯತಿನ ಪರಿಧಿಯಲ್ಲಿ ಮೂರು ಸಹಕಾರಿ ಬೇಂಕುಗಳೂ ಒಂದು ಗ್ರಾಮೀಣ ಬೇಂಕಿನ ಶಾಖೆಯೂ ಕಾರ್ಯಾಚರಿಸುತ್ತಿದೆ. ಈ ಬೇಂಕುಗಳಲ್ಲದೆ ವರ್ಕಾಡಿ ಸಿಂಡಿಕೇಟ್ ಬ್ಯಾಂಕಿನ ಶಾಖೆಯು ಈ ಪಂಚಾಯತಿನ ಎರಡು ವಾರ್ಡುಗಳಿಗೂ ಗ್ರಾಮೀಣ ಬೇಂಕಿನ ಜೋಡುಕಲ್ಲು ಶಾಖೆಯು ಒಂದು ಮತ್ತು ಎಂಟನೇ ವಾರ್ಡುಗಳಿಗೆ ಸಾಲ ವಿತರಿಸುತ್ತದೆ.

ತಖ್ತೆ 6. ಬೇಂಕು ಸಾಲಗಳು

ನಂಬ್ರ	ಬೇಂಕುಗಳ ಹೆಸರು	ವಿತರಿಸಿದ ಕೃಷಿ ಸಾಲದ ವಿವರ
1.	ಮೊಯಪದವು ಸೇವಾ ಸಹಕಾರಿ ಬೇಂಕ್ ಲಿ.	38,00800.00
2.	ಮಜಿಬೈಲು ಸೇವಾ ಸಹಕಾರಿ ಬೇಂಕ್ ಲಿ.	41,96,736.00
3.	ವರ್ಕಾಡಿ ಸೇವಾ ಸಹಕಾರಿ ಬೇಂಕ್ ಲಿ.	20,05,754.00
4.	ನೋರ್ತ್ ಮಲಬಾರ್ ಗ್ರಾಮೀಣ ಬೇಂಕ್	6,30,300.00

ಈ ಪಂಚಾಯತ್ ಪ್ರದೇಶದ ಕೃಷಿ ಆವಶ್ಯಕತೆಗೆ ಬೇಕಾಗುವ ಸಾಲದ ಸೌಲಭ್ಯವನ್ನು ಪೂರ್ಣ ಒದಗಿಸುವರೆ ಪಂಚಾಯತ್ ಪರಿಧಿಯಲ್ಲಿರುವ ಬೇಂಕ್‌ಗಳಿಂದ ಸಾಧ್ಯವಾಗುವುದಿಲ್ಲ. ಆರ್ಥಿಕ ಸಹಾಯಕ್ಕಾಗಿ ಕೃಷಿಕರು ಪರದಾಡಬೇಕಾಗುತ್ತದೆ.

ಜಲಸೇಚನ : ಮೊಂಜ ಪಂಚಾಯತ್ ಪ್ರದೇಶದಲ್ಲಿ ಕೃಷಿಯು ಮಳೆಯ ನೀರನ್ನೇ ಆಶ್ರಯಿಸಿಕೊಂಡಿದೆ. ಈ ಪ್ರದೇಶದಲ್ಲಿ ಹರಿಯುವ ಹೊಳೆ ತೋಡುಗಳು ಹಾಗೂ ಕೆರೆ ಬಾವಿಗಳ ನೀರನ್ನು ಹಿಂದಿನಿಂದಲೇ ಏತ ನೀರಾವರಿಯ ಮೂಲಕ ಕೃಷಿಗೆ ಉಪಯೋಗಿಸುವ ಹಳೆಯ ಸಂಪ್ರದಾಯವಿತ್ತು. ಮೂರು ದಶಕಗಳ ಹಿಂದಿನ ವರೆಗೆ ಏತ, ಕೊಂತು ಇವುಗಳ ಮೂಲಕ ನೀರು ಹಾಯಿಸಿಕೊಂಡಿದ್ದರೆ ಈಗ ಇವೆಲ್ಲವೂ ಇಲ್ಲದಾಗಿ ಪಂಪುಸೆಟ್ಟುಗಳ ಮೂಲಕ ಕೃಷಿಗೆ ನೀರು ಒದಗಿಸುವ ಕ್ರಮವನ್ನು ಕೃಷಿಕರು ಬಳಸುತ್ತಿದ್ದಾರೆ.

ಜೂನ್ ತಿಂಗಳಿನಿಂದ ಸೆಂಪ್ಟೆಂಬರ್ ತಿಂಗಳ ತನಕ ಮುಂಗಾರು ಮಳೆಯ ನೀರೂ ಅಕ್ಟೋಬರ್ ತಿಂಗಳಿನಿಂದ ಜನವರಿಯ ತನಕ ದೊರೆಯುವ ಹಿಂಗಾರು ಮಳೆಯೂ ನಮ್ಮ ಪ್ರದೇಶದ ಕೃಷಿಗೆ ಜಲ ಸೌಲಭ್ಯವನ್ನು ಒದಗಿಸುತ್ತದೆ. ಕೃಷಿಗಾಗಿ ಹೊಳೆ ತೋಡುಗಳು, ಕೆರೆಗಳು ಇವುಗಳ ನೀರನ್ನು ಉಪಯೋಗಿಸಲಾಗುತ್ತಿದೆ. ವಿವರ ಈ ಕೆಳಗಿನಂತಿದೆ.

ಹೊಳೆ : ನಮ್ಮ ಪಂಚಾಯತಿನ ಹೆಚ್ಚಿನ ವಾರ್ಡುಗಳ ಮೂಲಕ ಹರಿದು ಹೋಗುತ್ತಿರುವ ಏಕಮಾತ್ರ ಹೊಳೆಯಾಗಿರುತ್ತದೆ ಉಪ್ಪಳ ಹೊಳೆ. ಈ ಹೊಳೆಯು ನಮ್ಮ ಪಂಚಾಯತಿನ 4,2,8,1,7,3ನೇ ವಾರ್ಡುಗಳ ಮೂಲಕ ಹಾದು ಅರಬಿ ಸಮುದ್ರ ಸೇರುತ್ತದೆ. ಈ ಹೊಳೆಯ ನೀರನ್ನು ಹೊಳೆಯ ಇಕ್ಕೆಡೆಗಳಲ್ಲಿರುವ ಭತ್ತದ ಹಾಗೂ ವಾಣಿಜ್ಯ ಬೆಳೆಗಳ ಕೃಷಿಗೆ ಉಪಯೋಗಿಸುತ್ತಾರೆ.

ತೋಡುಗಳು : ನಮ್ಮ ಪಂಚಾಯತಿನ ಪ್ರದೇಶದಲ್ಲಿ ಮುಖ್ಯವಾಗಿ ಏಳು ತೋಡುಗಳು ಹರಿದು ಹೋಗುತ್ತದೆ.

1. ಕೋಳಿಯೂರು ಮುನ್ನಿಪ್ಪಾಡಿ ತೋಡು

2. ಕಳಿಯೂರು ಮೈತಾಳ್ ತೋಡು

3. ಕೊಳಚಪ್ಪು ತೋಡು

4. ಪಳ್ಳತ್ತಡ್ಕ ತೋಡು

5. ತೊಟ್ಟೆತ್ತೋಡಿ ಕುಳೂರು ಕೊಡಿಮಾರು ತೋಡು

6. ತಲೆಕ್ಕಳ ಮೂಡಂಬೈಲು ತೋಡು

7. ಕಡಂಬಾರು ಮಜಿಬೈಲು ತೋಡು

8. ಕಳ್ಳಿಗೆ ತೋಡು

ಈ ಎಲ್ಲಾ ತೋಡುಗಳು ಪಂಚಾಯತಿನ ವಿವಿಧ ವಾರ್ಡುಗಳಲ್ಲಿ ಹರಿದು ಉಪ್ಪಳ ಹೊಳೆಯನ್ನು ಸೇರುತ್ತವೆ. ಮೇಲೆ ವಿವರಿಸಿದ ತೋಡುಗಳಲ್ಲಿ ಲಭ್ಯವಿರುವ ನೀರನ್ನು ಇಕ್ಕೆಡೆಗಳ ಕೃಷಿ ಕ್ಷೇತ್ರಗಳಿಗೆ ಕೃಷಿಕರು ಉಪಯೋಗಿಸುತ್ತಾರೆ. ಸಾಧಾರಣ ಜನವರಿ ತಿಂಗಳ ತನಕ ಮಾತ್ರ ತೋಡುಗಳಲ್ಲಿ ಕೃಷಿಗಾಗಿ ನೀರು ಲಭಿಸುತ್ತಿದ್ದರೆ ಆ ಬಳಿಕ ಕೆರೆಗಳನ್ನು ಕೊಳಗಳನ್ನು ಅವಲಂಬಿಸಬೇಕಾಗುತ್ತದೆ.

ಕೆರೆಗಳು : ಖಾಸಗೀ ಕೆರೆಗಳ ನೀರನ್ನು ಪಂಪು ಸೆಟ್ಟುಗಳ ಮೂಲಕ ಉಪಯೋಗಿಸಿ ಹೆಚ್ಚಿನ ಪ್ರದೇಶಗಳಲ್ಲಿ ಭತ್ತದ ಎರಡನೇ ಬೆಳೆ ಹಾಗೂ ಮೂರನೇ ಬೆಳೆಯನ್ನೂ, ವಾಣಿಜ್ಯ ಬೆಳೆಗಳ ಕೃಷಿಯನ್ನೂ ಮಾಡುತ್ತಾರೆ.

ನಮ್ಮ ಪಂಚಾಯತ್ ಪ್ರದೇಶದಲ್ಲಿ 8 ಕೆರೆಗಳಿವೆ. ಈ ಕೆರೆಗಳ ನೀರನ್ನು ಪರಿಸರದ ಕೃಷಿಕರು ಕೃಷಿಗಾಗಿ ಉಪಯೋಗಿಸುತ್ತಿದ್ದಾರೆ. ಆದರೆ ಈ ಕೆರೆಗಳು ಸರಿಯಾದ ರೀತಿಯಲ್ಲಿ ದುರಸ್ತಿಯಿಲ್ಲದೆ ಸಾಕಷ್ಟು ನೀರು ದೊರೆಯುವುದಿಲ್ಲ. ಫೆಬ್ರವರಿ ತಿಂಗಳ ಬಳಿಕ ಹೆಚ್ಚಿನ ಕೆರೆಗಳಲ್ಲಿ ನೀರು ಇರುವುದಿಲ್ಲ. ಆದ್ದರಿಂದ ನಿರೀಕ್ಷಿಸಿದ ಮಟ್ಟದಲ್ಲಿ ಈ ಕೆರೆಗಳ ನೀರು ಲಭ್ಯವಾಗಿರುವುದಿಲ್ಲ.

ಕೆರೆಗಳ ವಿವರ ಈ ಕೆಳಗಿನಂತಿದೆ.

ನಂಬ್ರ	ಕೆರೆಗಳ ಹೆಸರು	ವಾರ್ಡು	ವಾರ್ಡಿನ ಹೆಸರು
1.	ಹೊಸಗದ್ದೆ ಕೆರೆ	I	ಕುಳೂರು
2.	ನಡುಹಿತ್ಲು ಕೆರೆ	I	ಕುಳೂರು
3.	ಬೆಜ್ಜಂಗಳ ಕೆರೆ	II	ಮಿಂಜ
4.	ಪಟ್ಟತ್ತಮೊಗರು ಕೆರೆ	III	ಮಜಿಬೈಲು
5.	ಚಾಕುಡೇಲು ಕೆರೆ	IV	ತಲೆಕ್ಕಳ
6.	ಕೆದ್ವಾರ್ ಕೆರೆ	VIII	ಅರಿಯಳ
7.	ದರ್ಬೆ ಕೆರೆ	II	ಮಿಂಜ
8.	ಅಗ್ರಾಳ ಕೆರೆ	VII	ಮೂಡಂಬೈಲು

ಮೇಲಿನ ಕೆರೆಗಳಲ್ಲದೆ ಎಲ್ಲಾ ಕೃಷಿಕರು ಅವರವರ ಸ್ವಂತ ಸ್ಥಳಗಳಲ್ಲಿ ಅಲ್ಲಲ್ಲಿ ಕೆರೆಗಳನ್ನು ನಿರ್ಮಿಸಿ ಪಂಪುಸೆಟ್ಟುಗಳ ಮೂಲಕ ತಮ್ಮ ಕೃಷಿಗೆ ನೀರು ಒದಗಿಸುತ್ತಿದ್ದಾರೆ. ಆದರೆ ವರ್ಷಗಳು ಕಳೆದಂತೆ ನೀರಿನ ಮಟ್ಟವು ಆಳಕ್ಕೆ ಹೋಗುತ್ತಿದ್ದು ಕೃಷಿಗೆ ಬೇಕಾದ ನೀರು ಲಭಿಸುವುದಿಲ್ಲ.

ಮಣ್ಣು, ನೀರು ಸಂರಕ್ಷಣೆ : ಹಿಂದಿನಿಂದಲೂ ಈ ವಲಯದ ಹೆಚ್ಚಿನ ಪ್ರದೇಶವು ಮರಗಿಡಗಳಿಂದ ತುಂಬಿದ ಪ್ರದೇಶವಾಗಿತ್ತು. ಅಲ್ಲಲ್ಲಿ ಕಾಡು ಪ್ರದೇಶಗಳೂ ಇದ್ದವು. ಒಂದೆರಡು ದಶಕಗಳಿಂದ ಈಚೆಗೆ ಕಾಡು ಮರಗಿಡಗಳೆಲ್ಲವೂ ಕಡಿಯಲ್ಪಟ್ಟು ಭೂಮಿಯು ಬರಿದಾಗುತ್ತಾ ಬಂತು. ಪರಿಣಾಮವಾಗಿ ಮಣ್ಣಿನ ಸವೆತವೂ ಹೆಚ್ಚಾಯಿತು. ಅಲ್ಲದೆ ಮಣ್ಣಿನಲ್ಲಿ ನೀರಿನ ತೇವವೂ ಇಲ್ಲದಾಯಿತು. ನೀರನ್ನು ಅಲ್ಲಲ್ಲಿ ತಡೆಹಿಡಿಯುವ ಯಾವುದೇ ನೂತನ ವ್ಯವಸ್ಥೆಗಳಿಲ್ಲ. ಹಿಂದಿನ ಕಾಲದಲ್ಲಿದ್ದ ಹಳ್ಳ ಮದಕ ಇತ್ಯಾದಿಗಳು ದುರಸ್ತಿಯಿಲ್ಲದೆ ಮಣ್ಣು ತುಂಬಿ ಇಲ್ಲದಂತಾಗಿದೆ. ಎತ್ತರ ಪ್ರದೇಶದಲ್ಲಿ ನೀರು ಶೇಖರಿಸಿಡುವ ಜಲಾಶಯಗಳೂ ಇಲ್ಲ. ಆದ್ದರಿಂದ ವರ್ಷಗಳು ಕಳೆದಂತೆ ನೀರಿನ ಮಟ್ಟವು ಆಳಕ್ಕೆ ಹೋಗುತ್ತಾ ಇದೆ.

ಈ ಪ್ರದೇಶದಲ್ಲಿರುವ ಹಳ್ಳ, ಮದಕ ಇತ್ಯಾದಿಗಳನ್ನು ದುರಸ್ತಿಪಡಿಸಿ ಮಳೆ ಯ ನೀರನ್ನು ಹೆಚ್ಚು ಕಾಲ ಶೇಖರಿಸಿಟ್ಟು ಕೃಷಿಗೆ ಉಪಯೋಗಿಸುವುದರೊಂದಿಗೆ ಈ ಕ್ರಮವು ನೀರಿನ ಮಟ್ಟವನ್ನು ಹೆಚ್ಚಿಸಲು ಸಹಾಯವಾಗಬಹುದು. ಎತ್ತರ ಪ್ರದೇಶಗಳಲ್ಲಿ ಹರಿದು ಹೋಗುತ್ತಿರುವ ಮಳೆಯ ನೀರನ್ನು ಅಲ್ಲಲ್ಲಿ ತಡೆಹಿಡಿದು ಕೆರೆ, ಹೊಂಡ, ಹಳ್ಳಗಳನ್ನು ನಿರ್ಮಿಸಿ ಅವುಗಳಲ್ಲಿ ಶೇಖರಿಸಿದ ಮಣ್ಣನ್ನು ತೇವಭರಿತವಾಗಿ ಇರಿಸಿ ನೀರಿನ ಮಟ್ಟವನ್ನು ಹೆಚ್ಚಿಸಬಹುದು.

ಬಂಜರು ಪ್ರದೇಶದಲ್ಲಿ ಗಿಡ ಮರಗಳನ್ನು ನೆಟ್ಟು ಬೆಳೆಸುವ ಮೂಲಕ ಮಣ್ಣಿನ ಸವೆತವನ್ನು ತಡೆಗಟ್ಟುವುದರೊಂದಿಗೆ ನೀರಿನ ಸಂಗ್ರಹವನ್ನು ಹೆಚ್ಚಿಸಬಹುದು.

ನರ್ಸರಿಗಳು : ಈ ಪ್ರದೇಶದಲ್ಲಿ ಸಾರ್ವಜನಿಕ ಅಥವಾ ಖಾಸಗೀ ಕ್ಷೇತ್ರದಲ್ಲಿ ನರ್ಸರಿಗಳೆಂಬುದೇ ಇಲ್ಲ. ಆದ್ದರಿಂದ ಉತ್ತಮ ತಳಿಯ ಯಾವುದೇ ಗಿಡಗಳನ್ನು ಪಡೆಯಲು ಸಾಧ್ಯವಿಲ್ಲದಾಗಿದೆ. ಆದ್ದರಿಂದ ಪ್ರಾದೇಶಿಕವಾಗಿ ದೊರೆಯುವ ಹಳೆಯ ತಳಿಗಳನ್ನು ಉಪಯೋಗಿಸಿ ಕೃಷಿ ಮಾಡಬೇಕಾದ ದುಸ್ಥಿತಿಯಿದೆ. ಹೊಸ ತಳಿಗಳ ಬಗ್ಗೆ ಕೃಷಿಕರಿಗೆ ಮಾಹಿತಿ ನೀಡುವುದರೊಂದಿಗೆ ನರ್ಸರಿಗಳನ್ನು ಆರಂಭಿಸಲು ಕ್ರಮ ಕೈಗೊಳ್ಳಬೇಕು.

ಸಮಸ್ಯೆಗಳು : ಕುಳೂರು ಗ್ರಾಮದ ಮಡಂದೂರು ಎಂಬಲ್ಲಿ ಒಂದು ಅಣೆಕಟ್ಟು ಇದ್ದು ಸಕಾಲದಲ್ಲಿ ಹಲಗೆ ಹಾಕದಿರುವುದರಿಂದಲೂ, ಸಾಕಷ್ಟು ದುರಸ್ಥಿಯಿಲ್ಲದಿರುವುದರಿಂದಲೂ ಆ ಪ್ರದೇಶದ ಕೃಷಿ ವಲಯಕ್ಕೆ ಬೇಕಾದ ನೀರು ಲಭಿಸುವುದಿಲ್ಲ. ಉಪ್ಪಳ ಹೊಳೆಗೆ ತುರ್ತಿ ಎಂಬಲ್ಲಿ ಉಪ್ಪು ನೀರು ತಡೆ ಅಣೆಕಟ್ಟು ಇದ್ದರೂ ಅಣೆಕಟ್ಟಿನ ಮೇಲ್ಭಾಗವು ಹೊಯ್ಗೆ ಮಣ್ಣಿನಿಂದ ತುಂಬಿ ನೀರು ಶೇಖರಿಸಲು ಸಾಧ್ಯವಾಗುವುದಿಲ್ಲ. ಸಕಾಲದಲ್ಲಿ ಹಲಿಗೆ ಹಾಕಲು ಸಾಧ್ಯವಾಗುವುದಿಲ್ಲ. ಸಾಕಷ್ಟು ದುರಸ್ಥಿಯೂ ಇಲ್ಲದಿದ್ದುದರಿಂದ ಕೃಷಿಗೆ ಬೇಕಾದಷ್ಟು ನೀರು ಲಭಿಸುವುದಿಲ್ಲ. ಇದರೊಂದಿಗೆ ಉಪ್ಪು ನೀರು ಅಣೆಕಟ್ಟಿನ ಒಳಗಡೆ ಹಾದು ಕೃಷಿಗೆ ಹಾನಿಯುಂಟಾಗುತ್ತಿದೆ.

ಮರಗಿಡಗಳ ನಾಶದಿಂದ ಉಂಟಾದ ಮಣ್ಣಿನ ಸವೆತದಿಂದ ಕೃಷಿ ಯೋಗ್ಯವಾದ ಫಲವತ್ತಾದ ಮಣ್ಣು ಕೊಚ್ಚಿ ಹೋಗುತ್ತಿದೆ. ಇದರಿಂದಲಾಗಿ ನೀರಿನ ಲಭ್ಯತೆಯು ಕಡಿಮೆಯಾಗುತ್ತಿದೆ. ವಿದ್ಯಾವಂತರೆನಿಸಿದವರು ಕೃಷಿ ಕೆಲಸಗಳಲ್ಲಿ ಆಸಕ್ತಿ ವಹಿಸದೆ ಇತರ ಉದ್ಯೋಗವನ್ನು ಅರಸಿಕೊಂಡು ಹೋಗುತ್ತಿರುವರು. ಇದರಿಂದಾಗಿ ಕೃಷಿ ಕೆಲಸಗಾರರ ಸಂಖ್ಯೆ ಕಡಿಮೆಯಾಯಿತು. ಕೃಷಿಯ ಉತ್ಪಾದನಾ ವೆಚ್ಚ ಏರುತ್ತಾ ಹೋಯಿತು. ಕೃಷಿ ಉತ್ಪನ್ನಗಳಿಗೆ ಸರಿಯಾದ ಬೆಲೆ ಲಭಿಸದಿರುವುದರಿಂದ ಕೃಷಿ ವೆಚ್ಚಕ್ಕೆ ಸರಿಯಾದ ವರಮಾನ ಲಭಿಸುವುದಿಲ್ಲ. ವರ್ಷಾಕಾಲದ ಏರುಪೇರುಗಳು ಸಕಾಲದಲ್ಲಿ ಮಳೆ ಲಭ್ಯವಿಲ್ಲದಿರುವುದು ಅಣೆಕಟ್ಟುಗಳ ಕೊರತೆ ಕೃಷಿಗೆ ವಿದ್ಯುತ್ ಸೌಲಭ್ಯದ ಕೊರತೆ ಇವು ಕೃಷಿ ಪ್ರತ್ಯೇಕವಾಗಿ ಭತ್ತದ ಕೃಷಿಯು ಕಡಿಮೆಯಾಗಲು ಕಾರಣವಾಯಿತು. ನಮ್ಮಲ್ಲಿನ ಮುಖ್ಯ ವಾಣಿಜ್ಯ ಬೆಳೆ ಅಡಿಕೆಯಾಗಿರುತ್ತದೆ. ಅಡಿಕೆ ಬೆಳೆಯಲ್ಲಿ ಸರಿಯಾದ ಉತ್ಪಾದನೆ ದೊರಕುವುದಿಲ್ಲ. ಇದಕ್ಕೆ ಉತ್ತಮ ತಳಿಗಳು ದೊರಕದಿರುವುದು ಒಂದು ಕಾರಣವಾದರೆ ಸಕಾಲದಲ್ಲಿ ಕೃಷಿ ಕೆಲಸಗಳಿಗೆ ಕಾರ್ಮಿಕರ ಲಭ್ಯತೆಯ ಕೊರತೆ, ರಸಗೊಬ್ಬರದ ಕೊರತೆ, ಸಾಕಷ್ಟು ನೀರು ದೊರೆಯದಿರುವುದು ಕಾರಣಗಳಾಗಿವೆ.

ಈ ಪ್ರದೇಶದ ತೆಂಗಿನ ಮರಗಳಲ್ಲಿ ಸರಾಸರಿ 35ರಷ್ಟು ಮಾತ್ರ ಫಲ ದೊರಕುವುದು. ಉತ್ತಮ ತೆಂಗಿನ ತಳಿಗಳು ಲಭಿಸುವುದಿಲ್ಲ. ಅದರೊಂದಿಗೆ ತೆಂಗಿನ ಕೃಷಿಗೆ ಸಾಕಷ್ಟು ನೀರಿನ ಸೌಲಭ್ಯ ಒದಗಿಸುವರೆ ಸಾಧ್ಯವಾಗುವುದಿಲ್ಲ. ಕ್ಲಪ್ತ ಸಮಯಕ್ಕೆ ಈ ಕೃಷಿಗೆ ಬೇಕಾದ ರಾಸಾಯನಿಕ ಗೊಬ್ಬರಗಳೂ ಲಭಿಸುವುದಿಲ್ಲ. ದೊರಕಿದರೂ ಮಣ್ಣಿನ ಗುಣ, ಉಪಯೋಗಿಸಬೇಕಾದ ಗೊಬ್ಬರದ ಪ್ರಮಾಣ ಇವುಗಳ ಬಗ್ಗೆ ಕೃಷಿಕರಿಗೆ ಮಾಹಿತಿಯಿಲ್ಲ.

ರೋಗಗಳು : ಭತ್ತದ ಕೃಷಿಗೆ ಕ್ರಿಮಿ ಕೀಟಗಳ ಹಾವಳಿಯು ಮೊದಲಿಗಿಂತಲೂ ಹೆಚ್ಚಾಗಿದೆ. ಭತ್ತದ ಕೃಷಿಯ ಪ್ರದೇಶಗಳು ಕಡಿಮೆಯಾದ್ದರಿಂದ ಆಸುಪಾಸಿನ ಪ್ರದೇಶಗಳಲ್ಲಿರುವ ಕ್ರಿಮಿಕೀಟಗಳು ಭತ್ತದ ಬೆಳೆಯನ್ನು ನಾಶಪಡಿಸುತ್ತಿದೆ. ತೆಂಗು ಅಡಿಕೆಯ ಮರ ಇವುಗಳಿಗೆ ವಿವಿಧ ರೀತಿಯ ರೋಗಗಳು ಬಾಧಿಸುತ್ತವೆ. ಕ್ರಿಮಿಕೀಟಗಳ ಹಾವಳಿಯನ್ನು ತಡೆಯುವುದಕ್ಕೆ ಮತ್ತು ರೋಗಗಳ ನಿವಾರಣೆಗೆ ಔಷಧಿ ಸಿಂಪಡಿಸುವಿಕೆ ಇತ್ಯಾದಿಗಳ ಬಗ್ಗೆ ಕೃಷಿಕರಿಗೆ ಮಾಹಿತಿ ನೀಡುವರೆ ಕೃಷಿ ಅಧಿಕಾರಿಗಳು ತರಬೇತಿ ನೀಡುವ ವ್ಯವಸ್ಥೆ ಇಲ್ಲದಿರುವುದು ತೊಡಕಾಗಿದೆ.

ಭತ್ತದ ಉತ್ತಮ ತಳಿಯ ಬೀಜಗಳು ಸರಿಯಾದ ಸಮಯದಲ್ಲಿ ಲಭಿಸುವುದಿಲ್ಲ. ಭತ್ತದ ಬೆಳೆಯ ನಷ್ಟವನ್ನು ಸರಿದೂಗಿಸಲು ಸಾಕಷ್ಟು ಧನಸಹಾಯ ಲಭಿಸುವುದಿಲ್ಲ. ಈಗ ದೊರೆಯುವ ಧನ ಸಹಾಯವು ನಾಮಮಾತ್ರವಾಗಿದೆ.

ಮಣ್ಣಿನ ಸವೆತದಿಂದಲಾಗಿ ಹೊಳೆ ತೋಡುಗಳಲ್ಲಿ ಹೊಯಿಗೆ ತುಂಬಿ ಮಳೆನೀರು ಬಯಲು ಪ್ರದೇಶಕ್ಕೆ ನುಗ್ಗಿ ಕೃಷಿಯನ್ನು ನಾಶಪಡಿಸುವುದರೊಂದಿಗೆ ಕೃಷಿ ಪ್ರದೇಶವೂ ಹೊಯಿಗೆಯಿಂದ ತುಂಬುತ್ತಿದೆ. ಈ ಪ್ರದೇಶದ ಹೊಳೆ ತೋಡುಗಳಲ್ಲಿ ಮಾರ್ಚಿ ತಿಂಗಳ ಬಳಿಕ ನೀರು ಇರುವುದಿಲ್ಲ. ಸಣ್ಣಪುಟ್ಟ ಅಣೆಕಟ್ಟುಗಳು ಇದ್ದರೂ ದುರಸ್ತಿಯಿಲ್ಲದ ಕಾರಣ ನೀರು ಶೇಖರಿಸಿಡಲು ಸಾಧ್ಯವಾಗುವುದಿಲ್ಲ.

ಜೈವಗೊಬ್ಬರಗಳು ಸಾಕಷ್ಟು ಸಿಗುವುದಿಲ್ಲ. ರಾಸಾಯನಿಕ ಗೊಬ್ಬರಗಳನ್ನು ವಿತರಿಸಲು ಈ ಪ್ರದೇಶದಲ್ಲಿ ಡಿಪೋಗಳಿಲ್ಲ.

ಈ ಪ್ರದೇಶದಲ್ಲಿ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಮಾರುಕಟ್ಟೆಗಳಿಲ್ಲ. ಇಲ್ಲಿಯ ಕೃಷಿ ಉತ್ಪನ್ನಗಳಾದ ಅಡಿಕೆ ತೆಂಗು ಇತ್ಯಾದಿಗಳನ್ನು ನೆರೆರಾಜ್ಯವಾದ ಕರ್ನಾಟಕದ ಮಾರುಕಟ್ಟೆಗಳಿಗೆ ರವಾನಿಸಬೇಕಾಗುತ್ತದೆ. ತರಕಾರಿಗಳು, ಹಣ್ಣು ಹಂಪಲುಗಳು ಮತ್ತು ಕೃಷಿ ಅವಶ್ಯಕ ವಸ್ತುಗಳ ಮಾರಾಟಕ್ಕೂ ಈ ಪ್ರದೇಶದಲ್ಲಿ ಮಾರುಕಟ್ಟೆಗಳಿಲ್ಲ.

ಸಹಕಾರೀ ಸಂಘಗಳ ಮೂಲಕ ಸಾಕಷ್ಟು ಸಾಲ ಸೌಕರ್ಯಗಳು ಸಕಾಲದಲ್ಲಿ ದೊರಕುವುದಿಲ್ಲ. ಕೃಷಿಯ ಉತ್ಪನ್ನಗಳು. ಉದಾ : ತೆಂಗಿನಕಾಯಿ ಮುಂತಾದ ವಸ್ತುಗಳನ್ನು ಸಂಸ್ಕರಿಸುವ ಯಾವುದೇ ಸೌಕರ್ಯಗಳಿಲ್ಲ. ಪಾಡಶೇಖರ ಸಮಿತಿ ಮತ್ತು ಕೇರ ವಿಕಸನ ಸಮಿತಿಗಳು ಸಕ್ರೀಯವಾಗಿ ಕಾರ್ಯವೆಸಗುತ್ತಿಲ್ಲ.

ಈ ಪಂಚಾಯತಿನ ಒಂದನೇ ಭತ್ತದ ಬೆಳೆ ಬೆಳೆಯುತ್ತಿದ್ದ 100 ಹೆಕ್ಟೇರುಗಳಷ್ಟು ಪ್ರದೇಶವು ನೀರಿನ ಲಭ್ಯತೆಗೆ ಸಾದ್ಯತೆಗಳಿದ್ದರೂ ನೀರು ಒದಗಿಸುವ ಪದ್ಧತಿಗಳೇ ಇಲ್ಲದೆ ಭತ್ತದ ಬೆಳೆ ಬೆಳೆಸದೆ ಬಂಜರು ಭೂಮಿಯಾಗಿದೆ.

ಯುವಕ -ಯುವತಿಯರು (ಯುವ ಪೀಳಿಗೆ) ಕೃಷಿ ಕೆಲಸಕ್ಕೆ ಆದ್ಯತೆ ನೀಡದೆ ನಿರ್ಮಾಣ ಇತ್ಯಾದಿ ಕೆಲಸಗಳಿಗೆ ಆಸಕ್ತಿ ತೋರುವುದು ಮತ್ತು ಉತ್ತಮ ತಳಿಯ ತೆಂಗು, ಅಡಿಕೆ, ಹಣ್ಣು ಹಂಪಲುಗಳ ಗಿಡಗಳು ದೊರೆಯುವುದಿಲ್ಲ.

ಅಡಿಕೆ ಕೃಷಿಗೆ ಮಹಾಳಿ ಕೊಳೆರೋಗ ಸಕಾಲದಲ್ಲಿ ತಡೆಯುವರೇ ಸಮರ್ಪಕ ವ್ಯವಸ್ಥೆ ಇಲ್ಲದಿರುವುದು.

ಕೃಷಿ ಅವಶ್ಯಕ್ಕಾಗಿ ವಿದ್ಯುತ್ ಸಂಪರ್ಕಕ್ಕೆ ಮುಂಗಣನೆ ನೀಡದಿರುವುದು.

ಸೀಮೆಎಣ್ಣೆ ಬೆಲೆ ಏರಿಕೆ ಮತ್ತು ಕೃಷಿ ಅವಶ್ಯಕತೆಗೆ ಸಕಾಲದಲ್ಲಿ ಪರ್ಮಿಟ್ ದೊರಕದಿರುವುದು.

ವೋಲ್ಟೇಜ್‌ನ ಕ್ಷಾಮ (ಕೊರತೆ)ಯನ್ನು ನಿವಾರಿಸದೇ ಇರುವುದು.

ಸಾಧ್ಯತೆಗಳು :

1. ಈಗ ಇರುವ ನೀರಾವರಿ ಯೋಜನೆಗಳಿಗೆ ಅಗತ್ಯವಾದ ದುರಸ್ಥಿ ಕೆಲಸಗಳನ್ನು ನಡೆಸುವುದು.
2. ಪಂಚಾಯತಿನ ಪ್ರಧಾನ ತೋಡುಗಳಲ್ಲಿ ಅವಶ್ಯವಿರುವಲ್ಲಿ ನೀರು ಶೇಖರಿಸಿ ಅಣೆಕಟ್ಟುಗಳನ್ನು ನಿರ್ಮಿಸಿ ಇಬ್ಬದಿಗಳ ಭತ್ತದ ಕೃಷಿಗೆ ನೀರನ್ನು ಒದಗಿಸುವುದು.
3. ಈ ಪ್ರದೇಶದಲ್ಲಿ ಮಣ್ಣು ಪರಿಶೋಧನೆಗೆ ವ್ಯವಸ್ಥೆ ಮಾಡುವುದು. ಮಣ್ಣು ಪರಿಶೋಧನಾ ಕೇಂದ್ರವಾಗಲಿ, ಅಥವಾ ಸಂಚಾರಿ ಮಣ್ಣು ಪರಿಶೋಧನೆಯ ಪ್ರಯೋಗಾಲಯದ ವ್ಯವಸ್ಥೆ ಮಾಡುವುದು.
4. ಉಪ್ಪಳ ಹೊಳೆಯಲ್ಲಿ ಬಾವಿಗಳನ್ನು ನಿರ್ಮಿಸಿ ಪಂಪ್‌ಸೆಟ್‌ಗಳನ್ನು ಅಳವಡಿಸಿ ಸಮೀಪದ ಬಯಲು ಪ್ರದೇಶದ ಕೃಷಿಗೆ ನೀರು ಒದಗಿಸುವುದು.

   ಬೇಳ, ಮಡಿಮೊಗರು, ದಡ್ಡಂಗಡಿ, ಮಜಿಬೈಲು, ಎಲಿಯಾಣ, ದೇರಂಬಲ, ಪೊಯ್ಯಲು, ಕೂಲಿಮೇರು, ಅಮ್ಮೆನಡ್ಕ, ಕೆದುವಾರು, ಬುಡ್ರಿಯ, ಪಲ್ಲತ್ತಡ್ಕ, ದರ್ಬೆ, ಮುನ್ನಿಪ್ಪಾಡಿ.

2. ನೀರಿನ ಸೌಕರ್ಯಗಳು ಇದ್ದೂ ಉಪಯೋಗಿಸುವ ವ್ಯವಸ್ಥೆ ಇಲ್ಲದೆ ಬಂಜರು ಬಿದ್ದಿರುವ ಒಂದನೇ ಬೆಳೆ ಬೆಳೆಯಲು ಸಾಧ್ಯವಿರುವ ಭತ್ತ ಕೃಷಿ ಪ್ರದೇಶಗಳಿಗೆ ನೀರಾವರಿ ಒದಗಿಸಲು ಈ ಕೆಳಗಿನ ಪ್ರದೇಶಗಳಲ್ಲಿ ತೋಡುಗಳಿಗೆ ಅಣೆಕಟ್ಟು (ವೆಂಟೆಡ್ ಡ್ಯಾಮ್) ನಿರ್ಮಿಸುವುದು.

ವಾರ್ಡ್ ನಂ. VII ಮೂಡಂಬೈಲು

ಮೂಡಂಬೈಲು ತೋಡಿಗೆ (W.No. VII) ಈ ಕೆಳಗಿನ ಸ್ಥಳಗಳಲ್ಲಿ ವೆಂಟೆಡ್ ಡ್ಯಾಮ್ ನಿರ್ಮಿಸುವುದು.

ಬಾಂಗೆಮಾರು, ಚೇಡಿಕಟ್ಟ, ನಾರ್ಣಗುಂಡಿ, ದಡ್ಡಂಗಡಿ.

ಕಡಂಬಾರು W.No. IX

1. ಕಜೆಕೋಡಿ, ಧರ್ಮಮಾರು, ಕಲ್ಲಕಟ್ಟ, ಬರೆ, ಕೆಳಗಿನ ಕಡಂಬಾರು ಮುದಳೆಮಾರ್ ಬಳಿ ವೆಂಟೆಡ್ ಡ್ಯಾಮ್ ನಿರ್ಮಿಸುವುದು.

IIIನೇ ವಾರ್ಡಿನ ಮಜಿಬೈಲು :

1. ಮಜಿಬೈಲು, ಮುಗುಳಿ, ಬೊಳ್ಳಮಾರು, ಮಂಜೆಹಿತ್ಲು ಎಂಬಲ್ಲಿ ಅಣೆಕಟ್ಟು ನಿರ್ಮಿಸುವುದು.

W.No. IV ತಳಕಲ :

1. ಬಾಕಿಮಾರು, ಮದಂಕಲ್ಲು, ಕುರ್ಮಟ, ಮೇಗಿನಬೈಲು ತೊಡಿಮಾರುಕಟ್ಟ ಎಂಬಲ್ಲಿ ಅಣೆಕಟ್ಟು ನಿರ್ಮಿಸುವುದು.

W. No. V

1. ಕೂಜಮೆ 2. ಕೋರಿಕ್ಕಾರ್

W. No. VI

1. ಕೊಮ್ಮೆ 2. ವಾರಣಾಸಿ

ಕಳಾಯಿ ಮಾರಿನಿಂದ ಬರುವ ತೋಡಿಗೆ ತೊಟ್ಟೆತ್ತೊಡಿಯಲ್ಲಿ ಅಣೆಕಟ್ಟು ನಿರ್ಮಿಸುವುದು.

ದೇರಂಬಲದ ಮಡಂದೂರು ಎಂಬಲ್ಲಿ ಇರುವ ಅಣೆಕಟ್ಟಿಗೆ ಅಗತ್ಯವಿರುವ ದುರಸ್ಥಿಯೊಂದಿಗೆ ಹಲಗೆ ಹಾಕಿ ಸಮೀಪದ ಬಯಲು ಪ್ರದೇಶಗಳಿಗೆ ನೀರನ್ನು ಒದಗಿಸುವುದು.

ನಮ್ಮ ಪಂಚಾಯತ್ ಆದ್ಯಂತ ಒಂದನೇ ಬೆಳೆ ಬೆಳೆಸಲು ಸಾಧ್ಯತೆಯಿರುವ ಆದರೆ ನೀರಿನ ಕೊರತೆಯಿಂದ ಬೆಳೆಸಲಾಗದೆ ಬಂಜರಾಗಿರುವ ನಾಲ್ಕೈದು ಎಕ್ರೆ ಸ್ಥಳಗಳ ಗುಂಪುಗಳು ಅನೇಕ ಇವೆ. ಈ ಸ್ಥಳಗಳಿಗೆ ಹತ್ತಿರವಿರುವ ತೋಡಿನಿಂದ ನೀರನ್ನು ಎತ್ತರದ ಪ್ರದೇಶಗಳಲ್ಲಿ ಟ್ಯಾಂಕ್ ನಿರ್ಮಿಸಿ ನೀರು ಶೇಖರಿಸಿ ನೀರಾವರಿ ಸೌಕರ್ಯ ಒದಗಿಸಿದಲ್ಲಿ ಒಂದನೇ ಬೆಳೆಯೂ, ಒಂದನೇ ಬೆಳೆಯ ನಂತರ ತರಕಾರಿ, ಧಾನ್ಯ, ಹಣ್ಣು ಹಂಪಲು ಬೆಳೆಯಬಹುದು. ಉದಾ : VIIನೇ ವಾರ್ಡಿನ ಬಾಂಗೆಮಾರು, ಚೌಡಿಕಟ್ಟ, ಗುಂಡಿಮಜಲು, ಗಾಣಿಗರ ಮೂಲೆ, ಮೂಡಂಬೈಲು ಗ್ರಾಮದ ಬೆಜ್ಜ ದೈವಸ್ಥಾನದ ಬಳಿ ತೋಡಿಗೆ ಪಂಪ್‌ಸೆಟ್ ಅಳವಡಿಸಿ ಬೆಜ್ಜ, ಸರೊಳ್ಳ, ನಡಿಬೈಲು, ಈ ಪ್ರದೇಶದ ಭತ್ತ ಬೆಳೆಯುವ ಸುಮಾರು 30 ಎಕ್ರೆ ಸ್ಥಳಗಳಿಗೆ ಟ್ಯಾಂಕ್ ನಿರ್ಮಿಸಿ ಪೈಪ್‌ಗಳ ಮೂಲಕ ನೀರು ಒದಗಿಸಿ ಒಂದನೇ ಬೆಳೆಯನ್ನು ಉತ್ತಮಗೊಳಿಸುವುದು.

ಎರಡನೇ ಬೆಳೆಯಾಗಿ ಧಾನ್ಯದ ಬೆಳೆ, ತರಕಾರಿ ಕೃಷಿ ಮಾಡುವರೇ ನೀರಾವರಿ ಒದಗಿಸುವುದು.

ಕೌಡೂರು ಎಂಬಲ್ಲಿ ತೋಡಿಗೆ ಪಂಪ್‌ಸೆಟ್ ಅಳವಡಿಸಿ ಆ ಪ್ರದೇಶದಲ್ಲಿರುವ 10 ಎಕ್ರೆಗಳಷ್ಟು ಸ್ಥಳಗಳಲ್ಲಿ ಒಂದನೇ ಭತ್ತದ ಬೆಳೆ ಕೃಷಿಯನ್ನು ಅಭಿವೃದ್ಧಿ ಪಡಿಸುವುದು ಮತ್ತು ತರಕಾರಿ ಧಾನ್ಯದ ಬೆಳೆಗೆ ನೀರಾವರಿ ಒದಗಿಸಿ ಕೃಷಿ ಅಭಿವೃದ್ಧಿಪಡಿಸುವುದು.

ಮದಕಗಳು :

1. ಮೂಡಂಬೈಲಿನ ಜೋಕಲ್ಲಕಟ್ಟೆ ಸಮೀಪ ತೊಡ್ಲ ಎಂಬಲ್ಲಿರುವ ಮದಕವನ್ನು ದುರಸ್ಥಿಗೊಳಿಸಿ ನೀರು ಶೇಖರಿಸಿ ಪೈಪ್‌ನ ಮೂಲಕ ನೀರನ್ನು ಸಮೀಪದ 30 ಎಕ್ರೆಗಳಷ್ಟು ಕೃಷಿ ಸ್ಥಳಗಳಿಗೆ ಒಂದನೇ ಬೆಳೆಗೆ ಉಪಯೋಗಿಸುವುದು.
2. ಮಿಂಜ ಕೆದಂಗಾಡು ಎಂಬಲ್ಲಿ ಇರುವ ಮದಕದ ರಿಪೇರಿ.
3. ಕೊಮ್ಮಂಗಲದ ಮದಕದ ರಿಪೇರಿ
4. ಬಟ್ಯಪದವಿನಲ್ಲಿದ್ದ ಮದಕವನ್ನು ದುರಸ್ಥಿಗೊಳಿಸಿ ಇದರಲ್ಲಿ ಶೇಖರಿಸಬಹುದಾದ ನೀರನ್ನು ಸುಮಾರು 50 ಎಕ್ರೆಯಷ್ಟು ಕೃಷಿಗೆ ಒದಗಿಸುವುದು.
5. ಕುಳೂರಿನ ಚಿನಾಲದ ಬಳಿ ಕೂಳಿಮೇರು ಎಂಬಲ್ಲಿ ತೋಡಿನ ಬದಿಯಲ್ಲಿ ಮದಕ ನಿರ್ಮಿಸುವುದು.
6. ಕಡಂಬಾರು ವಿಲೇಜ್ ಆಫಿಸಿನ ಕೆರೆಯನ್ನು ಆಳಗೊಳಿಗೆ ದುರಸ್ಥಿಪಡಿಸಿ ಕೃಷಿಗೆ ಉಪಯೋಗಿಸುವುದು.
7. ಕಡಂಬಾರು ಗುಳಿಗ ಬನದ ಬಳಿ ಇರುವ ಮದಕವನ್ನು ದುರಸ್ಥಿಗೊಳಿಸುವುದು.
8. ಮೊಡಪು, ಬಟ್ಟಪಲಿಕೆ, ಮಲ್ಲಾನ, ಕಜೆಕೋಡಿಗಳಲ್ಲಿ ಚೆಕ್‌ಡ್ಯಾಮ್ ನಿರ್ಮಿಸುವುದು.
9. ಕಡಂಬಾರಿನ ಗುಜ್ಜಿರೊಟು ಎಂಬಲ್ಲಿ ಮದಕ ನಿರ್ಮಿಸುವುದು.
10. ಚೆಲ್ಲಂಗುಡೇಲು ಮತ್ತು ಕಡಂಬಾರು ದಿನೇಶ್ ಬೀಡಿ ಬ್ರಾಂಚ್ ಬಳಿ ಮದಕ ನಿರ್ಮಿಸುವುದು.

ಕಟ್ಟಪುಣಿಗಳು :

1. ಕುಳೂರಿನ ಚಿನಾಲದಿಂದ ತೋಡಬಾಗಿಲ ವರೆಗೆ ತೋಡು ರಿಪೇರಿ ಮಾಡುವುದು.

2. ವಾಟೆಮಾರಿನ ತೋಡಿಗೆ ಕಟ್ಟಪುಣಿ ಕಟ್ಟುವುದು.
3. ಕಡಂಬಾರಿನ ಕಜೆಕೋಡಿನಿಂದ ಕೆಳಗಿನ ಕಡಂಬಾರಿನ ಹೆದ್ದಾರಿ ಕಡೆಗೆ ಕಟ್ಟಪುಣಿಗಳನ್ನು ಕಟ್ಟುವುದು.
4. ಮುನ್ನಿಪ್ಪಾಡಿಯಿಂದ ಪಲ್ಲತ್ತಡ್ಕ, ಅಡ್ಕದ ವರೆಗೆ ಎರಡು ಬದಿ ಕಟ್ಟಪುಣಿ ಕಟ್ಟುವುದು.
5. ಕುಳೂರು ದೇರಂಬಲದಿಂದ ಮಡಿಮೊಗರಿನ ವರೇಗೆ, ಉಪ್ಪಳ ಹೊಳೆಗೆ ಎರಡು ಬದಿಗೆ ಕಟ್ಟಪುನಿ ಕಟ್ಟುವುದು.
7. ಕಳಿಯೂರಿನ ಅರಂತಾಡಿಯಿಂದ ಬಾಳೆಹಿತ್ಲುವರೇಗೆ ಕಟ್ಟಪುಣಿ ಕಟ್ಟುವುದು.
8. ತಳೆಕಲದ ತೋಡಿಮಾರಿನಿಂದ ಮೂಡಂಬೈಲು ಬಾಂಗೇಮಾರಿನ ವರೇಗೆ ಕಟ್ಟಪುಣಿ ನಿರ್ಮಿಸುವುದು.
9. ಅಮ್ಮೆನಡ್ಕದಿಂದ ಕೈ ತೋಡಿನ ಹೊಯ್ಗೆ ತೆಗೆದು ರಿಪೇರಿ ಮಾಡುವುದು.
10. ಕೊಮ್ಮೆಯಿಂದ ಅಗರಾಡಿ ವರೆಗೆ ಕಟ್ಟಪುಣಿ ನಿರ್ಮಿಸುವುದು.
11. ಮೈತಾಳ್ ಕಟ್ಟಪುಣಿ ನಿರ್ಮಾಣ.
12. ಬಾಗೆಮಾರಿನಿಂದ-ದಡ್ಡಂಗಡಿ ವರೆಗೆ ಕಟ್ಟಪುಣಿ ನಿರ್ಮಿಸುವುದು.
13. ಕೆಳಗಿನ ಮಜಿಬೈಲು ಕೈತೋಡು ರಿಪೇರಿ ಮಾಡುವುದು.
14. ಮಜಿಬೈಲು ಅಣೆಕಟ್ಟಿನಿಂದ ಉಳಿಯ ಪಾನಂಗಡಿ ವರೆಗೆ ಕಟ್ಟಪುಣಿ ನಿರ್ಮಿಸುವುದು.
15. ಕಡಂಬಾರು -ಉಪ್ಪಳ ಹೊಳೆಯ ತನಕ ಕಟ್ಟಪುಣಿ ನಿರ್ಮಿಸುವುದು.
16. ಕಾನದಿಂದ ತೋಡಿಮಾರಿನ ವರೆಗೆ
17. ಕುಂಡಡ್ಕ -ಪೊಳ್ಳಕಜೆ ತೋಡಿಗೆ ಕಟ್ಟಪುಣಿ ನಿರ್ಮಾಣ.
18. ಕೋರಿಕಾರಿನಿಂದ -ಕೂಜಮೆಯವರೆಗೆ ಕಟ್ಟಪುಣಿ ನಿರ್ಮಿಸುವುದು.
19. ಕೂಡಂಗೆ ವಾರಣಾಸಿಯಿಂದ ಕೊಮ್ಮೆಯ ವರೆಗೆ ಕಟ್ಟಪುಣಿ ನಿರ್ಮಿಸುವುದು.
20. ಗುಂಡಿಬೈಲಿನಿಂದ ಅರಿಯಳದ ವರೆಗೆ ಕಟ್ಟಪುಣಿ ನಿರ್ಮಿಸುವುದು.
21. ಬುಡ್ರಿಯದಿಂದ ಅಮ್ಮನಡ್ಡದ ವರೆಗೆ ಕಟ್ಟಪುಣಿ ನಿರ್ಮಿಸುವುದು.
22. ಕೌಡೂರಿನಿಂದ ದಡ್ಡಂಗಡಿ ವರೆಗೆ
23. ಕಳ್ಳಿಗೆ ತೋಡಿನಿಂದ ಹೊಯ್ಗೆ ತೆಗೆಯುವುದು.

ಈ ಕೆಳಗಿನ ತೋಡುಗಳ ಹೊಯ್ಗೆ ತೆಗೆಯುವರೇ ನಿರ್ದೇಶಿಸಲಾಯಿತು.

1. ಕೊನಿಲ - ಕೂಜಮೆ ತೋಡು
2. ಕೋರಿಕ್ಕಾರು - ಬಾಳೆ ಹಿತ್ಲು ತೋಡು
3. ಕಡಂಬಾರಿನಿಂದ -ಉಪ್ಪಳದವರೇಗೆ
4. ದರ್ಬೆತೋಡು
5. ಮುದ್ದನಡ್ಕದಿಂದ ಹೊಳೆಯ ಬದಿಯ ವರೇಗೆ
6. ಕುಂಡ್ಕದಿಂದ ಮುನ್ನಿಪ್ಪಾಡಿಯ ವರೇಗೆ
7. ಕೊಮ್ಮೆಯಿಂದ ಮುನ್ನಿಪ್ಪಾಡಿಯ ವರೇಗೆ
8. ತಲೇಕಳದಿಂದ ಬೇಳದ ವರೇಗೆ

ತೋಡುಗಳು : ಮಜಿಬೈಲಿನ ಕೆಳಗಿನ ಮಜಿಬೈಲಿನ ಒಳತೋಡು ರಿಪೇರಿ ಮಾಡುವುದು.

2. ಮಜಿಬೈಲು ಅಣೆಕಟ್ಟಿನ ಬಳಿ -ಬಯಲಿನಿಂದ ಅಣೆಕಟ್ಟಿನ ಕೆಳಭಾಗಕ್ಕೆ ನೀರು ಹರಿದು ಹೋಗುವಂತೆ ತೋಡು ನಿರ್ಮಿಸುವುದು.

ಮಣ್ಣು ಜಲ ಸಂರಕ್ಷಣೆಗಾಗಿ : ಮಣ್ಣು ಸಂರಕ್ಷಣೆಗಾಗಿ ಸಂಘ ಸಂಸ್ಥೆಗಳ ಒಕ್ಕೂಟದಿಂದ ಮರವನ್ನು ನೆಡುವುದು, ಜಲಸಂರಕ್ಷಣೆಗೆ ಮತ್ತು ಎತ್ತರ ಪ್ರದೇಶಗಳಲ್ಲಿ ಕೆರೆ, ಹೊಂಡ ಮತ್ತು ನೀರು ಹರಿಯುವ ಪ್ರದೇಶಗಳಲ್ಲಿ ತಡೆಗಳನ್ನು ನಿರ್ಮಿಸುವುದು.

- ಬಂಜರು ಭೂಮಿಯನ್ನು ವೃಕ್ಷ ಬೆಳೆಸಿ ಸಂರಕ್ಷಿಸುವ ಮೂಲಕ ಫಲವತ್ತಾಗಿಸುವುದು. ಒಣ ನೆಲದಲ್ಲಿ ಬೆಳೆಯಬಹುದಾದ ಹುಣಸೆ, ನೆಲ್ಲಿ, ಗಾಳಿ, ಅಕೇಶಿಯಾ, ಕಹಿಬೇವು ಇತ್ಯಾದಿ ಮರಗಳನ್ನು ನೆಟ್ಟು ಬೆಳೆಸುವುದು.
- ಗಿಡ ಮೂಲಿಕೆಗಳನ್ನು ನೆಟ್ಟು ಬೆಳೆಸುವ ವ್ಯವಸ್ಥೆಯನ್ನು ಮಾಡುವುದು.
- ಎತ್ತರದ ಸಮತಟ್ಟು ಪ್ರದೇಶಗಳಲ್ಲಿ ಹೊಂಡಗಳನ್ನು ನಿರ್ಮಿಸಿ ಮಳೆ ನೀರನ್ನು ಶೇಖರಿಸುವುದು.
- ಈಗ ಇರುವ ಬೆಳೆ ಇನ್ಶೂರೆನ್ಸ್ ಪದ್ಧತಿಯನ್ನು ರೋಗದಿಂದ ನಶಿಸುವ ಕೃಷಿಗೆ ಅನ್ವಯಗೊಳಿಸುವುದು.
- ರೋಗ ಪೀಡಿತ ಅಡಿಕೆ ಮರಗಳನ್ನು ತೆಗೆದು ಹೊಸ ಗಿಡ ನೆಡುವುದು.
- ರೋಗ ಪ್ರತಿರೋಧಕ ಶಕ್ತಿಯುಳ್ಳ ಅತ್ಯುತ್ಪಾದನಾ ಗುಣವುಳ್ಳ ಬಿತ್ತನೆ ಬೀಜ, ಸಸಿಗಳನ್ನು ವಿತರಣೆ ಮಾಡುವುದು.
- ಕೃಷಿಯನ್ನು ಮಾತ್ರ ಹೊಂದುವಂತಹ ಒಂದು ಸಹಕಾರಿ ವಲಯವನ್ನು ನಿರ್ಮಿಸಿ ಕೃಷಿಗೆ ಸಾಕಷ್ಟು ಸಾಲ ಸೌಲಭ್ಯ ಒದಗಿಸುವುದು.
- ಉತ್ತಮ ಗುಣಮಟ್ಟದ ಧಾನ್ಯದ ಬೀಜಗಳನ್ನು ವಿತರಿಸಿ ಧಾನ್ಯದ ಬೆಳೆಯನ್ನು ಅಭಿವೃದ್ಧಿಪಡಿಸುವುದು.

ನರ್ಸರಿಗಳು :

ಮೊಂಜ ಪಂಚಾಯತಿನ ಎಲ್ಲಾ ಗ್ರಾಮಗಳಲ್ಲಿ ನರ್ಸರಿಗಳನ್ನು ಆರಂಭಿಸುವುದು.

2. ಮಾವು, ಅನಾನಾಸು ಇತ್ಯಾದಿ ಹಣ್ಣು ಹಂಪಲುಗಳನ್ನು ಬೆಳೆಸುವರೇ ಸಹಾಯಧನ ಮತ್ತು ಪದ್ಧತಿ ರೂಪಿಸುವುದು.

ಗೇರು ಕೃಷಿ :

ಈ ಪಂಚಾಯತಿನಲ್ಲಿ ಕೃಷಿ ಯೋಗ್ಯವಾದ ಬಂಜರು ಭೂಮಿಯಲ್ಲಿ ಗೇರು ಕೃಷಿ ಅಭಿವೃದ್ಧಿ ಪಡಿಸುವ ಯೋಜನೆಯನ್ನು ಸಿದ್ಧಪಡಿಸಿ ಜ್ಯಾರಿಗೊಳಿಸುವುದು.

ಉತ್ತಮ ತಳಿಯ ಗೇರು ಸಸಿಗಳನ್ನು ವಿತರಿಸುವುದು.

ಜೇನು ಕೃಷಿ :

ಸ್ಥಳಗಳು : ಅಗ್ರಾಳ ಕಿನ್ಯಾ, ಬಾಳಿಯೂರು, ಅಜಾರು, ಪಿಲಕುದೇವಿ, ಸೆಂತಡ್ಕ, ಬೇಳ ಪ್ರದೇಶದ ಇಳಿಜಾರು ಮತ್ತು ಸಾನು ಪ್ರದೇಶ.

1. ಜೇನು ಕೃಷಿ ಅಭಿವೃದ್ಧಿಗೆ ಪ್ರೋತ್ಸಾಹ ನೀಡುವುದು.
2. ಜೇನು ಕೃಷಿಕರ ಸಹಕಾರಿ ಸಂಘವನ್ನು ಸ್ಥಾಪಿಸುವುದು.

ಮಾರ್ಕೆಟಿಂಗ್ ವ್ಯವಸ್ಥೆ :

1. ನಮ್ಮ ಪಂಚಾಯತಿನಲ್ಲಿ ಬೆಳೆಯುವ ವಾಣಿಜ್ಯ ಬೆಳೆಗಳ ಖರೀದಿ ಮತ್ತು ಮಾರಾಟಕ್ಕೆ ಮಾರುಕಟ್ಟೆ ನಿರ್ಮಿಸುವುದು.
2. ಈ ಮೂಲಕ ಮಧ್ಯವರ್ತಿಗಳ ಶೋಷಣೆಯಿಂದ ಕೃಷಿಕರನ್ನು ರಕ್ಷಿಸುವುದು.
3. ಹಣ್ಣು ಹಂಪಲು ಮತ್ತು ತರಕಾರಿಗಳ ಸಂಗ್ರಹದ ಹಾಗೂ ಮಾರಾಟಕ್ಕೆ ಮಾರುಕಟ್ಟೆ ನಿರ್ಮಿಸುವುದು.
4. ಹಣ್ಣು ಹಂಪಲುಗಳ ಶೇಖರಣೆ ಮತ್ತು ಸಂಸ್ಕರಣೆಗೆ ಎಲ್ಲಾ ವಾರ್ಡಿನಲ್ಲೂ ಮಾರುಕಟ್ಟೆ ನಿರ್ಮಿಸುವುದು.

ಉಪ ಸಂಹಾರ :

ನಮಗೆ ದೈನಂದಿನ ಅವಶ್ಯಕತೆಗಾಗಿ ಅಗತ್ಯವುಳ್ಳ ಅಕ್ಕಿ, ತರಕಾರಿ, ಹಣ್ಣು ಹಂಪಲುಗಳು, ಇತರ ಆಹಾರ ಧಾನ್ಯಗಳು, ಕೋಳಿ, ಮಾಂಸ, ಮೊಟ್ಟೆ ಇತ್ಯಾದಿಗಳ ಉತ್ಪಾದನೆ ಸಾಕಾಗದೆ ಅವುಗಳಿಗಾಗಿ ನೆರೆರಾಜ್ಯಗಳನ್ನು ಆಶ್ರಯಿಸುತ್ತಿದ್ದೇವೆ. ಇದರಿಂದಾಗಿ ನಮ್ಮ ವರಮಾನ ಪೂರ್ಣ ಅನ್ಯರಾಜ್ಯಗಳಿಗೆ ಹರಿದು ಹೋಗುತ್ತಿದೆ. ನಾವು ನಿರೂಪಿಸಿಕೊಂಡಿರುವ ಕೃಷಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡು ಕರ್ತವ್ಯಶೀಲರಾಗಿ ಪ್ರವರ್ತಿಸಿದಲ್ಲಿ ನಾವು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗುವುದರಲ್ಲಿ ಸಂದೇಹವಿಲ್ಲ.

ಪಶು ಸಂಗೋಪನೆಯೂ ಮೀನುಗಾರಿಕೆಯೂ

ದನ ಸಾಕಣೆ, ಮತ್ತು ಎಮ್ಮೆ ಸಾಕಣೆ ಬಹು ಹಿಂದಿನ ಕಾಲದಿಂದಲೂ ಹಾಲಿಗಾಗಿ ಸಾಕುವ ಸಂಪ್ರದಾಯವಿತ್ತು. ನಾಡತಳಿಗಳ ಹಸು ಮತ್ತು ಎಮ್ಮೆಗಳನ್ನು ಈ ಪಂಚಾಯತಿನಲ್ಲಿ ಎತ್ತರ ಪ್ರದೇಶಗಳಿಗೆ ಮೇವಿಗಾಗಿ ಬಿಟ್ಟು ಸರಳ ರೀತಿಯಲ್ಲಿ ಸಾಕಿ ಹಾಲು ಉತ್ಪಾದನೆ ಸ್ವಂತ ಉಪಯೋಗಕ್ಕಾಗಿ ಮಾಡುವ ಪದ್ಧತಿಯು ಹಿಂದಿನ ಕಾಲದಲ್ಲಿ ಇತ್ತು.

ಉಳುವುದಕ್ಕಾಗಿ ಎತ್ತುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಾಕುವ ಸಂಪ್ರದಾಯ ಇದ್ದು ಭತ್ತದ ಬೆಳೆಗದ್ದೆಗಳನ್ನು ಉಳುವರೇ ಎತ್ತುಗಳನ್ನೇ ಉಳುಮೆಗಾಗಿ ಉಪಯೋಗಿಸುತ್ತಿದ್ದರು. ಕೋಣಗಳನ್ನು ಉಳುಮೆಯ ಅಗತ್ಯಕ್ಕಾಗಿ ಸಾಕುವ ಪದ್ಧತಿಯು ಈ ಪ್ರದೇಶದಲ್ಲಿತ್ತು. ಉಳುವುದಕ್ಕಾಗಿ ಸಾಕುವ ಉತ್ತಮ ಜಾತಿಯ ಕೋಣಗಳನ್ನು ಉಳುಮೆಯ ಕಾರ್ಯದೊಂದಿಗೆ ಪೌಷ್ಟಿಕ ಆಹಾರಗಳನ್ನು ನೀಡಿ ಉತ್ತಮ ರೀತಿಯಲ್ಲಿ ಸಾಕಿ ಓಟದ ಕೋಣಗಳಾಗಿ ಕಂಬಳ ಸ್ಪರ್ಧೆಗೆ ಸಜ್ಜುಗೊಳಿಸಿ ಸ್ಪರ್ಧೆಗಿಳಿಸುವ ಸಂಪ್ರದಾಯ ಬಹು ಹಿಂದಿನಿಂದಲೇ ನಡೆದು ಬಂದುದಾಗಿದೆ.

ಪ್ರಧಾನವಾಗಿ ಮಾಂಸಕ್ಕಾಗಿ ಮತ್ತು ಸಣ್ಣಮಟ್ಟದ ಹಾಲಿಗಾಗಿ ಆಡು ಸಾಕಣೆ ಬಹು ಹಿಂದಿನಿಂದಲೇ ನಡೆದು ಬಂದ ಸಂಪ್ರದಾಯವಾಗಿದೆ. ಈ ಪಂಚಾಯತಿನಲ್ಲಿ ಗುಡ್ಡ ಪ್ರದೇಶಗಳ ಪರಿಸರದಲ್ಲಿ ಕಾರ್ಮಿಕರ ಕುಟುಂಬಗಳು ತಮ್ಮ ಉಪಜೀವನ ಮಾರ್ಗವಾಗಿ ಆಡುಗಳನ್ನು ಸಾಕಿ ಬೆಳೆಸುತ್ತಿದ್ದರು.

ಹಂದಿ ಸಾಕಣೆ : ಈ ಪಂಚಾಯತಿನಲ್ಲಿರುವ ಕೆಲವೇ ಕುಟುಂಬಸ್ಥರು ಮಾಂಸಕ್ಕಾಗಿ ನಾಡಹಂದಿಯನ್ನು ಸಾಕುತ್ತಿದ್ದರು.

ಪಕ್ಷಿಗಳು : ಮೊಂಜ ಪಂಚಾಯತಿಗೊಳಪಟ್ಟ ಹೆಚ್ಚಿನ ಮನೆಗಳಲ್ಲಿ ಮಾಂಸಕ್ಕಾಗಿ ಮತ್ತು ಮೊಟ್ಟೆಗಳಿಗಾಗಿ ಕೋಳಿ ಸಾಕುವ ಸಂಪ್ರದಾಯ ಹಿಂದಿನಿಂದಲೇ ನಡೆದು ಬಂದುದಾಗಿದೆ. ಕೃಷಿಕರು, ಕಾರ್ಮಿಕರು, ಹೆಚ್ಚಿನ ಸಂಖ್ಯೆಯಲ್ಲಿ ಕೋಳಿಯನ್ನು ಸಾಕುತ್ತಿದ್ದರು. ಕಾರ್ಮಿಕರಿಗೆ ಕೋಳಿ ಸಾಕಣೆಯು ಒಂದು ಉಪವೃತ್ತಿಯಾಗಿ ಬಳಕೆಯಲ್ಲಿತ್ತು. ಗಂಡುಕೋಳಿ (ಹುಂಜ)ಗಳನ್ನು ಉತ್ತಮ ರೀತಿಯಲ್ಲಿ ಸಾಕಿ ಅಂಕದ ಕೋಳಿಯಾಗಿ ಬೆಳೆಸಿ ಮನರಂಜನೆಗಾಗಿಯೂ, ಉತ್ಸವದ ಕಾಲದಲ್ಲಿ ಹೆಚ್ಚಿನ ದೈವಕ್ಷೇತ್ರಗಳ ಪರಿಸರದಲ್ಲಿ ಕೋಳಿಯ ಅಂಕ ನಡೆಸುತ್ತಿದ್ದರು. ಈ ಕೋಳಿ ಅಂಕದ ಪ್ರಾರಂಭವಾದ ಬಗ್ಗೆ ಒಂದು ಐತಿಹ್ಯವೇ ಇದೆ.

ಉತ್ಸವಕಾಲದಲ್ಲಿ ರಕ್ತದ ಬಿಂದು ಬೀಳಬೇಕೆಂಬ ವಾಡಿಕೆಯಿಂದಾಗಿ ಈ ಸಂಪ್ರದಾಯ ಬಂತು ಎಂಬುದು ಹಿರಿಯರ ವಾದ.

ಕೋಳಿ ಸಾಕಣೆಗೆ ಪ್ರೋತ್ಸಾಹ ದೊರಕಲು ಹಿಂದಿನ ಕಾಲದಲ್ಲಿ ಮಾಂಸದ ಕೋಳಿಗಳ ಅವಶ್ಯಕತೆ ಮಾತ್ರವಲ್ಲ, ಕೋಳಿ ಅಂಕಕ್ಕಾಗಿ ಪ್ರತ್ಯೇಕ ಗಮನಹರಿಸಿ ಓಟದ ಕೋಣಗಳನ್ನು ಸಾಕಿ ಬೆಳೆಸುವಂತೆ ಅಂಕದ ಕೋಳಿಗಳನ್ನು ಸಾಕಿ ಬೆಳೆಸುತ್ತಿದ್ದರು.

ಕಳೆದ 10 ವರ್ಷಗಳ ಹಿಂದೆ ಹಾಲಿಗಾಗಿ ಉತ್ತಮ ತಳಿಯ ದನ ಮತ್ತು ಎಮ್ಮೆಗಳನ್ನು ತಂದು ಸಾಕಿ ಬೆಳೆಸುವ ಸಂಪ್ರದಾಯ ಬೆಳೆಸಿಕೊಂಡಿದ್ದರು. ಆ ಸಂದರ್ಭದಲ್ಲಿ ಹಾಲು ಉತ್ಪಾದನೆಗೆ ಹೆಚ್ಚಿನ ಪ್ರೋತ್ಸಾಹ ದೊರಕುತ್ತಿತ್ತು. ಕ್ರಮೇಣ ಪಶು ಆಹಾರಗಳ ದುಬಾರಿ ಬೆಲೆಯಿಂದಲಾಗಿ ಸಾಕಣೆಯ ವೆಚ್ಚವು ಹಾಲು ಮಾರಾಟದಿಂದ ಬರುವ ವರಮಾನಕ್ಕಿಂತ ಅಧಿಕವಾಗಿರುವುದರಿಂದ ಹಾಲಿಗಾಗಿ ಎಮ್ಮೆ ದನಗಳನ್ನು ಸಾಕುವವರ ಸಂಖ್ಯೆ ಕ್ರಮೇಣ ಕಡಿಮೆಯಾಗತೊಡಗಿತ್ತು. ಎಲ್ಲಾ ಪ್ರದೇಶಗಳಲ್ಲಿಯೂ ಪಶು ಮೇವಿಗಾಗಿ ಗೋಚರಾವು ಪ್ರದೇಶಗಳೆಂದು ಕಾದಿರಿಸಿದ ಪ್ರದೇಶಗಳಿದ್ದುವು. ಇದಲ್ಲದೇ ಮೇವಿಗಾಗಿ ಸರಕಾರಿ ಸ್ಥಳಗಳು ಪಶು ಸಾಕಣೆಗೆ ದೊರಕುತ್ತಿತ್ತು. ಕ್ರಮೇಣ ಭೂರಹಿತರಿಗೆ ಸರಕಾರಿ ಭೂಮಿಯನ್ನು ದರ್ಖಾಸ್ತುಗಳಾಗಿ ವಿತರಣೆಗೊಳಿಸುವುದು, ವಸತಿ ನಿವೇಶನಗಳಿಗಾಗಿ ಈ ಮೇಲಿನ ಸ್ಥಳಗಳನ್ನು ವಿನಿಯೋಗಿಸಿದುದರಿಂದ ಗೋಚರಾವು ಪ್ರದೇಶಗಳು ಮಾಯವಾದುವು. ಹಸು, ಎಮ್ಮೆ, ಎತ್ತು, ಕೋಣ ಇತ್ಯಾದಿಗಳ ಆಹಾರಗಳು ಹಸಿ ಹುಲ್ಲಿನೊಂದಿಗೆ ಭತ್ತದ ಒಣ ಹುಲ್ಲು ಪ್ರಾಮುಖ್ಯವಾಗಿದೆ.

ಭತ್ತ ಬೆಳೆಯುವ ಪ್ರದೇಶವು ಕ್ರಮೇಣ ವಾಣಿಜ್ಯ ಬೆಳೆಗಳ ಪ್ರದೇಶಗಳಾಗಿ ಮಾರ್ಪಾಡುಗೊಂಡುದರಿಂದ ಒಣಹುಲ್ಲಿನ ಲಭ್ಯತೆಯು ಕಡಿಮೆಯಾಯಿತು. ಮೇಲಿನ ಕಾರಣಗಳಿಂದಾಗಿ ಸಾಕು ಪ್ರಾಣಿಗಳ ಸಂಖ್ಯೆಯು ಕಡಿಮೆಯಾಗುತ್ತಾ ಬಂತು.

ಕೇರಳದ ಸಂಪದ್ಭರಿತೆಯ ಬೆಳವಣಿಗೆಯಲ್ಲಿ ಪ್ರಧಾನ ಪಾತ್ರ ವಹಿಸುವ ವಲಯವಾಗಿದೆ ಮೃಗ ಸಂರಕ್ಷಣಾ ವಲಯ. 94% ದನಕರು ಸಂಪತ್ತು ಗ್ರಾಮಗಳಲ್ಲಾಗಿದೆ. ದನಕರುಗಳ ಒಡೆತನವು ಬಹುಪಾಲು ಕಿರು ರೈತರೂ, ಕೃಷಿಕ, ಕಾರ್ಮಿಕರೂ ಆಗಿದ್ದಾರೆ. ಆದುದರಿಂದ ಜನಜೀವನ ನೆಲೆಯನ್ನೂ ಊರ್ಜಿತಗೊಳಿಸಲು ಯೋಜನೆಗಳನ್ನು ಆವಿಷ್ಕರಿಸುವಾಗ ಈ ವಲಯಕ್ಕೆ ಹೆಚ್ಚಿನ ಪ್ರಾಧಾನ್ಯತೆ ಕಲ್ಪಿಸಬೇಕು.

ಈಗಿನ ಸ್ಥಿತಿಗತಿಗಳು :

1. ಹಾಲು ಉತ್ಪಾದನೆಗಾಗಿ ಪ್ರೋತ್ಸಾಹ ನೀಡುವ ಯಾವುದೇ ವ್ಯವಸ್ಥೆಗಳು ಈ ಪಂಚಾಯತ್ ಪರಿಧಿಯಲ್ಲಿಲ್ಲ.
2. ಹಾಲು ಉತ್ಪಾದನೆಯ ಸಹಕಾರಿ ಸಂಘಗಳ ಮೂಲಕ, ಉತ್ತಮ ತಳಿಯ ಹಸು, ಎಮ್ಮೆಗಳನ್ನು ಸಾಕುವರೇ ಪ್ರೋತ್ಸಾಹ ದೊರಕಬಹುದಿತ್ತು.

ಆದರೆ ಅಂತಹ ಸಹಕಾರಿ ಸಂಘಗಳು ಈ ಪಂಚಾಯತ್ ಪರಿಸರದಲ್ಲಿಲ್ಲ. ಈ ಪ್ರದೇಶದ ಹಾಲಿನ ಆವಶ್ಯಕತೆಗಳನ್ನು ಪೂರೈಸಲು ನೆರೆ ರಾಜ್ಯಗಳನ್ನು ಆಶ್ರಯಿಸಬೇಕಾಗಿದೆ.

3. ಭತ್ತ ಬೆಳೆಯುವ ಪ್ರದೇಶಗಳು ವಾಣಿಜ್ಯ ಬೆಳೆಗಳಿಗೆ ಉಪಯೋಗಿಸುವುದರಿಂದ ಭತ್ತದ ಬೆಳೆ ಕಡಿಮೆಯಾಗಿ ಉಳುಮೆಯ ಎತ್ತು, ಕೋಣಗಳನ್ನು ಸಾಕುವವರ ಸಂಖ್ಯೆ ಕಡಿಮೆಯಾಯಿತು.

4. ಮಾಂಸಕ್ಕಾಗಿ ನಾಡ ಆಡು ಸಾಕುವಿಕೆಯ ಸಂಪ್ರದಾಯ ಕಡಿಮೆಯಾಗಲು ಕಾರಣ ಮೊದಲು ಆಡಿಗೇ ಮೇವಿನ ಸ್ಥಳ ಗುಡ್ಡ ಪ್ರದೇಶಗಳು ಸಾಕಷ್ಟು ಇದ್ದವು. ಅಂತಹ ಪ್ರದೇಶಗಳು ದರ್ಖಾಸ್ತುಗಳಾಗಿ ಹಂಚಿ ಹೋಗಿ ಆಡಿನ ಮೇವಿಗೆ ಲಭ್ಯವಲ್ಲದ ಕಾರಣವೂ ಮತ್ತು ಕೃಷಿಯನ್ನು ನಾಶಪಡಿಸುವುದೆಂಬ ಕಾರಣವೂ ಆಡಿನ ಸಾಕಣೆಗೆ ಪ್ರೋತ್ಸಾಹ ಕಡಿಮೆಯಾಗುತ್ತಾ ಬಂತು.

5. ಹಂದಿ ಸಾಕಣೆಯು ಈಗ ಬಹಳಷ್ಟು ಕಡಿಮೆಯಾಗಿದೆ. ಹಂದಿ ಮಾಂಸದ ಉತ್ಪಾದನೆಯ ಲಭ್ಯತೆಯನ್ನು ಲಕ್ಷ್ಯವಿರಿಸುವ ಯೋಜನೆಗಳಿಗೆ ಅಗತ್ಯವಾದ ಹಂದಿ ಮರಿಗಳನ್ನು ಒದಗಿಸಲು ಸಾಧ್ಯವಾಗುವುದಿಲ್ಲ.

6. ಈ ಪಂಚಾಯತ್ ಪ್ರದೇಶಗಳಲ್ಲಿ ಒಂದೆರಡು ಕೇಂದ್ರಗಳಲ್ಲಿ ಖಾಸಗಿ ವ್ಯಕ್ತಿಗಳು ಸಣ್ಣ ಮಟ್ಟದ ಕೋಳಿ ಸಾಕಣೆಯನ್ನು ಉಪವೃತ್ತಿಯನ್ನಾಗಿ ಮಾಡುವವರಿದ್ದಾರೆ. ನಾಡಕೋಳಿಗಳನ್ನು ಸಾಕುವರೆ ಹಿಂದಿನಂತೇ ಹೆಚ್ಚು ಉತ್ಸಾಹವೂ ಕಡಿಮೆಯಾಗಿದೆ. ಭತ್ತದ ಕೃಷಿ ಕಡಿಮೆಯಾದ್ದರಿಂದ ಕೋಳಿ ಆಹಾರ ಹಿಂದಿನಷ್ಟು ಸುಲಭದಲ್ಲಿ ಲಭ್ಯವಲ್ಲ. ನಾಡ ಪದ್ಧತಿಯ ಪ್ರಕಾರ ಭತ್ತವೂ ಕೋಳಿಯ ಪ್ರಾಮುಖ್ಯ ಆಹಾರವಾಗಿದೆ. ಭತ್ತದ ಬೆಲೆಯೂ, ಲಭ್ಯತೆಯ ಕೊರತೆಯೂ, ಕೋಳಿ ಸಾಕಣೆ ಕಡಿಮೆಯಾಗಲು ಕಾರಣವಾಗಿದೆ.

7. ಮನರಂಜನೆಗಾಗಿ ಕೋಳಿ ಅಂಕಗಳನ್ನು ನಡೆಸುವುದು, ಮತ್ತು ಉತ್ಸವ ಕಾಲದಲ್ಲಿ ಸಾಂಪ್ರದಾಯಿಕವಾಗಿ ಕೋಳಿ ಅಂಕಗಳನ್ನು ನಡೆಸುವುದು ಇದಕ್ಕಾಗಿ ಅಂಕದ ಕೋಳಿಗಳನ್ನು ಸಾಕಲು ಪ್ರೋತ್ಸಾಹ ದೊರಕುತ್ತಿದ್ದರೆ ಕೋಳಿ ಅಂಕದೊಂದಿಗೆ ಜೂಜು ನಡೆಯುತ್ತದೆ ಎಂಬ ಕಾರಣದಿಂದ ಕೋಳಿ ಅಂಕ ನಿಷೇಧಿಸಿರುವುದರಿಂದ ಅಂಕದ ಕೋಳಿಗಳನ್ನು ಸಾಕುವುದು ಕಡಿಮೆಯಾಯಿತು.

ಈಗಿನ ಸ್ಥಿತಿಗತಿಗಳನ್ನು ಪಟ್ಟಿ 1ರಲ್ಲಿ ಕಾಣಬಹುದು.

ತಖ್ತೆ - 1

	ನಾಡತಳಿ	ಮಿಶ್ರತಳಿ	ಹಾಲು/ಮೊಟ್ಟೆ ತಿಂಗಳಿನಲ್ಲಿ
ದನ	2615	98	475 Ltre
ಎಮ್ಮೆ	66	11	155 Ltre
ಆಡು	115	—	—
ಕೋಳಿ	11,556	—	6,150 ಮೊಟ್ಟೆ
ಬಾತುಕೋಳಿ	—	—	—
ಕರು	396	14	—
ಎತ್ತು	1467	—	—
ಕೋಣ	498	—	—

ಆಧಾರ : 1996 ಜಾನುವಾರು ಖಾನೇಶುಮಾರಿ

8. ಈ ಪಂಚಾಯತಿನ ಪ್ರದೇಶದಲ್ಲಿ ಈ ವರ್ಷದ ತನಕ ಮೃಗಾಸ್ಪತ್ರೆಗಳಿರಲಿಲ್ಲ. ಈಗ 1996 ಮಾರ್ಚಿನಲ್ಲಿ ಒಂದು ಮೃಗ ಸಂರಕ್ಷಣ ಕೇಂದ್ರ ಮಿಯಪದವಿನಲ್ಲಿ ಸ್ಥಾಪಿಸಲ್ಪಟ್ಟಿತು. ಈ ಮೊದಲು ಈ ಪಂಚಾಯತಿನಲ್ಲಿ ಒಂದು ಕೃತಕ ಗರ್ಭಧಾರಣಾ ಕೇಂದ್ರವು ಕಾರ್ಯಾಚರಿಸುತ್ತಿತ್ತು. ಈಗ ಮೃಗಾಸ್ಪತ್ರೆಯಲ್ಲಿ ಕೃತಕ ಗರ್ಭಧಾರಣೆ ವ್ಯವಸ್ಥೆ ಇರುವುದರಿಂದ ಈ ಕೇಂದ್ರವನ್ನು ಬೇರೆ ಕಡೆಗೆ ವರ್ಗಾಯಿಸಲಾಗಿದೆ.

9. ವಾಣಿಜ್ಯ ತಳಹದಿಯಲ್ಲಿ ಮೊಲದ ಮಾಂಸದ ಉತ್ಪಾದನೆಯೂ ವಿತರಣೆಯೂ ಸಾಧ್ಯವಾಗುವ ಮೊಲ ಸಾಕಣೆ ಯೋಜನೆ ಮೊಲದ ಮರಿಗಳ ದೌರ್ಬಲ್ಯದಿಂದಾಗಿ ತಡೆಯಾಗಿದೆ.

10. ದನಕರುಗಳಿಗೆ ಬರುವ ರೋಜರುಜಿನಗಳು ಮತ್ತು ಅವುಗಳಿಗೆ ಸಕಾಲದಲ್ಲಿ ಔಷಧ ನೀಡುವ ಬಗ್ಗೆ ದನಕರುಗಳನ್ನು ಸಾಕುವ ರೈತರಿಗೆ ಸಾಕಷ್ಟು ಅನುಭವ ಇಲ್ಲದೇ ಇರುವುದರಿಂದಲೂ, ಮೃಗಾಸ್ಪತ್ರೆಯ ಸೇವೆಯು ಎಲ್ಲಾ ವಾರ್ಡುಗಳಿಗೆ ಲಭ್ಯವಾಗದಿರುವುದರಿಂದ ಪಶುಸಾಕಣೆಗೆ ಪ್ರೋತ್ಸಾಹ ಕಡಿಮೆಯಾಗುತ್ತಿದೆ. ರೋಗರುಜಿನಗಳ ಬಗ್ಗೆ ಹೆಚ್ಚಿನ ವಿವರ ಈ ಕೆಳಗಿನ ಪಟ್ಟಿಯಲ್ಲಿದೆ.

ತಖ್ತೆ - 2

ಕ್ರ.ಸಂ.	ರೋಗಗಳು	ದನ	ಎಮ್ಮೆ	ಆಡು	ಹಂದಿ	ನಾಯಿ	ಕೋಳಿ	ಮೊಲ
1	ಜೀರ್ಣಸಂಧಿ ರೋಗ	29	2	5	2	10	50	
2	ಶ್ವಾಸಕೋಶ ಸಂಬಂಧ ರೋಗ	10	2	—	—	8	10	—
3	ಪಚನರೋಗ	5	—	—	—	2	2	—
4	ಚರ್ಮರೋಗ	4	2	—	—	4	1	5
5	ಧಾತುಲಬಾಕಗಳ ರೋಗ	9	2	—	2	1	—	—
6	ಸರಾದ ರೋಗಗಳು	35	10	2	—	—	2	—
7	ಪ್ರತ್ಯುತ್ಪಾದನೆ ಸಂಬಂಧ ರೋಗ	10	2	—	—	—	—	
8	ಬಂಜೆತನ	20	2	2	—	1	—	—
9	Mostity	8	1	—	2	—	2	—
10.	Ephimal Discase	4	8	—	—	2	3	2
11	ಹರಡು ರೋಗ	60	—	—	—	—	2	—
12.	ಸಾಂಕ್ರಾಮಿಕ	—	2	—	—	—	10	—

ಕೃತಕ ಗರ್ಭಧಾರಣೆ

ಆಧುನಿಕ ರೀತಿಯಲ್ಲಿ ಹಸುಗಳನ್ನು ಸಾಕುವರೇ ಬಹಳಷ್ಟು ಪ್ರೋತ್ಸಾಹ ಇಲ್ಲದಿದ್ದರೂ, ಉತ್ತಮ ತಳಿಗಳ ಪಶುಗಳನ್ನು ಸಾಕುವರೇ ಈ ಪ್ರದೇಶದ ಕೃಷಿಕರೂ ಉತ್ಸುಕರಾಗಿದ್ದಾರೆ. ಕೃತಕ ಗರ್ಭಧಾರಣೆಯ ಮೂಲಕ ಉತ್ತಮ ತಳಿಯ ಹಸು ಕರುಗಳನ್ನು ಉತ್ಪಾದಿಸಲು ಸಹಾಯಕವಾಗುವ ವ್ಯವಸ್ಥೆಗಳು ಪಂಚಾಯತು ಮಟ್ಟದಲ್ಲೇ ಇದ್ದರೂ ಹೆಚ್ಚಿನ ಜನರಿಗೆ ಇದರ ಸೌಲಭ್ಯ ದೊರಕಲಿಲ್ಲ.

ಕೃತಕ ಗರ್ಭ ಧಾರಣೆಯಾದ ಬಗ್ಗೆ ವಿವರ ಮುಂದಿನ ತಖ್ತೆಯಲ್ಲಿ.

ತಖ್ತೆ - 3 ಕೃತಕ ಗರ್ಭಧಾರಣೆ

ವಿಧ	ಗರ್ಭಧಾರಣೆಯಾಗಿ 2ಸಾರಿಗಿಂತ ಹೆಚ್ಚು ಬಾರಿ ಬೀಜ ಸಂಕಲನ ನಡೆದುದು	ಕೃತಕ ಬೀಜ ಸಂಕಲನ ನಡೆದ ಸಂಖ್ಯೆ
ದನ	10	131
ಎಮ್ಮೆ	2	27

ಗೋಬರ್‌ಗ್ಯಾಸ್ :

ಕೃಷಿಗೆ ಸಹಾಯ ನೀಡಬಲ್ಲ ಒಂದು ವ್ಯವಸ್ಥೆಯಾಗಿದೆ ಗೋಬರ್‌ಗ್ಯಾಸ್. ಪಶುಸಾಕಣೆಯ ಮೂಲಕ ಗೋಬರ್ ಗ್ಯಾಸಿಗೆ ಬೇಕಾದ ಆವಶ್ಯಕ ವಸ್ತುಗಳು ದೊರಕುತ್ತಿದೆ. ಗೋಬರ್‌ಗ್ಯಾಸ್ ಯೋಜನೆಯಿಂದ ಕೃಷಿಗೆ ಉತ್ತಮ ರೀತಿಯ ಗೊಬ್ಬರವೂ ಮನೆಗೆ ಬೇಕಾದ ಇಂಧನವೂ ದೊರಕಬಲ್ಲುದು. ಆದರೆ ಈ ಬಗ್ಗೆ ಈ ಪಂಚಾಯತಿನ ಕೃಷಿಕರಿಗೆ ಅನುಭವದ ಕೊರತೆಯಿಂದಾಗಿ ಈ ಯೋಜನೆ ಸಹಕಾರಿಯಾಗಲಿಲ್ಲ. ಗೋಬರ್‌ಗ್ಯಾಸ್ ಕೇವಲ 8 ಕಡೆಯಲ್ಲೇ ಇರುವುದು.

ಬಾತುಕೋಳಿ ಸಾಕಣೆಗೆ ಬೇಕಾದ ಜಲಾನಯನ ಪ್ರದೇಶದ ಕೊರತೆ ಹಾಗೂ ಮೊಲ ಸಾಕಾಣಿಕೆಗೆ ಮರಿಗಳ ಕೊರತೆಯಿಂದಾಗಿ ಇದು ಈ ಪಂಚಾಯತಿನಲ್ಲಿ ಯಶಸ್ವಿಯಾಗಲಿಲ್ಲ.

ಸಮಸ್ಯೆಗಳು :

1. ಪಶು ಆಹಾರಗಳ ದುಬಾರಿ ಬೆಲೆಯು ಪಶು ಸಾಕಾಣಿಕೆಗೆ ತೊಡಕಾಗಿದೆ.
2. ಒಣಹುಲ್ಲಿನ ಲಭ್ಯತೆ ಸಾಕಷ್ಟು ಇಲ್ಲದಿರುವುದು.
3. ಮೃಗ ಚಿಕಿತ್ಸಾ ಸೌಕರ್ಯಗಳ ಅಪರ್ಯಾಪ್ತತೆ.
4. ಉತ್ತಮ ತಳಿಗಳ ಪಶು ಸಾಕಣೆ ಮತ್ತು ಹಾಲು ಉತ್ಪಾದನೆಯ ಬಗ್ಗೆ ಪ್ರೋತ್ಸಾಹ ಇಲ್ಲದಿರುವಿಕೆ.
5. ಹಾಲು ಶೇಖರಣೆ ಮತ್ತು ಮಾರಾಟಕ್ಕೆ ಸರಿಯಾದ ವ್ಯವಸ್ಥೆ ಇಲ್ಲದಿರುವಿಕೆ.
6. ಕೋಳಿ ಸಾಕಾಣಿಕೆ ಪ್ರೋತ್ಸಾಹ ಇಲ್ಲದಿರುವುದು ಮತ್ತು ಸರಿಯಾದ ಮಾರುಕಟ್ಟೆ ಇಲ್ಲದಿರುವುದು.
7. ಪಶು ಸಾಕಾಣಿಕೆ ಸಹಾಯಧನ ಲಭ್ಯತೆಯ ಕೊರತೆ.
8. ಅಲೆಮಾರಿ, ಹುಚ್ಚುನಾಯಿಗಳ ಕಾಟ.
9. ಕಾಡು ಹಂದಿಯ ಉಪಟಳ ತಡೆಯಬೇಕೆಂದು ಗ್ರಾಮಸಭೆಯಲ್ಲಿ ವ್ಯಾಪಕವಾದ ಅಭಿಪ್ರಾಯಗಳು ಮೂಢಿಬಂದಿದೆ.
10. ರಾಜ್ಯಮಟ್ಟದ ರೇಬಿಸ್ ನಿಯಂತ್ರಣ ಸೆಲ್ ವಿಪುಲೀಕರಿಸಿ ಶಕ್ತಿಗೊಳಿಸಬೇಕಾಗಿದೆ.

ಸಾಧ್ಯತೆಗಳು :

1. ಮೊಂಜ ಪಂಚಾಯತಿನ ವ್ಯಾಪ್ತಿಯನ್ನು ಕೇಂದ್ರೀಕರಿಸಿ ಒಂದು ಹಾಲು ಉತ್ಪಾದನಾ ಸಹಕಾರಿ ಸಂಘವನ್ನು ರೂಪೀಕರಿಸುವುದು.
2. ಪ್ರತೀ ವಾರ್ಡಿನಲ್ಲೂ ಹಾಲು ಶೇಖರಣಾ ಕೇಂದ್ರಗಳನ್ನು ಸ್ಥಾಪಿಸುವುದು ಮತ್ತು ಸಂಗ್ರಹಿಸಿದ ಹಾಲನ್ನು ವಿತರಣೆಗೆ ವ್ಯವಸ್ಥೆ ಮಾಡುವುದು.
3. ಮೇಲೆ ಹೇಳಿದ ಸಹಕಾರ ಸಂಘದ ಮೂಲಕ ಪಶು ಆಹಾರವನ್ನು ನ್ಯಾಯ ಬೆಲೆಗೆ ಒದಗಿಸುವುದು ಮತ್ತು ಪಶು ಆಹಾರಕ್ಕಾಗಿ ಉತ್ತಮ ತಳಿಯ ಹುಲ್ಲು ಉತ್ಪಾದನೆಗೆ ಪ್ರೋತ್ಸಾಹ ನೀಡುವುದು.
4. ಸಾಕು ಮೃಗಗಳಿಗೆ ಔಷಧ ಸೌಕರ್ಯವನ್ನು ಪಲಪ್ರದವಾಗಿ ದೊರಕುವಂತೆ ಮಾಡುವುದು. 2 ವಾರ್ಡುಗಳಿಗೆ ಒಂದರಂತೆಯಾದರೂ ಕನಿಷ್ಟ 4 ಮೃಗಾಸ್ಪತ್ರೆಗಳನ್ನು ಆರಂಭಿಸುವುದು.
5. ಉತ್ತಮ ತಳಿಯ ಪಶು ಉತ್ಪಾದನೆಗೆ ಕೃತಕ ಗರ್ಭಧಾರಣೆಗೆ ಪ್ರೋತ್ಸಾಹ ನೀಡುವುದು. ಉತ್ತಮ ತಳಿಯ ಪಶುಗಳನ್ನು ಖರೀದಿಸಿ ಸಾಕುವವರಿಗೆ ಸಹಾಯ ಧನ ನೀಡುವುದು.
6. ಕೋಳಿ ಸಾಕಣಾ ಸಹಕಾರಿ ಸಂಘ ಒಂದನ್ನು ಸ್ಥಾಪಿಸುವುದು. ಆ ಮೂಲಕ ವಾರ್ಡುಗಳಲ್ಲಿ ಕೋಳಿ ಮರಿಗಳನ್ನು ವಿತರಿಸುವುದು, ಕೋಳಿ ಆಹಾರಗಳನ್ನು ನ್ಯಾಯ ಬೆಲೆಗೆ ಒದಗಿಸುವುದು.
7. ಕೋಳಿ ಸಾಕುವ ಕೃಷಿಕರಿಗೆ ಸಾಕಷ್ಟು ಪಶುವೈದ್ಯರ ಸೇವೆ ಲಭ್ಯವಾಗುವಂತೆ ಮಾಡುವುದು ಮತ್ತು ಉತ್ಪಾದಿಸಲ್ಪಟ್ಟ ಉತ್ಪಾದನೆಯನ್ನು ಸಂಗ್ರಹಿಸಿ ಮಾರಾಟ ಮಾಡಲು ಯೋಗ್ಯ ವ್ಯವಸ್ಥೆ ಮಾಡುವುದು.

8. ಮೊಟ್ಟೆ ಉತ್ಪಾದನೆಗಾಗಿ ಕೋಳಿಗಳ ಸಾಕಣೆ ಮತ್ತು ಇದರ ಮಾರಾಟಕ್ಕೆ ಸೂಕ್ತ ವ್ಯವಸ್ಥೆ.

9. ರೇಬಿಸ್, ಪಶುರೋಗ ನಿರ್ಮೂಲನಾ ಯೋಜನೆ.

10. ಆಡು ಸಾಕುವಿಕೆ, ಹಂದಿ ಸಾಕಣೆ, ಮೊಲ ಸಾಕಣೆಕೆಗೆ ಕಡಿಮೆ ಬಡ್ಡಿ ದರದಲ್ಲಿ ಆರ್ಥಿಕ ಸಹಾಯ ಒದಗಿಸುವುದು.

11. ಪಶು ಆಹಾರ ಕಿರುಯೂನಿಟ್ : ಸಹಕಾರಿ ಮಟ್ಟದಲ್ಲಿ ಕಿರು ಪಶು ಆಹಾರ ನಿರ್ಮಾಣ ಯುನಿಟ್ ಸ್ಥಾಪಿಸಿ ಸೊಸೈಟಿಗಳ ಮೂಲಕ ಮಾರಾಟ ಮಾಡಬಹುದಾಗಿದೆ. ಸಾಧ್ಯತೆ ಇರುವ ಗ್ರಾಮಗಳಲ್ಲಿ ವಾಣಿಜ್ಯ ತಳಹದಿಯಲ್ಲಿ ಮೇವು ಹುಲ್ಲು ಬೆಳೆಸಿ, ಅದೇ ಗ್ರಾಮದಲ್ಲಿ ಪಶು ಆಹಾರ ತಯಾರಿಸುವುದೂ, ದನ ಸಾಕಣೆಯಿಂದಿರುವ ಆದಾಯ ಏರಿಕೆಗೆ ಸಹಕರಿಸುವುದು.

ಮೀನುಗಾರಿಕೆ

ಮೊಂಜ ಪಂಚಾಯತಿನಲ್ಲಿ ಮೀನು ಸಾಕಾಣಿಕೆಗೆ ಬೇಕಾದ ಸೌಕರ್ಯಗಳು ಇಲ್ಲವೆಂದೇ ಹೇಳಬಹುದು. ಸಮುದ್ರ ಕರಾವಳಿ ಪ್ರದೇಶವೋ, ಅಥವಾ ಬೇಸಗೆಯಲ್ಲಿ ಸಾಕಷ್ಟು ನೀರಿರುವ ನದಿ ತಟಾಕಗಳೋ, ಕೊಳ, ಕೆರೆಗಳೋ ಇಲ್ಲದಿರುವುದೇ ಮುಖ್ಯ ಕಾರಣವಾಗಿದೆ. ಮೀನುಗಾರಿಕೆ ಲಾಭದ ಉದ್ಯಮವಾದರೂ ಯೋಗ್ಯ ಸ್ಥಳಾವಕಾಶವಿಲ್ಲದಿರುವುದರಿಂದ ಈ ಆದಾಯ ದೊರಕುವುದು ಅಸಾಧ್ಯವಾಗಿದೆ.

ಸಾಧ್ಯತೆಗಳು :

1. ನಮ್ಮ ಪಂಚಾಯತಿನ ಸಮೀಪದ ಮಂಜೇಶ್ವರ ಪಂಚಾಯತು ಅರಬೀ ಸಮುದ್ರಕ್ಕೆ ತಾಗಿಕೊಂಡಿರುವುದರಿಂದ ಅಲ್ಲಿ ಸಾಕಷ್ಟು ಮೀನುಗಾರರ ಕುಟುಂಬಗಳು ಮೀನುಗಾರಿಕೆಯಲ್ಲಿ ತೊಡಗಿದ್ದು ಅಲ್ಲಿ ಲಭಿಸಿದ ಮೀನುಗಳನ್ನು ಮಾರಾಟಗಾರರುತಂದು ನಮ್ಮ ಪಂಚಾಯತಿನಲ್ಲಿ ಮಾರಾಟ ಮಾಡುವುದರ ಮೂಲಕ ಇಲ್ಲಿನ ಮೀನಿನ ಅಗತ್ಯ ಪೂರೈಕೆ ಹಿಂದಿನಿಂದಲೇ ಆಗುತ್ತಿತ್ತು. ಈಗಲೂ ಮೀನಿನ ಅಗತ್ಯಕ್ಕಾಗಿ ಸಮೀಪದ ಮಂಜೇಶ್ವರ ಪಂಚಾಯತಿನ ಮಾರುಕಟ್ಟೆಗಳನ್ನು ಆಶ್ರಯಿಸಲಾಗುತ್ತದೆ. ಖಾಸಗೀ ವ್ಯಕ್ತಿಗಳ ಕೃಷಿ ಉಪಯೋಗಕ್ಕಾಗಿ ನಿರ್ಮಿಸುವ ಕೆರೆಗಳಲ್ಲಿ ಅಲ್ಪಾವಧಿಯ ಉತ್ತಮ ತಳಿಯ ಮೀನಿನ ಮರಿಗಳನ್ನು ತರಿಸಿ ಮೀನು ಸಾಕಾಣಿಕೆಗೆ ಪ್ರೋತ್ಸಾಹ ನೀಡುವುದು.

2. ಮೀನು ಸಾಕಾಣಿಕೆಯ ಬಗ್ಗೆ ಅನುಭವ, ಸಂರಕ್ಷಣೆಯ ಕುರಿತು ಜನಸಾಮಾನ್ಯರಿಗೆ ಅರಿವು ಮೂಡಿಸುವುದು.

3. ಮೀನು ಸಂಪನ್ಮೂಲ ಸಂರಕ್ಷಣೆ, ಪರಿಪಾಲನೆಯ ಕುರಿತು ಪಂಚಾಯತು ಮಟ್ಟದಲ್ಲಿ ಮಾರ್ಗರೇಖೆ ತಯಾರಿಸುವುದು.

4. ಮೀನುಗಳ ಬೆಲೆ ನಿರ್ಣಯಿಸುವುದರಲ್ಲಿ ಮೀನುಗಾರಿಕೆಗೆ ಅನುಕೂಲವಾಗಿ ಪಂಚಾಯತುಗಳು ನಿರ್ಣಯ ಕೈಗೊಳ್ಳಬೇಕು.

5. ಮೀನು ಮಾರಾಟಕ್ಕೆ ಬೇಕಾದ ಸ್ಟೋರೇಜ್ ಮತ್ತು ಮಾರ್ಕೆಟ್ ಸ್ಥಾಪನೆ.

5.3 ವಿದ್ಯಾಭ್ಯಾಸ

ಕಾಸರಗೋಡು ವಿದ್ಯಾ ಜಿಲ್ಲೆಯ ಮಂಜೇಶ್ವರ ಉಪಜಿಲ್ಲೆಯ ಪರಿಧಿಯಲ್ಲಿ ಬರುವ ಪ್ರದೇಶವಾಗಿದೆ ನಮ್ಮ ಪಂಚಾಯತ್. ಸಮೀಪ ಕಾಲದ ವರೆಗೆ ಉಪಜಿಲ್ಲೆ ಕಚೇರಿಯು ಈ ಪಂಚಾಯತಿನ ಪಡುಭಾಗದಲ್ಲಿ ತಾಗಿಕೊಂಡಿರುವ ಮಂಜೇಶ್ವರದಲ್ಲಿ ಪ್ರವರ್ತಿಸುತ್ತಿದ್ದು ಈಗ ಈ ಪಂಚಾಯತಿನ ದಕ್ಷಿಣ ಭಾಗದಲ್ಲಿ ತಾಗಿಕೊಂಡಿರುವ ಮಂಗಲ್ಪಾಡಿ ಪಂಚಾಯತಿನ ಉಪ್ಪಳದಲ್ಲಿ ಪ್ರವರ್ತಿಸುತ್ತಿದೆ. ಉಪಜಿಲ್ಲಾ ಕಚೇರಿಗೆ 15 ಕಿಲೋ ಮೀಟರ್ ದೂರದಲ್ಲಿದ್ದು ಪಂಚಾಯತಿಗೆ ಸಂಪರ್ಕ ಕಲ್ಪಿಸುವಂತೆ ಉಪ್ಪಳದಿಂದ ಮಂಜೇಶ್ವರದ ವರೆಗೆ ರಾಷ್ಟ್ರೀಯ ಹೆದ್ದಾರಿಯಾಗಿ ಮಂಜೇಶ್ವರದಿಂದ ಪಂಚಾಯತು ಕೇಂದ್ರದ ವರೆಗೆ ಪಿಡಬ್ಲ್ಯೂಡಿ ರಸ್ತೆಯೂ ಇದೆ.

ನಮ್ಮ ಪ್ರದೇಶದಲ್ಲಿ 1924ನೇ ಇಸವಿಯ ವರೆಗೆ ಕಾಲಘಟ್ಟದಲ್ಲಿ ವಿವಿಧ ವಾರ್ಡುಗಳಲ್ಲಿ ಓರ್ವ ಅಧ್ಯಾಪಕರಿರುವ ಪ್ರಾಥಮಿಕ ಶಾಲೆಗಳು ಆರಂಭಗೊಂಡು ವಿದ್ಯೆಯ ಬಗ್ಗೆ ಉತ್ಸಾಹ ಮೂಡಿ ಬಂದುದಾಗಿ ತಿಳಿಯಬಹುದು. ಇದಕ್ಕೆ ಮೊದಲು ಕೆಲವು ಪ್ರದೇಶಗಳಲ್ಲಿ ಕೆಲವು ದೇವಸ್ಥಾನದ ಗೋಪುರಗಳೂ ಸ್ಥಳಾವಕಾಶವಿರುವ ಮನೆ, ಮುಂಗಟ್ಟುಗಳಲ್ಲೂ ಕೆಲವೇ ವಿದ್ಯಾರ್ಥಿಗಳಿಗೆ ಓರ್ವ ಅಧ್ಯಾಪಕನು ವಿದ್ಯಾದಾನ ಮಾಡುತ್ತಿದ್ದ ಅನುಭವ ಹಿರಿಯರಿಂದ ಕೇಳಿ ಬರುತ್ತದೆ. ಉದಾ : ಮಜಿಬೈಲು ಗ್ರಾಮದಲ್ಲಿ ಬಲ್ಲಂಗುಡೆಲ್ ಭಗವತೀ ದೈವಕ್ಷೇತ್ರದ ಗೋಪುರದಲ್ಲಿ 1924ರ ಸುಮಾರಿನಲ್ಲಿ ಓರ್ವ ಅಧ್ಯಾಪಕರು ಪಾಠ ಹೇಳುತ್ತಿದ್ದು, ನಂತರ ಅಲ್ಲಿನ ಪ್ರತಿಷ್ಠಿತ ಮನೆಯನದ ಪಟ್ಟತ್ತಮೊಗರು ಮನೆಯ ಚಾವಡಿಯಲ್ಲಿ ಪಾಠ ಹೇಳುತ್ತಿದ್ದ ನೆನಪನ್ನು ಹಿರಿಯರು ಹೇಳುತ್ತಾರೆ.

ಬಳಿಕ 1924 ರಲ್ಲಿ ಈ ಪಂಚಾಯತಿನ ಕೆಲವು ಗ್ರಾಮಗಳಲ್ಲಿ ಬೋರ್ಡು ಶಾಲೆಗಳು ಎಂಬ ಹೆಸರಿನಲ್ಲಿ ಪ್ರಾಥಮಿಕ ಶಾಲೆಗಳು ಸ್ಥಾಪಿಸಲ್ಪಟ್ಟು ವಿದ್ಯಾಭ್ಯಾಸಕ್ಕೆ ಉತ್ತೇಜನ ದೊರಕಿದುದಾಗಿ ಕಾಣಬಹುದು. ಈ ರೀತಿಯಲ್ಲಿ ಮುಂದುವರಿಯುತ್ತಾ ಬಂದ ವಿದ್ಯಾಭ್ಯಾಸ ಕ್ಷೇತ್ರವು 1939ರ ಕಾಲಘಟ್ಟದಲ್ಲಿ ಪ್ರೋತ್ಸಾಹ ವಿಸ್ತಾರಗೊಂಡುದುದಾಗಿ ತಿಳಿದು ಬರುತ್ತದೆ. ಉದಾಹರಣೆ : ಕುಳೂರು ಸರಕಾರ ಸ್ಥಾಪಿಸಲ್ಪಟ್ಟ ಶಾಲೆಯು ಒಳಗೊಂಡಿದೆ. ವಿದ್ಯಾವರ್ಧಕ ಯು.ಪಿ. ಮೀಯಪದವು ಶಾಲೆಯು 1939ರಲ್ಲಿ ಸ್ಥಾಪಿಸಲ್ಪಟ್ಟಿದ್ದು ಆಗಿದೆ. ಇದಲ್ಲದೆ ಮುಡಂಬೈಲು ಸರಕಾರಿ ಪ್ರಾಥಮಿಕ ಶಾಲೆಯ ಸ್ಥಾಪಕರೂ ಆಗಿದ್ದ ನಾರಾಣಪ್ಪಯ್ಯ ಮಾಸ್ಟರ್‌ರವರು ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದ ಬಳಿಕ ಮೀಯಪದವು ಶಾಲೆಯ ಸ್ಥಾಪನೆಗೆ ಕಾರಣೀಭೂತರಾದರು. 1939ರಲ್ಲಿ ಈ ಮಧ್ಯೆ ದಾಖಲೆಗಳ ಪ್ರಕಾರ 1943ರಲ್ಲಿ ಸ್ಥಾಪಿಸಲ್ಪಟ್ಟಿತ್ತು ಎನ್ನುವ ಕೋಳಿಯೂರು ಶ್ರೀ ಶಂಕರನಾರಾಯಣ ಅನುದಾನಿತ ಪ್ರಾಥಮಿಕ ಶಾಲೆಯು ಇದಕ್ಕಿಂತ ಎಷ್ಟೋ ಹಿಂದಿನಿಂದಲೇ ಖಾಸಗೀ ಮನೆಗಳಲ್ಲಿ ಪಾಠ ಪ್ರವಚನಾದಿಗಳನ್ನು ನಡೆಸುತ್ತಿದ್ದುವು ಎನ್ನುತ್ತಿದ್ದ ಹಿರಿಯರ ಮಾತು. 1898ರಲ್ಲಿ ಸ್ಥಾಪಿಸಲ್ಪಟ್ಟ ಕಳಿಯೂರು ಸೈಂಟ್ ಜೋಸೆಫ್ ಎಲ್.ಪಿ. ಶಾಲೆಯೂ ಇದಕ್ಕಿಂತ ಮೊದಲೇ ಪದಂಜಿಬೈಲಿನ ರುಜಾರಿ ಸೋಜರ ಮನೆಯ ಬಳಿ ಮುಳಿಹುಲ್ಲಿನ ಶೆಡ್ಡ್‌ನಲ್ಲಿ ಓರ್ವ ಅಧ್ಯಾಪಕರು ಪಾಠ ಹೇಳುತ್ತಿದ್ದರು ಎಂದು ಹಿರಿಯರು ಹೇಳುತ್ತಿದ್ದರು. ಈಗ ನಮ್ಮ ಪಂಚಾಯತಿನಲ್ಲಿರುವ ಏಕಮಾತ್ರ ಹೈಸ್ಕೂಲು ಎಸ್.ವಿ.ವಿ. ಹೈಸ್ಕೂಲು ಮೀಯಪದವು 1966ರಲ್ಲಿ ಸ್ಥಾಪಿಸಲ್ಪಟ್ಟಿತು. ಈ ಪ್ರದೇಶದ ಕೆಲವು ಪ್ರಭಾವಿ ವ್ಯಕ್ತಿಗಳು ವಿದ್ಯಾ ಅಭಿವೃದ್ಧಿಯ ಬಗ್ಗೆ ಉತ್ಸಾಹಕರಾಗಿದ್ದರು ಎಂಬುದಕ್ಕೆ ಉದಾಹರಣೆ 1948ರಲ್ಲಿ ಸ್ಥಾಪಿಸಲ್ಪಟ್ಟ ವಾಣಿ ವಾಲಾಸ ಅನುದಾನಿತ ಪ್ರಾಥಮಿಕ ಶಾಲೆ ತೊಟ್ಟೆತ್ತೋಡಿ. ಇದರ ಸ್ಥಾಪನೆಗೆ ಕಾರ್ಯಭೂತರಾದವರೇ 1966ರಲ್ಲಿ ಎಸ್.ವಿ.ವಿ. ಹೈಸ್ಕೂಲನ್ನು ಸ್ಥಾಪಿಸಲು ಮುಂದಾದರು.

ಈಗ ನಮ್ಮೀ ಪಂಚಾಯತಿನಲ್ಲಿ ಅನುದಾನಿತ ಕ್ಷೇತ್ರದಲ್ಲಿ ಇನ್ನೂ ಎರಡು ಪ್ರಾಥಮಿಕ ಶಾಲೆಯೂ ಎರಡು ಹಿರಿಯ ಪ್ರಾಥಮಿಕ ಶಾಲೆಗಳು /ಪ್ರೌಢ ಪ್ರಾಥಮಿಕ ಶಾಲೆಯು ಪ್ರವರ್ತಿಸುತ್ತಿದ್ದರೆ ಸರಕಾರ ಕ್ಷೇತ್ರದಲ್ಲಿ ಮೂರು ಕಿರಿಯ ಪ್ರಾಥಮಿಕ ಶಾಲೆಗಳು /ಪ್ರೌಢ ಪ್ರಾಥಮಿಕ ಶಾಲೆಯು ಪ್ರವರ್ತಿಸುತ್ತಿದ್ದರೆ ಸರಕಾರ ಕ್ಷೇತ್ರದಲ್ಲಿ ಮೂರು ಕಿರಿಯ ಪ್ರಾಥಮಿಕ ಶಾಲೆಗಳೂ ಎರಡು ಹಿರಿಯ ಪ್ರಾಥಮಿಕ ಶಾಲೆಯು ಪ್ರವರ್ತಿಸುತ್ತಿದೆ.

ಪಟ್ಟಿ 1 (A)

ಕ್ರ.ಸಂ.	ಶಾಲೆಯ ಹೆಸರು	ಸ್ಥಾಪಿಸಲ್ಪಟ್ಟ ಇಸವಿ	ಮೆನೇಜ್‌ಮೆಂಟ್	ವಿದ್ಯಾರ್ಥಿಗಳು			ಅಧ್ಯಾಪಕರು		
				ಗಂಡು	ಹೆಣ್ಣು	ಒಟ್ಟು	ಇರುವಂತದ್ದು	ಖಾಲಿ ಹುದ್ದೆ	ಒಟ್ಟು
1.	ವಿದ್ಯಾವರ್ಧಕ ಯು.ಪಿ. ಶಾಲೆ ಮೀಯಪದವು	1939	ಅನುದಾನಿತ	238 312	445 259	483 571	28		
2.	ವಿದ್ಯಾವರ್ಧಕ ಹೈಸ್ಕೂಲು ಮೀಯಪದವು	1966	ಅನುದಾನಿತ	238	219	457	20	—	20
3.	ವಾಣಿವಿಲಾಸ ಎಲ್.ಪಿ. ಶಾಲೆ ತೊಟ್ಟತ್ತೋಡಿ	1948	ಅನುದಾನಿತ	87	101	188	7	—	7
4.	ಸೈಂಟ್ ಜೋಸೆಫ್ ಎಯುಪಿ ಶಾಲೆ ಕಳಿಯೂರು	1898	ಅನುದಾನಿತ	217 167	222 169	439 336	19	1	20
5.	ಶ್ರೀ ಶಂಕರನಾರಾಯಣ ಎಲ್.ಪಿ. ಶಾಲೆ ಕೋಳಿಯೂರು	1943	ಅನುದಾನಿತ	84	64	148	5	—	5
6.	ಸರಕಾರಿ ಎಲ್.ಪಿ. ಶಾಲೆ ಕುಳೂರು	1939	ಸರಕಾರಿ	57	45	102	4	—	4
7.	ಸರಕಾರಿ ಎಲ್‌ಪಿ ಶಾಲೆ ಮಜಿಬೈಲ್	1920	ಸರಕಾರಿ	66	84	150	6	—	6
8.	ಸರಕಾರಿ ಎಲ್‌ಪಿ ಶಾಲೆ ತಲೆಕೆಳ	1925	ಸರಕಾರಿ	47	44	91	4	—	4
9.	ಸರಕಾರಿ ಯುಪಿ ಶಾಲೆ ಎಲ್‌ಪಿ ಶಾಲೆ ಕಡಂಬಾರು	1925	ಸರಕಾರಿ	240 184	224 162	464 346	25	—	25
10.	ಸರಕಾರಿ ಯುಪಿ ಶಾಲೆ ಎಲ್‌ಪಿ ಶಾಲೆ ಮೂಡಂಬೈಲ್	1924	ಸರಕಾರಿ	81 75	59 69	140 144			

ಮೇಲಿನ ಪಟ್ಟಿಯಲ್ಲಿ ಸೂಚಿಸಿದಂತೆ ಒಟ್ಟು 10 ಶಾಲೆಗಳ ಪೈಕಿ ಒಂದು ಹೈಸ್ಕೂಲ್ 4 ಹಿರಿಯ ಪ್ರಾಥಮಿಕ ಶಾಲೆಗಳು 5 ಕಿರಿಯ ಪ್ರಾಥಮಿಕ ಶಾಲೆಗಳು ಈ ಪಂಚಾಯತ್ ಪರಿಧಿಯಲ್ಲಿವೆ. ಒಟ್ಟು 4021 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ.

ಪಂಚಾಯತಿನ 4 ಯು.ಪಿ. ಶಾಲೆಗಳಲ್ಲಿ 1996-97ರ ಅಂಕೆ ಸಂಖ್ಯೆಗಳ ಮೇರೆಗೆ 456 ವಿದ್ಯಾರ್ಥಿಗಳು ವಿದ್ಯಾಭ್ಯಾಸ ಪೂರ್ತಿಗೊಳಿಸಿ ಹೈಸ್ಕೂಲು ವಿದ್ಯಾಭ್ಯಾಸಕ್ಕಾಗಿ ಹೊರಬರುತ್ತಿದ್ದಾರೆ. ಆದರೆ 8ನೇ ತರಗತಿಯಲ್ಲಿ ಸೇರಿಸಲು ಅವಕಾಶವಿರುವ ಹೈಸ್ಕೂಲುಗಳ ಸಂಖ್ಯೆ ಕೇವಲ 1 ಮಾತ್ರ

1996-97ರ ಅಂಕೆ ಸಂಖ್ಯೆಗಳ ಮೇರೆಗೆ ಪಂಚಾಯತಿನಲ್ಲಿ 8ನೇ ತರಗತಿಯಲ್ಲಿ ಕಲಿಯಲು ವಿದ್ಯಾರ್ಥಿಗಳ ಸಂಖ್ಯೆ 184 ಇದನ್ನು ಕೆಳಗಿನ ಪಟ್ಟಿಯಲ್ಲಿ ನೋಡಬಹುದು.

ಪಟ್ಟಿ

7ನೇ ತರಗತಿಯಲ್ಲಿ ಸಂಖ್ಯೆ	8ನೇ ತರಗತಿಯಲ್ಲಿ ಸಂಖ್ಯೆ
456	184

ನಮ್ಮ ಪಂಚಾಯತಿನಲ್ಲಿ ಹೈಸ್ಕೂಲು ವ್ಯಾಸಂಗ ಮಾಡಲು ಅವಕಾಶ ಇಲ್ಲದುದರಿಂದ ಹೊರಗಿನ ಪಂಚಾಯತನ್ನು ಆಶ್ರಯಿಸುವ ಸಂಕಷ್ಟ ನಮ್ಮ ಪಂಚಾಯತಿನ ವಿದ್ಯಾರ್ಥಿಗಳದ್ದಾಗಿದೆ.

ತಾಂತ್ರಿಕ ವಿದ್ಯಾಭ್ಯಾಸ ಸಂಸ್ಥೆಗಳು ನಮ್ಮ ಪಂಚಾಯತಿನಲ್ಲಿ ಉನ್ನತ ವಿದ್ಯಾಭ್ಯಾಸಕ್ಕಿರುವ ವಿದ್ಯಾಸಂಸ್ಥೆಗಳು ಇಲ್ಲದಿದ್ದರೂ ನೆರೆಯ ಪಂಚಾಯತ್ ಆದ ಮಂಜೇಶ್ವರದಲ್ಲಿ ಗೋವಿಂದ ಪೈ ಮೆಮೋರಿಯಲ್ ಸರಕಾರೀ ಕಾಲೇಜ್ ಇದೆ. ಆದರೆ ಭಾಷಾ ಅಲ್ಪಸಂಖ್ಯಾತರಾದ ಈ ಪ್ರದೇಶದ ಮಕ್ಕಳು ಕನ್ನಡ ಮಾಧ್ಯಮದಲ್ಲಿ ವಿದ್ಯಾಭ್ಯಾಸ ಪಡೆಯುವುದಾದರೂ ಈ ಕಾಲೇಜಿನಲ್ಲಿ ಇರುವ ಸಿಬ್ಬಂದಿಗಳು, ಉಪನ್ಯಾಸಕರು ಹೆಚ್ಚಿನವರು ಮಳೆಯಾಲ ಭಾಷಾ ಪರಿಜ್ಞಾನವುಳ್ಳವರಾಗಿದ್ದು ಕನ್ನಡ ಬಲ್ಲವರು ಅಲ್ಲದ ಕಾರಣದಿಂದಲೂ ವಿದ್ಯಾರ್ಥಿಗಳಿಗೆ ಅಧ್ಯಾಪಕರೊಂದಿಗೆ ಹೊಂದಿಕೊಂಡು ವಿದ್ಯಾರ್ಜನೆ ಮಾಡಲು ಕಷ್ಟವಾದುದರಿಂದಲೂ ವಿದ್ಯಾಭ್ಯಾಸಕ್ಕೆ ಸಾಕಷ್ಟು ಸೌಕರ್ಯ ಇಲ್ಲದಿರುವುದರಿಂದಲೂ ಉನ್ನತ ವಿದ್ಯಾಭ್ಯಾಸಕ್ಕಾಗಿ ನೆರೆರಾಜ್ಯವಾದ ಕರ್ನಾಟಕವನ್ನು ಆಶ್ರಯಿಸದೆ ನಿರ್ವಾಹ ಇಲ್ಲವಾಗಿದೆ.

ಸದ್ರಿ ಸಂಖ್ಯೆಯ ವಿದ್ಯಾರ್ಥಿಗಳು ವೈದ್ಯಕೀಯ ತಾಂತ್ರಿಕ ತರಬೇತಿಗಳಿಗೆ ಉದ್ಯೋಗ ಆಧಾರಿತ ಶಿಕ್ಷಣಗಳಿಗಾಗಿ ಈ ಪಂಚಾಯತಿನಲ್ಲಿ ಅಥವಾ ಸನಿಹದ ಪಂಚಾಯತುಗಳಲ್ಲಿ ಯಾವುದೇ ಸಂಸ್ಥೆಗಳಿಲ್ಲದ ಕಾರಣ ನೆರೆ ರಾಜ್ಯವಾದ ಕರ್ನಾಟಕದ ಮೊರೆ ಹೋಗುತ್ತಿದ್ದಾರೆ.

ಶೈಕ್ಷಣಿಕ ಸೌಕರ್ಯಗಳು	ಲೈಬ್ರರಿ	ಲ್ಯಾಬ್	ಪಠಣ ಉಪಕರಣಗಳು	ರೇಡಿಯೋ	ಟೇಪ್ ರೆಕಾರ್ಡರ್	TV	ಸಿನಿಡ ಪ್ರೊಜೆಕ್ಟ್	ಓವರ್ ಹೆಡ್ ಪ್ರೊಜೆಕ್ಟ್	ಕಂಪ್ಯೂಟರ್	ಮಾತೃ ಸಂಗಮ	PTA
ಇರುವ ಶಾಲೆಗಳ ಸಂಖ್ಯೆ	4	5	8	4	5	—	—	1	—	8	8
ಇಲ್ಲದ ಶಾಲೆಗಳ ಸಂಖ್ಯೆ	6	5	2	6	5	10	10	9	10	2	2

ಹೆಚ್ಚಿನ ಶಾಲೆಗಳಲ್ಲಿ ಲೈಬ್ರರಿ ಇತ್ಯಾದಿ ಶೈಕ್ಷಣಿಕ ಸೌಲಭ್ಯದ ಕೊರತೆ ಎದ್ದು ಕಾಣುತ್ತದೆ. ಪಟ್ಟಿ IIIರ ಪ್ರಕಾರ 10 ಶಾಲೆಗಳ ಪೈಕಿ ನಾಲ್ಕರಲ್ಲಿ ಲೈಬ್ರೆರಿ ಇದ್ದರೆ 6 ಶಾಲೆಗಳಲ್ಲಿ ಲೈಬ್ರರಿ ಇಲ್ಲದ ಶಾಲೆಗಳಾಗಿವೆ. 10 ಶಾಲೆಗಳ ಪೈಕಿ 5 ಶಾಲೆಗಳಲ್ಲಿ ಲ್ಯಾಬೋರೇಟರಿ ಎಂಬುದೇ ಇಲ್ಲ. 2 ಶಾಲೆಗಳಲ್ಲಿ ಪಠಣೋಪಕರಣಗಳು ತೀರಾ ಇಲ್ಲ. ಉಳಿದ 8 ಶಾಲೆಗಳಲ್ಲಿ ಸಾಕಷ್ಟು ಇಲ್ಲ. ನಾಲ್ಕು ಶಾಲೆಗಳಲ್ಲಿ ರೇಡಿಯೋ ಅಳವಡಿಸಿದ್ದಾರೆ. 6ರಲ್ಲಿ ಇಲ್ಲ 5 ಶಾಲೆಗಳಲ್ಲಿ ಟೇಪ್‌ರೆಕಾರ್ಡ್ ಸೌಲಭ್ಯ ಇಲ್ಲ. TV ಇತ್ಯಾದಿ ಆಧುನಿಕ ಉಪಕರಣಗಳು ಇಲ್ಲ. 10ರಲ್ಲಿ 1 ಶಾಲೆಯಲ್ಲಿ ಮಾತ್ರ ಸ್ಲೈಡ್ ಪ್ರೊಜೆಕ್ಟರ್ ಇದೆ. ಹೆತ್ತವರಲ್ಲಿ ಬಂಧ ಏರ್ಪಡಿಸುವ ಮಾತೃ ಸಂಗಮ PTAಗಳು 2 ಶಾಲೆಗಳಲ್ಲಿ ಇಲ್ಲ.

ಪಟ್ಟಿ 1 (B)

ಒಟ್ಟು ವಿದ್ಯಾರ್ಥಿಗಳು	ಎಲ್‌ಪಿ ಶಾಲೆ			ಯುಪಿ ಶಾಲೆ			ಹೈಸ್ಕೂಲು		
	ಗಂಡು	ಹೆಣ್ಣು	%	ಗಂಡು	ಹೆಣ್ಣು	%	ಗಂಡು	ಹೆಣ್ಣು	%
	1111	1060	48.9%	744	649	46.6%	238	219	47.9%

ಪಟ್ಟಿ 1 (C)

ಎಲ್‌ಪಿ ಶಾಲೆ			ಯುಪಿ ಶಾಲೆ			ಹೈಸ್ಕೂಲ್		
ಒಟ್ಟು	SC/ST	%	ಒಟ್ಟು	SC/ST	%	ಒಟ್ಟು	SC/ST	%
2171	173	8%	1393	150	10.8%	457	33	7.2%

ಮೇಲಿನ ತಖ್ತೆಯ ಆಧಾರದಂತೆ ಒಟ್ಟು ವಿದ್ಯಾರ್ಥಿಗಳ ಪೈಕಿ 8.9% SC ST ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ.

ಪಟ್ಟಿ 1 (D)

SC/ST			ಉಳಿದವರು ಒಟ್ಟು			
ಗಂಡು	ಹೆಣ್ಣು	ಒಟ್ಟು	ಗಂಡು	ಹೆಣ್ಣು	ಒಟ್ಟು	
8	—	8	49	19	68	
					ಒಟ್ಟು	76

ಸಾಮೂಹಿಕ ಸಾಂಪತ್ತಿಕ ಕಾರಣಗಳಿಂದಾಗಿ ಸಣ್ಣ ಶತಮಾನ ವಿದ್ಯಾರ್ಥಿಗಳು ಅರ್ಧದಲ್ಲಿ ವಿದ್ಯಾಭ್ಯಾಸ ನಿಲ್ಲಿಸಿರುವರು.

ಒಟ್ಟು ಇರುವ 10 ಶಾಲೆಗಳ ಪೈಕಿ 5 ಸರಕಾರಿ ಶಾಲೆಗಳು 5 ಅನುದಾನಿತ ಶಾಲೆಗಳು ಇವೆ. ಸರಕಾರಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ವಿವರಗಳನ್ನು ಪಟ್ಟಿ 2ರಲ್ಲಿ ಸೂಚಿಸಲಾಗಿದೆ.

ಪಟ್ಟಿ - 2

ಸರಕಾರಿ ಶಾಲೆಗಳ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು					
ಒಟ್ಟು ವಿದ್ಯಾರ್ಥಿಗಳು	5 ಸರಕಾರಿ ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆ	%	ಒಟ್ಟು ಅಧ್ಯಾಪಕರು	ಸರಕಾರಿ ಶಾಲೆಗಳ ಅಧ್ಯಾಪಕರು	%
4021	1437	35.8%	128	49	38.3%

ಸರಕಾರಿ ಅನುದಾನಿತ ಶಾಲೆಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಪಡೆಯಲು ಇಲ್ಲಿನ ಜನರು ಉತ್ಸುಕರಾಗಿದ್ದಾರೆ. ಆದರೆ ಶಾಲೆಗಳಲ್ಲಿ ಭೋದನೆಯ ಮಟ್ಟ ಕುಸಿದಿರುವುದರಿಂದಲೂ ಶಿಸ್ತುಬದ್ಧ ವಿದ್ಯಾಭ್ಯಾಸದ ಕೊರತೆ ಇರುವುದರಿಂದಲೂ ಈ ಪಂಚಾಯತಿನ ಪ್ರದೇಶಗಳಲ್ಲಿ 100ಕ್ಕೂ ಮಿಕ್ಕಿದ ಮಕ್ಕಳು ಇತರ ಪಂಚಾಯತಿನ ಇಂಗ್ಲೀಷ್ ಮೀಡಿಯಂ ಶಾಲೆಗಳಿಗೆ ಹೋಗುತ್ತಿದ್ದಾರೆ. ಈ ಪಂಚಾಯತ್ ಪರಿಧಿಯಲ್ಲಿ ಇಂಗ್ಲೀಷ್ ಮೀಡಿಯಂ ಶಾಲೆಗಳು ಇಲ್ಲ. ನಮ್ಮ ಪಂಚಾಯತ್ ಪರಿಧಿಯಲ್ಲಿ 2 ವಾರ್ಡುಗಳಲ್ಲಿ ಮಾತ್ರ ಅಂಗನವಾಡಿಗಳಿದ್ದರೂ ಅವುಗಳ ಸ್ಥಿತಿ ಶೋಚನೀಯ (ಕಟ್ಟಡ ಪರ್ನಿಚರ್, ಕುಡಿಯುವ ನೀರು) ಇಲ್ಲದಾಗಿದೆ. ಉಳಿದ ವಾರ್ಡುಗಳಲ್ಲಿ ಅಂಗನವಾಡಿಗಳು, ಬಾಲವಾಡಿಗಳು ಇಲ್ಲ. ಆದ್ದರಿಂದಲೇ 3ರಿಂದ 5 ವರ್ಷಗಳ ವರೆಗೂ ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗೆ ಕಳುಹಿಸಲು ಹೆತ್ತವರು ಪ್ರೇರಿತರಾಗುತ್ತಾರೆ.

ಪಟ್ಟಿ IV

		ಒಟ್ಟು ವಿದ್ಯಾರ್ಥಿಗಳು	ಒಟ್ಟು ಅಧ್ಯಾಪಕರು	ಒಟ್ಟು ಮೂತ್ರಾಲಯ	ಒಟ್ಟು ಕಕ್ಕುಸು	ಕುಡಿಯುವ ನೀರು	ವಿದ್ಯುತ್
1	ವಿದ್ಯಾವರ್ಧಕ ಯು.ಪಿ. ಶಾಲೆ ಮೀಯಪದವು	1016	28	ಇಲ್ಲ	1	ಇಲ್ಲ	ಇದೆ
2.	ವಿದ್ಯಾವರ್ಧಕ ಹೈಸ್ಕೂಲು ಮೀಯಪದವು	457	20	2	1	ಇದೆ	ಇದೆ
3.	ವಾಣಿ ವಿಲಾಸ ಎ.ಎಲ್.ಪಿ. ಶಾಲೆ ತೊಟ್ಟೆತ್ತೊಡಿ	188	7	1	ಇಲ್ಲ	ಇದೆ	ಇದೆ
4.	ಸೈಂಟ್ ಜೋಸೆಫ್ ಎ.ಯು.ಪಿ. ಶಾಲೆ ಕಳಿಯೂರು	775	19	1	1	ಇದೆ	ಇದೆ
5.	ಶ್ರೀ ಶಂಕರನಾರಾಯಣ ಎ.ಎಲ್.ಪಿ. ಶಾಲೆ ಕೊಳ್ಯೂರು	148	5	ಇಲ್ಲ	ಇಲ್ಲ	ಇದೆ	ಇಲ್ಲ
6.	ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಕುಳೂರು	102	4	2	1	ಇದೆ	ಇಲ್ಲ
7.	ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಮಜಿಬೈಲು	150	6	1	1	ಇದೆ	ಇಲ್ಲ
8.	ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ತಲೆಕಳ	91	4	ಇಲ್ಲ	ಇಲ್ಲ	ಇದೆ	ಇಲ್ಲ
9.	ಸರಕಾರಿ ಯುಪಿ ಶಾಲೆ ಮೂಡಂಬೈಲು	284	10	ಇಲ್ಲ	ಇಲ್ಲ	ಇದೆ	ಇಲ್ಲ
10.	ಸರಕಾರಿ ಯು. ಪಿ. ಶಾಲೆ ಕಡಂಬಾರು	810	25	1	2	ಇದೆ	ಇಲ್ಲ

ಪಟ್ಟಿ IVರಲ್ಲಿ ತೋರಿಸಿದಂತೆ ಪ್ರಾಥಮಿಕ ಸೌಕರ್ಯಗಳು ಸಾಕಷ್ಟು ಇಲ್ಲ ಎನ್ನದೆ ನಿರ್ವಾಹ ಇಲ್ಲ. 10 ಶಾಲೆಗಳ ಪೈಕಿ 4 ಶಾಲೆಗಳಲ್ಲಿ ಮೂತ್ರಾಲಯ ಮತ್ತು ಪಾಯಿಖಾನೆ ಸೌಲಭ್ಯಗಳಿಲ್ಲ. ಕುಡಿಯುವ ನೀರಿನ ಸೌಲಭ್ಯ 1 ಶಾಲೆಯಲ್ಲಿ ಇಲ್ಲ 6 ಶಾಲೆಗಳಲ್ಲಿ ವಿದ್ಯುತ್ ಸಂಪರ್ಕ ಸೌಲಭ್ಯ ಇಲ್ಲ.

ಶಾಲೆ	91-92	92-93	93-94	94-95	95-96
S.V.V. High School Miyapadavu	27%	20%	34%	40%	30%

ಈ ಪಂಚಾಯತಿನಲ್ಲಿರುವ ಏಕಮಾತ್ರ 1966ರಲ್ಲಿ ಸ್ಥಾಪಿಸಲ್ಪಟ್ಟ ಸುಮಾರು 2 ದಶಕಗಳಷ್ಟು ಕಾಲ ಸಾದಾರಣ ಉತ್ತಮ ಫಲಿತಾಂಶ ಬರುತ್ತಿದ್ದರೂ ಬಳಿಕ ಫಲಿತಾಂಶ ಉತ್ತಮ ಗೊಂಡರೂ ಪುನಃ ಫಲಿತಾಂಶ ಕುಸಿಯತೊಡಗಿದೆ. ಇದನ್ನು ಪಟ್ಟಿ Vರಲ್ಲಿ ಕಾಣಬಹುದು. 91-92ರಲ್ಲಿ 27% ಶತಮಾನ ಫಲಿತಾಂಶ ಬಂದರೂ 92-93ರಲ್ಲಿ ಅದು 20%ಕ್ಕೆ ಕುಸಿಯಿತು. 93-94 ಶತಮಾನಕ್ಕೆ ಮಾತ್ರ 94-95ರಲ್ಲಿ 40 ಶತಮಾನಕ್ಕೆ

ವರ್ಧಿಸಿದರೂ 95-96ರಲ್ಲಿ 30 ಶತಮಾನಕ್ಕೆ ಕುಸಿಯಿತು.

ಕ್ಲಾಸುಗಳು	30% ಮಾರ್ಕ್‌ನಲ್ಲಿ ಉತ್ತೀರ್ಣರಾದವರು	30% - 40 %	40% - 50%	50% - 60%	60% ರ ಮೇಲೆ
III	68	166	92	92	136
IV	59	168	115	77	83
V	64	163	113	62	67
VI	54	194	79	78	73
VII	50	165	91	69	51
VIII	134	12	5	4	4
IX	118	14	10	6	8
X	73	15	13	3	4

1995-96ರಲ್ಲಿ ಹೈಸ್ಕೂಲು ವಿದ್ಯಾರ್ಥಿಗಳು ಪಡೆದ ಅಂಕಗಳಿಂದ ಇದನ್ನು ಇನ್ನು ಸ್ಪಷ್ಟವಾಗಿ ಕಾಣಬಹುದು. VIIನೆಯ ತರಗತಿಯಲ್ಲಿ ಪರೀಕ್ಷೆಗೆ ಕುಳಿತ 159 ಮಕ್ಕಳಲ್ಲಿ 139 ವಿದ್ಯಾರ್ಥಿಗಳು ಪಡೆದ ಅಂಕ 30%ಕ್ಕಿಂತ ಕೆಳಗಿನದ್ದಾಗಿದೆ. ಅದೇ ರೀತಿ 9ನೇ ತರಗತಿಯಲ್ಲಿ 156 ಮಕ್ಕಳಲ್ಲಿ 118 ಮಕ್ಕಳು SSLCಯಲ್ಲಿ 108 ಮಕ್ಕಳಲ್ಲಿ 73 ಮಕ್ಕಳು 30%ಕ್ಕಿಂತ ಕೆಳಗಿನ ಅಂಕ ಪಡೆದವರಾಗಿದ್ದಾರೆ. ಇದರಿಂದ ಇನ್ನು ಸ್ಪಷ್ಟವಾಗಿ ವಿದ್ಯಾಭ್ಯಾಸದ ಮಟ್ಟವನ್ನು ಕಾಣಬಹುದು. ಇದಕ್ಕೆ ಮುಖ್ಯ ಕಾರಣ ಉತ್ತಮ ರೀತಿಯ ಬೋಧನೆಯ ಕೊರತೆಯಾಗಿದೆ. ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲಾ ಮಟ್ಟದಲ್ಲಿ ಅಂಕಗಳ ಆಧಾರ ಕಡೆಗಣಿಸಿ ಹೆಚ್ಚಿನ ವಿದ್ಯಾರ್ಥಿಗಳನ್ನು ತೇರ್ಗಡೆ ಹೊಂದಿಸುವ ಸರಕಾರದ ವ್ಯವಸ್ಥೆಯು ವಿದ್ಯಾರ್ಥಿಗಳಲ್ಲಿ ಕಲಿಯುವಿಕೆ ಉದಾಸೀನತೆಯನ್ನು ಸೃಷ್ಟಿಸುತ್ತದೆ. ಈ ಮನೋಭಾವ ಅಧ್ಯಾಪಕರಲ್ಲೂ ಕಲಿಸದಿದ್ದರೂ ತೇರ್ಗಡೆಯ ಸಮಸ್ಯೆ ಉದ್ಭವಿಸುವುದಿಲ್ಲ ಎಂಬ ಉದಾಸೀನ ಮನೋಭಾವ ಬೆಳೆದು ಬರಲು ಕಾರಣವಾಗುತ್ತದೆ. ಇದೆಲ್ಲಾ ವಿದ್ಯಾಮಟ್ಟ ಕುಸಿಯಲು ಕಾರಣವಾಗಿದೆ.

ನಮ್ಮ ಪಂಚಾಯತಿನ ಹೆಚ್ಚಿನ ಶಾಲೆಗಳಲ್ಲಿ ಆಟೋಟ ಶಾರೀರಿಕ ಶಿಕ್ಷಣಕ್ಕೆ ಸಾಕಷ್ಟು ಆಟದ ಬಯಲಿನ ಸ್ಥಳಾವಕಾಶ ಇಲ್ಲ. ಅನುದಾನಿತ 5 ಶಾಲೆಗಳ ಪೈಕಿ 1ರಲ್ಲೂ ಉಳಿದ 5 ಸರಕಾರಿ ಶಾಲೆಗಳ 2ರಲ್ಲಿ ತೀರಾ ಇಲ್ಲದಾಗಿದ್ದು ಉಳಿದ ಮೂರರಲ್ಲಿ ಸಾಕಷ್ಟು ಆಟದ ಬಯಲು ಇದ್ದರೂ ಸಾಕಷ್ಟು ಸ್ಥಳಾವಕಾಶ ಇಲ್ಲ. ಶಾಲಾ ವಠಾರವನ್ನೇ ರಕ್ಷಿಸುವ ಸುತ್ತಗೋಡೆಯ 5 ಸರಕಾರಿ ಶಾಲೆಗಳಲ್ಲೂ / ಅನುದಾನಿತ ಶಾಲೆಯಲ್ಲೂ ಇಲ್ಲ. ಪೀಠೋಪಕರಣ ದುರಸ್ಥಿಯ ಕಾರ್ಯವೂ ಅನುದಾನಿತ ಶಾಲೆಗಳಲ್ಲಿ ಸಮರ್ಪಕವಾಗಿ ನಡೆದಿದ್ದು ಸರಕಾರಿ ಶಾಲೆಗಳಲ್ಲಿ 1ರಲ್ಲಿ ಬಿಟ್ಟರೆ ಉಳಿದ 4ರಲ್ಲಿ ಸಮರ್ಪಕವಾಗಿ ನಡೆದಿಲ್ಲ. ಸರಕಾರಿ ಶಾಲೆಗಳ ಪೈಕಿ ಮಜಿಬೈಲು ಶಾಲೆಯ ಕಟ್ಟಡಕ್ಕೆ ಸೂಕ್ತವಾದ ಗೋಡೆಗಳೂ ಇಲ್ಲದ ಸ್ಥಿತಿಯಲ್ಲಿದೆ. ಈ ಎಲ್ಲಾ ಸಮಸ್ಯೆಗಳ ಮಧ್ಯೆ ವಿದ್ಯಾರ್ಥಿಗಳು ಅಧ್ಯಯನ ನಡೆಸಬೇಕಾಗಿದೆ.

100 ಶತಮಾನ ಸಾಕ್ಷರತಾ ರಾಜ್ಯವೆಂದು ಕೇರಳ ರಾಜ್ಯವು ಘೋಷಿಸಲ್ಪಟ್ಟಿದ್ದರೂ ನಮ್ಮ ಪಂಚಾಯತ್ ಸಾಕ್ಷರ ಪಂಚಾಯತ್ ಎಂದು ಹೇಳಲು ಸಾಧ್ಯವಿಲ್ಲ. ಸಂಸ್ಥಾನದ ಇತರ ಭಾಗಗಳಲ್ಲಿ ಸಾಕ್ಷರತೆಯ ಸ್ಫೂರ್ತಿದಾಯಕ ಕಾರ್ಯಕ್ರಮಗಳು ನಡೆಯುತ್ತಿದ್ದ ಸಂದರ್ಭದಲ್ಲೂ ನಮ್ಮ ಪಂಚಾಯತಿನಲ್ಲಿ ಸಮರ್ಪಕವಾಗಿ ಸಾಕ್ಷರತಾ ಕಾರ್ಯಕ್ರಮಗಳು ನಡೆದಿದೆ ಎನ್ನಲಾಗುವುದಿಲ್ಲ. ಪಂಚಾಯತ್ ಕೇಂದ್ರ ಮಟ್ಟದಲ್ಲಿ ಸಾಕ್ಷರತಾ ಕಾರ್ಯಕರ್ತರ ಪ್ರವರ್ತನದ ಚಟುವಟಿಕೆ ನಡೆಯುತ್ತಿದೆ ಎಂದು ತೋರುತ್ತಿದ್ದರೂ ತಳಮಟ್ಟಕ್ಕೆ ಅದು ಮುಟ್ಟಿಲ್ಲ ಎಂದೇ ಹೇಳಬಹುದು. ಅಕ್ಷರ ಜ್ಞಾನವಿಲ್ಲದ ಸ್ವಲ್ಪ ಸಂಖ್ಯೆಯ ಮಂದಿ ಅಕ್ಷರಾಭ್ಯಾಸ ಪಡೆದಿದ್ದರು. ಸಾಕ್ಷರತಾ ಚಟುವಟಿಕೆ ಮುಂದುವರಿಸಿ ಹೋಗಲಿಲ್ಲವಾದ್ದರಿಂದ ದೊರೆತ ಅಭ್ಯಾಸವೂ ಇಲ್ಲದಾಗಿದೆ.

ಗ್ರಾಮ ಸಭೆಗಳಿಂದ ಬಂದ ನಿರ್ದೇಶನಗಳು :

1. 2ನೇ ವಾರ್ಡಿನ ಮೀಯಪದವು, 6ನೇ ವಾರ್ಡಿನ ಕೋಳ್ಯೂರು ಮತ್ತು 8ನೇ ವಾರ್ಡಿನಲ್ಲಿ ಒಂದೊಂದು ಅಂಗನವಾಡಿ ಸ್ಥಾಪಿಸಬೇಕು.

2. 2ನೇ ವಾರ್ಡಿನ ಕೊಮ್ಮಂಗಳ, ಮೂರನೇ ವಾರ್ಡಿನ ಮಜಿಬೈಲು, 7ನೇ ವಾರ್ಡಿನ ಬೆಜ್ಜ ಮತ್ತು ಬಾಳ್ಯೂರಿನಲ್ಲಿ 9ನೇ ವಾರ್ಡಿನ ಮೊರತಣೆ, ಮದಂಗಲ್ಲು ಕಟ್ಟೆ, ಕೆಡಂಬಾರು ಮತ್ತು ದುರ್ಗಿಪಳ್ಳ, ಬಟ್ಯಪದವು, ಕೋಳ್ಯೂರು ಪದವು, ಸಸಿಗೋಳಿ ಒಟ್ಟು 11 ಬಾಲವಾಡಿ ಸ್ಥಾಪನೆ.

3. 1ನೇ ವಾರ್ಡಿನ ಸಂತಡ್ಕ 2ನೇ ವಾರ್ಡಿನ ಕೊಮ್ಮಂಗಳ 4ನೇ ವಾರ್ಡಿನ ಬಾಣಬೆಟ್ಟು 5ನೇ ವಾರ್ಡಿನ ಬಟ್ಯಪದವು 7ನೇ ವಾರ್ಡಿನ ಬೆಜ್ಜ 9ನೇ ವಾರ್ಡಿನ ಬಾಬಲಿಕೆಯಲ್ಲಿ L.P. ಶಾಲೆ.

4. 1ನೇ ವಾರ್ಡಿನ ಕುಳೂರು L.P. ಶಾಲೆಯನ್ನು U.P.ಯಾಗಿ ಭಡ್ತಿ
   3ನೇ ವಾರ್ಡಿನ ಮಜಿಬೈಲ್ L.P. ಶಾಲೆಯನ್ನು U.P.ಯಾಗಿ ಭಡ್ತಿ
   4ನೇ ವಾರ್ಡಿನ ತಲೆಕಳ L.P. ಶಾಲೆಯನ್ನು U.P. ಯಾಗಿ ಭಡ್ತಿ
   6ನೇ ವಾರ್ಡಿನ ಕೋಳ್ಯೂರು L.P. ಶಾಲೆಯನ್ನು U.P.ಯಾಗಿ ಭಡ್ತಿ

5. 5ನೇ ವಾರ್ಡಿನ ಕಳಿಯೂರು U.P. ಶಾಲೆಯನ್ನು ಹೈಸ್ಕೂಲ್ ಆಗಿ ಭಡ್ತಿ.
   7ನೇ ವಾರ್ಡಿನಲ್ಲಿ ಮೂಡಂಬೈಲು U.P. ಶಾಲೆಯನ್ನು ಹೈಸ್ಕೂಲ್ ಆಗಿ ಭಡ್ತಿ
   9ನೇ ವಾರ್ಡಿನ ಕಡಂಬಾರು UP ಶಾಲೆಯನ್ನು ಹೈಸ್ಕೂಲಾಗಿ ಭಡ್ತಿ

6. 8ನೇ ವಾರ್ಡಿನಲ್ಲಿ ವೇದ ವಿದ್ಯಾಕೇಂದ್ರ ಮತ್ತು ಯೋಗಶಾಲೆಗಳ ಸ್ಥಾಪನೆ.
   ಕಡಂಬಾರು U.P. ಶಾಲೆಗೆ ಸಾಕಷ್ಟು ಶಾಲಾ ಕೊಠಡಿಗಳನ್ನು ನಿರ್ಮಿಸುವುದು.

ಆಂಗ್ಲ ಮಾಧ್ಯಮದ ಹೆಸರಿನಲ್ಲಿ ಖಾಸಗಿ ವಿದ್ಯಾಸಂಸ್ಥೆಗಳ ವಿದ್ಯಾಬ್ಯಾಸವನ್ನು ಸಂಪನ್ನ ಕುಟುಂಬದ ವಿದ್ಯಾರ್ಥಿಗಳಲ್ಲದೆ ಇತರರಿಗೂ ಪಡೆಯಲು ಅಸಾಧ್ಯವಾದುದರಿಂದ ಸರಕಾರದ ನಿಯಂತ್ರಣವಿರುವ ಶಾಲೆಗಳ ವಿದ್ಯಾಮಟ್ಟವನ್ನು ಉತ್ತಮಗೊಳಿಸಿ ವಿದ್ಯಾರ್ಥಿಗಳನ್ನು ಆಕರ್ಷಿಸಲು ಪ್ರಯತ್ನಿಸುವುದು.

ಭಾಷಾ ಅಲ್ಪಸಂಖ್ಯಾತ ಪ್ರದೇಶವಾದ ಈ ಭಾಗದ ಶಾಲೆಗಳಿಗೆ ಕನ್ನಡ ಪಠ್ಯ ಪುಸ್ತಕಗಳು ಸಕಾಲದಲ್ಲಿ ಒದಗಿಸಲ್ಪಡುವುದಿಲ್ಲ. ಕೆಲವೊಮ್ಮೆ 6 ತಿಂಗಳು ಕಳೆದರೂ ಪಠ್ಯಪುಸ್ತಕಗಳು ದೊರಕದಿರುವುದು ಮಾತ್ರವಲ್ಲ ವರ್ಷವಿಡೀ ಪಠ್ಯ ಪುಸ್ತಕ ಇಲ್ಲದೇ ಪಠನ ಮಾಡಬೇಕಾದ ದುರವಸ್ಥೆ ಈ ಭಾಗದ ವಿದ್ಯಾರ್ಥಿಗಳನ್ನು ಕಾಡುತ್ತಿದೆ. ಈ ಸಮಸ್ಯೆಯ ಬಗ್ಗೆ ಧ್ವನಿ ಹೆಚ್ಚಿನ ಗ್ರಾಮ ಸಭೆಗಳಲ್ಲಿ ಒತ್ತಾಯಗಳು ಕೇಳಿ ಬಂದಿವೆ.

ಶಾಲೆಗೆ ಅಗತ್ಯವಾದ ಪೀಠೋಪಕರಣಗಳು, ಆಧುನಿಕ ಶಿಕ್ಷಣ ಸಲಕರಣೆಗಳಾದ T.V. ಪ್ರೊಜೆಕ್ಟ್‌ಗಳನ್ನು ಆದಷ್ಟು ಉತ್ತಮಗೊಳಿಸಿ ಶಿಕ್ಷಣ ನೀಡಬೇಕು. ಶಾಲಾ ಕೊಠಡಿ ಇಲ್ಲದ ಶಾಲೆಗಳಿಗೆ ಕೊಠಡಿಗಳನ್ನು ಒದಗಿಸಿ ಕೊಟ್ಟರೆ ವಿದ್ಯಾಭ್ಯಾಸದ ಮಟ್ಟವನ್ನು ಹೆಚ್ಚಿಸಬಹುದು.

ಪಾಠೇತರ ಚಟುವಟಿಕೆಗಳನ್ನು ಆದಷ್ಟು ಹೆಚ್ಚಿಸಬೇಕು. ಆಟೋಟ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ಸ್ಫೂರ್ತಿದಾಯಕ ಅಧ್ಯಯನಕ್ಕೆ ಉತ್ತೇಜನ ನೀಡುವುದು. ವಿದ್ಯಾರ್ಥಿಗಳಲ್ಲಿ ತೋಟಗಾರಿಕೆ ತರಕಾರಿ ಬೆಳೆಸಲು ಸೂಕ್ತ ಪ್ರೋತ್ಸಾಹ ಕೊಡುವ ವ್ಯವಸ್ಥೆ ಮಾಡಬೇಕು.

ಶಾಲಾ ಮಕ್ಕಳಿಗೆ ರಜಾ ಕಾಲದಲ್ಲಿ ಸಾಮಾನ್ಯ ಜ್ಞಾನವನ್ನು ಹೆಚ್ಚಿಸಲು ಸಹಕಾರಿಯಾಗುವಂತಹ ಕೋರ್ಸುಗಳನ್ನು ನೀಡುವ ಮೂಲಕವೂ ವಿದ್ಯಾರ್ಥಿಗಳ ಜ್ಞಾನವನ್ನು ಸುಧಾರಿಸುವ ವ್ಯವಸ್ಥೆ ಮಾಡುವ ಮೂಲಕ ವಿದ್ಯಾಮಟ್ಟವನ್ನು ಹೆಚ್ಚಿಸಬಹುದು.

ಶಿಕ್ಷಕ ರಕ್ಷಕ ಸಮಿತಿ ಮತ್ತು ಮಾತೃ ಸಂಗಮ ಸರಿಯಾದ ರೀತಿಯಲ್ಲಿ ಸಂಘಟಿಸಿ 3 ತಿಂಗಳಿಗೊಮ್ಮೆ ಸೇರಿಸಿ ಚಟುವಟಿಕೆಗಳನ್ನು ಚುರುಕುಗೊಳಿಸಬೇಕು. ಮೇಲಿನ ಸಭೆಗಳಿಗೆ ವಿದ್ಯಾ ಇಲಾಖೆಯ ಅಧಿಕಾರಿಗಳನ್ನು ಭಾಗವಹಿಸುವಂತೆ ಮಾಡಿದಲ್ಲಿ ವಿದ್ಯಾಭ್ಯಾಸದ ಮಟ್ಟವನ್ನು ಹೆಚ್ಚಿಸಲು ಸಹಾಯವಾಗಬಹುದು.

ಕೈಗಾರಿಕೆ : 5

ನಮ್ಮ ಮಿಂಜ ಪಂಚಾಯತು ಕೃಷಿ ಪ್ರಧಾನ ಪ್ರದೇಶ ಇಲ್ಲಿ ಹಿಂದಿನ ಕಾಲದಿಂದಲೂ ಆಧುನಿಕ ರೀತಿಯ ಕೈಗಾರಿಕೆಗಳ ಪ್ರಭಾವ ಕಡಿಮೆಯಾಗಿತ್ತು. ಕಳೆದ ಕೆಲವು ದಶಕಗಳ ಹಿಂದೆ ಇಲ್ಲಿ ನೇಕಾರರು ಬಡಗಿ, ಕುಂಬಾರರು, ಕಮ್ಮಾರರು ಹೆಚ್ಚಾಗಿ ತಮ್ಮ ಕುಲ ಕಸುಬುಗಳನ್ನು ಮಾಡುತ್ತಿದ್ದರು. ಆದರೆ ಕ್ರಮಾನುಗತ ಆಧುನಿಕ ರೀತಿಯ ಯಂತ್ರಗಳಿಂದ ಒದಗಿದ ತೀವ್ರವಾದ ಪೈಪೋಟಿಯನ್ನು ಎದುರಿಸಲು ಸಾಧ್ಯವಾಗದೆ ಲದನ್ನು ಆಶ್ರಯಿಸಿ ಜೀವನ ನಡೆಸುತ್ತಿದ್ದ ವೃತ್ತಿಗಾರರು ತಮ್ಮ ಮೂಲ ಕಸುಬನ್ನು ಕೈಬಿಟ್ಟು ಜೀವನ ನಿರ್ವಹಣೆಗೆ ಬೇಕಾಗಿ ಅನ್ಯ ವೃತ್ತಿಯನ್ನು ಹಿಡಿಯಬೇಕಾಯಿತು. ಉದಾ : ಕೈಮಗ್ಗದ ನೇಕಾರರು ಯಾಂತ್ರೀಕೃತ ಬಟ್ಟೆಗಳ ಎದುರಿಗೆ ಕೈಸೋತು ತಮ್ಮ ಮೂಲವೃತ್ತಿಯನ್ನು ತೊರೆದರು. ಇದರಿಂದಾಗಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಯಿತು. ಮೊದಲು ಎಣ್ಣೆಗಾಣ, ಹಿಂಡಿಗಾಣ, ಅವಲಕ್ಕಿ ಕುಟ್ಟುವಿಕೆ ಹುರಿಯಕ್ಕಿ ಮಾಡುವುದು ಮುಂತಾದ ಗುಡಿ ಕೈಗಾರಿಕೆಗಳು ಆಧುನಿಕ ಹಾಗೂ ಯಾಂತ್ರಿಕ ಕೈಗಾರಿಕೆಗಳಿಂದ ಬಂದು ಸ್ಪರ್ಧೆಯಿಂದಾಗಿ ವಸ್ತುಶಃ ನಿರ್ನಾಮವಾಯಿತು. ಕೆಲವು ಕೈಗಾರಿಕೆ, ಗುಡಿಕೈಗಾರಿಕೆ, ಕರಕುಶಲ ವೃತ್ತಿಗಳಲ್ಲಿ ಆಧುನಿಕ ತಾಂತ್ರಿಕತೆ, ಆಧುನಿಕ ವಿನ್ಯಾಸ, ಕೌಶಲ್ಯಗಳನ್ನು ಮೂಡಿಸಲು ಬೇಕಾದ ತರಬೇತಾದ ವ್ಯಕ್ತಿಗಳ ಅಭಾವದಿಂದಾಗಿ ಹಾಗೂ ಸರಕಾರದ ಪ್ರೋತ್ಸಾಹ ಇಲ್ಲದಿದ್ದುದರಿಂದ ಇಂತಹ ಉತ್ಪಾದನಾ ಕೇಂದ್ರಗಳೂ ನಾಶವಾದವು. ಆದರೆ ಇಂದು ಪ್ರಚಲಿತ ಇರುವ ಮುಖ್ಯ ಗುಡಿಕೈಗಾರಿಕೆ ಕರಕುಶಲ ವೃತ್ತಿಗಳಲ್ಲಿ ಆಧುನಿಕ ತಾಂತ್ರಿಕತೆ, ಆಧುನಿಕ ವಿನ್ಯಾಸ, ಕೌಶಲ್ಯಗಳನ್ನು ಮೂಡಿಸಲು ಬೇಕಾದ ತರಬೇತಾದ ವ್ಯಕ್ತಿಗಳ ಅಭಾವದಿಂದಾಗಿ ಹಾಗೂ ಸರಕಾರದ ಪ್ರೋತ್ಸಾಹ ಇಲ್ಲದಿದ್ದುದರಿಂದ ಇಂತಹ ಉತ್ಪಾದನಾ ಕೇಂದ್ರಗಳೂ ನಾಶವಾದವು. ಆದರೆ ಇಂದು ಪ್ರಚಲಿತ ಇರುವ ಮುಖ್ಯ ಗುಡಿ ಕೈಗಾರಿಕೆ ಎಂದರೆ ಬೀಡಿ ಸುತ್ತುವಿಕೆ. ಈ ಕೆಲಸದಲ್ಲಿ ಮಹಿಳೆಯ ಸಹಭಾಗಿತ್ವ ತುಂಬಾ ಹೆಚ್ಚಾಗಿದೆ. ಉದಾ : ಕೆಳಗಿನ ತಖ್ತೆ ನೋಡಿ.

ಮಂಜೇಶ್ವರ ಬೀಡಿ ಕೆಲಸಗಾರರ ಕೈಗಾರಿಕೆ ಮತ್ತು ಸಹಕಾರ ಸಂಘ ನೊಂದಾಯಿತ

(ಕೇರಳ ದಿನೇಶ ಬೀಡಿ)

ಕ್ರ.ಸಂ.	ಶಾಖೆ	ಗಂಡಸರು	ಹೆಂಗಸರು	ಒಟ್ಟು
1	ಕೊಡ್ಲಮೊಗರು	08	99	107
2	ಮಜಿಬೈಲು	05	130	135
3	ಕಡಂಬಾರು	06	60	66
4	ಮೂಡಂಬೈಲು	09	70	79
5	ಉಪ್ಪಳ	05	110	115

ವ್ಯವಸಾಯ ಕ್ಷೇತ್ರದಲ್ಲಿ ಮಹಿಳೆಯರ ಸಹಭಾಗಿತ್ವ :

ಹಿಂದಿನಿಂದಲೂ, ಕೃಷಿ ಕಾರ್ಯಗಳಲ್ಲಿ ಮಹಿಳೆಯರದ್ದೇ ಬಹುಪಾಲು ಸಹಭಾಗಿತ್ವವಿತ್ತು. ಬೀಡಿ ಸುತ್ತುವಿಕೆಯ ಪ್ರಭಾವದಿಂದಾಗಿ ಮಹಿಳೆಯರು ಕೃಷಿ ಕಾರ್ಯಗಳಿಂದ ಹಿಂದೆ ಸರಿದರು ಮತ್ತು ವೇತನದಲ್ಲಿ ಬಹಳವಾದ ತಾರತಮ್ಯವಿದ್ದುದರಿಂದ ಸ್ತ್ರೀಯರು ಕೃಷಿ ಕಾರ್ಯದಿಂದ ಹಿಂದೆ ಸರಿಯುವುದಕ್ಕೆ ಕಾರಣವಾಯಿತು. ಎರಡನೇ ಜಾಗತಿಕ ಯುದ್ಧದ ಕಾಲದಿಂದಲೇ ಆಹಾರದ ಕೊರತೆಯಿಂದಾಗಿ ಮಧ್ಯಮ ಮತ್ತು ಕೆಳಮಟ್ಟದ ಜನರು ಕಷ್ಟದಲ್ಲಿದ್ದರು. ಆಗ ಹೆಚ್ಚಾಗಿ ಮಹಿಳೆಯರು ಬೀಡಿ ಉದ್ಯಮದಲ್ಲಿ ತೊಡಗಿದರು. ಆಗ ಮಜೂರಿ ತುಂಬಾ ಕೆಳಮಟ್ಟದಲ್ಲಿತ್ತು. ಆದರೆ ಈಗ ಕಾರ್ಮಿಕ ಸಂಘಟನೆಗಳ ಹೋರಾಟದ ಫಲವಾಗಿ ಮಜೂರಿ ಹೆಚ್ಚುತ್ತಾ ಇರುವುದು ಸಂತೋಷಕರ ವಿಷಯವಾಗಿದೆ. ಸಹಕಾರಿ ರಂಗದಲ್ಲಿ ಬೀಡಿ ಉದ್ಯಮಕ್ಕೆ ಪ್ರೋತ್ಸಾಹ ದೊರಕಿ ಹೆಚ್ಚಿನ ಸ್ತ್ರೀಯರು ಈ ಉದ್ಯೋಗದಲ್ಲಿ ತೊಡಗಿದರು.

ಕ್ರ. ಸಂಖ್ಯೆ	ವಿಭಾಗ	ಕೆಲಸಗಾರರ ಸಂಖ್ಯೆ		
		ಪುರುಷರು	ಮಹಿಳೆಯರು	ಒಟ್ಟು
1	ಮಣ್ಣಿನ ಪಾತ್ರೆ ನಿರ್ಮಿಸುವವರು	—	—	—
2	ನೇಕಾರರು	—	—	—
3	ಬೀಡಿ ಕಾರ್ಮಿಕರು	—	—	3745
4	ಕಮ್ಮಾರರು	—	—	7
5	ಕಟ್ಟಡ ಕಾರ್ಮಿಕರು	—	—	671
6	ಕಲ್ಲು ಕುಟಿಗರು	—	—	—
7	ಬಡಗಿಗಳು	—	—	74
8	ಇತರರು	—	—	1838

ಈ ಪ್ರದೇಶದಲ್ಲಿ ಗುಡಿ ಕೈಗಾರಿಕೆಗಳಾದ ಮಣ್ಣಿನ ಪಾತ್ರೆ, ನೈಯ್ಗೆ, ಆಯುರ್ವೇದ ಮದ್ದು ತಯಾರಿ, ಇತ್ಯಾದಿ ಉದ್ಯೋಗಕ್ಕೆ ಹೆಚ್ಚಿನ ಪ್ರೋತ್ಸಾಹವಿಲ್ಲದಿರುವುದರಿಂದ ಅವುಗಳು ಕ್ರಮೇಣ ನಾಶವಾದವು. ಅಲ್ಯೂಮಿನಿಯಂ ಸ್ಟೀಲ್ ಪಾತ್ರೆಗಳ ಪ್ರಯೋಗಗಳಿಂದ ಮಣ್ಣಿನ ಪಾತ್ರೆಗಳಿಗೆ ಆದ್ಯತೆ ಕಡಿಮೆಯಾಯಿತು. ಆವೆ ಮಣ್ಣಿನ ಅಭಾವ, ಕಟ್ಟಿಗೆಯ ಕೊರತೆ, ಮಡಿಕೆ ತಯಾರಿಸುವವರ ಕೊರತೆ ಇವೆಲ್ಲಾ ಈ ಗುಡಿಕೈಗಾರಿಕೆಗಳ ನಾಶಕ್ಕೆ ಕಾರಣವಾಯಿತು. ಕಮ್ಮಾರರು ತಮ್ಮ ವಂಶ ಪಾರಂಪರಾನುಗತ ಕೆಲಸದ ಮೂಲಕ ಹೆಚ್ಚಿನ ಆರ್ಥಿಕ ಸಂಪನ್ಮೂಲವನ್ನು ಸಂಗ್ರಹಿಸುವುದಕ್ಕೆ ಸಾಧ್ಯವಿಲ್ಲದುದರಿಂದ ಅದು ನಾಶದ ದಾರಿಗೆ ಇಳಿಯಿತು. ಕುಂಬಾರರಿಗೆ ಮತ್ತು ಕಮ್ಮಾರರಿಗೆ ಆಧುನಿಕ ಯಂತ್ರದ ಸಲಕರಣೆಗಳನ್ನು ಒದಗಿಸಿ ಈ ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕು.

ಮೊದಲು ಕೆಂಪು ಕಲ್ಲು ಕಡಿಯುವವರು ಅಧಿಕ ಸಂಖ್ಯೆಯಲ್ಲಿದ್ದರು. ಆದರೆ ಈಗ ಯಂತ್ರಗಳ ಉಪಯೋಗ ಹೆಚ್ಚುತ್ತಿದ್ದುದರಿಂದ ಕಲ್ಲು ಕಡಿಯುವವರಿಗೆ ಕೆಲಸ ಕಡಿಮೆಯಾಯಿತು. ಉದ್ಯೋಗ ಹೆಚ್ಚಿಸುವ ರಂಗಗಳಲ್ಲೂ ಇತ್ತೀಚಿನ ಎರಡು ಯೋಜನೆಗಳೆಂದರೆ ಪೀಠೋಪಕರಣ ಮತ್ತು ಗ್ರಿಲ್ ನಿರ್ಮಾಣ ರಂಗಗಳಾಗಿವೆ. ಈಗ ಇಲ್ಲಿ ಈ ಕ್ರಮದಲ್ಲಿ ಮಜೂರಿ ಇರುತ್ತದೆ.

ಕ್ರ.ಸಂ.	ವಿಷಯ	ಸಂಬಳ	
		ಪುರುಷರು	ಮಹಿಳೆಯರು
1	ನೇಕಾರ	40	30
2	ಬೀಡಿ	34-00	34.00
3	ಹುರಿ ಹಗ್ಗ	—	—
4	ವಸ್ತು ನಿರ್ಮಾಣ	75	50
5	ಕುಂಬಾರರು	—	—
6	ಕಮ್ಮಾರರು	125	—
7	ಆಯುರ್ವೇದ	—	—
8	ಕಲ್ಲು ಕಡಿಯುವವರು	100	40
9	ಬಡಗಿ	110	—
10	ಉಕ್ಕಿನ ಪೀಠೋಪಕರಣ ನಿರ್ಮಾಣಗಾರರು	75	—
11	ಮುದ್ರಣಾಲಯ	—	—
12	ಅಕ್ಕಸಾಲಿಗ	—	—

ಕೋಳಿ ಸಾಕಾಣಿಕೆ : ಸಹಕಾರಿ ಸಂಘಗಳಿಂದ ಸಾಲ ಪಡೆದು ಹಲವು ಕೋಳಿ ಸಾಕಾಣಿಕೆ ಕೇಂದ್ರಗಳು ಕಾರ್ಯ ಪ್ರವೃತ್ತವಾಗಿವೆ. ಗುಡಿ ಕೈಗಾರಿಕೆಗಳಾಗಿ ಚಾಪೆ ಹೆಣೆಯುವುದು, ಬುಟ್ಟಿ ತಯಾರಿ, ಗೊರಬೆ ತಯಾರಿ, ಮುಟ್ಟಪ್ಪಾಳೆ ಇತ್ಯಾದಿಗಳನ್ನು ತಯಾರಿಸುವವರು ಪಂಚಾಯತಿನಲ್ಲಿ ಇದ್ದಾರೆ.

ನಮ್ಮ ಪಂಚಾಯತಿನಲ್ಲೇ ಲಭ್ಯ ಇರುವ ಕಚ್ಚಾವಸ್ತುಗಳನ್ನು ಉಪಯೋಗಿಸಿ ತಯಾರಿಸಿಬಹುದಾದ ಸಣ್ಣಮಟ್ಟದ ಗುಡಿಕೈಗಾರಿಕೆಗಳು ಈ ಕೆಳಗಿನವುಗಳಾಗಿವೆ.

ಕ್ರ.ಸಂ.	ವಿಷಯ
1	ಹುರಿಹಗ್ಗ ತಯಾರಿಕಾ ಕೇಂದ್ರ
2	ಗೆರಟೆ ಉಪಯೋಗಿಸಿ ನಿರ್ಮಿಸುವ ವಸ್ತುಗಳು
3	ಕೊಬ್ಬರಿ ಸಂಸ್ಕರಣೆ
4	ಚಾಪೆ ನಿರ್ಮಾಣ
5	ನೇಂದ್ರ ಬಾಳೆಕಾಯಿ ಮತ್ತು ಮರಗೆಣಸು ಉಪಯೋಗಿಸಿ ಚಿಪ್ಸ್ ತಯಾರಿಸುವುದು.
6.	ಹಾಲು ಉತ್ಪಾದನಾ ಕೇಂದ್ರ
7.	ಬೇಕರಿ ಸಾಮಾಗ್ರಿಗಳ ತಯಾರಿ
8.	ಮರದ ಪೀಠೋಪಕರಣ ತಯಾರಿ
9.	ಅಡಿಕೆ ಹಾಳೆಯಿಂದ ಮುಟ್ಟಪಾಳೆ, ಪಿಂಗಾಣಿ ರೂಪದ ಬಟ್ಟಲುಗಳ ತಯಾರಿಕಾ ಕೇಂದ್ರ
10.	ಅಡಿಕೆಯಿಂದ ತಿಂಡಿ ತಿನಿಸು ತಯಾರಿ
11.	ಚಕ್ಕುಲಿ, ಹುರಿಯಕ್ಕಿ, ಪಪ್ಪಡ ತಯಾರಿ
12.	ಮಸಾಲೆ ಹುಡಿ ತಯಾರಿ ಘಟಕ.

ಇವೆಲ್ಲಾ ಮೊಂಜ ಪಂಚಾಯತಿನಲ್ಲೇ ಲಭ್ಯ ಇರುವ ಕಚ್ಚಾ ವಸ್ತುಗಳನ್ನು ಉಪಯೋಗಿಸಿ, ನಿರ್ಮಿಸಬಹುದಾದ ಸಣ್ಣ ಮಟ್ಟದ ಗುಡಿ ಕೈಗಾರಿಕೆಗಳಾಗಿವೆ. ಈ ಮೇಲಿನ ಉತ್ಪಾದನೆಗಳಿಗೆ ಆವಶ್ಯಕವಾದ ಕಚ್ಚಾವಸ್ತುಗಳು ಮತ್ತು ತರಬೇತಿ ಲಭಿಸಿದ ಯುವಕ-ಯುವತಿಯರು ಈ ಪಂಚಾಯತಿನಲ್ಲಿ ಇದ್ದಾರೆ. ಈ ಪದಾರ್ಥಗಳು ಹೊರಗೆ ಈಗ ಬಹಳ ಜನಪ್ರೀಯವಾಗಿ ಮಾರಾಟವಾಗುತ್ತಿದೆ. ಹಲಸು, ಮಾವು, ಅನಾನಸು, ಗೇರು ಹಣ್ಣುಗಳು ಈ ಪಂಚಾಯತಿನಲ್ಲೇ ಧಾರಾಳ ಲಭ್ಯವಿದೆ. ಇವು ಲಭಿಸುವ ಸಮಯದಲ್ಲಿ ಇದನ್ನು ಸರಿಯಾದ ಕ್ರಮದಲ್ಲಿ ಸಂಸ್ಕರಿಸಿದರೆ ಇದನ್ನು ಲಾಭದಾಯಕವಾಗಿ ಮಾರಾಟ ಮಾಡಬಹುದು. ಉತ್ತಮ ಮಟ್ಟದಲ್ಲಿ ಪ್ರಚಾರ ಲಭಿಸಿದರೆ ಈ ಮೇಲಿನ ಪದಾರ್ಥಗಳು ಜನಪ್ರಿಯವಾಗಬಹುದಾದ ಗುಡಿ ಕೈಗಾರಿಕೆಗಳಾಗಿವೆ.

ಕ್ರ.ಸಂ.	ವಿಷಯ
1	ಸಿದ್ದ ಉಡುಪುಗಳ ತಯಾರಿ
2	PVC ಪೈಪು ನಿರ್ಮಾಣ
3	ವಿವಿಧ ಅಳತೆಯ ಕಬ್ಬಿಣದ ಮೊಳೆ ತಯಾರಿ
4	ಅಲ್ಯೂಮಿನಿಯಂ ಪಾತ್ರೆ ನಿರ್ಮಾಣ, ಅಲ್ಯೂಮಿನಿಯಂ ಪ್ಯಾಬ್ರಿಕೇಶನ್
5	ಇಲೆಕ್ಟ್ರೋನಿಕ್ ಚೋಕ್
6	ಪ್ಲಾಸ್ಟಿಕ್ ಪದಾರ್ಥಗಳ ತಯಾರಿ

7	ಸ್ಟೀಲ್ ಪೀಠೋಪಕರಣ
8	ಕ್ಲೀನಿಂಗ್ ಪೌಡರ್
9	ಪ್ಲಾಸ್ಟಿಕ್ ಬಟನ್ ನಿರ್ಮಾಣ
10	ಕೋಳಿ ಸಾಕಣೆ
11	ಮರ ಮತ್ತು ಗಂಧದ ಕರಕುಶಲ ತಯಾರಿಕಾ ಘಟಕ
12	ಅಡಿಕೆ ಸಂಸ್ಕರಣೆ
13	ಹಣ್ಣು ಮತ್ತು ತರಕಾರಿ ಸಂಸ್ಕರಣೆ

ಈ ಮೇಲಿನ ವಿಷಯಗಳಿಗೆ ಮುಂದಿನ ಯೋಜನೆಯಲ್ಲಿ ಪ್ರಾಶಸ್ತ್ಯಕೊಟ್ಟು ಸಮಗ್ರವಾದ ಒಂದು ಯೋಜನೆಯನ್ನು ತಯಾರಿಸಿದರೆ ಮುಂದಿನ ದಶಕದೊಳಗಾಗಿ ನಿರುದ್ಯೋಗ ನಿವಾರಣೆ, ಆರ್ಥಿಕ ಸ್ವಾವಲಂಬನೆ, ಜೀವನ ಮಟ್ಟ ಸುಧಾರಣೆಗಾಗಿ ಮೊಂಜ ಪಂಚಾಯತ್ ಸಂಪತ್ತಿನ ಸಮೃದ್ಧಿಯ ತಾಣವಾಗಬಹುದು.

ಗ್ರಾಮಸಭೆಯಲ್ಲಿ ಮೂಡಿಬಂದ ನಿರ್ದೇಶನಗಳು :

1. ಕೈಗಾರಿಕೆಗಳಿಗೆ ಬೇಕಾದ ಆಧುನಿಕ ರೀತಿಯ ತಾಂತ್ರಿಕ ತರಬೇತಿ.
2. ಆರ್ಥಿಕ ರಂಗದಲ್ಲಿ ಹಿಂದುಳಿದಿರುವ ಈ ಪ್ರದೇಶದಲ್ಲಿ ಸ್ಥಾಪಿಸಬಹುದಾದ ಕೈಗಾರಿಕಾ ಕೇಂದ್ರಗಳಿಗೆ ಸಹಕಾರಿ ಕ್ಷೇತ್ರದಿಂದ ಸಹಾಯಧನಗಳ ಮೂಲಕ ಆರ್ಥಿಕ ವ್ಯವಸ್ಥೆ ದೊರಕುವಂತಾಗಬೇಕು.
3. ಉತ್ಪಾದನಾ ವಸ್ತುಗಳ ಮಾರಾಟಕ್ಕೆ ಬೇಕಾದ ಮಾರಾಟ ಕೇಂದ್ರಗಳನ್ನು ಸರಕಾರ ಸ್ಥಾಪಿಸಿಕೊಡಬೇಕು.
4. ಮಹಿಳಾ ಸಹಕಾರಿ ಸಂಘ ಸ್ಥಾಪಿಸಿ, ಇದರ ಮೂಲಕ ಹಾಲಿನ ಹಾಗೂ ಹಾಲುತ್ಪನ್ನದ ಮಾರಾಟಕ್ಕೆ ಸರಿಯಾದ ವ್ಯವಸ್ಥೆ ಆಗಬೇಕು.
5. ಈಗ ಅನ್ಯ ರಾಜ್ಯಗಳನ್ನು ಆಶ್ರಯಿಸಬೇಕಾಗಿ ಬರುವ ಮಾಂಸದ ಕೋಳಿ ಮೊಟ್ಟೆ ಎಂಬೀ ವಲಯಗಳಲ್ಲಿ ಸಹಕಾರಿ ರಂಗದ ಸಹಭಾಗಿತ್ವದಲ್ಲಿ ಕೋಳಿ ಸಾಕಣೆ ಮಾರಾಟ ಕೇಂದ್ರ ತೆರೆಯುವರೇ ಸಹಾಯಧನ ಸಿಗುವಂತಾಗಬೇಕು.
6. ಇಲೆಕ್ಟ್ರೋನಿಕ್ಸ್ ವಸ್ತುಗಳ ಕಚ್ಚಾವಸ್ತುಗಳನ್ನು ತಂದು ಇಲೆಕ್ಟ್ರೋನಿಕ್ ಸಾಮಾಗ್ರಿಗಳನ್ನು (ಉದಾ : ರೇಡಿಯೋ ಟೇಪ್‌ರೆಕಾರ್ಡರ್) ತಯಾರಿಸಲು ಸಹಕಾರಿ ರಂಗದ ಸಹಭಾಗಿತ್ವದಲ್ಲಿ ಆರ್ಥಿಕ ಸಹಾಯ ಒದಗಿಸಬೇಕು.
7. ಮೋಟಾರು ವಾಹನ, ಇಲೆಕ್ಟ್ರಿಕ್ ಮೋಟಾರು ರಿಪೇರಿ ಕೇಂದ್ರ ನಿರ್ಮಿಸುವುದು.
8. ಸಾಂಕೇತಿಕ ವಿದ್ಯೆ ಉಪಯೋಗಿಸಿ ಪ್ಲಾಸ್ಟಿಕ್ ರಂಗದಲ್ಲಿ ಹೊಸ ವಸ್ತುಗಳ ಆವಿಷ್ಕರಣೆಗೆ ಸಹಾಯ.
9. ಉಪ್ಪಿನಕಾಯಿ, ಮಸಾಲೆ ಹುಡಿ, ಹಪ್ಪಳ, ಫಲಾಹಾರ ವಸ್ತುಗಳನ್ನು ಸಹಕಾರಿ ರಂಗದ ಸಹಭಾಗಿತ್ವದಲ್ಲಿ ಇದರ ನಿರ್ಮಾಣ ಕೇಂದ್ರ ತಯಾರಿಸಿದಲ್ಲಿ ಹೆಚ್ಚಿನ ಮಹಿಳೆಯರಿಗೆ ಉದ್ಯೋಗ ಲಭಿಸಲು ಅನುಕೂಲವಾಗಬಹುದು.
10. ಹಣ್ಣು, ಹಂಪಲು, ಮಾವು, ಗೇರುಹಣ್ಣು ಹಲಸಿನ ಹಣ್ಣು - ಅನಾನಸು ಇವುಗಳ ಸಂಸ್ಕರಣೆಗಾಗಿ ಒಂದು ವ್ಯವಸಾಯ ಸಹಕಾರಿ ರಂಗದ ಸ್ಥಾಪನೆ
11. ಆಧುನಿಕ ಯಂತ್ರಗಳ ಪ್ರವೇಶದಿಂದ ನಿಲ್ಲಿಸಲಾದ ಕೆಂಪುಕಲ್ಲು ಕಡಿಯುವ ವಲಯವನ್ನು ಸಂಘದ ಸಹಭಾಗಿತ್ವದಲ್ಲಿ ಯಂತ್ರ ಉಪಯೋಗಿಸಿ, ಕಲ್ಲು ಕಡಿಯುವುದರಿಂದ ಇದರಲ್ಲಿ ಸದಸ್ಯರಾದ ಎಲ್ಲರಿಗೂ ಉದ್ಯೋಗ ಲಭಿಸುವುದು.
12. ಸಮಗ್ರ ಗ್ರಾಮೀಣ ವಸತಿ ಯೋಜನೆಗೆ ಬೇಕಾದ ಸಲಕರಣೆಗಳನ್ನು ಸಹಕಾರಿ ರಂಗದಲ್ಲಿ ನಿರ್ಮಿಸಿ ಆ ಮನೆಗಳನ್ನು ಕಟ್ಟಲು ಪಂಚಾಯತು ಈ ಸಹಕಾರಿ ರಂಗಕ್ಕೆ ನೀಡಬೇಕು.

ಆರೋಗ್ಯ - ಕುಡಿ ನೀರು

ಕುಡಿಯುವ ನೀರು : ಮಾನವನ ಮೂಲಭೂತ ಆವಶ್ಯಕತೆಗಳಲ್ಲೊಂದಾಗಿದೆ ಕುಡಿಯುವ ನೀರು. ನೀರು ಶುದ್ಧವಾಗಿದ್ದರೆ ಎಲ್ಲವೂ ಶುದ್ಧ -ಯಾಕೆಂದರೆ ನೀರು ಎಲ್ಲದರ ಮುಖ್ಯ ಘಟಕ ನೀರಿಲ್ಲದಿದ್ದರೆ ಮನುಷ್ಯ ಪ್ರಾಣಿಗಳಿಲ್ಲ, ಮರ ಸಸ್ಯಗಳಿಲ್ಲ.

ಮೊಂಜ ಪಂಚಾಯತಿನ ಮುಖ್ಯ ಕುಡಿಯುವ ನೀರಿನ ಮೂಲ ಬಾವಿಗಳಾಗಿವೆ. ಸುಮಾರು 3381ರಷ್ಟು ಮನೆಗಳಲ್ಲಿ 80% ಶತಮಾನದಷ್ಟು ಜನರು ಬಾವಿಯ ನೀರನ್ನೇ ಆಶ್ರಯಿಸಿದ್ದಾರೆ. ಇದರಲ್ಲಿ 2456ರಷ್ಟು ಮನೆಗಳಿಗೆ ಸ್ವಂತ ಬಾವಿಯಿದೆ. 75% ಶೇಕಡಾ ಮನೆಗಳು ಕುಡಿಯುವ ನೀರಿಗಾಗಿ ಸ್ವಂತ ಬಾವಿಗಳನ್ನೇ ಉಪಯೋಗಿಸುತ್ತವೆ. 15% ಶೇಕಡಾ ಮನೆಗಳು ನೆರೆಕರೆಯ ಬಾವಿಗಳನ್ನು ನೀರಿಗಾಗಿ ಆಶ್ರಯಿಸುತ್ತವೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಅವಲಂಬಿಸಿ ಸುಮಾರು 9% ಶೇಕಡಾ ಮನೆಗಳಿವೆ.

ಕುಡಿಯುವ ನೀರಿನ ಕೊರತೆ ಎಲ್ಲಾ ವಾರ್ಡುಗಳಲ್ಲೂ ಕಾಣಬರುತ್ತದೆ. ನೀರು ಸಾರ್ವಜನಿಕರಿಗೆ ತಲುಪಿಸಲು ಯೋಗ್ಯ ಪದ್ಧತಿಯನ್ನು ರೂಪೀಕರಿಸಬೇಕು.

ಪಂಚಾಯತಿನ ಕುಡಿಯುವ ನೀರಿನ ಲಭ್ಯತೆ

ವಿಧಗಳು		ಕುಟುಂಬಗಳು
ಬಾವಿಗಳು	1 Sanitory	346
	2 Ordinary	2110
		2456
ಸಾರ್ವಜನಿಕ ನಳ್ಳಿ ನೀರಿನ ವ್ಯವಸ್ಥೆ		126
ಸಾರ್ವಜನಿಕ ಬಾವಿ		32
ಕೊಳವೆ ಬಾವಿ		36
ಇತರ		52

ಪಂಚಾಯತಿನ TWSS ಯೋಜನೆಯ ಪ್ರಕಾರ ಮೀಯಪದವಿನಲ್ಲಿ ಹಾಗೂ ಕಡಂಬಾರಿನಲ್ಲಿ ಎರಡು ಮೋಟಾರು ಚಾಲಿತ ಕೊಳವೆ ಬಾವಿಯಿದ್ದು ಇದರಿಂದ ಆ ಪ್ರದೇಶದ ಜನರ ನೀರಿನ ಆವಶ್ಯಕತೆಗಳನ್ನು ನೀಗಿಸಲು ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿದೆ.

ಪಂಚಾಯತಿನಲ್ಲಿ ಎರಡು ಪ್ರದೇಶದಲ್ಲಿ ಕೆರೆ ನಿರ್ಮಾಣಗೊಳಿಸಲಾಗಿದೆ. ಇದು ಸಾಕಷ್ಟು ಮಟ್ಟಿಗೆ ಯಶಸ್ವಿಯಾಗದಿದ್ದರೂ ಇದು ಒಂದು ಉತ್ತಮ ಪ್ರಯತ್ನವಾಗಿದೆ.

ಶುದ್ಧ ಜಲವಿತರಣಾ ಸಂವಿದಾನ

Sl. No.	Item	Numbers
1	Borewells with hand pumps	33
2	Borewells with Motor	2
3	Water Supply scheeme RWSS	—
4	TWSS	2
5	Water Connection (domestic)	40
6	Waterconnection (other purpose)	2
7	Panchayat Borewell	2
8	Panchayat wells	32
9	Tanks or Ponds	2
10	Public Taps	13
11	KWA Scheme	—

ಬೇಸಗೆ ಕಾಲದಲ್ಲಿ ಸಾಧಾರಣ 956 ಬಾವಿಯಲ್ಲಿ ನೀರು ಲಭಿಸಿದರೆ ಉಳಿದ 1500 ಬಾವಿಗಳಲ್ಲಿ ನೀರಿನ ಪಸೆ ಕೂಡಾ ಇರುವುದಿಲ್ಲ ಎಂಬುದು ಆರೋಗ್ಯ ಶುಚಿತ್ವ ಸರ್ವೆಯು ಸೂಚಿಸುತ್ತದೆ.

ಕುಡಿಯುವ ನೀರಿನ ಅಭಾವವು ಈ ಕೆಳಗಿನ ಪ್ರದೇಶಗಳಲ್ಲಿ ಕಂಡು ಬರುತ್ತದೆ. ಈ ಕೆಳಗೆ ಸೂಚಿಸಿದ ಪ್ರದೇಶಗಳಲ್ಲಿ ಬಾವಿ ಅಥವಾ ಬೋರ್‌ವೆಲ್‌ಗಳನ್ನು ನಿರ್ಮಿಸುವುದು.

Iನೇ ವಾರ್ಡಿನ ಕುಳೂರಿನ ಚಿಗ್ರುಪಾದೆ, ಚಿನಾಲ, ದೇರಂಬಳ, ಶಾಂತಿನಗರ, ಸಂತಡ್ಕ, ಬೇಳ ಪ್ರದೇಶದಲ್ಲಿ IIನೇ ವಾರ್ಡಿನ ಬೇರಿಕೆ, ಕೊಮ್ಮಂಗಳ, ಮುಜಿಕಲ್, ಕೆದುಂಗಾಡ್, ಪಲ್ಲತಡ್ಕ, ಬೆಜ್ಜಂಗಳ ಪ್ರದೇಶದಲ್ಲಿ IIIನೇ ವಾರ್ಡಿನ, ಅಂಗಡಿಪದವು, ನಾಟೆಕಲ್ಲು, ಮಜಿಬೈಲು, ಕೊಡ್ಡೆ, ಪಟ್ಟತ್ತೂರು, ಉಪ್ಪಳ ಭಗವತಿ ಪ್ರದೇಶದಲ್ಲಿ IVನೇ ವಾರ್ಡಿನ ಮದಂಗಲ್ಲು, ಬಟ್ಯಪದವು, ತಲೇಕಳ ಮುನ್ನಿಪ್ಪಾಡಿ ಎಂಬೀ ಪ್ರದೇಶಗಳಲ್ಲಿ Vನೇ ವಾರ್ಡಿನ ಬಟ್ಯಪದವು ಕೋಳ್ಯೂರು ಪದವು, ಮರತ್ತಡ್ಕ, ಅರಂತಾಡಿ, ಕಳಿಯೂರು ಶಾಲಾ ವಠಾರ ಎಂಬೀ ಪ್ರದೇಶಗಳಲ್ಲಿ

VIನೇ ವಾರ್ಡಿನ ಕೋಳ್ಯೂರು ಮಸೀದಿ ಬಳಿ, ಧರ್ಮನಗರ ರಾವಳಿಕೆ, ಬಲಿಪಗುಳಿ, ಬ್ಯಾಂಕಿನ ಬಳಿ ಪ್ರದೇಶಗಳು.

VIIನೇ ವಾರ್ಡಿನ ಬಾಳಿಯೂರು, ಮಡಿಮೊಗರು, ಬೆಜ್ಜ, ಮೂಡಂಬೈಲು, ಪಜಿಂಗಾರು ಕುಕ್ಕಿರಿ ಪ್ರದೇಶಗಳಲ್ಲಿ

VIIIನೇ ವಾರ್ಡಿನ ಬೇರಿಕೆ, ಬುಡ್ರಿಯ, ಕೆದುವಾರು, ಅಮ್ಮೆನಡ್ಕ, ಅಟ್ಟೆಗೋಳಿ, ಅರಿಯಾಳ ಪ್ರದೇಶಗಳಲ್ಲಿ.

IXನೇ ವಾರ್ಡಿನ ಕಡಂಬಾರು, ದುರ್ಗಿಪಳ್ಳ, ಕಜೆಕೋಡಿ, ಮುರತ್ತಣೆ ಪ್ರದೇಶಗಳಲ್ಲಿ.

ಸೂಕ್ತನೀರಿನ ವ್ಯವಸ್ಥೆಯನ್ನು ಮಾಡಲು ಈ ಕೆಳಗಿನ ನಿರ್ದೇಶಗಳನ್ನು ನೀಡುವರು.

1. ಕುಳೂರಿನ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಚಿಗ್ರುಪಾದೆ ಜಂಕ್ಷನ್‌ನಲ್ಲಿರುವ ಭಾವಿಗಳ ನೀರು ಸೌಲಭ್ಯವಿರುವ ಹ್ಯಾಂಡ್‌ಪಂಪ್ ಅಳವಡಿಸಿದ ಬೋರ್‌ವೆಲ್‌ಗೆ ಮೋಟಾರು ಅಳವಡಿಸಿ 10,000ಲೀ. ಸಾಮರ್ಥ್ಯವುಳ್ಳ ಓವರ್‌ಹೆಡ್ ಟ್ಯಾಂಕ್ ನಿರ್ಮಿಸಿ ಸಮೀಪ ಪ್ರದೇಶಗಳಾದ ಚಿನಾಲ, ಬಾಳಿಯೂರ್ ತೊಟ್ಟತ್ತೋಡಿ, ಮೂಡಂಬೈಲಿನ ಕುಳಬೈಲು ಪ್ರದೇಶಕ್ಕೆ ಪೈಪ್‌ಲೈನ್ ಮೂಲಕ ನೀರು ಸರಬರಾಜು ಮತ್ತು ಹೊಳೆಯಿಂದ ನೀರು ತಂದು ಶಾಂತಿನಗರದಲ್ಲಿ ಟ್ಯಾಂಕ್ ನಿರ್ಮಿಸಿ ಸುತ್ತು ಮುತ್ತಲಿನ ಪ್ರದೇಶಕ್ಕೆ ನೀರು ಸರಬರಾಜು ಮಾಡುವುದು.
2. ಮುನ್ನಿಪ್ಪಾಡಿಯಲ್ಲಿ ಉಪ್ಪಳ ಹೊಳೆಯಿಂದ ಪಂಪಿಂಗ್ ಮೂಲಕ ನೀರು ಹಾಯಿಸಿ ಮೀಯಾಪದವಿನಲ್ಲಿ ಓವರ್‌ಹೆಡ್ ಟ್ಯಾಂಕ್ ನಿರ್ಮಿಸಿ ಗ್ರಾಮದ ಎಲ್ಲಾ ಭಾಗಕ್ಕೂ ಪೈಪುಲೈನು ಮೂಲಕ ನೀರು ಸರಬರಾಜು.
3. ಮಜಿಬೈಲಿನಲ್ಲಿ ಉಪ್ಪಳ ಹೊಳೆಯಿಂದ ಪಂಪಿಂಗ್ ಮೂಲಕ ನೀರು ತಂದು ಟ್ಯಾಂಕ್ ನಿರ್ಮಿಸಿ ಸುತ್ತುಮುತ್ತಲಿನ ಪ್ರದೇಶಕ್ಕೆ ನೀರು ಸರಬರಾಜು ಮಾಡುವುದು.
4. ಬಟ್ಯಪದವಿನಲ್ಲಿ ಮೋಟಾರು ಚಾಲಿತ ಬೋರ್‌ವೆಲ್ ನಿರ್ಮಿಸಿ ಓವರ್‌ಹೆಡ್ ಟ್ಯಾಂಕ್ ಸ್ಥಾಪಿಸಿ ಸುತ್ತುಮುತ್ತಲಿನ ಎಲ್ಲಾ ಪ್ರದೇಶಕ್ಕೂ ಪೈಪ್‌ಲೈನ್ ಮೂಲಕ ನೀರು ಸರಬರಾಜು.
5. ಕಳಿಯೂರು ಮರತಡ್ಕ ಎಂಬಲ್ಲಿ 10,000 ಲೀಟರಿನ ಓವರ್‌ಹೆಡ್ ಟ್ಯಾಂಕ್ ನಿರ್ಮಿಸಿ ಇದಕ್ಕೆ ಮುನ್ನಿಪ್ಪಾಡಿ ಹೊಳೆಯಿಂದ ಪಂಪಿಂಗ್ ಮುಖಾಂತರ ಟ್ಯಾಂಕಿಗೆ ನೀರು ಹಾಯಿಸಿ ಪೈಪ್‌ಲೈನ್ ಮೂಲಕ ನಳ್ಳಿನೀರನ್ನು ಗ್ರಾಮದ ಎಲ್ಲಾ ಮನೆಗಳಿಗೆ ಮುಟ್ಟುವಂತೆ ವ್ಯವಸ್ಥೆ ಮಾಡುವುದು.
6. ಮಜೀರ್‌ಪಳ್ಳದಲ್ಲಿ ಓವರ್ ಹೆಡ್ ಟೆಂಕ್ ನಿರ್ಮಿಸಿ ಕೋಳಿಯೂರು ಗ್ರಾಮದ ಜನತೆಗೆ ಶುದ್ಧ ನೀರನ್ನು ಪೂರೈಸುವುದು.
7. ಬೇಳದ ಉಪ್ಪಳ ಹೊಳೆಯಲ್ಲಿ ಬಾವಿ ನಿರ್ಮಿಸಿ ಅಲ್ಲಿಂದ ಪಂಪಿಂಗ್ ಮುಖಾಂತರ ಬಾಳಿಯೂರಿನಲ್ಲಿ ಓವರ್‌ಹೆಡ್ ಟ್ಯಾಂಕ್ ನಿರ್ಮಿಸಿ ಅದಕ್ಕೆ ನೀರನ್ನು ಸರಬರಾಜು ಮಾಡಿ ಅಲ್ಲಿಂದ ಗ್ರಾಮದ ಎಲ್ಲಾ ಮನೆಗಳಿಗೂ ನಳ್ಳಿ ನೀರಿನ ವಿತರಣೆ ಮಾಡುವುದು.
8. ಉಪ್ಪಳ ಹೊಳೆಯಿಂದ ಅರಿಯಾಳದಲ್ಲಿ ಬಾವಿ ನಿರ್ಮಿಸಿ ಪಂಪಿಂಗ್ ಮೂಲಕ ನೀರೆತ್ತಿ ತೊಟ್ಟತೋಡಿಯಲ್ಲಿ ಓವರ್‌ಹೆಡ್ ಟ್ಯಾಂಕ್ ನಿರ್ಮಿಸಿ ಅದರ ಮುಖಾಂತರ ಪೈಪ್ ಲೈನ್ ಅಳವಡಿಸಿ ಗ್ರಾಮದ ಪ್ರತೀ ಮನೆಗಳಿಗೆ ನೀರು ಸರಬರಾಜು.
9. ಮುರತ್ತಣೆ ಹಾಗೂ ದುರ್ಗಿ ಪಳ್ಳದಲ್ಲಿ ಬೋರ್‌ವೆಲ್ ನಿರ್ಮಿಸಿ ಓವರ್‌ಹೆಡ್ ಟ್ಯಾಂಕ್ ಮೂಲಕ ಪ್ರತೀ ಮನೆಗೆ ನೀರು ಸರಬರಾಜು.

ಆವಶ್ಯಪಟ್ಟ ಬೋರ್‌ವೆಲ್ ಹಾಗೂ ಬಾವಿ

1. ಚೀನಾಲ, ಚಾರ್ಲ, ದೇರಂಬಳ, ಸುನ್ನಾರ, ಶಾಂತಿನಗರ, ಸಂತಡ್ಕ ಬೇಳದಲ್ಲಿ ಕೊಳವೆ ಬಾವಿ.

2. ಬೇರಿಕೆ, ಕೊಮ್ಮಂಗಳ, ಪಳ್ಳತಡ್ಕ, ಮುಜಿಕಲ್‌ನಲ್ಲಿ, ಅಡ್ಕ ಮಸೀದಿ ಬಳಿ, ದರ್ಬೆ, ಬೆಜ್ಜಂಗಳದಲ್ಲಿ ಕೊಳವೆ ಬಾವಿ ನಿರ್ಮಿಸುವುದು.
3. ಅಂಗಡಿಪದವು, ನಾಟಿಕಲ್ಲು, ಮಜಿಬೈಲ್ ಶಾಲಾ ಬಳಿ, ಕರಿಬೈಲು ಕಾಲನಿ ಬಳಿ, ಪಮ್ಮಾರು, ಭಗವತೀ ಬಳಿ ಬೋರ್‌ವೆಲ್ ನಿರ್ಮಿಸುವುದು.
4. ಮದಂಕಲ್ಲು, ತಲೇಕಳ ದೇವಸ್ಥಾನದ ಬಳಿ, ಬಾನೊಟ್ಟು ಬಳಿ ಕೊಳವೆ ಬಾವಿ.
5. ಕೋಳಿಯೂರು ಪದವು, ಬಲಿಪಗುಳಿ, ಟ್ಯಾಂಕಿನ ಬಳಿ, ಧರ್ಮನಗರ ರಾವಳಿಕೆಯಲ್ಲಿ ಮತ್ತು ಕೋಳ್ಯೂರು ಮಸೀದಿ ಬಳಿ, ಬೋರ್‌ವೆಲ್ ನಿರ್ಮಿಸುವುದು.
6. ಮರತಡ್ಕ, ಅರಂತಾಡಿ, ಬೊಡ್ಡೋಡಿ, ಕೊನಿಲ, ಸುಂಕದಕಟ್ಟೆ, ಕಳಿಯೂರು ಶಾಲಾ ಬಳಿ, ಬೋರ್‌ವೆಲ್ ನಿರ್ಮಿಸುವುದು.
7. ಬಾಳಿಯೂರು, ಜೋಕುಲಕಟ್ಟೆ, ಮೂಡಂಬೈಲು ಶಾಲೆ, ಪಜಿಂಗಾರು, ಬೆಜ್ಜ ಮಸೀದಿ ಬಳಿ, ಬೆಜ್ಜ ದೇವಸ್ಥಾನದ ಬಳಿ ಕುಳಬೈಲು ಜಂಕ್ಷನ್ ಬಳಿ, ಬೆಜ್ಜಂಗಳ ಹೌಸಿಂಗ್ ಕಾಲನಿ ಬಳಿಯಲ್ಲಿ ಬೋರ್‌ವೆಲ್ ನಿರ್ಮಿಸುವುದು.
8. ಬೇರಿಕೆ, ಬುಡ್ರಿಯ, ನರಸಣ್ಣ ಕಾಲನಿ, ಅಮ್ಮೇನಡ್ಕ, ಸಾಲೆದೇರ, ಅಟ್ಟೆಗೋಳಿ ಕೋಡಿಯಡ್ಕ ಗುಡ್ಡೆ, ಗುಂಡಿಬೈಲು, ಕೋಡಿ, ತೊಟ್ಟೆತ್ತೋಡಿ ಪ್ರದೇಶಗಳಲ್ಲಿ ಕೊಳವೆ ಬಾವಿ ನಿರ್ಮಾಣ.
9. ಕಡಂಬಾರು ದಿನೇಶ್ ಡಿಪ್ಪೋ ರಸ್ತೆ ಬಳಿ, ಕಜೆಕೋಡಿ ಚಲ್ಲಂಗುಡೇಲು, ದರ್ಕಾಸು, ಪುಳಿತ್ತಡಿ, ದುರ್ಗಿಪಳ್ಳ ನೀರೊಲ್ಪೆಯಲ್ಲಿ ಬೋರ್‌ವೆಲ್ ನಿರ್ಮಾಣ.

ಸಮಸ್ಯೆಗಳು

1. ನೀರಿನ ಕ್ಷಾಮ ಮಾರ್ಚಿ ತಿಂಗಳ ನಂತರ ಇಡೀ ಪಂಚಾಯತ್ ಪ್ರದೇಶದಲ್ಲಿ ನೀರಿಗಾಗಿ ಪರದಾಡಬೇಕಾದ ಪರಿಸ್ಥಿತಿ.
2. ಸಾರ್ವಜನಿಕ ನಳ್ಳಿನೀರಿನ ಅಭಾವ.
3. ಕೊಳವೆ ಬಾವಿಯ ನೀರು ಹಲವೆಡೆಗಳಲ್ಲಿ ಉಪಯೋಗ ಶೂನ್ಯವಾಗಿದೆ. ಮತ್ತು ಕೆಲವೆಡೆ ಬೋರ್‌ವೆಲ್‌ನ ಹೇಂಡ್ ಪಂಪ್ ಹಾಳಾಗಿದೆ.
4. ಡ್ರೈನೇಜ್ ಪದ್ಧತಿಯ ಅಭಾವದಿಂದ ಕುಡಿಯುವ ನೀರು ಮಲೀನವಾಗುತ್ತದೆ.
5. ಸರಕಾರದ ಧನ ಸಹಾಯ ಭೂರಹಿತ ಬಡವರಿಗೆ ಲಭಿಸುವುದಿಲ್ಲ.
6. ದರಿದ್ರ ಕುಟುಂಬಕ್ಕೆ ಬಾವಿ ತೋಡಲು ಬೇಕಾದ ಹಣ ಇರುವುದಿಲ್ಲ.
7. ನೀರು ವಿತರಣಾ ಪ್ರಕ್ರಿಯೆ ಈ ಪ್ರದೇಶದಲ್ಲಿಲ್ಲ.
8. ನೀರಿನ ದುರ್ಬಳಕೆಯಾಗುತ್ತದೆ. ಇದರ ಬಗ್ಗೆ ಅರಿವು ಮೂಡಿಸಲು ಸಂಘ ಸಂಸ್ಥೆಗಳ ಸಹಯೋಗದಲ್ಲಿ ಪಂಚಾಯತ್ ನಿರ್ವಹಿಸಬೇಕು.
9. ಶುದ್ಧವಾದ ನೀರಿನ ಕೊರತೆಯಿಂದಾಗಿ ಬೇರೆ ಬೇರೆ ವಿಧದ ಸೋಂಕು ರೋಗಗಳು ಹೆಚ್ಚುತ್ತದೆ.
10. ಸರಕಾರಿ ಬಾವಿಗಳನ್ನು ಸಕಾಲಕ್ಕೆ ದುರಸ್ತಿ ಮಾಡದಿರುವುದು.
11. ಲಕ್ಷಂವೀಡು ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಮನೆಗಳಿಗೆ ನೀರಿನ ಟೇಪ್ ಕನೆಕ್ಷನ್ ಇಲ್ಲ.
12. ಬಾವಿಯ, ಕೊಳದ, ಟ್ಯಾಂಕಿನ, ಬೋರ್‌ವೆಲ್ಲಿನ ದುರಸ್ತಿ ಕೆಲಸ ಮತ್ತು ಮೇಲ್ನೋಟ ಸಂಘ ಸಂಸ್ಥೆಗಳಿಗೆ ನಿರ್ವಹಿಸಿಕೊಡುವುದು.

ಸಾಧ್ಯತೆಗಳು ಪರಿಹಾರ

1. ನಮ್ಮ ಪಂಚಾಯತಿನಲ್ಲಿ ನೀರಿನ ಕ್ಷಾಮ ಇರುವ ಪ್ರದೇಶಗಳಲ್ಲಿ ಮಳೆ ನೀರನ್ನು ಹಳ್ಳಗಳಲ್ಲಿ, ಹೊಂಡಗಳಲ್ಲಿ ಮತ್ತು ಹೊಂಡ ಮಾಡಿಸಿ ನೀರನ್ನು ಶೇಖರಿಸಿ ಇಡುವುದು.
2. ಹೊಳೆಗೆ ಅಣೆಕಟ್ಟು ಕಟ್ಟಿ ಪೈಪಿನ ಮೂಲಕ ನೀರು ಇಲ್ಲದ ಕಡೆಗೆ ನೀರು ಸರಬರಾಜು ಮಾಡುವುದು.
3. ಹೆಚ್ಚು ಪೋಲಾಗಿ ಹೋಗುವ ನೀರನ್ನು ಅಗತ್ಯವಿರುವಷ್ಟೇ ಉಪಯೋಗಿಸುವುದು.

ಆರೋಗ್ಯ

ಆರೋಗ್ಯವೇ ಭಾಗ್ಯ ಎಂಬ ನಾಣ್ನುಡಿ ವಸ್ತುಶಃ ನಿಜವಾದರೂ ಅದನ್ನು ರಕ್ಷಿಸಲು ಬೇಕಾದ ಪ್ರಾಥಮಿಕ ಸೌಕರ್ಯಗಳು ನಮ್ಮ ಪಂಚಾಯತಿನಲ್ಲಿ ಇದುವರೇಗೆ ಲಭಿಸಲಿಲ್ಲ ಎಂಬುದು ಖೇದಕರ ವಿಷಯ. ಜನರಿಗೆ ಆರೋಗ್ಯದ ಬಗ್ಗೆ ಮನದಟ್ಟು ಮಾಡಲು ಇದುವರೆಗೆ ಯಾವ

ಆರೋಗ್ಯ ಶಿಬಿರವಾಗಲೀ ಬೇಕಾದ ಪ್ರಾಥಮಿಕ ಸೌಕರ್ಯಗಳಾಗಲೀ ಲಭಿಸಲಿಲ್ಲ. ಆರೋಗ್ಯದ ಬಗ್ಗೆ ಸರಕಾರವಾಗಲೀ, ಪಂಚಾಯತಾಗಲೀ ಇದುವರೆಗೆ ಅಗತ್ಯವಿರುವ ಕ್ರಮಗಳನ್ನು ತೆಗೆಯದಿರುವುದು ಒಂದು ಕಾರಣ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪ್ರಾದೇಶಿಕ ಭಾಷೆಯ ಪರಿಜ್ಞಾನ ಇಲ್ಲದೇ ಇರುವವರು ಕೆಲಸ ಮಾಡುವುದರಿಂದ ಆರೋಗ್ಯ ಸಮಸ್ಯೆಯನ್ನು ಅವರಿಂದ ಪರಿಹರಿಸಲು ಸಾಧ್ಯವಾಗುವುದಿಲ್ಲ.

ಒಂದೆರಡು ದಶಕಗಳ ಹಿಂದೆ ನಮ್ಮ ವಲಯಗಳಲ್ಲಿ ನಾಟೀ ವೈದ್ಯರು ಇದ್ದು ಅವರು ತಮ್ಮ ನಾಟೀ ಮದ್ದಿನ ಮೂಲಕ ಹಲವಾರು ರೋಗಗಳನ್ನು ಗುಣಪಡಿಸುತ್ತಿದ್ದರು. ಉದಾ : ಸರ್ಪಸುತ್ತು, ಕಾಮಲೆ ರೋಗ, ವಿಷಹಾವಿನ ಕಡಿತ, ಸರ್ಪಸುತ್ತು, ವಿಷಹಾವಿನ ಕಡಿತ, ಕೆಂಪುರೋಗ, ಹಳದಿ ರೋಗ ಮತ್ತು ಪಕ್ಷವಾತ ಮುಂತಾದ ಪ್ರಧಾನ ರೋಗಗಳಿಗೆ ನಾಡ ವೈದ್ಯರೇ ಇವುಗಳಿಗೆಲ್ಲ ರಾಮಬಾಣದಂತಹ ಮದ್ದು ಕೊಡುತ್ತಿದ್ದರು. ಅವರು ಹೇಳುವ ಸರಿಯಾದ ಪಥ್ಯವನ್ನು ಮಾಡಿ ಗಿಡ ಮೂಲಿಕೆಗಳ ಔಷಧಿಯನ್ನೇ ಉಪಯೋಗಿಸಿಕೊಂಡು ಆರೋಗ್ಯಶಾಲಿಗಳಾಗಿ ಇಲ್ಲಿಯವರು ಜೀವಿಸುತ್ತಿದ್ದರು.

ಹೆರಿಗೆಯ ಕುರಿತು ಹೆಚ್ಚಿನ ಅನುಭವವನ್ನು ಪಡೆದಿರುವ ಸೂಲಗಿತ್ತಿಯರು ಈ ಪಂಚಾಯತಿನಲ್ಲಿ ಹಲವರಿದ್ದರು. ಈಗಿನ ನುರಿತ ಡಾಕ್ಟರುಗಳಿಂದಲೂ ಕಷ್ಟಕರವಾದ ಹೆರಿಗೆಯನ್ನು ಲೀಲಾಜಾಲವಾಗಿ ಮಾಡುತ್ತಿರುವ ಸೂಲಗಿತ್ತಿಯರಿದ್ದರು.

ಹಿಂದಿನ ಸ್ತ್ರೀಯರು ದೈಹಿಕ ಶ್ರಮ ಪಡುತ್ತಿದ್ದುದರಿಂದ ಆರೋಗ್ಯವಂತರಾಗಿ ಹೆರಿಗೆಗೆ ಯಾವ ತೊಂದರೆಯೂ ಆಗದಂತೆ ಇರುತ್ತಿದ್ದರು.

ಈಗ ನಾವು ಹೇಳುತ್ತಿರುವ ಅಂಧವಿಶ್ವಾಸವೆಂಬ ಮಂತ್ರಪ್ರಭಾವ ಹಲವು ವಿಧದ ಆಶ್ಚರ್ಯಜನಕ ಕೆಲಸವನ್ನು ಮಾಡುತ್ತಿದ್ದವು. ವಿಷಕಡಿತದಲ್ಲಿ ವಿಷ ಶರೀರಕ್ಕೆ ಸೇರದಂತೆ ಬರೇ ಮಂತ್ರದಲ್ಲೇ ಅದನ್ನು ಶಮನಗೊಳಿಸುತ್ತಿದ್ದ ಉದಾಹರಣೆಗಳಿವೆ.

ಹಿಂದಿನ ಆಯುರ್ವೇದ ಔಷಧ ಈಗ ಹೆದರುವಂತಹ, ಏಯ್ಡ್ಸ್‌ನಂತಹ ಮಾರಕ ರೋಗಗಳನ್ನು ಗುಣಪಡಿಸುತ್ತವೆ ಎನ್ನುವ ನಿದರ್ಶನಗಳಿವೆ. ಇದಕ್ಕೆ ಬೇಕಾದಂತಹ ಗಿಡ ಮೂಲಿಕೆಗಳು ನಮ್ಮ ಮನೆಯ ಸಮೀಪವಿರುವ ಕಾಡುಗಳಲ್ಲಿ ದೊರಕುತ್ತಿದ್ದವು. ಆದರೆ ಗಿಡನಾಶದ ಜತೆಯಲ್ಲಿ ಗಿಡ ಮೂಲಿಕೆಗಳೂ ನಾಶವಾದುವು. ನಿಧಾನವಾಗಿ ಗುಣಪಡಿಸಬಲ್ಲ ಆಯುರ್ವೇದ ಮದ್ದನ್ನು ಬಿಟ್ಟು ಕ್ಷಣಮಾತ್ರದಲ್ಲಿ ಗುಣಪಡಿಸಬಲ್ಲ ಅಲೋಪತಿ ಮದ್ದನ್ನು ಈ ಜನರು ಉಪಯೋಗಿಸುತ್ತಿರುವುದರಿಂದ ಆಯುರ್ವೇದ ಮದ್ದಿನ ಬಳಕೆ ಕಡಿಮೆಯಾಯಿತು.

ಸುಮಾರು 1970ರ ಮೊದಲು ಈ ರೀತಿಯ ಪರಂಪರಾಗತವಾದ ಆಯುರ್ವೇದ ಮದ್ದಿನ ಪ್ರಚಾರ ಕಡಿಮೆಯಾಗುತ್ತಾ ಬರುತ್ತಾ ಇತ್ತು. ನಮ್ಮ ಪಂಚಾಯತು ವಲಯದಲ್ಲಿ ನಾಡವೈದ್ಯರೆನಿಸುವವರ ಸಂಖ್ಯೆ ಸುಮಾರು ಇಪ್ಪತ್ತೈದರಷ್ಟಿತ್ತು. ವಿಷ ವೈದ್ಯರೆನ್ನುವವರು ಐದು ಮಂದಿ ಇದ್ದರು. ಈಗ ಸುಮಾರು 1974ರಲ್ಲಿ ಗವರ್ನಮೆಂಟ್ ಆಯುರ್ವೇದಿಕ್ ಡಿಸ್ಪೆನ್ಸರಿ ಆರಂಭವಾಯಿತು.

Sl. No.	ಸಂಸ್ಥೆಯ ಹೆಸರು	ಸಂಖ್ಯೆ	ಕಟ್ಟಡ ಸ್ವಂತ/ಬಾಡಿಗೆಗೆ	ಉದ್ಯೋಗಸ್ಥರ ಸಂಖ್ಯೆ	ಆರಂಭಗೊಂಡ ವರ್ಷ	ಸವಲತ್ತುಗಳು
1	2	3	4	5	6	7
1	ಪ್ರಾಥಮಿಕ ಆರೋಗ್ಯ ಕೇಂದ್ರ ಚಿಗುರುಪಾದೆ I	1	ಬಾಡಿಗೆ ರಹಿತ ಕಟ್ಟಡ	7	1992	Water Supply, Furniture lock of space Building
2	ಕುಟುಂಬ ಕ್ಷೇಮ ಯೋಜನೆ 2 1 ಮಿಯಾಪದವು II ward 2 ಬಾಳಿಯೂರು VII Ward	 1 1	 ಸ್ವಂತ ಸ್ವಂತ	 2 2	 1972 1992	 Furniture Water Supply Lack of space Building
3	ಗವರ್ನ್‌ಮೆಂಟ್ ಆರ್ಯುವೇದಿಕ್ ಡಿಸ್ಪೆನ್ಸರಿ ಮೀಯಪದವು II Ward	 1	 ಸ್ವಂತ	 4	 1974	Providing Gas Connection Furniture and Electricity as soon as possible

ಈ ಮೇಲಿನ ಪಟ್ಟಿ ಕಾಣಿಸುವುದೇನೆಂದರೆ ನಮ್ಮ ಈ ಪಂಚಾಯತಿನಲ್ಲಿ ಈ ಒಂದು ಆಯುರ್ವೇದಿಕ್ ಡಿಸ್ಪೆನ್ಸರಿ ಎರಡು ಕುಟುಂಬ ಕಲ್ಯಾಣ ಕೇಂದ್ರಗಳು ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದೆ.

ನಮ್ಮ ವಲಯದಲ್ಲಿ ಹಾಸಿಗೆಯುಳ್ಳ ಆಸ್ಪತ್ರೆಗಳೇ ಇಲ್ಲ. ಸರಿಯಾದ ಹಾಸಿಗೆಯುಳ್ಳ (ಸೌಕರ್ಯವುಳ್ಳ) ಆಸ್ಪತ್ರೆಗಳಾಗಲಿ ಸಮರ್ಥರಾದ ಡಾಕ್ಟರರುಗಳ ಸೇವೆಯಾಗಲಿ ನಮಗೆ ದೊರಕಬೇಕಾದರೆ 35 ಕಿಲೋ ಮೀಟರ್ ದೂರದ ಕಾಸರಗೋಡು ಅಥವಾ ನೆರೆಯ ರಾಜ್ಯವಾದ ಕರ್ನಾಟಕವನ್ನು ಆಶ್ರಯಿಸಬೇಕಾದ ಪರಿಸ್ಥಿತಿ ಬರುತ್ತದೆ.

ನಮ್ಮ ಪಂಚಾಯತಿನಲ್ಲಿ ಒಬ್ಬರು MBBS ಡಾಕ್ಟರರೂ ಒಬ್ಬ ಧಂತ ವೈದ್ಯರೂ ಸೇರಿ ನಾಲ್ಕು ಜನ ಖಾಸಗಿ ಅಲೋಪಥಿ ಡಾಕ್ಟರರಿದ್ದಾರೆ. ರೋಗ ಶುಶ್ರೂಷೆಗಾಗಿ ಈ ಪಂಚಾಯತಿನ ಎಲ್ಲಾ ವಿಭಾಗದ ಜನರಿಗೂ ಇವರ ಸೇವೆ ಲಭ್ಯವಲ್ಲ. ಆದುದರಿಂದ ಈ ಪಂಚಾಯತಿನ ಹೆಚ್ಚಿನ ಮಂದಿ ರೋಗ ಶಮನಕ್ಕಾಗಿ ನೆರೆ ಪಂಚಾಯತನ್ನೊ ಅಥವಾ ನೆರೆ ರಾಜ್ಯವಾದ ಕರ್ನಾಟಕದ ಆಸ್ಪತ್ರೆಗಳನ್ನೋ ಆಶ್ರಯಿಸಬೇಕಾಗಿದೆ. ಹೀಗೆ ನಾಲ್ಕು ಮಂದಿ ಡಾಕ್ಟರರಿದ್ದರೂ ಎಲ್ಲರಿಗೂ ಒಳರೋಗಿಗಳಾಗಿ ದಾಖಲಿಸಿ ಚಿಕಿತ್ಸೆ ನೀಡುವ ಆಸ್ಪತ್ರೆಗಳಿಲ್ಲ.

ಇಂದಿನ ಅಲೋಪತಿ ಚಿಕಿತ್ಸೆಯು ಬಹಳ ದುಬಾರಿಯಾಗಿದೆ. ಉತ್ತಮ ಆರ್ಥಿಕ ಸಾಮರ್ಥ್ಯವನ್ನು ಹೊಂದಿರುವವರಿಗೆ ಮಾತ್ರ ಈಗಿನ ಅಲೋಪಥಿ ಚಿಕಿತ್ಸೆಯ ಪ್ರಯೋಜನ ಪಡೆಯಬಹುದಾಗಿದೆ. ಆರ್ಥಿಕವಾಗಿ ಹಿಂದುಳಿದ ಬಡವರಿಗೂ, ದಾರಿದ್ರ್ಯ ರೇಖೆಗಿಂತ ಕೆಳಗಿನವರು ಅಧಿಕ ಸಂಖ್ಯೆಯಲ್ಲಿ ಇರುವ ಈ ಪಂಚಾಯತಿನ ಬಹುಭಾಗ ಜನರಿಗೆ ಇಂದಿನ ದುಬಾರಿ ಖರ್ಚಿನಿಂದಾಗಿ ಅಲೋಪಥಿ ಚಿಕಿತ್ಸೆಯ ಪ್ರಯೋಜನ ಪಡೆಯಲು ಸಾಧ್ಯವಾಗುವುದಿಲ್ಲ. ಸರಕಾರಿ ಅಲೋಪಥಿ ವ್ಯವಸ್ಥೆ ತೀರಾ ಶೋಚನೀಯ. ಗಿಡಮೂಲಿಕೆಗಳ ನಾಡ ವೈದ್ಯಕೀಯ ಸಾಂಪ್ರದಾಯವು ನಾಶದಂಚಿಕೆ ತಲಪಿದೆ. ಆಯುರ್ವೇದ ಚಿಕಿತ್ಸೆಗೂ ಸರಿಯಾದ ಪ್ರೋತ್ಸಾಹವಿಲ್ಲ.

ಜನನ ಮರಣ ಮಾಹಿತಿಗಳು

ವರ್ಷ 1	ಜನನ 2	ಮರಣ 3
1993	218	82
1994	228	84
1995	239	89

ಗ್ರಾಮ ಸಭೆಯ ವರದಿಯ ಕ್ರೋಢೀಕರಣದಿಂದ ತಿಳಿದು ಬಂದಂತೆಯೇ ನಮ್ಮ ಈ ಪಂಚಾಯತನ್ನು ರೋಗರಹಿತ ಪಂಚಾಯತು (ಆರೋಗ್ಯಪೂರ್ಣ ಪಂಚಾಯತು) ಆಗಿ ಮಾರ್ಪಡಿಸುವುದೇ ನಮ್ಮ ಗುರಿಯಾಗಿದೆ.

ಸಮಸ್ಯೆಗಳು

1. ಈಗ ಅಂಗೀಕರಿಸಿದ ಸಾರ್ವಜನಿಕ ಆರೋಗ್ಯ ಸಂವಿದಾನ ಸೂಕ್ತವಲ್ಲ.
2. ರೋಗ ಚಿಕಿತ್ಸೆಗಾಗಿ ಖಾಸಗೀ ಆಸ್ಪತ್ರೆಯನ್ನು ಅವಲಂಬಿಸಬೇಕಾಗುತ್ತದೆ.
3. ಪಂಚಾಯತು ಪರಿಧಿಯಲ್ಲಿ ಇಪ್ಪತ್ತನಾಲ್ಕು ಗಂಟೆಗಳ ಕಾಲ ಸೇವೆ ನೀಡುವ ಡಾಕ್ಟರರೋ ಆಸ್ಪತ್ರೆಯೋ ಇಲ್ಲ.
4. ಚಿಗ್ರುಪಾದೆಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸ್ವಂತ ಕಟ್ಟಡವಿಲ್ಲ. ಇದು ಬಾಡಿಗೆ ಕಟ್ಟಡದಲ್ಲಿ ಪ್ರವರ್ತಿಸುತ್ತಿದೆ. ಸಾರ್ವಜನಿಕರು ಸೇರಿ ಸಂಗ್ರಹಿಸಿದ ಎರಡು ಎಕ್ರೆ ಸ್ಥಳದಲ್ಲಿ ಇದು ವರೆಗೆ ಯಾವ ಕಟ್ಟಡವೂ ಕಟ್ಟಲಿಲ್ಲ ಮತ್ತು ಇಲ್ಲಿ ಸೌಕರ್ಯಗಳಿಲ್ಲ. ಇಲ್ಲಿಗೆ ನೀರಿನ ಸರಬರಾಜು ವ್ಯವಸ್ಥೆ ಮತ್ತು ಫರ್ನೀಚರುಗಳಿಲ್ಲ.
5. ಆಯುರ್ವೇದಿಕ್ ಡಿಸ್ಪೆನ್ಸರಿಯಲ್ಲಿ ಪ್ರಾಥಮಿಕ ಆವಶ್ಯಕತೆಗಳಿಲ್ಲ.
6. ಈಗ ಇರುವ ಕುಟುಂಬ ಕ್ಷೇಮಯೋಜನೆ ಪಂಚಾಯತಿನ ಎಲ್ಲಾ ವಿಭಾಗಕ್ಕೂ ಇದರ ಸೇವೆ ತಲುಪುವುದಿಲ್ಲ.
7. ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಸೂಕ್ತ ಸಂವಿದಾನವಿಲ್ಲ.

8. ಸೊಳ್ಳೆ ನಿವಾರಣೆ, ಮಲೇರಿಯಾ ನಿಯಂತ್ರಣ ಮೊದಲಾದ ಕಾರ್ಯಗಳು ಪಂಚಾಯತಿನಲ್ಲಿ ಸರಿಯಾಗಿ ನಿರ್ವಹಿಸುವುದಿಲ್ಲ.

9. ಶುಚಿತ್ವ - ಇದು ಎಲ್ಲಾ ಕಡೆಯಲ್ಲೂ ಸರಿಯಾಗಿ ನಡೆಯುವುದಿಲ್ಲ.

10. ಹೆಚ್ಚಿನ ಮನೆಗಳಿಗೆ ಕಕ್ಕುಸ್ಸು, ಶುದ್ಧನೀರಿನ ವ್ಯವಸ್ಥೆ ಇಲ್ಲ.

11. ಪೋಷಕಾಂಶದ ಕೊರತೆ.

ಸಾಧ್ಯತೆಗಳು

1. ಸಾರ್ವಜನಿಕ ಆರೋಗ್ಯ ಸಂವಿಧಾನ ತ್ವರಿತಗತಿಯಲ್ಲಿ ನಡೆಸುವುದು.

2. ಚಿಗ್ರುಪಾದೆ PHCಗೆ ಗ್ರಾಮೀಣರು ಖರೀದಿಸಿದ ಜಾಗದಲ್ಲಿ ಕಟ್ಟಡ ನಿರ್ಮಿಸಿ ಕೂಡಲೇ ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸುವುದು.

3. ಆರೋಗ್ಯ ಸಮಸ್ಯೆ ಕಲಿತು ಕೂಡಲೇ ಇದಕ್ಕೆ ಬೇಕಾದ ಸಂವಿಧಾನ ಮಾಡುವುದು.

4. ಸಹಕಾರಿ ಆಸ್ಪತ್ರೆ ನಿರ್ಮಾಣ.

5. ಆಯುರ್ವೇದಿಕ್ ಆಸ್ಪತ್ರೆ PHC ಮತ್ತು FWCಗೆ ಔಷಧಿ ಮತ್ತು ಅತ್ಯಾಗತ್ಯ ಸಾಮಗ್ರಿಗಳನ್ನು ನೀಡುವುದು.

6. ಕಳಿಯೂರು ಮರತ್ತಡ್ಕ, ಮದಂಗಲ್ಲು ಕಟ್ಟೆ, ಕೋಳ್ಯೂರು ಶಾಲಾ ಬಳಿ, ಕಡಂಬಾರು ಮತ್ತು ಅಟ್ಟೆಗೋಳಿಯಲ್ಲಿ ಒಂದೊಂದು F.W. ಸೆಂಟರನ್ನು ನಿರ್ಮಿಸುವುದು.

ಸಾರಿಗೆ ಮತ್ತು ಚೈತನ್ಯ, ಮಾರ್ಕೆಟ್

ಸಾರಿಗೆ : ನಮ್ಮ ಪಂಚಾಯತಿನಲ್ಲಿ ಸಾಮಾನ್ಯವಾಗಿ ಉತ್ತಮವಾದ ಸಾರಿಗೆ ವ್ಯವಸ್ಥೆ ಇದೆ. 80ರ ಕಾಲಘಟ್ಟದಲ್ಲಿ ಮೊಂಜದಲ್ಲಿ ಸಮಗ್ರ ಮಾರ್ಗ ವಿಕಸನಕ್ಕೆ ಆರಂಭಗೊಂಡಂದಿನಿಂದ ಪಂಚಾಯತಿನೊಳಗಿರುವ ಒಟ್ಟು ರಸ್ತೆಗಳ ಸಂಖ್ಯೆ 121. ಇದರ ಉದ್ದ ಸುಮಾರು 123 ಕಿ.ಮೀ.ಗಳು. ಇದರಲ್ಲಿ 21ಕಿ.ಮೀ. ರಸ್ತೆಗಳು ಡಾಮರೀಕರಿಸಿದೆ. ಪಂಚಾಯತು ರಸ್ತೆಯ ಉದ್ದ 89 ಕಿ.ಮೀ. ಇದರಲ್ಲಿ ಡಾಮರು ಹಾಕಿದ್ದು 18 ಕಿ.ಮೀ. ರಸ್ತೆಯಾಗಿದೆ.

ಇಲ್ಲಿನ ರಸ್ತೆಗಳ ವಿನ್ಯಾಸ ಉತ್ತಮವಾಗಿದ್ದರೂ ರಸ್ತೆಗಳ ಸ್ಥಿತಿ ಶೋಚನೀಯವಾಗಿದೆ. ಹೆಚ್ಚಿನ ರಸ್ತೆಗಳು ಡಾಮರೀಕರಿಸಲಿಲ್ಲ. ಚರಂಡಿ ವ್ಯವಸ್ಥೆಗಳಿಲ್ಲ. ಆರ್ಥಿಕ ಬಿಕ್ಕಟ್ಟಿನಿಂದಾಗಿ ರಸ್ತೆಗಳ ದುರಸ್ಥಿ ಸಕಾಲಕ್ಕೆ ಆಗುವುದಿಲ್ಲ. ದುರಸ್ಥಿಯಾದರೂ ಸಹ ಮಳೆಗಾಲಕ್ಕಾಗುವಾಗ ಪುನಃ ಅದೇ ಸ್ಥಿತಿಗೆ ಮರುಕಳಿಸುತ್ತದೆ.

ವಿಕಸನವೆಂದರೆ ಮಾರ್ಗ ನಿರ್ಮಾಣ ಎಂಬಂತಿದೆ. ಈಗಿನ ಮಾರ್ಗಗಳ ನಿರ್ಮಾಣ ಪ್ರಾಥಮಿಕ ಅವಶ್ಯಕತೆಗಳನ್ನು ಪೂರೈಸದಿದ್ದರೂ ಎಲ್ಲರೂ ಮಾರ್ಗಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿ ಇಡೀ ಊರಲ್ಲೇ ಮಾರ್ಗ ಒದಗಿಸುವಂತಹ ಸಂದರ್ಭ ಉಂಟಾಗಿದೆ. ಈಗ ಮಾರ್ಗ ಜನಜೀವನದ ಒಂದು ಅಂಗವಾಗಿ ಮಾರ್ಪಾಡಾಗಿದೆ. ಯಾತ್ರಾ ಸೌಕರ್ಯ ಉತ್ತಮ ರೀತಿಯ ವಾಣಿಜ್ಯ ವಲಯಗಳ ಉನ್ನತಿಯು ಮಾರ್ಗವನ್ನೇ ಆಶ್ರಯಿಸಿದೆ. ವಸ್ತುನಿಷ್ಠವಾದ ದೃಷ್ಟಿಕೋನ ಇಲ್ಲದುದರಿಂದ ಒಂದು ವಿಕಲತೆ ಹೊಂದಿದ ಮಾರ್ಗ ಶೃಂಖಲೆ ಉಂಟಾಗಿದೆ. ತಾತ್ಕಾಲಿಕವಾಗಿ ಮಾರ್ಗಕ್ಕೇ ಬೇಕಾಗಿ ಜಾಗ ದಾನ ನೀಡಿದವರು ಮತ್ತು ಮೊದಲು ಉದ್ಘಾರ ತೆಗೆದವರು ಅನಂತರ ಅದೇ ಮನೋಭಾವವನ್ನು ತೋರಿಸದೆ ಇರದಿರುವುದರಿಂದ ಹೆಚ್ಚಿನ ಮಾರ್ಗಗಳು ಪೂರ್ಣವಾಗದೇ ನಿಂತಿದೆ. ಉದಾ : ಮಂಜೇಶ್ವರ -ಕುಳೂರು-ಬೇಕೂರು ರಸ್ತೆ. ಇದು ಕುಳೂರಿನ ಪೊಯ್ಯಲಿನವರೆಗೆ ಆಗಿದ್ದು ಅನಂತರ ಉಪ್ಪಳದ ಹೊಳೆಗೆ ಸಂಕ ನಿರ್ಮಿಸದೇ ಇರುವುದರಿಂದ ಇದು ಅಲ್ಲಿಗೇ ಮುಕ್ತಾಯಗೊಂಡಿದೆ. ಪಂಚಾಯತಿನಲ್ಲಿ ಒಳಗೊಂಡಿರುವ ಹಲವು ಮಾರ್ಗಗಳು ಡಾಮರೀಕರಣ ಆಗದೆ ಸಂಚಾರಕ್ಕೆ ಯೋಗ್ಯವಲ್ಲದ್ದಾಗಿದೆ. ಪಂಚಾಯತಿನೊಳಗೆ ಬರುವ ಮಾರ್ಗಗಳ ಪಟ್ಟಿ ಈ ಕೆಳಗಿನಂತಿದೆ.

ಪ್ರಧಾನ ಮಾರ್ಗಗಳು

ಕ್ರಮಸಂಖ್ಯೆ	ಮಾರ್ಗಗಳು	NH	PWD	ಪಂಚಾಯತ್	ಡಾಮಾರು	ಮಣ್ಣಿನ ಮಾರ್ಗ	ಉದ್ದ
1	ಮಂಜೇಶ್ವರ-ಚೆಕ್‌ಪೋಸ್ಟ್-ಭಗವತೀ	✓			✓		1.5 K.M
2.	ಕಡಂಬಾರು-ಸುಂಕದಕಟ್ಟೆ-ಮಜಿರ್‌ಪಳ್ಳ		✓		✓		8 K.M.
3.	ಮಂಜೇಶ್ವರ-ಕುಳೂರು		✓		✓		10 K.M.
4.	ಮೀಯಪದವು-ಚಿಗುರುಪಾದೆ		✓		✓		2 K.M.
5.	ಮುರತ್ತಣೆ-ಮೀಯಪದವು		✓		✓		4 K.M.
6.	ದುರ್ಗಿಪಳ್ಳ-ಮೀಯಪದವು-ಮುನ್ನಿಪ್ಪಾಡಿ		✓			✓	10 K.M.
7.	ಮೀಯಪದವು-ಪಳ್ಳತ್ತಡ್ಕ		✓			✓	3 K.M.
8.	ಚಿಗುರುಪಾದೆ -ಬೇರಿಕೆ			✓		✓	2 K.M.
9.	ತೊಟ್ಟತ್ತೋಡಿ-ಚಿನಾಲ		✓			✓	5 K.M.
10.	ಸುನ್ನಾರ-ಮಡಿಮೊಗರ್		✓			✓	5 K.M.
11.	ಮಜಿರ್‌ಪಳ್ಳ-ಕೋಳಿಯೂರು		✓	✓	✓		8 K.M.
12.	ಮೂಡಂಬೈಲ್-ಬಳ್ಳಂಗುಡೇಲ್		✓		✓		4 K.M.

13.	ಕೋಳಿಯೂರು-ವಾರಣಾಸಿ			✓		✓	2 K.M.
14.	Sukadakatte-Kodange			✓		✓	3 K.M.
15.	ಸುನ್ನಾರ-ಆರಿಕಟ್ಟ		✓			✓	2.6 K.M.
16.	ಕಂಬಿಲ-ದಡ್ಡಂಗಡಿ			✓		✓	2.6 K.M.
17.	ಚಿಗುರುಪಾದೆ-ಕುಂಬಳಕೊಳಂಜಿ			✓		✓	7.5 K.M.
18.	ಬಾಳಿಯೂರು-ಮಂಗಳಿಮಾರು			✓		✓	2 K.M.
19.	ಸೇಂತಡ್ಕ-ನೀರುಳ್ಳಿ			✓		✓	2 K.M.
20.	ಬೇರಿಕೆ-ಬುಡ್ರಿಯಾ		✓			✓	2 K.M.
21.	ನರಿಯಾರು-ಕಡಂಬಾರು			✓		✓	2 K.M.
22.	ಬಟ್ಯಪದವು-ಕಳಿಯೂರು			✓		✓	2 K.M.
23.	ಜಪ್ಪತೊಟ್ಟಿ-ದೇರಂಬಳ			✓		✓	2 K.M.
24.	ಬೆಜ್ಜ-ಚಾಕೆಕಲ್ಲು-ಬೆಜ್ಜಂಗಳ	✓		✓			2 K.M.
25.	ನಾಡೇಲು-ಕನ್ಯಾನ			✓		✓	2 K.M.
26.	ಕೊಮ್ಮಂಗಳ-ಅಡ್ಕ			✓		✓	2 K.M.
27.	ಸಂತಡ್ಕ-ನೀರೊಳಿಗೆ		✓			✓	2 K.M.
28.	ಚಿಗುರುಪಾದೆ -ಬ್ರಹ್ಮರಕಟ್ಟ		✓			✓	2 K.M.

ರಾಷ್ಟ್ರೀಯ ಹೆದ್ದಾರಿ N.H. 17 ಮಜಿಬೈಲು ಗ್ರಾಮದ ಮೂಲಕ ಹಾದು ಹೋಗುತ್ತದೆ. ಕೆಲ ವಾರ್ಡುಗಳೊಳಗಿರುವ ಪಂಚಾಯತ್ PWD ಮಾರ್ಗಗಳು N.H. 17ಗೆ ಕೂಡುತ್ತದೆ. ಹೊಸಂಗಡಿಯಿಂದ -ಮೀಯಪದವು-ಕುಳೂರು ವರೆಗಿನ ರಸ್ತೆಗಳು ಹೆಚ್ಚು ತಿರುವುಗಳಿಂದ ಕೂಡಿದೆ. ಇದರಿಂದಾಗಿ ಯೋಗ್ಯ ಸಂಚಾರಕ್ಕೆ ತಡೆಯಾಗಿದೆ.

ಮೀಯಪದವು ಮೂಂಜ ಪಂಚಾಯತ್‌ನ ಹೃದಯ ಭಾಗವಾಗಿದೆ. ಇಲ್ಲಿ ಪಂಚಾಯತು ಕಛೇರಿ, ಬ್ಯಾಂಕುಗಳು, ವಿಲೇಜ್ ಆಫೀಸ್, ಕೃಷಿ ಭವನಗಳು, ಮೃಗಾಸ್ಪತ್ರೆ, ಆಯುರ್ವೇದಿಕ್ ಆಸ್ಪತ್ರೆ, ಶಾಲೆ ಇದೆ. ಇಲ್ಲಿ ಬಸ್ಸು ಸಂಚಾರ ಕಡಿಮೆ. ಪ್ರಯಾಣಿಕರು ಯಾತ್ರೆಗಾಗಿ ಇತರ ವಾಹನಗಳನ್ನು ಅವಲಂಬಿಸಬೇಕಾಗುತ್ತದೆ. ಒಂದು ವರ್ಷಕ್ಕೆ ಮೊದಲೊಂದು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸೊಂದು ಬಂದು ಒಂದೇ ತಿಂಗಳಲ್ಲಿ ಅದು ಮಾಯವಾಯಿತು. ಏಳೆಂಟು ಖಾಸಗಿ ಬಸ್ಸುಗಳು, ದಿನವೊಂದರಲ್ಲಿ 30 ಸಲ ಹೊಸಂಗಡಿಯ ವರೆಗೆ ಸರ್ವೀಸ್ ಮಾಡಿದರೂ ಅಗತ್ಯದ ಸಮಯಗಳಲ್ಲಿ ಬಸ್ಸು ಲಭಿಸುವುದಿಲ್ಲ. ಬಸ್ಸಿನ ವೇಳಾಪಟ್ಟಿಯನ್ನು ಕ್ರಮೀಕರಿಸದಿರುವುದು ಇದಕ್ಕೆ ಕಾರಣವಾಗಿದೆ.

ಪಂಚಾಯತಿನ ಕೋಳಿಯೂರು, ಕಳಿಯೂರು ಭಾಗದಲ್ಲಿ ಹಾದು ಹೋಗುವ ಮಂಜೇಶ್ವರ ಉಕ್ಕುಡ ರೋಡ್ ಒಂದು ಪ್ರಧಾನ ಮಾರ್ಗವಾಗಿದೆ. ಇದರಿಂದ ಮುರತ್ತಣೆ ಎಂಬಲ್ಲಿ ಕವಲೊಡೆದು, ಮೀಯಪದವು ಮತ್ತು ಇತರ ಪ್ರದೇಶಗಳಿಗೆ ಮಾರ್ಗ ಹಾದು ಹೋಗುತ್ತದೆ. ಜನರೊಳಗೆ ಸಂಪರ್ಕವನ್ನು ಹೆಚ್ಚಿಸಲು ಹಾಗೂ ವ್ಯಾಪಾರ ವ್ಯವಹಾರವನ್ನು ಅಭಿವೃದ್ಧಿ ಪಡಿಸಲು ಸಾರಿಗೆ ಸೌಕರ್ಯ ಅಗತ್ಯವಾಗಿದೆ.

ಸಮಸ್ಯೆಗಳು

I ಗ್ರಾಮ ಸಭೆಯಲ್ಲಿ ಅವಶ್ಯಪಟ್ಟ ಮಾರ್ಗಗಳು

1. ಮಂಜೇಶ್ವ-ಕುಳೂರು-ಬೇಕೂರು ರಸ್ತೆ ನಿರ್ಮಾಣ - ಪೊಯ್ಯಲಿನಲ್ಲಿ ಉಪ್ಪಳ ಹೊಳೆಗೆ ಸಂಕ ನಿರ್ಮಾಣ ಮಾಡಿ ಶೀಘ್ರ ಸಂಚಾರ ಯೋಗ್ಯವನ್ನಾಗಿಸಬೇಕು.
2. ಚಿಗುರುಪಾದೆ ಜಂಕ್ಷನ್‌ನಿಂದ ಒಳದಾರಿಯಾಗಿ ಬಾಳ್ಯೂರಿಗೆ ಸೇರುವ ಮಾರ್ಗದ ಡಾಮರೀಕರಣ.
3. ಸಂತಡ್ಕ ಕಲಾಯಿ ಕಟ್ಟೆಯಿಂದ ಕುಳೂರು ಶಾಲೆ ಸಂಪರ್ಕಿಸಲು ಸರಿಯಾದ ಮಾರ್ಗದ ವ್ಯವಸ್ಥೆ.

4. ಚಿಗುರುಪಾದೆ ಅಂಬೇಡ್ಕರ್ ಕಾಲನಿಯಿಂದ ಕೂಳಿಮೇರು ಸಾದ್ರಗದ್ದೆಯ ವರೆಗಿನ PWD ಮಾರ್ಗದ ದುರಸ್ಥಿ ಹಾಗೂ ಡಾಮರೀಕರಣ.
5. ದೇರಂಬಳದಿಂದ ಬೇರಿಕೆಯವರೆಗೆ ಮಾರ್ಗಕ್ಕೆ ಡಾಮರೀಕರಣ.
6. ಬಾಳಿಯೂರಿನಿಂದ ಮಂಗಳಿಮಾರು ಎಂಬಲ್ಲಿನ ಮಾರ್ಗ ದುರಸ್ಥಿ ಹಾಗೂ ಮಂಗಳಿಮಾರಿನಲ್ಲಿ ಸಂಕ.
7. ಕೂಳಿಮೇರಿನಿಂದ ದೇರಂಬಳವರೆಗಿನ ಮಾರ್ಗದ ದುರಸ್ಥಿ.
8. ಕಡಂಬಾರು ದೇವಸ್ಥಾನ ಹಾಗೂ ಮಸೀದಿ ವರೆಗೆ ಮಾರ್ಗ ನಿರ್ಮಾಣ.
9. ಬಟ್ಯಪದವಿನಿಂದ ತಲೇಕಳ ಮಸೀದಿಯವರೆಗಿನ ಮಾರ್ಗಕ್ಕೆ ಡಾಮರು.
10. ಮದಂಗಲ್ಲು ಕಟ್ಟೆಯಿಂದ ದೇವಸ್ಥಾನದ ವರೆಗಿನ ಮಾರ್ಗದ ಡಾಮರೀಕರಣ.
11. ಬಾಳೆಪದವಿನಿಂದ ಕೊಮ್ಮೆ ಬಯಲಿಗೆ ಮಾರ್ಗ.
12. ತಲೇಕಳ ನಾಡಿಬೈಲಿನಿಂದ ಗುಳಿಗಬನದ ವರೆಗೆ ರಸ್ತೆ.
13. ಕಲ್ಮಾರ್ ಕಾವುಡೇಲಿನಿಂದ -ಕಡಂಬಾರ್ ವರೆಗೆ ಮಾರ್ಗದ ವ್ಯವಸ್ಥೆ.
14. ಬಟ್ಯಪದವಿನಿಂದ ಬೆಜ್ಜದ ವರೆಗಿನ ಮಾರ್ಗದ ದುರಸ್ತಿ.
15. ದುರ್ಗಿಪಳ್ಳ-ಬೆಜ್ಜ-ಮನ್ನಿಪ್ಪಾಡಿ ರಸ್ತೆ ಶೀಘ್ರ ನಿರ್ಮಾಣ.
16. ಕುಂಬಾರು-ಗುಳಿಗಬನ ತಲೇಕಳದ ವರೆಗೆ ಮಾರ್ಗ ನಿರ್ಮಾಣ.
17. ಚಾಕೆಕಲ್ಲು-ಅಂಕಟ್ಟ ರಸ್ತೆ ನಿರ್ಮಾಣ.
18. ಬಾಳಿಯೂರು-ಅರಿಕಟ್ಟ ರಸ್ತೆ ಡಾಮರೀಕರಣ ಹಾಗೂ ಬಾಳಿಯೂರಿನಲ್ಲೊಂದು ತೋಡಿಗೆ ಸಂಕ ಶೀಘ್ರ ನಿರ್ಮಾಣ.
19. ತಲೇಕಳ-ಅಗ್ರಾಲ ರಸ್ತೆ ನಿರ್ಮಾಣ.
20. ಮೂಡಂಬೈಲು ಬಲ್ಲಂಗುಡೇಲು ವರೆಗೆ ಉಳಿದ ಜಾಗಕ್ಕೆ ಡಾಮರೀಕರಣ.
21. ಚಿಗುರುಪಾದೆ-ಬೇರಿಕೆ ರಸ್ತೆ ಡಾಮರೀಕರಣ.
22. ಸಂತಡ್ಕ-ಬೇಳ-ಬಾಳಿಯೂರು ರಸ್ತೆ ಡಾಮರೀಕರಣ.
23. ಬೇಳ-ಪಾರ ರಸ್ತೆ ದುರಸ್ಥಿ
24. ಸುನ್ನಾರಗೋಳಿ-ಕಾಡೂರು ರಸ್ತೆ ನಿರ್ಮಾಣ.
25. ಚೇರೆಲ್-ನೀರುಳ್ಳಿ-ಕೊಂಕೋಡಿ ರಸ್ತೆ ದುರಸ್ತಿ.
26. ಉಪ್ಪಳ ಹೊಳೆಗೆ ಪತ್ವಾಡಿಯಲ್ಲಿ ಸಂಕ ನಿರ್ಮಾಣ.
27. a) ಮೀಯಪದವು-ಪಳ್ಳತ್ತಡ್ಕ b) ಮೀಯಪದವು - ಹರಿಜನ ಕಾಲನಿ ಮುಜಿಕಲ್ ರಸ್ತೆಗೆ ಡಾಮಾರು. c) ಚಿಗುರುಪಾದೆ - ಬೇರಿಗೆ ರಸ್ತೆ ಡಾಮರೀಕರಣ.
28. ಮೀಯಪದವು-ಬೆಜ್ಜಂಗಳ-ಅಗ್ರಾಲ ರಸ್ತೆ ನಿರ್ಮಾಣ.
29. ಮೀಯಪದವು-ಮುಜಿಕಲ್ಲು ರಸ್ತೆಗೆ ಡಾಮರೀಕರಣ.
30. ಮೀಯಪದವು-ಪಳ್ಳತ್ತಡ್ಕ ಬಯಲು, ಮೀಯಪದವು-ದಂಬೆತ್ತೋಡಿ ರಸ್ತೆಗಳ ನಿರ್ಮಾಣ. b) ಕೊಮ್ಮಂಗಳ-ಕೊಳಚ್ಚಪ್ಪು ರಸ್ತೆ ದುರಸ್ತಿ
31. a) ಮೀಯಪದವು ಶಾಲಾಬಳಿ ರಸ್ತೆ ತಡೆ (Humps) ನಿರ್ಮಾಣ. b) ಕೊಮ್ಮಂಗಳ -ಮುದ್ದನಡ್ಕ ರಸ್ತೆ ದುರಸ್ಥಿ

V ವಾರ್ಡ್

32. ಮುರತ್ತಣೆಯಿಂದ ಕಳಿಯೂರು, ಕಳಿಯೂರು -ಮದಕ-ಬಾಳೆಹಿತ್ಲು, ಕೊರತಿಪಳಿಕೆಯಿಂದ -ರಕ್ತೇಶ್ವರಿ ದೇವಸ್ಥಾನ, ಬೇಕರಿ ಬುಡ್ಪೋಡಿಯ ವರೆಗಿನ ಮಾರ್ಗದ ನಿರ್ಮಾಣ ಮತ್ತು ಡಾಮರೀಕರಣ.

33. ಕಳಿಯೂರು ಶೆಟ್ಟಿಬೆಟ್ಟು ಮಾರ್ಗಕ್ಕೆ ಡಾಮರೀಕರಣ.

34. ಕಡಂಬಾರು ಚೌಕಿನಿಂದ ಬೆಜ್ಜ, ಬಂಟ್ಯಜಾರು ತನಕ 5 K.M. ರಸ್ತೆ ನಿರ್ಮಾಣ.

35. ಕಡಂಬಾರು ಮಸೀದಿಯಿಂದ -ಭಂಡಾರ ವರೆಗಿನ ರಸ್ತೆ ನಿರ್ಮಾಣ.

36. ಮುರತ್ತಣೆಯಿಂದ ಕಜೆಕೋಡಿಯವರೆಗೆ, ಬಾಬಳಿಕೆಯಿಂದ ಕಡಂಬಾರು, ಸಂಕಬೈಲಿನಿಂದ -ಕಲ್ಲಕಟ್ಟ ರಸ್ತೆಗಳ ನಿರ್ಮಾಣ.

1. ನೀರಳಿಕೆಯಿಂದ ಕಳಿಯೂರು ಮಾಡಿ ಮಾರ್ ಮಾರ್ಗ ರಚನೆ.

2. ಬಂಡಸಾಲೆ ಪದವು-ಪದೆಂಜಿಬೈಲು ಮಾರ್ಗ

3. ಮಜಿರ್ಪಳ್ಳದಿಂದ ಕೊನಿಲದ ವರೆಗೆ ದುರಸ್ತಿ ಮತ್ತು ಡಾಮರೀಕರಣ

4. ಕೋಳಿಯೂರು ಪದವಿನಿಂದ ಕಳಿಯೂರು ವರೆಗೆ ದುರಸ್ತಿ ಡಾಮರೀಕರಣ.

5. ನೀರಳಿಕೆ-ಪದೆಂಜಿಬೈಲು ಮಾರ್ಗಕ್ಕೆ ಡಾಮರೀಕರಣ

6. ರಕ್ತೇಶ್ವರಿ ಪದವು-ಅರಂತಾಡಿ ಮಾರ್ಗಕ್ಕೆ ಡಾಮರೀಕರಣ.

7. ಬಟ್ಯಪದವು-ಉಜಿರೆ ಮಾರ್ಗಕ್ಕೆ ಡಾಮರೀಕರಣ.

37. ಕರಿಬೈಲು ಹರಿಜನ ಕಾಲನಿವರೆಗೆ ಡಾಮರೀಕರಣ.

38. ಮಜಿಬೈಲು ವರೆಗೆ ಮತ್ತು ಚುಳ್ಳಿಮಾರ್ಗಕ್ಕೆ ಡಾಮರೀಕರಣ

39. ಮಾಡಾಯಿಮಾರು -ಕುಂಜಿಯಿತ್ಲು-ಚಾಕಟ್ಟೆ-ಶಾಲೆ ವರೆಗಿನ ರಸ್ತೆ.

40. ಉಪ್ಪಳ-ಭಗವತೀ ಕ್ಷೇತ್ರ ಮಾರ್ಗ ದುರಸ್ತಿ ಮತ್ತು ಡಾಮರೀಕರಣ.

41. ಮಜಿಬೈಲು-ಪಮ್ಮಾರು ರಸ್ತೆ ನಿರ್ಮಾಣ.

42. ದೈಗೋಳಿ-ಬೋರ್ಕಳ-ಮುನ್ನಿಪ್ಪಾಡಿ-ಮೀಯಪದವು ಮಾರ್ಗಕ್ಕೆ ಸಂಕ ನಿರ್ಮಿಸಿ ಕೂಡಲೇ ಡಾಮರೀಕರಣ.

43. ಸುಂಕದಕಟ್ಟೆ-ವಾರಣಾಸಿ, ಮಜಿರ್‌ಪಳ್ಳ-ರಾವಾಳಿಕೆ, ಬೋರ್ಕಳ-ಚಕ್ರಕ್ಕೋಡಿ, ಬೋರ್ಕಳ ಪದವು ಕೋಳ್ಯೂರು ಮಸೀದಿ ಮಾರ್ಗಗಳ ದುರಸ್ತಿ ಹಾಗೂ ಡಾಮರೀಕರಣ.

44. ಮುಡಿಪ್ಪು-ಕಾಸರಗೋಡು ವಿದ್ಯಾನಗರ ರಸ್ತೆಯ ಕಳಾಯಿ ಎಂಬಲ್ಲಿ ಸಂಕ ಮತ್ತು ಡಾಮರೀಕರಣ.

45. ಅಟ್ಟೆಗೋಳಿ-ಮೀಯಪದವಿಗೆ ನೇರ ಸಂಪರ್ಕ ವ್ಯವಸ್ಥೆ

46. ಚಿಗುರುಪಾದೆಯಿಂದ ಕಲ್ಯಾರುವರೆಗೆ ಮಾರ್ಗ ನಿರ್ಮಾಣ.

47. ಅಟ್ಟೆಗೋಳಿಯಿಂದ ಇದ್ದಂಗೋಳಿ ಮಾರ್ಗ ನಿರ್ಮಾಣ.

48. ಚಿಗುರುಪಾದೆಯಿಂದ ತೊಟ್ಟೆತ್ತೋಡಿ (ಸಾಲೆದೇರ) ರಸ್ತೆ ಅಭಿವೃದ್ಧಿ ಮತ್ತು ಡಾಮರೀಕರಣ.

49. ಬೇರಿಕೆಯಿಂದ ಮೊಂಜಬೈಲಿಗೆ ಡಾಮರೀಕರಣ.

50. ಬೇರಿಕೆಯಿಂದ ಮಾಕಾಳಿ ರಸ್ತೆಯ ದುರಸ್ತಿ ಮತ್ತು ಡಾಮರೀಕರಣ.

51. ಬೇರಿಕೆಯಿಂದ ಬುಡ್ರಿಯ ರಸ್ತೆ ದುರಸ್ತಿ ಹಾಗೂ ಡಾಮರೀಕರಣ.

52. ಅಟ್ಟೆಗೋಳಿಯಿಂದ ಗುಂಡಿಬೈಲು ರಸ್ತೆ ಡಾಮರೀಕರಣ.

53. ಬಾಯಿಕಟ್ಟೆಯಿಂದ ಕಳ್ಳಿಗೆಯವರೆಗೆ ಡಾಮರೀಕರಣ

54. ಚಿಗುರುಪಾದೆಯಿಂದ ಪಿಲಿಯಾಣ ರಸ್ತೆ ದುರಸ್ತಿ

55. ಮೂಡಂಬೈಲು ಶಾಲೆಯಿಂದ ಭಲ್ಲಂಗುಡೇಲು ಭಗವತಿ ದೈವಸ್ಥಾನದ ತನಕ ಮಾರ್ಗ ರಚನೆ ಮತ್ತು ಡಾಮರೀಕರಣ

56. ಅಂಗಡಿಪದವ, ಮಾಚೆ ಅಣೆಕಟ್ಟು ತನಕ ರಸ್ತೆ ದುರಸ್ತಿ ಮತ್ತು ಡಾಮರೀಕರಣ

ಸೇತುವೆ, ಕಾಲುಸಂಕ, ತೂಗುಸೇತುವೆ

1. ಮಂಜೇಶ್ವರ-ಬೇಕೂರು ರಸ್ತೆಗೆ ಉಪ್ಪಳ ಹೊಳೆಗೆ ಪೊಯ್ಯಲಿನಲ್ಲಿ ಸೇತುವೆ.
2. ಕಾಸರಗೋಡು-ಮುಡಿಪ್ಪು ರೋಡಿಗೆ ಕಳಾಯಿಯಲ್ಲಿ ಸೇತುವೆ.
3. ಬಾಳಿಯೂರು-ಉಪ್ಪಳ ರೋಡಿಗೆ ಪತ್ಪಾಡಿಯಲ್ಲಿ ಸೇತುವೆ.
4. ತೋಡಬಾಗಿಲು-ಕುಳೂರಿನಲ್ಲಿ ಹೊಳೆಗೆ ತೂಗು ಸೇತುವೆ.
5. Iನೇ ವಾರ್ಡಿನ ತೋಡುಗಳಿಗೆ ಅವಶ್ಯವಿರುವಲ್ಲಿ ಕಾಲು ಸಂಕ ನಿರ್ಮಾಣ.
6. IIನೇ ವಾರ್ಡಿನ ತೋಡುಗಳಿಗೆ ಅವಶ್ಯವಿರುವ ಸ್ಥಳದಲ್ಲಿ ಸಂಕ ಮತ್ತು ಪಳ್ಳತ್ತಡ್ಕ ಮತ್ತು ಬುಡ್ರಿಯದಲ್ಲಿ ಉಪ್ಪಳ ಹೊಳೆಗೆ ತೂಗು ಸೇತುವೆ.
7. IIIನೇ ವಾರ್ಡಿನಲ್ಲಿ ತೋಡುಗಳಿಗೆ ಅವಶ್ಯವಿರುವ ಸ್ಥಳಗಳಲ್ಲಿ ಕಾಲು ಸಂಕದ ನಿರ್ಮಾಣ.
8. IVನೇ ವಾರ್ಡಿನ ತೋಡುಗಳಿಗೆ ಅಗತ್ಯವಿರುವಲ್ಲಿ ಕಾಲು ಸಂಕದ ನಿರ್ಮಾಣ.
9. Vನೇ ಮತ್ತು VIನೇ ವಾರ್ಡಿನ ತೋಡುಗಳಿಗೆ ಅಗತ್ಯವಿರುವಲ್ಲಿ ಕಾಲು ಸಂಕದ ನಿರ್ಮಾಣ.
10. VII ಮತ್ತು VIII, IXನೇ ವಾರ್ಡಿನ ಎಲ್ಲಾ ತೋಡುಗಳಿಗೆ ಅಗತ್ಯವಿರುವಲ್ಲಿ ಕಾಲುಸಂಕ ನಿರ್ಮಾಣ.

ಕಾಲುದಾರಿಗಳು

ಬುಡ್ರಿಯದಿಂದ ತರೋಳಿಗುರಿ ವರೆಗೆ ಕಾಲುದಾರಿ

ಚಿನಾಲದಿಂದ -ಗುಂಡಿತೋಡಿನ ಬಳಿಗೆ ಕಾಲುದಾರಿ.

ಅಗ್ಗಿಮಾರಿನಿಂದ ಹೊಳೆತನಕ ಕಾಲುದಾರಿ.

ಚಿನಾಳ ಕೊಳಿಮೇರಿನಿಂದ ಮಡಂದೂರು ಅಣೆಕಟ್ಟಿನ ವರೆಗೆ ಕಾಲುದಾರಿ.

ಬಸ್ಸುರೂಟುಗಳಿಗೆ ಯೋಗ್ಯವಾದ ಮಾರ್ಗಗಳು

1. ಮೀಯಪದವು-ಕುಳೂರು ಶಾಲೆ.
2. ಮೀಯಪದವು-ಬೇಳ-ಮಡಿಮೊಗರು.
3. ಹೊಸಂಗಡಿ-ಬಾಳಿಯೂರು-ಕುಳೂರು ಶಾಲೆ.
4. ಮುರತ್ತಣೆ-ಮೀಯಪದವು-ಬೇರಿಕೆ -ಚಿಗ್ರುಪಾದೆ ಹೊಸಂಗಡಿ
5. ಮುನ್ನಿಪ್ಪಾಡಿ-ಮೀಯಪದವು-ಬೆಜ್ಜ-ಹೊಸಂಗಡಿ
6. ಮೀಯಪದವು-ಮುರತ್ತಣೆ-ಸುಂಕದಕಟ್ಟೆ-ಕೋಳಿಯೂರು.
7. ಮೂಡಂಬೈಲು ಶಾಲೆ-ಮೀಯಪದವು.

ಈಗ ಬಸ್ಸು ಬರುವ ರೂಟುಗಳು :

1. ಹೊಸಂಗಡಿ-ಮೀಯಪದವು.

2. ಕಲ್ಲೂರು - ಮೀಯಪದವು - ಬೇಳ

3. ಮೀಯಪದವು - ಕುಳೂರು - ಹೊಸಂಗಡಿ.

ಚೈತನ್ಯ :

ಚೈತನ್ಯದ ಕೊರತೆ ಇದು ಮೊಂಜ ಪಂಚಾಯತಿನ ಮೂಲಭೂತ ಸಮಸ್ಯೆಗಳಲ್ಲೊಂದಾಗಿದೆ. ಹಲವು ಭರವಸೆಗಳನ್ನು ನೀಡಿದರೂ ಇದುವರೆಗೆ ಇದರ ಈಡೇರಿಕೆಯಾಗಲಿಲ್ಲ. BPL ಮತ್ತು ಗೊಯೆಂಕಾ ಕಂಪೆನಿಯವರು ಉಷ್ಣವಿದ್ಯುತ್ ಸ್ಥಾವರ ಸ್ಥಾಪಿಸುವರೇ ನಮ್ಮ ಪಂಚಾಯತಿನಲ್ಲಿ ಯೋಗ್ಯ ಸ್ಥಳ ಕಂಡೆತ್ತಿದರೂ ಪರಿಸರವಾದಿಗಳ ಹಿತಚಿಂತನೆ ಗಮನಿಸಿ ಅದನ್ನು ಕೈಬಿಡಲಾಯಿತು. ಒಂದು ವಸ್ತುವನ್ನು ವೀಕ್ಷಿಸಲೂ ಎರಡು ಕಣ್ಣುಗಳು ಎಷ್ಟು ಅಗತ್ಯವೋ ಅಷ್ಟೇ ಅವಶ್ಯಕ ಸಾರಿಗೆ ಮತ್ತು ಚೈತನ್ಯ. ಪಂಚಾಯತಿನ ಅಭಿವೃದ್ಧಿಗೆ ಎಂಬುದು ನಿಸ್ಸಂದೇಹ. ಪಂಚಾಯತ್‌ನ ಅಭಿವೃದ್ಧಿಯಲ್ಲಿ ಇವೆರಡೂ ಅವಿಭಾಜ್ಯ ಅಂಗಗಳಾಗಿರುತ್ತದೆ. ಮೊಂಜ ಪಂಚಾಯತಿನ ಶೋಚನೀಯ ಸ್ಥಿತಿ ಎಂದರೆ ಇಲ್ಲಿನ ಪ್ರದೇಶಕ್ಕೂ 1/4 ಭಾಗಕ್ಕೂ ಸಾಕಾಗದ ವಿದ್ಯುತ್ ಟ್ರಾನ್ಸ್‌ಫೋರ್ಮರುಗಳು ಮಾತ್ರ ಇಲ್ಲಿ ಸ್ಥಾಪಿಸಲ್ಪಟ್ಟಿದೆ. 98 ಶತಮಾನವೂ ಕೃಷಿಯನ್ನೇ ಅವಲಂಬಿಸಿದಂತಹ ಈ ಪಂಚಾಯತ್ ಪ್ರದೇಶ ಪೂರ್ಣ ಕೃಷಿಯೋಗ್ಯ - ವಿದ್ಯುತ್ ಸೌಲಭ್ಯವನ್ನು ಇಡೀ ಪಂಚಾಯತು ವಲಯಗಳಿಗೂ ವಿಸ್ತರಿಸಬೇಕೆಂದು ಕೇಳಿಕೊಳ್ಳುತ್ತೇವೆ. C.D. ಕಟ್ಟಿದ ಎಲ್ಲಾ ಮನೆ, ಕೃಷಿ ಅವಶ್ಯಕ ಮೋಟಾರುಗಳಿಗೆ ಕೂಡಲೇ ವಿದ್ಯುತ್ ಸಂಪರ್ಕ ಕಲ್ಪಿಸಬೇಕು. C.D. ಕಟ್ಟಿ, ಎಮರ್ಜೆನ್ಸಿ, ಹಣಕಟ್ಟಿ ವರ್ಷ ಕಳೆದರೂ ಸಂಪರ್ಕ ಸಿಗದಂತಹ ವ್ಯವಸ್ಥೆಯಿದ್ದು ಇದನ್ನು ಕೂಡಲೇ ಪರಿಹರಿಸಬೇಕು.

1. ಮೀಯಪದವು, ಕುಳೂರು ಶಾಲೆ ವರೆಗೆ ದಾರಿದೀಪದ ವ್ಯವಸ್ಥೆ.

2. ಭತ್ತದ ಕೃಷಿಗೆ ಉಚಿತ ವಿದ್ಯುತ್ ನೀಡುವ ಯೋಜನೆ ಸಾಕ್ಷಾತ್ಕರಿಸುವುದು. ಮತ್ತು ಎಲ್ಲಾ ಕೃಷಿಗೂ ಉಚಿತ ವಿದ್ಯುತ್ ನೀಡುವ ಯೋಜನೆ ತಯಾರಿಸುವುದು.

3. ಬಟ್ಯ ಪದವಿನಲ್ಲಿ ಸೋಲಾರ್ ಕೇಂದ್ರದ ಸ್ಥಾಪನೆ.

4. ಸೌರ ವಿದ್ಯುತ್ ಪ್ರಚಾರ ಮತ್ತು ಧನ ಸಹಾಯ.

5. ವಿದ್ಯುತ್ ದುರ್ಬಳಕೆ ತಡೆಗಟ್ಟಬೇಕು.

6. 110 KV ಸಬ್‌ಸ್ಟೇಶನ್ ಮೀಯಪದವಿನಲ್ಲಿ ಆಗಬೇಕು.

7. ಈ ಕೆಳಗಿನ ಪ್ರದೇಶದಲ್ಲಿ Transformer ಸ್ಥಾಪಿಸಿ CD ಕಟ್ಟಿದ ಮನೆಯವರಿಗೆ ಆದಷ್ಟು ಬೇಗ ವಿದ್ಯುತ್ ಸೌಲಭ್ಯ.

    1. ಚಿಗುರುಪಾದೆಯಲ್ಲಿ Transformer ಸ್ಥಾಪನೆ.

    2. ಕುಳೂರಿನಲ್ಲಿರುವ 110 KVಯನ್ನು 160 KV ಆಗಿ ಹೆಚ್ಚಿಸಬೇಕು.

    3. ದೇರಂಬಳ ತೊಟ್ಟತೋಡಿಯಲ್ಲಿ Transformer.

    4. ಕೊಮ್ಮಂಗಳ, ದರ್ಬೆ, ಕೊಳಚಪ್ಪುನಲ್ಲಿ Transformer

    5. ಚಕ್ಕಕೋಡಿ ವಾರಣಾಸಿಯಲ್ಲಿ Transformer.

    6. ಮಜಿಬೈಲು ಸೋಯಿಪಕಲ್ಲಿನ Transformer ಸ್ಥಳ ಬದಲಾವಣೆ ಮತ್ತು KV ಹೆಚ್ಚಿಸಬೇಕು.

    7. ಒಟ್ಯ ಪದವು ಮತ್ತು ಮದಂಗಲ್ಲಿ ನಲ್ಲಿ Transformer.

    8. ಕೋಳಿಯೂರು ಪದವು ಮತ್ತು ಮರತಡ್ಕದಲ್ಲಿ ಟ್ರಾನ್ಸ್‌ಫಾರ್ಮರ್ ಸ್ಥಾಪಿಸುವುದು.

    9. ಕುಳಬೈಲಿನಲ್ಲಿ Transformer.

    10. ಮೂಡಂಬೈಲಿನ ಶಾಲೆ ಬಳಿ Transformer.

ಮೀಯಪದವಿನಲ್ಲಿ ದೂರವಾಣಿ ಎಕ್ಸ್‌ಚೇಂಜ್ ಕೂಡಲೇ ಸ್ಥಾಪನೆ ಮತ್ತು OYT General ಹಾಗೂ OYTಯ ಎಲ್ಲಾ ಅರ್ಜಿದಾರರಿಗೆ ಕೂಡಲೇ ದೂರವಾಣಿ ಸಂಪರ್ಕ ನೀಡುವುದು.

ಕುಳೂರಿನ ಚಾರ್ಲದಲ್ಲಿ ಒಂದು Branch Post Office ನಿರ್ಮಿಸುವುದು. ಮತ್ತು ಮೂಡಂಬೈಲಿನ ಮಡಿಮೊಗರಿನ BPO ನಿರ್ಮಾಣ. ಮೀಯಪದವು BPOವನ್ನು Sub PO ಆಗಿ ಪರಿವರ್ತಿಸಬೇಕು.

ಮಾರ್ಕೆಟ್ :

ಮೊಂಜ ಪಂಚಾಯತಿನ ಪರಿಧಿಗೊಳಪಡುವ ಯಾವುದೇ ಸ್ಥಳದಲ್ಲಿ ಮಾರ್ಕೆಟ್ ವ್ಯವಸ್ಥೆಯಿಲ್ಲ. ಇಲ್ಲಿ ವಾಸಿಸುವವರು ಹೆಚ್ಚಿನವರು ಕೃಷಿಕರ ಉತ್ಪತ್ತಿಯಾದ ತೆಂಗಿನಕಾಯಿ, ಅಡಿಕೆ, ಬಾಳೆಕಾಯಿಯನ್ನು ಮಾರಾಟ ಮಾಡುವರೇ ನೆರೆರಾಜ್ಯವಾದ ಕರ್ನಾಟಕವನ್ನು ಆಶ್ರಯಿಸಬೇಕಾಗುವುದು. ಇದು ಕೃಷಿಕರನ್ನು ತುಂಬಾ ಕಷ್ಟಕ್ಕೀಡು ಮಾಡುತ್ತದೆ. ತಮ್ಮ ಉತ್ಪತ್ತಿಯನ್ನು ಮಾರಾಟ ಮಾಡುವರೇ ಸಾರಿಗೆ ವೆಚ್ಚವೇ ತುಂಬಾ ಅಧಿಕವಾಗಿರುತ್ತದೆ. ಇದರಿಂದ ಕೃಷಿಕರು ನಷ್ಟದಲ್ಲೇ ಮುಳುಗಬೇಕಾಗುತ್ತದೆ.

ನಮ್ಮೀ ಪಂಚಾಯತಿನ ಪ್ರತಿ ವಾರ್ಡಿನ ಕೃಷಿ ಉತ್ಪನ್ನಗಳು, ಅವುಗಳ ಮಾರ್ಕೆಟಿಂಗ್ ಪ್ರಶ್ನೆಗಳು ಮತ್ತು ಅದರಲ್ಲಿರುವ ಪರಿಹಾರಗಳು.

7. ಅಡಿಕೆ, ತೆಂಗಿನಕಾಯಿ, ಬಾಳೆ, ಗೇರುಬೀಜ, ಅನನಾಸು, ತರಕಾರಿ ಮತ್ತು ಹಣ್ಣು ಹಂಪಲುಗಳನ್ನು ಮಾರಾಟ ಮಾಡುವ ಸಹಕಾರೀ ಸಂಘವಾಗಲೀ, ಖಾಸಗಿ ಸಂಸ್ಥೆಯಾಗಲೀ ಇಲ್ಲ. ಆದುದರಿಂದ ಇಲ್ಲಿ ಒಂದು ಮಾರ್ಕೆಟಿನ ಅಗತ್ಯವಿದೆ.
2. ಪ್ರತಿ ವಾರ ಸಂತೆಯ ಅಗತ್ಯವಿದೆ.
3. ಮೀನು ಮತ್ತು ಮಾಂಸದ ಮಾರ್ಕೆಟು ಇಲ್ಲ. ಆದುದರಿಂದ ಇದು ಅಗತ್ಯವಿದೆ.
4. ಸಹಕಾರಿ ರಂಗದಲ್ಲಿ ಒಂದು ಸಾರ್ವಜನಿಕ ಮಾರ್ಕೇಟಿನ ಅಗತ್ಯವಿದೆ.
5. ತೆಂಗಿನಕಾಯಿ, ಅಡಿಕೆ, ಬಾಳೆ ಮತ್ತು ತರಕಾರಿಗಳನ್ನು ರಫ್ತು ಮಾಡುವ ವ್ಯವಸ್ಥೆ.
6. ಸಹಕಾರಿ ಸಂಘಗಳ ಸ್ಥಾಪನೆ ಮತ್ತು ಅದರ ಕೈಕೆಳಗೆ ಪ್ರವರ್ತಿಸುವ ಒಂದು ಸಾರ್ವಜನಿಕ ಮಾರ್ಕೆಟ್ ಸ್ಥಾಪಿಸಬೇಕು.

ಕೃಷಿಕರು ಬೆಳೆಸಿದ ಕೃಷಿ ಬೆಳೆಗಳನ್ನು ಯೋಗ್ಯ ಬೆಲೆಗೆ ಮಾರಾಟ ಮಾಡಲು ಮತ್ತು ಮಧ್ಯವರ್ತಿಗಳ ಕಾಟ ಈ ಸಹಕಾರೀ ಮಾರ್ಕೆಟ್‌ನಿಂದ ಸಾಧ್ಯವಾಗುವುದು. ಅಲ್ಲದೆ ಯೋಗ್ಯಬೆಲೆಗೆ ಆ ಮಾರ್ಕೆಟ್‌ನಲ್ಲಿ ಅವಶ್ಯಕ ಸಾಮಗ್ರಿಗಳು ಲಭಿಸುವುದು. ಇದರಿಂದಾಗಿ ಪಂಚಾಯತ್‌ನ ಸಂಪನ್ಮೂಲಗಳು ಇತರರ ಪಾಲಾಗದೆ ಹೋಗುವುದನ್ನು ತಡೆಗಟ್ಟಬಹುದು.

ಈ ಪ್ರಕಾರ ನಮ್ಮ ಪಂಚಾಯತಿನ ಪರಿಧಿಯೊಳಗೆ ಬರುವ ಎಲ್ಲಾ ಕೃಷಿ ಸಂಪನ್ಮೂಲಗಳನ್ನು ಒಗ್ಗೂಡಿಸಿ ಮತ್ತು ಅದನ್ನು ಯೋಗ್ಯ ರೀತಿಯ ಮಾರ್ಕೆಟ್ ವ್ಯವಸ್ಥೆಯೊಳಗೆ ಕ್ರೋಢೀಕರಿಸಿ ಹೆಚ್ಚು ಲಾಭವಿಲ್ಲದೆ ಮತ್ತು ನಷ್ಟ ಹೊಂದದಂತೆ ಹೊಂದಾಣಿಸಿ ಹೋಗುವ ಒಂದು ಯೋಗ್ಯ ಸಾರ್ವಜನಿಕ ವಿತರಣಾ ಮತ್ತು ಮಾರಾಟ ಕೇಂದ್ರ ಸ್ಥಾಪಿಸುವುದು ಸ್ವಾಶ್ರಯ ಗ್ರಾಮದ ಮೊದಲ ಹೆಜ್ಜೆಯಾಗಿದೆ ಎಂಬುದರಲ್ಲಿ ಸಂಶಯವಿಲ್ಲ.

"ಸುಖೀ ಗ್ರಾಮರಾಜ್ಯವೇ ಸಮೃದ್ಧ ಭಾರತದ ತಳಗಟ್ಟು"

- ಗಾಂಧೀಜಿ

ಭವನ ನಿರ್ಮಾಣ ಮತ್ತು ಸಾಮಾಜಿಕ ಕ್ಷೇಮ

ಮೊಂಜ ಪಂಚಾಯತಿನ ಹೆಚ್ಚಿನ ಗ್ರಾಮಗಳಲ್ಲಿ ಹೆಚ್ಚಿನ ಕುಟುಂಬಗಳಿಗೆ ವಾಸಿಸಲು ಯೋಗ್ಯವಾದ ವಸತಿ ಸೌಕರ್ಯವಿಲ್ಲ. ಈಗಲೂ ಗುಡಿಸಲುಗಳಲ್ಲಿಯೂ, ಬಾಡಿಗೆ ರೂಮಿನಲ್ಲಿಯೂ ವಾಸಿಸುತ್ತಿರುವರು. ಆದ್ದರಿಂದ ಎಲ್ಲಾ ಗ್ರಾಮಗಳಲ್ಲಿಯೂ ಅಂತಹವರಿಗೆ ವಾಸಕ್ಕೆ ಯೋಗ್ಯವಾದ ಮನೆಗಳು ಲಭಿಸುವಂತಾಗಬೇಕು. ಇದಕ್ಕೆ ಬೇಕಾಗಿ ಸರಕಾರೀ ಖಾಲಿ ಜಾಗಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಕಂಡು ಹಿಡಿದು ಅಂತಹವರಿಗೆ ವಿತರಿಸಬೇಕು. ಇವರಿಗೆ ವಸತಿ ನಿರ್ಮಿಸಲು ತಕ್ಕ ಸಹಾಯ ಸರಕಾರಕ್ಕೊಳಪಟ್ಟ ಆರ್ಥಿಕ ಸಂಸ್ಥೆಗಳಿಂದ ಲಭಿಸುವಂತಾಗಬೇಕು.

ಈಗ ಕೆಲವು ವರ್ಷಗಳಿಂದ ಮನೆ ನಿರ್ಮಿಸುವ ರೀತಿಯಲ್ಲಿ ತುಂಬಾ ಬದಲಾವಣೆ ಬಂದಿರುತ್ತದೆ. ಮೂರು ದಶಕಗಳಿಗಿಂತ ಮೊದಲು ಮುಳಿಹುಲ್ಲು ಮತ್ತು ಸೋಗೆಯ ಮನೆಗಳೇ ಜಾಸ್ತಿಯಾಗಿತ್ತು. ಬೆರಳೆಣಿಕೆಯಷ್ಟೇ ಮನೆಗಳು ಹಂಚಿನದಾಗಿತ್ತು. ಆದರೆ ಈಗಿನ ಎರಡು ದಶಕಗಳಲ್ಲಿ ಸೋಗೆ ಮನೆಗಳು ಮಾಯವಾಗಿ ಹಂಚಿನ ಮನೆ ಮತ್ತು ಕಾಂಕ್ರೀಟು ಮನೆಗಳೇ ಜಾಸ್ತಿಯಾಗತೊಡಗಿದೆ. ಗಲ್ಫ್ ಹಣದ ಪ್ರವಾಹ ಇದಕ್ಕೆ ಮುಖ್ಯ ಕಾರಣವೆಂದೇ ಹೇಳಬೇಕು.

ಮೊಂಜ ಪಂಚಾಯತ್‌ನಲ್ಲಿರುವ ಒಟ್ಟು ಮನೆಗಳು 4445. ಇದರಲ್ಲಿ 25% ದಷ್ಟು ಮನೆಗಳು ಹುಲ್ಲಿನಿಂದಲೂ, 69%ದಷ್ಟು ಹಂಚಿನದ್ದು ಮತ್ತು 5.5%ದಷ್ಟು ಮನೆಗಳು ಕಾಂಕ್ರೀಟಿನದ್ದಾಗಿದೆ. ಮೊಂಜ ಪಂಚಾಯತಿನಲ್ಲಿರುವ ಸೋಗೆ, ಹುಲ್ಲಿನ ಮನೆಗಳು ಕಡಿಮೆಯಾದರೂ, ಈ ಮನೆಗಳು ವಾಸಕ್ಕೆ ಯೋಗ್ಯವಲ್ಲದವುಗಳಾಗಿವೆ. ಈ ಮನೆಗಳಲ್ಲಿ ಹಲವು ಪ್ರಾಥಮಿಕ ಸೌಕರ್ಯವನ್ನು ಹೊಂದದೇ ವಾಸಕ್ಕೆ ಯೋಗ್ಯವಲ್ಲದವುಗಳಾಗಿವೆ.

ಹೌಸಿಂಗ್ ಕಾಲನಿಗಳು, ಲಕ್ಷ ವಸತಿ ಕಾಲನಿಗಳು, ದುರ್ಬಲವರ್ಗ ಹಾಗೂ ಇತರ ಕಾಲನಿಗಳಲ್ಲಿ ಮೂಲಭೂತ ಸೌಕರ್ಯಗಳಲ್ಲಿರುವ ಕೊರತೆ ಮತ್ತು ಕೊಳಚೆ ಪ್ರದೇಶ ಹಾಗೂ ಸರಕಾರೀ ಜಮೀನಿನಲ್ಲಿ ಗುಡಿಸಲು ಕಟ್ಟಿ ವಾಸಿಸುವ ಕುಟುಂಬಗಳ ವಸತಿ ಸೌಕರ್ಯಗಳು ಯೋಗ್ಯವಾಗಿಲ್ಲ.

ಪಂಚಾಯತಿನ ವಿವಿಧ ತರದ ಮನೆಗಳ ಪಟ್ಟಿ

ವಾರ್ಡು	ಸೋಗೆ/ಹುಲ್ಲು	ಹಂಚು	ಕಾಂಕ್ರೀಟು	ಒಟ್ಟು ಮನೆಗಳು
1	28	419	12	459
II	119	415	7	561
III	122	482	67	671
IV	75	301	15	401
V	52	321	24	397
VI	224	335	17	576
VII	232	472	27	731
VIII	98	269	7	374
IX	114	281	11	406

ಈ ಮೇಲಿನ ಪಟ್ಟಿಯನ್ನು ಪರಿಶೀಲಿಸುವಾಗ ಹಂಚಿನ ಮನೆಯ ಸಂಖ್ಯೆ ಅಧಿಕವಾಗಿರುತ್ತದೆ. ಆದರೆ ಎಲ್ಲಿ ಹಂಚಿನ ಮನೆಗಳಲ್ಲೂ ಮೂಲಭೂತ ಸೌಕರ್ಯಗಳಿಲ್ಲ. ಮೂಲಭೂತ ಸೌಕರ್ಯಗಳಿರುವ ಹಂಚಿನ ಮನೆಗಳು ಶೇಕಡಾ 60ರಷ್ಟೇ ಇರಬಹುದು. ಈಗ ಕಾಂಕ್ರೀಟಿನ ಮನೆಯ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಇದಕ್ಕೆ ಮುಖ್ಯ ಕಾರಣ ಮರದ ಬೆಲೆ ವಿಪರೀತವಾಗಿರುವುದು ಮತ್ತು ಅಂದಚಂದದ ಮನೆ ನಿರ್ಮಿಸುವ ಉದ್ದೇಶ. ಕುಡಿಯಲು ನೀರು, ತಿನ್ನಲು ಅನ್ನವಿಲ್ಲದಿದ್ದರೂ ಮನೆಯೊಂದು ಟೆರ್ರೇಸಿನದ್ದಾಗಬೇಕು, ಇದು ಇಂದಿನ ಜನಾಂಗದ ಅನಿಸಿಕೆ ಮತ್ತು ಅತಿ ದರಿದ್ರರೂ ಬಡತನ ರೇಖೆಗಿಂತ ಕೆಳಗೆ ವಾಸಿಸುವ ಜನಾಂಗದವರು ಮತ್ತು ಭೂರಹಿತರು ಸೋಗೆ ಅಥವಾ ಹುಲ್ಲಿನ ಮನೆಯನ್ನೇ ನೆಚ್ಚಿಕೊಂಡಿದ್ದಾರೆ. ಇದಕ್ಕೆ ಮುಖ್ಯ ಕಾರಣ ಹಣಕಾಸಿನ ಕೊರತೆ ಮತ್ತು ಬ್ಯಾಂಕು ಸಾಲಗಳು ದೊರಕದೇ ಇದ್ದುದರಿಂದ ಇವರಿಗೆ ಉತ್ತಮವಾದ ಮನೆ ಕಟ್ಟಲು ಸಾಧ್ಯವಾಗುವುದಿಲ್ಲ. ಸರಕಾರವು ಇವರಿಗೆ ನಿವೇಶನ ನಿರ್ಮಿಸಿಕೊಡಲು ಯೋಜನೆಗಳನ್ನು ತಯಾರಿಸಿದರೂ ಇದು ಯಥಾರ್ಥವಾಗುವಾಗ ಉಂಟಾಗುವ ಕಾಲವಿಳಂಬ ಮತ್ತು ನಿರ್ದೇಶನ ಲಭಿಸದಿದ್ದುದರಿಂದ ಇದರ ಪೂರ್ಣ ಪ್ರಯೋಜನ ಭೂರಹಿತ, ಬಡ ಮನೆರಹಿತರಿಗೆ ಲಭಿಸಲಿಲ್ಲ.

ಸಾರಿಗೆ ಸೌಕರ್ಯ, ಶುದ್ಧ ಜಲದ ಲಭ್ಯತೆ, ವಿದ್ಯುತ್ ಸೌಲಭ್ಯವಿರುವ ಪ್ರದೇಶಗಳಲ್ಲಿ ವಸತಿಗಳು ಹೆಚ್ಚಾಗಿ ಕಂಡು ಬರುತ್ತದೆ. ಈ ಮೂಲಭೂತ ಸೌಕರ್ಯಗಳಿಲ್ಲದ ಸ್ಥಳಗಳಲ್ಲಿ ಮನೆಗಳ ಸಂಖ್ಯೆ ಕಡಿಮೆಯಿರುತ್ತದೆ. ಹೆಚ್ಚು ಅನುಕೂಲವಿದ್ದಲ್ಲಿ ಆ ಜಾಗದ ಬೆಲೆಯು ವಿಪರೀತವಾಗಿರುತ್ತದೆ. ಇದರಿಂದಾಗಿ ಬಡವರಿಗೆ ಅಲ್ಲಿ ಮನೆ ಕಟ್ಟಲು ಸಾಧ್ಯವಾಗುವುದಿಲ್ಲ. ಸೌಕರ್ಯಗಳಾದ ವಿದ್ಯುತ್, ಕಕ್ಕಸ್ಸು, ಬಾವಿ, ಸಾರಿಗೆ ಸೌಕರ್ಯಗಳಿರುವ ಮನೆ ಮತ್ತು ಇವುಗಳು ಇಲ್ಲದ ಮನೆಗಳ ಪಟ್ಟಿ 2ರಲ್ಲಿದೆ.

ಮನೆಗೆ ಬೇಕಾದ ಪ್ರಧಾನ ಸೌಕರ್ಯಗಳು

ವಿಧಗಳು	ಮನೆಗಳು
ವಿದ್ಯುತ್ ಇರುವ ಮನೆ	1324
ವಿದ್ಯುತ್ ಇಲ್ಲದ ಮನೆ	3121
ಕಕ್ಕುಸು ಇರುವ ಮನೆ	724
ಕಕ್ಕುಸು ಇಲ್ಲದ ಮನೆ	3721
ಬಾವಿ ಇರುವ ಮನೆ	3721
ಬಾವಿ ಇಲ್ಲದ ಮನೆ	1312
ಪಂಚಾಯತಿನ ಒಟ್ಟು ಮನೆ	4445

ಎಲ್ಲಾ ವಾರ್ಡುಗಳಲ್ಲಿರುವ ಹುಲ್ಲಿನ ಅಥವಾ ಸೋಗೆಯ ಮನೆಗಳು ವಾಸಕ್ಕೆ ಯೋಗ್ಯವಾಗಿರುವುದಿಲ್ಲ. ಮನೆಗಳು ಈ ಕೆಳಗಿನಷ್ಟಿವೆ.

ವರ್ಷ	ಹುಲ್ಲಿನಮನೆ	ಶೇಕಡಾ	ಹಂಚಿನ ಮನೆ	ಶೇಕಡಾ	ಕಾಂಕ್ರೀಟು ಮನೆ	ಶೇಕಡಾ
95-96	1114	25%	3084	69%	247	5.5%

ಮೊಂಜ ಪಂಚಾಯತಿನಲ್ಲಿ ಒಟ್ಟು 12 ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರ ಕಾಲನಿ ಇದೆ. ವಿದ್ಯುತ್ ಸೌಕರ್ಯ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯದ ವ್ಯವಸ್ಥೆ, ಸಾರಿಗೆ ವ್ಯವಸ್ಥೆ ಮುಂತಾದವು ಮೂಲಭೂತ ಅವಶ್ಯಕತೆಯಿಂದ ವಂಚಿತರಾಗಿದ್ದಾರೆ. ಕೆಲವು ಹರಿಜನ ಕಾಲನಿಗಳಲ್ಲಿರುವ ಮನೆಗಳ ಅವಸ್ಥೆ ಶೋಚನೀಯ ಸ್ಥಿತಿಯಲ್ಲಿದೆ. ಗೃಹನಿರ್ಮಾಣಕ್ಕೆ ಚಾಲ್ತಿಯಲ್ಲಿರುವ ಪದ್ಧತಿಗಳು ನಮ್ಮ ಪಂಚಾಯತಿನಲ್ಲಿ ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಲಿಲ್ಲ. ಈ ಪದ್ಧತಿಯ ಕೈಕೆಳಗೆ ಹಲವು ಮನೆ ನಿರ್ಮಾಣವಾದರೂ ಈ ಸ್ಕೀಂನಲ್ಲಿ ಬರುವ ನಿಯಮಗಳು ಸಾಕಾಗುವುದಿಲ್ಲ. IRDP ಸರ್ವೇ ಪ್ರಕಾರ ಗೃಹ ನಿರ್ಮಾಣಕ್ಕೆ ಅರ್ಹತೆಯಿರುವ ವ್ಯಕ್ತಿಗಳು ಮತ್ತು ಅನುವದಿಸಿದ ಮನೆಗಳ ಸಂಖ್ಯೆಗೂ ಅಜಗಜಾಂತರವಿದೆ. ಈ ಪದ್ಧತಿಯಲ್ಲಿ ಎಲ್ಲಾ ದರಿದ್ರ, ಭೂರಹಿತ, ಪದ್ಧತಿರಹಿತರನ್ನು ಒಳಗೂಡಿಸಿ ಸಮರ್ಪಕವಾಗಿ ಮನೆಗಳನ್ನು ಪೂರ್ತಿಗೊಳಿಸಬೇಕು.

ಗೃಹ ನಿರ್ಮಾಣ ವಲಯ ಎದುರಿಸುವ ಮೊದಲ ಸಮಸ್ಯೆ ಆರ್ಥಿಕ ಪರಾಧೀನತೆ, LIC, ಜಿಲ್ಲಾ ಸಹಕಾರೀ ಬೇಂಕು, Housing Societyಗಳ ಮೂಲಕ ಮನೆ ನಿರ್ಮಾಣಕ್ಕೆ ಆರ್ಥಿಕ ಸಹಾಯ ಲಭಿಸುತ್ತದೆ. ಆದರೂ ಅವಶ್ಯಪಟ್ಟ ಎಲ್ಲರಿಗೂ ಲಭಿಸಲು ಹಲವು ಎಡರುತೊಡರುಗಳು ಎದುರಾಗುತ್ತದೆ. ಗೃಹ ನಿರ್ಮಾಣ ಸಾಲಕ್ಕಾಗಿ ಬೇಕಾದ ದಾಖಲೆಪತ್ರಗಳಿಗಾಗಿ ವಿವಿಧ ಕಚೇರಿಗಳಿಗೆ ಅಲೆದಾಡಬೇಕಾಗುತ್ತದೆ. ಈ ಗೃಹ ನಿರ್ಮಾಣ ಸಾಲಕ್ಕೆ ಬೇಕಾಗಿರುವ ಶರತ್ತುಗಳನ್ನು ಸಡಿಲಗೊಳಿಸಿ ಸುಲಭ ರೀತಿಯಲ್ಲಿ ಗ್ರಾಮಸ್ಥರಿಗೆ ಸಿಗುವ ಹಾಗೇ ಮಾಡಬೇಕು. ಕೆಲವು ಸಲ ಬಡ ಗ್ರಾಮೀಣರು ಗೃಹ ನಿರ್ಮಿಸಲು ಆರ್ಥಿಕ ಸಹಾಯಕ್ಕಾಗಿ ಬೇರೆ ಖಾಸಗೀ ಸಂಸ್ಥೆಗಳನ್ನು ಅವಲಂಬಿಸಬೇಕಾಗುತ್ತದೆ. ಅಮಿತವಾದ ಬಡ್ಡಿದರಗಳನ್ನು ಪಾವತಿಸಿ ಮನೆ ನಿರ್ಮಿಸಬೇಕಾಗುತ್ತದೆ. ಕೊನೆಗೆ ಅವನಿಗೆ ಪಾವತಿ ಮಾಡಲು ಸಾಧ್ಯವಾಗದೇ ಕಟ್ಟಿದ ಮನೆಯನ್ನೇ ಅಡವಿಡಬೇಕಾದ ಪರಿಸ್ಥಿತಿ ಎದುರಾಗುತ್ತದೆ.

ಸಮಸ್ಯೆಗಳು :

1. ಬಯಲು ಪ್ರದೇಶವೆಲ್ಲಾ ಮನೆ ನಿರ್ಮಾಣಕ್ಕೆ ಬಳಸಿ ಈಗ ಮನೆಕಟ್ಟಲು ಯೋಗ್ಯ ಸ್ಥಳದ ಕೊರತೆ ಕಂಡು ಬರುತ್ತದೆ. ಸೌಕರ್ಯವುಳ್ಳ ಸ್ಥಳದ

ಕೊರತೆ ಹಾಗೂ ಗುಡ್ಡಗಳಂತಹ ನಿವೇಶನಕ್ಕೆ ಯೋಗ್ಯವಲ್ಲದ ಸ್ಥಳಗಳಲ್ಲಿ ಪ್ರಾಥಮಿಕ ಸೌಕರ್ಯಗಳ ಕೊರತೆ ಇರುತ್ತದೆ.

2. ಸಾಲ ಕೊಡುವಂತಹ ಗೃಹನಿರ್ಮಾಣ ಸಂಸ್ಥೆಗಳ ಆಮಿಷ ಬಡ್ಡಿದರದಿಂದಾಗಿ ಗೃಹ ನಿರ್ಮಿಸಲು ಹೆಚ್ಚಿನವರು ಹಿಂಜರಿಯುತ್ತಾರೆ.
3. ಗೃಹನಿರ್ಮಾಣ ಸಾಮಗ್ರಿಗಳ ತೀವ್ರ ಬೆಲೆಯೇರಿಕೆ ಮತ್ತು ಕಾರ್ಮಿಕರ ಕೊರತೆ.
4. ಶರತ್ತು ದಾಖಲೆಗಳನ್ನು ಹೊಂದಿಸಿಕೊಡುವಲ್ಲಿ ಬಡ, ಭೂರಹಿತ, ಮನೆ ಇಲ್ಲದವರು ಯಶಸ್ವಿಯಾಗುವುದಿಲ್ಲ.
5. ಕಡಿಮೆ ಖರ್ಚಿನಲ್ಲಿ ಮನೆ ನಿರ್ಮಿಸುವ ಸಾಂಕೇತಿಕತೆಯ ದೌರ್ಲಭ್ಯ.
6. ಹರಿಜನ/ಗಿರಿಜನ ಕಾಲನಿ ಮತ್ತು ಲಕ್ಷ ವಸತಿಗಳಿಗೆ ಗೃಹನಿರ್ಮಾಣಕ್ಕಾಗಿ ಕೊಡುವ ಸಾಂಪತ್ತಿಕ ಸಹಾಯ ಕಡಿಮೆ ಮತ್ತು ಈ ಸಹಾಯದ ಅರ್ಧಪಾಲು ಮಧ್ಯವರ್ತಿಗಳ ಪಾಲಾಗುವುದು.
7. ಕಾಲನಿಗಳ ಶೋಚನೀಯ ಅವಸ್ಥೆ.
8. ಕಟ್ಟಡ ನಿರ್ಮಾಣದಲ್ಲಿ ಕಳಪೆ ಸಾಧನಗಳ ದುರ್ಬಳಕೆ.
9. ವಿದಗ್ಧ ಕೆಲಸಗಾರರ ದೌರ್ಲಭ್ಯ.
10. ಗೃಹ ನಿರ್ಮಾಣಕ್ಕೆ ಅವಶ್ಯವಾದ ಸಾಮಗ್ರಿಗಳನ್ನು ಸಾಗಾಟ ಮಾಡಲು ರಸ್ತೆಗಳ ಕೊರತೆಯಿಂದಾಗಿ ದುಂದುವೆಚ್ಚ.
11. ಕಟ್ಟಡ ನಿರ್ಮಾಣಕ್ಕೆ ಅಗತ್ಯವಾದ ಸಾಮಗ್ರಿಗಳು ಪಂಚಾಯತು ಆಸುಪಾಸಿನಲ್ಲಿ ಲಭಿಸುವುದಿಲ್ಲ. ಇದಕ್ಕಾಗಿ ಹೊರರಾಜ್ಯವನ್ನು ಅವಲಂಬಿಸಬೇಕಾದ ಪರಿಸ್ಥಿತಿ ಬರುತ್ತಿದೆ.
12. ಶಾಲಾ ಮಕ್ಕಳಿಗೆ ಮೂತ್ರದೊಡ್ಡಿ ಹಾಗೂ ಪಾಯಿಖಾನೆಯ ಕೊರತೆ.
13. ಕಟ್ಟಡ ಕಾರ್ಮಿಕರ ಕೂಲಿ ಹೆಚ್ಚಳ.
14. ಪುರುಷ ಕೆಲಸಗಾರರ ಸಂಬಳಕ್ಕೆ ಹಾಗೂ ಮಹಿಳಾ ಕೆಲಸಗಾರರ ಸಂಬಳದಲ್ಲಿ ಬಹು ಏರುಪೇರು.
15. ಪಂಚಾಯತಿನ ಎಲ್ಲಾ ವಾರ್ಡುಗಳಲ್ಲಿರುವ ಮನೆಗಳಲ್ಲಿ ಹಲವು ಮನೆಗಳಿಗೆ ಪ್ರಾಥಮಿಕ ಸೌಕರ್ಯಗಳಿಲ್ಲ.

ಸಾಧ್ಯತೆಗಳು :

1. ಪಂಚಾಯತು ಮಟ್ಟದಲ್ಲಿ ಒಂದು ಗೃಹನಿರ್ಮಾಣ ಸಹಕಾರೀ ಸಂಘ ಸ್ಥಾಪಿಸಿ ಈ ಸಂಘದ ಮೂಲಕ ಇಂಜಿನಿಯರ್‌ರಿಂದ, ಕಾರ್ಮಿಕರ ವರೆಗಿನ ಕೆಲಸಗಾರರನ್ನು ಒದಗಿಸುವುದು. ಸರಕಾರದ ಯೋಜನೆಗಳನ್ನು ಸಮಗ್ರ ರೀತಿಯಲ್ಲಿ ಪಂಚಾಯತುಗಳಿಗೆ ಮುಟ್ಟಿಸುವ ಏಜೆನ್ಸಿಯಾಗಿ ಪ್ರವರ್ತಿಸುವುದು. ಈ ಸಹಕಾರೀ ವಲಯದ ಮುಖಾಂತರವೇ ಗೃಹನಿರ್ಮಿಸಿಕೊಡುವುದು ಮತ್ತು ಗೃಹ ನಿರ್ಮಿಸುವವರಿಗೆ ಮರ, ಸಿಮೆಂಟ್ ಮುಂತಾದ ಸಾಮಗ್ರಿಗಳನ್ನು ವಿತರಿಸುವುದು.
2. ಪಂಚಾಯತು ಮಟ್ಟದಲ್ಲಿ ಗೃಹ ನಿರ್ಮಾಣ. ಸಾಲ ನೀಡಲು ಪ್ರತ್ಯೇಕ ಸಂಸ್ಥೆಯ ನಿರ್ಮಾಣ.
3. ನಿರ್ಮಾಣವೆಚ್ಚ ಎರಡು ಲಕ್ಷಗಳಿಗಿಂತ ಅಧಿಕವಾಗದಂತೆ ಸರಿಯಾದ ಕ್ರಮ ಪರಿಧಿ ಏರ್ಪಡಿಸುವುದು.
4. ಸರಕಾರದಿಂದ ಲಭಿಸುವ ಸಾಲಕ್ಕಿರುವ ಸಾಂಕೇತಿಕವೂ, ಸಾಂಪತ್ತಿಕವೂ ಆದ ಮುಗ್ಗಟ್ಟುಗಳನ್ನು ನಿವಾರಿಸುವುದು.
5. ಗೃಹ ನಿರ್ಮಾಣ ಸಾಲಕ್ಕೆ ಪಂಚಾಯತು ಮುಖೇನ ಅರ್ಜಿ ಸಲ್ಲಿಸುವ ಕ್ರಮ.
6. ಕಡಿಮೆ ಖರ್ಚಿನ ಮತ್ತು ಉತ್ತಮ ರೀತಿಯ ಮನೆ ನಿರ್ಮಾಣಕ್ಕೆ ತಾಂತ್ರಿಕತೆ ಮತ್ತು ಪ್ರಚಾರ.
7. ಸ್ಥಳೀಯ ನಿರ್ಮಾಣ ಕಾರ್ಮಿಕರಿಗೆ ಸರಿಯಾದ ತರಬೇತಿಯ ವ್ಯವಸ್ಥೆ ಹಾಗೂ ಅವರ ಮುಖಾಂತರ ಗೃಹ ನಿರ್ಮಾಣದ ವ್ಯವಸ್ಥೆ ಮಾಡುವುದು.
8. ಪಂಚಾಯತಿನೊಳಗಿನ ದುರ್ಬಲ ವರ್ಗದವರ ಹಾಗೂ ಕಾಲನಿಗಳ ಸಮಸ್ಯೆಯನ್ನು ಅರಿತು, ಸೂಕ್ತ ಪರಿಹಾರದ ವ್ಯವಸ್ಥೆ.
9. SC/ST ಕುಟುಂಬಗಳಿಗೆ, ಕಾಲನಿಗಳಿಗೆ ವಿದ್ಯುತ್, ಕುಡಿಯುವ ನೀರಿನ ಸೌಕರ್ಯ ಒದಗಿಸುವುದು.
10. ಗೃಹ ನಿರ್ಮಾಣ ಸಾಲ ಪಡೆಯುವಾಗ ನಿರ್ಮಿಸುವ ಮನೆಯನ್ನೇ ಅಡವಿಟ್ಟು ಸಾಲಕೊಡುವ ಪದ್ಧತಿ ಯೋಜನೆಗೆ ಬರಬೇಕು.

11. ಬಡ್ಡಿದರವನ್ನು ಶೇಕಡಾ 12ಕ್ಕೆ ಇಳಿಸಬೇಕು.

12. ಗೃಹ ನಿರ್ಮಾಣ ಸಾಲ ಲಭಿಸುವಾಗ ಉಂಟಾಗುವ ಕಾಲ ವಿಳಂಬ ತಡೆಗಟ್ಟುವುದು.

13. IAY, MWS, JRY ಸಾಲ ಯೋಜನೆಗಳ ಮೊತ್ತವನ್ನು 30,000 ರೂಪಾಯಿಯಾಗಿ ಹೆಚ್ಚಿಸುವುದು.

14. ಪ್ರಕೃತಿ ವಿಕೋಪಕ್ಕೆ ನಾಶವಾದ ಮನೆ ನಿರ್ಮಾಣದ ಸಹಾಯವನ್ನು 25,000 ರೂಪಾಯಿಯಾಗಿ ಹೆಚ್ಚಿಸುವುದು.

15. ಭೂರಹಿತರಿಗೆ ಭೂಮಿ ಒದಗಿಸಿ ಮನೆ ಕಟ್ಟಿಕೊಡುವುದು. ಪಂಚಾಯತಿನೊಳಗಿರುವ ಮಿಗತೆ ಭೂಮಿ ಪರಂಬೋಕು ಭೂಮಿಗಳನ್ನು ಭೂರಹಿತ ಬಡವರಿಗೆ ಶೀಘ್ರ ವಿತರಿಸುವುದು.

16. ಪ್ರತಿಯೊಂದು ವಾರ್ಡಿನಲ್ಲಿರುವ ಭೂರಹಿತ, ಮನೆರಹಿತರಿಗೆ ಮತ್ತು 5 ಸೆಂಟ್ಸ್‌ಗಳಷ್ಟು ಸರಕಾರೀ ಸ್ಥಳವನ್ನು ಉಚಿತವಾಗಿ ಕೊಡಮಾಡುವುದು.

17. ಅವಶ್ಯವಿರುವ ಸ್ಥಳದಲ್ಲಿ ಕಾಲನಿಗಳ ನಿರ್ಮಾಣ

. ನಮ್ಮ ಮುಖ್ಯ ಉದ್ದೇಶ "5 ವರ್ಷದೊಳಗೆ ಎಲ್ಲರಿಗೂ ಮನೆ" ಇದನ್ನು ಯತಾರ್ಥಗೊಳಿಸುವ ಸರಕಾರ ಮತ್ತು ಸಂಘ ಸಂಸ್ಥೆಗಳು ಈಗಲೇ ಕಾರ್ಯಾಚರಿಸತೊಡಗಬೇಕು. ಅದಕ್ಕಾಗಿ ನಾವು ಒಂದಾಗಿ ಶ್ರಮಿಸೋಣ.

17. ಮೂತ್ರದೊಡ್ಡಿ, ಪಾಯಿಖಾನೆಗಳಿಲ್ಲದ ಶಾಲೆಗಳಿಗೆ ಕೂಡಲೇ ಮೂತ್ರದೊಡ್ಡಿ ಪಾಯಿಖಾನೆಗಳ ನಿರ್ಮಾಣ.

ಗೃಹ ನಿರ್ಮಾಣ

II ಮೂಂಜ

1. ಮೀಯಪದವಿನಲ್ಲಿ OLHS ಕೊಲನಿಗೆ ಹತ್ತು ಮನೆಗಳನ್ನು ಅನುಮೋದಿಸಬೇಕು.

2. ಬೆಜ್ಜಂಗಳದಲ್ಲಿ 9 ಮನೆಗಳು, ಕೊಮ್ಮಂಗಳದಲ್ಲಿ 8 ಮನೆಗಳು. ಪಳ್ಳತಡ್ಕದಲ್ಲಿ 15 ಮನೆಗಳು ಮುನ್ನಿಪಾಡಿಯಲ್ಲಿ 9 ಮನೆಗಳು.

   3ನೇ ನಿಯೋಜಕ ಮಂಡಲದ ನಾಟೆಕಲ್ಲು, ಮಜಿಬೈಲು, ಕೊಡ್ಡೆ ಈ ಭಾಗಗಳಲ್ಲಿ 100 ಮನೆಗಳನ್ನು ನಿವೇಶನ ರಹಿತರಿಗೆ ಕಟ್ಟಿ ಕೊಡಬೇಕು.

   1ನೇ ವಾರ್ಡು ಕುಳೂರಿನಲ್ಲಿರುವ ಸೋಗೆ ಮನೆಯವರಿಗೆ ಹಂಚು ಮನೆ ಕಟ್ಟಿಕೊಡಲು ಸಹಾಯಧನ ನೀಡಬೇಕು ಮತ್ತು 50 ಮನೆ ನಿರ್ಮಿಸಿ ನಿವೇಶನ ರಹಿತರಿಗೆ ಕೊಡಬೇಕು.

   IVನೇ ವಾರ್ಡು ತಲೆಕಳದ ಬಟ್ಯಪದವಿನಲ್ಲಿ 10 ಮನೆಗಳುಳ್ಳ ಒಂದು ಲಕ್ಷ ವಸತಿಯ ಯೋಜನೆ ಕಾಲನಿ. ತಲೆಕಳದಲ್ಲಿ 16 ಮನೆಗಳು.

   ಮಂದಗಲ್ಲಿನಲ್ಲಿ 12 ಮನೆಗಳು ಮತ್ತು ಮುನ್ನಿಪ್ಪಾಡಿಯಲ್ಲಿ 12 ಮನೆಗಳಲ್ಲಿ ನಿರ್ಮಿಸಿ ನಿವೇಶನ ರಹಿತರಿಗೆ ಹಂಚುವುದು.

   V ನೇ ವಾರ್ಡಿನ ಅರಂತಾಡಿಯಲ್ಲಿ 5 ಮನೆ, ಕೋಳ್ಯೂರು ಪದವಿನಲ್ಲಿ 5 ಮನೆ ಕಳಿಯಂರು ಪದವುನಲ್ಲಿ 5 ಮನೆ ಬಟ್ಯಪದವು 10 ಮನೆ ಮರತಡ್ಕ 10 ಮನೆ ಕೊರಿಕ್ಕಾಲ್ 5 ಮನೆ ಕಳಿಯೂರು ಉಬರೆ 5 ಮನೆ ಕೂಜಮೆ 5 ಮನೆ.

   VIನೇ ವಾರ್ಡಿನ ಕೋಳ್ಯೂರು ಬೈಲಿನಲ್ಲಿ 15 ಮನೆಗಳು ಕೊಮ್ಮೆ ಚಕ್ರಕೋಡಿಯಲ್ಲಿ 10 ಮನೆಗಳು ರಾವಳಿಕೆಯಲ್ಲಿ 10 ಮನೆಗಳು ಸಸಿಗೊಳಿಯಲ್ಲಿ 10 ಮನೆಗಳು ಮೆಟ್ಟುಕುಂಡೆ 5 ಮನೆಗಳು.

   VIIನೇ ವಾರ್ಡಿನ ಮೂಂಡಂಬೈಲಿನಲ್ಲಿ ಬೇರಿಕೆಗೆ 15 ಮನೆಗಳು ಬಾಳಿಯೂರಿಗೆ 12 ಮನೆಗಳನ್ನು ಬೆಜ್ಜದಲ್ಲಿ 10 ಮನೆಗಳನ್ನು ಸಂತಡ್ಕ ಮಡಿಮಗರು ಪ್ರದೇಶದಲ್ಲಿ 8 ಮನೆಗಳನ್ನು ಮೂಂಡಬೈಲು, ಪಜಿಂಗಾರು ಪ್ರದೇಶದಲ್ಲಿ 9 ಮನೆಗಳನ್ನು ನಿವೇಶನ ರಹಿತರಿಗೆ ನೀಡುವುದು.

   VIII ನೇ ವಾರ್ಡಿನಲ್ಲಿ ಸೋಗೆ ಹಾಗೂ ಮುಳಿ ಇರುವ ಮನೆಗಳಿಗೆ ಹಂಚು ಹಾಕುವ ವ್ಯವಸ್ಥೆ ಆಗಬೇಕು.

   ಅರಿಯಾಳದಲ್ಲಿ 5 ಮನೆಗಳು ಇದ್ದಂಗೋಡಿಯಲ್ಲಿ 5 ಮನೆಗಳು ಅಟ್ಟಗೋಳಿಯಲ್ಲಿ 5 ಮನೆಗಳು ಬುಡ್ರಿಯದ ಕಲ್ಲಿಗದ್ದೆಯಲ್ಲಿ 15 ಮನೆಗಳು ಕಳ್ಳಿಗೆಯಲಿ 5 ಮನೆಗಳು ಕೋಡಿಯಡ್ಕದ ಅಮ್ಮನಡ್ಕದಲ್ಲಿ 10 ಮನೆಗಳು ಬಡ್ರಿಯದಲ್ಲಿ 5 ಮನೆಗಳ ನಿರ್ಮಾಣವಾಗಬೇಕು.

   IXನೇ ವಾರ್ಡು ಕಡಂಬಾರಿನ ಮುರತ್ತಣೆ-ಮೇಗಿನ ಕಡಂಬಾರು ಪ್ರದೇಶದಲ್ಲಿ 20 ಮನೆಗಳು. ಕೆಳಗಿನ ಕಡಂಬಾರು, ಕಡಂಬಾರು ಶಾಲಾ ಪರಿಸರದಲ್ಲಿ 20 ಮನೆಗಳನ್ನು ಕಡಂಬಾರಿನಲ್ಲಿ 10 ಮನೆಗಳನ್ನು ನಿರ್ಮಿಸಿ ನಿವೇಶನ ರಹಿತರಿಗೆ ಹಂಚುವುದು.

ಸಾಮಾಜಿಕ ಕ್ಷೇಮ

ಸಾಮಾಜಿಕ ಕ್ಷೇಮ ರಂಗದಲ್ಲಿ, ದಾರಿದ್ರ್ಯ ರೇಖೆಗಿಂತ ಕೆಳಗೆ ವಾಸಿಸುವ ಕುಟುಂಬಗಳ ಅಭಿವೃದ್ಧಿಗಾಗಿರುವ ಬಡತನ ನಿರ್ಮೂಲನ ಯೋಜನೆ ಹಾಗೂ ಸಂಘಟಿತ ಅಸಂಘಟಿತ ನೌಕರರ ಕ್ಷೇಮಕ್ಕಾಗಿರುವ ಯೋಜನೆಗಳೇ ಮುಖ್ಯವಾಗಿ ಪ್ರಚಲಿತದಲ್ಲಿರುವುದು.

ಪೂರ್ಣವಾಗಿ ಕೇಂದ್ರ -ರಾಜ್ಯ ಸರಕಾರಗಳು ನಡೆಸುವ ಬಡತನ ನಿರ್ಮೂಲನ ಪದ್ಧತಿ ಹಾಗೂ ಕಾರ್ಮಿಕರು -ಮಾಲಕರು ಸಹಕಾರದಿಂದ ಕ್ಷೇಮನಿಧಿ ಬೋರ್ಡಿನ ಮುಖಾಂತರ ನಡೆಸುವ ಕ್ಷೇಮ ಕಾರ್ಯಗಳೆಂದು ಎರಡಾಗಿ ವಿಂಗಡಿಸಬಹುದು. ಈ ಯೋಜನೆಗಳಲ್ಲದೆ ಪರಿಶಿಷ್ಟ ಜಾತಿ ವರ್ಗದವರ ಉನ್ನತೆಗಾಗಿ ಯತ್ನಿಸುವ ಪರಿಶಿಷ್ಟ ಜಾತಿ ವಿಕಸನ ಕಾರ್ಪೊರೇಶನ್ ಹಾಗೂ ಮಹಿಳೆಯರ ಶ್ರೇಯಸ್ಸಿಗಾಗಿ ಯತ್ನಿಸುವ ವನಿತಾ ವಿಕಸನ ಕಾರ್ಪೋರೇಶನ್ ಈಗ ಕೇರಳದಲ್ಲಿ ಆಸ್ತಿತ್ವದಲ್ಲಿದೆ.

ಮೀಂಜ ಪಂಚಾಯತಿನಲ್ಲಿ ಸಾಮಾಜಿಕ ಕ್ಷೇಮದ ಯೋಜನೆಗಳು ಯಾವುದೂ ಯಶಸ್ವಿಯಾಗಲಿಲ್ಲ. I.R.D.P.ಯ ಬಡತನ ನಿರ್ಮೂಲನಾ ಯೋಜನೆಯು ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಿದೆಯೆನ್ನಬಹುದು.

ಈಗ ಚಾಲ್ತಿಯಲ್ಲಿರುವ ಯೋಜನೆಗಳು ನಮ್ಮ ಪಂಚಾಯತಿನಲ್ಲಿ ಸಮರ್ಪಕವಲ್ಲದಿದ್ದರೂ, ಇದರ ಬಗ್ಗೆ ತಿಳುವಳಿಕೆ ಇರದಿರುವುದೇ ಮುಖ್ಯ ಕಾರಣ, ಅಧಿಕಾರಿಗಳು ತಿಳುವಳಿಕೆ ನೀಡದಿರುವುದು, ಅರ್ಹತೆಯಿದ್ದು ಕೂಡಾ ಲಭಿಸದಿರುವುದು, ಆವಶ್ಯಪಟ್ಟಾಗ ಮತ್ತು ಸಮಯಕ್ಕೆ ಸರಿಯಾಗಿ ಸಿಗದಿರುವುದು ಈ ಯೋಜನೆಗೆ ತೊಡಕಾಗಿದೆ.

ಕಾರ್ಮಿಕರ ಕ್ಷೇಮನಿಧಿಯಲ್ಲಿ ಒಳಗೊಂಡ ಕೃಷಿ ಕಾರ್ಮಿಕ ಕ್ಷೇಮನಿಧಿ ಬೀಡಿಕಾರ್ಮಿಕರ ಕ್ಷೇಮನಿಧಿ ನಿರ್ಮಾಣ ಕಾರ್ಮಿಕರ ಕ್ಷೇಮನಿಧಿ ಪದ್ಧತಿಗಳೂ ಈ ಪಂಚಾಯತಿನ ಹೆಚ್ಚಿನವರು ಸದಸ್ಯರಾಗಿದ್ದರೆ ಉಳಿದವರು ಇದರ ಬಗ್ಗೆ ಉತ್ಸಾಹ ತೋರದಿರುವುದೇ ಇದರ ಯಶಸ್ವಿಗೆ ಕಡಿವಾಣ ಹಾಕಿದಂತಾಗಿದೆ.

ಪರಿಶಿಷ್ಟ ಜಾತಿ ವಿಕಸನ ಕಾರ್ಪೊರೇಷನ್ ಮುಖೇನ ಕೆಲವರಿಗೆ ಅನುಕೂಲತೆಗಳು ಲಭಿಸುವುದಾದರೂ, ಇದರ ಕಛೇರಿ ಬಹಳಷ್ಟು ದೂರವಾದ್ದರಿಂದ ಹೆಚ್ಚು ಪ್ರಯಾಸ ಪಡಬೇಕಾಗುತ್ತದೆ.

ವನಿತಾ ವಿಕಸನ ಕಾರ್ಪೋರೇಶನ್‌ನ ಯಾವುದೇ ಸಹಾಯಗಳು ಈ ಪಂಚಾಯತಿಗೆ ಲಭಿಸಲಿಲ್ಲ. ಸಾಮಾಜಿಕ ಕ್ಷೇಮ ರಂಗದಲ್ಲಿ ಸ್ವಲ್ಪ ಮಟ್ಟಿಗಾದರೂ ಪ್ರವರ್ತಿಸುವ ಕೇಂದ್ರ ವಿಲೇಜ್ ಎಕ್ಸ್‌ಟೆನ್‌ಷನ್ ಆಫೀಸು ಮುಖಾಂತರವೇ ಆಗಿದೆ. ಈ ಯೋಜನೆಗಳು ಸರಿಯಾಗಿ ಕಾರ್ಯಕ್ಷಮವಾಗಬೇಕಾದರೆ, ಜನರಿಗೆ ಇದರ ಬಗ್ಗೆ ಅರಿವು ಮೂಡಿಸಲೇಬೇಕು.

ಮೀಯ ಪದವಿನಲ್ಲಿರುವ V.E.O.ಮುಖಾಂತರ ಪಂಚಾಯತು ಮಟ್ಟದಲ್ಲಿ ನಡೆದ ಯೋಜನೆಗಳ ವಿವರಗಳು.

I.R.D.P.

ಬಡತನದ ರೇಖೆಗಿಂತ ಕೆಳಮಟ್ಟದಲ್ಲಿ ವಾಸಿಸುವ ಕುಟುಂಬವನ್ನು ಬಡತನ ರೇಖೆಗಿಂತ ಮೇಲೆ ತರುವ ಯೋಜನೆಯೇ ಈ I.R.D.P. ಇದರ ಮುಖಾಂತರ ಸುಮಾರು 1400 ಕುಟುಂಬಗಳಲ್ಲಿ 1256ರ ಕುಟುಂಬಗಳು ದಾರಿದ್ರ್ಯ ರೇಖೆಗಿಂತ ಕೆಳಸ್ತರದ್ದು ವಾಸಿಸುತ್ತಿದೆ.

ಇದರ ಪೂರ್ಣ ವಿವರ ಮುಂದಿನ ಪಟ್ಟಿಯಲ್ಲಿದೆ.

Ward No.	ಸರ್ವೇಪ್ರಕಾರ ಒಟ್ಟು ಕುಟುಂಬ	ಇದರಲ್ಲಿ sc/st ಕುಟುಂಬ	ಆರ್ಥಿಕ ಸಹಾಯ ಲಭಿಸದ ಕುಟುಂಬಗಳು	ಇದರಲ್ಲಿ sc/st ಗೆ ಸಹಾಯ	IRDP ಸಹಾಯ ಸಿಕ್ಕಿ ದಾರಿದ್ರ್ಯ ರೇಖೆಗೆ ಮೇಲೆ ಬಂದ ಕುಟುಂಬಗಳು	ದಾರಿದ್ರ್ಯ ರೇಖೆಗೆ ಕೆಳಗಿರುವ ಒಟ್ಟು ಕುಟುಂಬಗಳು
1	2	3	4	5	6	7
KULOOR I	156	39	27	15	21	130
MEENJA II	136	18	22	10	18	117
MAJIBAIL III	182	15	31	14	21	164
TALEKALA 1V	166	12	28	16	17	153
KALIYOOR V	144	8	23	13	9	129
KALIYOOR VI	142	10	22	11	12	126
MOODOMBAIL VII	174	34	35	18	27	159
ARIYALA VIII	157	18	27	14	19	147
KADAMBAR IX	143	21	33	17	21	131
TOTAL	1400	175	248	128	165	1256

D.W.C.R.A :- 18ಮತ್ತು 35 ವರ್ಷದೊಳಗಿನ I.R.D.P. ಸರ್ವೇಯಲ್ಲೊಳಗೊಂಡ ಯುವತಿಯರಿಗೆ ಉದ್ಯೋಗದಲ್ಲಿ ತರಬೇತಿ ನೀಡುವ ಯೋಜನೆಯಾಗಿದೆ.

10% ಬಡ್ಡಿದರ ಹಾಗೂ ಮೂರರಲ್ಲಿ ಒಂದು ಭಾಗದಷ್ಟು ಸರಕಾರದ ಸಹಾಯಧನ ಮೂಲಕ ಸಾಲ ಈ ಯೋಜನೆಯಿಂದ ಲಭಿಸುತ್ತಿದೆ. ಸ್ವಂತ ಉದ್ಯೋಗ ಗಳಿಸಲು ಇದು ಸಹಾಯಕವಾಗುತ್ತದೆ. D.W.C.R ಯೋಜನೆ ಪ್ರಕಾರ ಕೇವಲ ಎರಡೇ ವಾರ್ಡಿಗೆ ಎರಡು ಯೂನಿಟ್ ಲಭಿಸಿದೆ.

ಉದ್ಯೋಗ D.W.C.R.A. ಪದ್ಧತಿ

I				
II				
III				
IV				
V				
VI	Piggery	Koleyoor	12	Piglets
VII				
VIII	Dairy unit	Attegoli	10	M.LK
IX				

TRYSM (ಟ್ರೈಸಂ):-

18 ರಿಂದ 35 ವರ್ಷದೊಳಗಿನ I.R.D.P. ಸರ್ವೇಯಲ್ಲೊಳಪಟ್ಟ ಯುವಕ -ಯವತಿಯರಿಗೆ ಉದ್ಯೋಗದಲ್ಲಿ ಪರಿಶೀಲನೆ ಕೊಡುವುದೇ ಇದರ ಉದ್ದೇಶ. ಈ ಪದ್ಧತಿಯಿಂದ ಈವರೆಗೆ 23 ಜನರಿಗೆ ತರಬೇತಿ ನೀಡಲಾಗಿದೆ. ಇದರಲ್ಲಿ 21 ಜನರು ಈಗ ಸ್ವಂತ ಉದ್ಯೋಗ ಕಲ್ಪಿಸಿಕೊಂಡಿದ್ದಾರೆ. TOOLKIT (RAP) : ಗ್ರಾಮೀಣ ಕರಕುಶಲ ಕಾರ್ಮಿಕರಿಗೆ ನವೀನ ಮಾದರಿಯ ಕೆಲಸೋಪಕರಣಗಳನ್ನು ನೀಡುವಂತಹ ಯೋಜನೆಯಾಗಿದೆ. ಇದುವರೆಗೆ ಕೇವಲ 67 ಜನರು ಇದರ ಸಹಾಯವನ್ನು ಪಡೆದಿದ್ದಾರೆ. ಅರ್ಜಿಸಲ್ಲಿಸಿದ 78 ಜನರಿಗೆ ಇದು ಲಭಿಸುವ ಅರ್ಹತೆ ಇದ್ದು ಇದುವರೆಗೆ ಲಭಿಸಲಿಲ್ಲ. ಈ ಯೋಜನೆಯ ಪೂರ್ಣ ಪ್ರಯೋಜನ ಗ್ರಾಮೀಣರಿಗೆ ಲಭಿಸುವುದಿಲ್ಲ.

C.R.S.P:- ದಾರಿದ್ರ್ಯ ರೇಖೆಗಿಂತ ಕೆಳಸ್ತರದಲ್ಲಿ ವಾಸಿಸುವ ದರಿದ್ರ್ಯ ಕುಟುಂಬದವರಿಗೆ ಕಕ್ಕುಸು ನಿರ್ಮಿಸಲು ಧನ ಸಹಾಯ ಲಭಿಸುವ

ಯೋಜನೆಯಾಗಿದೆ. C.R.SP. ಮೀಂಜ ಪಂಚಾಯತಿನಲ್ಲಿ ಇದುವರೆಗೆ 92-96ರ ವರೆಗೆ 125 ಕುಟುಂಬಗಳಿಗೆ ಈ ಯೋಜನೆಯ ಮೂಲಕ ಕಕ್ಕುಸು ನಿರ್ಮಿಸಲು ಸಹಾಯಧನ ಲಭಿಸಿದೆ.

ವಿಲೇಜ್ ಆಫೀಸು ಮುಖಾಂತರ ಲಭಿಸುವ ಕ್ಷೇಮ ಯೋಜನೆ

ಸಾಮಾಜಿಕ ಕ್ಷೇಮ ವಲಯದಲ್ಲಿ ರೆವಿನ್ಯೂ ವಿಭಾಗ ನಡೆಸುವ, ಪೆನ್‌ಶನ್ ಹಾಗೂ ವಿಧವೆಯರ ಮಕ್ಕಳ ವಿವಾಹ ಧನ ಸಹಾಯ ಯೋಜನೆಗಳಾಗಿದೆ. ಇದುವರೆಗೆ ಅದರ ಮೂಲಕ ಕೇವಲ 95 ಜನರಿಗೆ ಧನ ಸಹಾಯ ಲಭಿಸಿದೆ. ಅರ್ಹತೆಯಿದ್ದವರಿಗೂ ಕೂಡಾ ಇದರ ಪ್ರಯೋಜನ ಲಭಿಸದಿರುವುದು, ಮತ್ತು ಅರ್ಹತೆ ಇಲ್ಲದವರೂ ಕೂಡಾ ಇದರ ಪ್ರಯೋಜನ ಪಡೆಯುವುದು ಇದು ಮೇಲ್ನೋಟಕ್ಕೆ ಕಾಣದಿದ್ದರೂ, ಪ್ರಸಕ್ತ ಪರಿಸ್ಥಿತಿ ಅದಾಗಿದೆ. ದಿನಿತ್ಯದ ಖರ್ಚಿಗೆ ತೊಂದರೆ ಪಡುವ ವ್ಯಕ್ತಿಗಳಿಗೆ ಲಭಿಸುವ ಈ ಸಹಾಯ ಪದ್ಧತಿ ಸರಿಯಾಗಿ ಸಿಗದಿರುವುದು ತೊಂದರೆಗೊಳಪಡಿಸಿದೆ.

Sl. No.	Particulars	ಸಿಗುವವರ ಸಂಖ್ಯೆ
1.	Oldage Pension	13
2.	Widow Pension	82
3.	Freedom Fighten Pension	-

ವಿಧವಾ ಮಕ್ಕಳ ವಿವಾಹ ಧನ ಸಹಾಯು 82 ಮಂದಿಗೆ ಲಭಿಸಿದೆ ಮತ್ತು ವಯಸ್ಕರ ಪೆನ್‌ಶನ್ 13 ಮಂದಿಗೆ ಲಭಿಸಿದೆ. ಅರ್ಜಿ ಸಲ್ಲಿಸಿದ ಮುನ್ನೂರರಷ್ಟು ಮಂದಿಗೆ ಇದುವರೆಗೆ ವಿತರಿಸಲಿಲ್ಲವೆಂಬುದು ಗ್ರಾಮಸಭೆಯ ವರದಿಯಲ್ಲಿ ಬಂದಂತಹ ವಿಚಾರ.

ಅಂಗನವಾಡಿಗಳು :-

ಗ್ರಾಮಾಭಿವೃದ್ಧಿ ಯೋಜನೆಯಂಗವಾಗಿ ನಡೆದ ಸಮಗ್ರ ಮಾತೃ-ಶಿಶು ಸಂರಕ್ಷಣಾ ಯೋಜನೆಯಡಿಯಲ್ಲಿ ಅನುವದಿಸಿದ ಅಂಗನವಾಡಿಗಳೆಂದರ ಮಜಿಬೈಲು ಮತ್ತು ಕಳಿಯೂರು ಅಂಗನವಾಡಿಗಳು. ಸಾವಿರ ಜನರಿಗೆ ಒಂದು ಅಂಗನವಾಡಿ ಇದು I.C.D.S. ಉದ್ದೇಶವಾದರೂ ಇದು ಈ ಪಂಚಾಯತಿನಲ್ಲಿ ಅಸ್ತಿತ್ವಕ್ಕೆ ಬರಲಿಲ್ಲ. ಈಗ ಇರುವಂತಹ ಎರಡು ಅಂಗನವಾಡಿಗಳಲ್ಲೂ ಪ್ರಾಥಮಿಕ ಸೌಕರ್ಯಗಳಿಲ್ಲದೇ ಮುಚ್ಚುವ ಹಂತದಲ್ಲಿದೆ.

ಅಂಗನವಾಡಿಗಳ ವಿವರ

ಕ್ರಮಸಂಖ್ಯೆ	ಹೆಸರು ಮತ್ತು ವಾರ್ಡು ನಂಬ್ರ	ಮಕ್ಕಳು		ಅಧ್ಯಾಪಿಕೆಯರು	ಸ್ಥಳಾವಕಾಶ	ಕಟ್ಟಡ		ಕಟ್ಟಡದ ಸ್ಥಿತಿ	ಪೌಷ್ಟಿಕಾಹಾರ ಆಟೋಪಕರಣಗಳ
		ಗಂ.	ಹೆ.			ಸ್ವಂತ	ಬಾಡಿಗೆ		
1.	ಕುಳೂರು - I	-	-	-	--		--		
2.	ಮೀಂಜ - II	-	-	-	--		--	-	
3.	ಮಜಿಬೈಲು -III	30	20	1	ಸಾಲದು	ಸ್ವಂತ	-	ಚೆನ್ನಾಗಿಲ್ಲ	ಸರಿಯಾಗಿಲ್ಲ -ಇಲ್ಲ-
4.	ತಲೇಕಳ - IV	--	-	-	--	-	--		
5.	ಕಳಿಯೂರು - V	30	31	1	ಸಾಲದು	-	ಬಾಡಿಗೆ	ಸ್ಥಿತಿ ಚೆನ್ನಾಗಿಲ್ಲ	ಸರಿಯಾಗಿಲ್ಲ ಸಾಲದು
6.	ಕೋಳಿಯೂರು -VI	--	-	-	--	-	-	-	
7.	ಮೂಡಂಬೈಲು -VII	--	-	-	--	-			- -
8.	ಅರಿಯಾಲ - VIII	--	-	-	--	-		- -	
9.	ಕಡಂಬಾರ್-IX	--	-	-	--	-		-	
Total	ಒಟ್ಟು ಮಕ್ಕಳು	60+	51=	ಅಧ್ಯಾಪಿಕೆ -2					

ಹೆಚ್ಚಿನ ಪ್ರಯಾಸ, ಯಾತನೆಗಳನ್ನು ಅನುಭವಿಸಿ, ನಾಡಿನ ಕ್ಷೇಮಕ್ಕಾಗಿ ಪ್ರವರ್ತಿಸುವ ಅಂಗನವಾಡಿಗಳ ಅಧ್ಯಾಪಿಕೆಯರ ಸಂಬಳ ತೀರ ಕಡಿಮೆ ಈ ಅಧ್ಯಾಪಿಕೆಯರನ್ನು ಸರಕಾರವು ಪ್ರೀ ಪ್ರೈಮರಿ ಶಾಲಾ ಟೀಚರ್‌ರಾಗಿ ನೇಮಕಾತಿ ಮಾಡಬೇಕೆಂದು ಗ್ರಾಮಸಭೆಯ ವರದಿಯನ್ನು ಅವಶ್ಯಪಟ್ಟಿದ್ದಾರೆ.

ನಿರುದ್ಯೋಗ ವೇತನ : ನಿರುದ್ಯೋಗ ವೇತನ ಪಡೆಯುವವರ ಸಂಖ್ಯೆ ಇಲ್ಲವೆಂದೇ ಹೇಳಬಹುದು. ಆದರೆ ನಿರುದ್ಯೋಗಿಗಳು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಉನ್ನತ ವಿದ್ಯಾಭ್ಯಾಸ ಗಳಿಸಿದ ಹೆಚ್ಚಿನ ಯುವಕ -ಯುವತಿಯರು ಉದ್ಯೋಗವಿಲ್ಲದೇ ಪರದಾಡುತ್ತಿದ್ದಾರೆ. ಈ ಯುವಕ-

ಯುವತಿಯರಿಗೆ ಉದ್ಯೋಗ ಕಲ್ಪಿಸಿಕೊಡುವಲ್ಲಿ ಪಂಚಾಯಿತು ಯಶಸ್ವಿಯಾಗಬೇಕು. ಪಂಚಾಯತಿಗೊಳಪಟ್ಟ ಎಲ್ಲಾ ಸರಕಾರೀ, ಖಾಸಗಿ ಕಛೇರಿ, ಕಾರ್ಖಾನೆಗಳಿಗೆ, ಅದೇ ಪಂಚಾಯತಿನವರನ್ನು ಮೊದಲ ಪ್ರಾಶಸ್ತ್ಯ ನೀಡಿ ನೌಕರರಾಗಿ ನೇಮಿಸಬೇಕು. ಇದರಿಂದ ನಿರುದ್ಯೋಗ ಸ್ವಲ್ಪ ಮಟ್ಟಿಗಾದರೂ ನಿವಾರಣೆಯಾದೀತು ಮತ್ತು ನೌಕರರ ಆರೋಗ್ಯ ಸಂರಕ್ಷಣೆಗೆ ವಿಶೇಷ ಮುತುವರ್ಜಿ ವಹಿಸಬೇಕು.

ಸಮಸ್ಯೆಗಳು :-

1. ನಿರುದ್ಯೋಗ:- ವಿದ್ಯಾವಂತ ಯುವಕ ಯವತಿಯನ್ನು ಹೆಚ್ಚಿನ ಮಂದಿ ಉದ್ಯೋಗವಿಲ್ಲದೇ ಪರದಾಡುತ್ತಿದ್ದಾರೆ.

   ಅತ್ತ ಕೃಷಿ ಕೆಲಸ ಮಾಡಲು ಹಿಂಜರಿಕೆ, ಇತ್ತ ಉನ್ನತ ಕೆಲಸ ಸಿಗದ ಕಾರಣ ಇವರು ನಿರುದ್ಯೋಗಿಗಳಾಗಿದ್ದಾರೆ.
2. ಅರ್ಹತೆ ಇರುವವರಿಗೂ ಪೆನ್‌ಶನ್ ಯೋಜನೆಯ ಅನುಕೂಲತೆ ಲಭಿಸುವುದಿಲ್ಲ.
3. ಬಾಲವಾಡಿ, ಅಂಗನವಾಡಿಗಳು ವಿರಳ.
4. ಮಹಿಳಾ ಸಮಾಜ ಇಲ್ಲವೇ ಇಲ್ಲ.
5. ಪಂಚಾಯತಿ ಗೊಳಪಟ್ಟ ಎಲ್ಲಾ ಸಾಂಸ್ಕೃತಿಕ ಸಂಘಟನೆಗಳನ್ನು ವಿಕೀರಣಗೊಳಿಸಲು ಒಂದು ಸಾಂಸ್ಕೃತಿಕ ಕೇಂದ್ರವಿಲ್ಲ.
6. ನಿರ್ಮಾಣ, ಬೀಡಿ, ಕೃಷಿ ಕೆಲಸಗಾರರ ಕ್ಷೇಮ ಪದ್ಧತಿ ಸರಿಯಾಗಿ ಫಲ ಪ್ರದವಾಗಿಲ್ಲ.
7. ಅರ್ಹತೆಯಿದ್ದ ಬಡ ಭೂರಹಿತರಿಗೆ ಮಿಗತೆ ಭೂಮಿ ಲಭಿಸದಿರುವುದು
8. ಸಾರ್ವಜನಿಕ ಶ್ಮಸಾನದ ವ್ಯವಸ್ಥೆ ಇಲ್ಲದಿರುವುದು
9. I.R.D.P. ಸರ್ವೇಸರಿಯಾಗಿಲ್ಲ. ಇದರಿಂದಾಗಿ ಯೋಗ್ಯರಾದ ದರಿದ್ರರಿಗೆ ಅದರ ಉಪಯೋಗ ಲಭಿಸುವುದಿಲ್ಲ ಮತ್ತು ಇದರ ಉಪಯೋಗ ಮತ್ತು ಮಾಹಿತಿ ಯಾರಿಗೂ ತಿಳಿದಿಲ್ಲ.
10. ಉದ್ಯೋಗದಲ್ಲಿ ತರಬೇತಿ ಸಿಕ್ಕದರೂ ಆರ್ಥಿಕ ಸಹಾಯ ಸಿಕ್ಕದ ಕಾರಣದಿಂದಾಗಿ ಸ್ವಂತ ಉದ್ಯೋಗ ಕಲ್ಪಿಸಲು ತಡೆ.
11. ಕ್ಷೇಮನಿಧಿಯಲ್ಲಿ ಸದಸ್ಯರಾಗಲು ಹಿಂಜರಿಕೆ.
12. ಭ್ರಷ್ಟಾಚಾರ ಮತ್ತು ಮಧ್ಯವರ್ತಿಗಳ ಶೋಷಣೆ
13. ಈ ಯೋಜನೆಗಳ ಕುರಿತು ಹೆಚ್ಚಿನವರಿಗೆ ತಿಳಿದಿಲ್ಲ ಮತ್ತು ದೊರೆಯುವ ಸೌಲಭ್ಯಗಳು ತಕ್ಕ ಸಮಯಕ್ಕೆ ಲಭಿಸುವುದಿಲ್ಲ

ಸಾಧ್ಯತೆಗಳು :-

ಗ್ರಾಮ ಸಭೆಯನ್ನು ಮೂಡಿಬಂದ ಸಮಗ್ರ ನಿರ್ದೇಶನಗಳು :

1. I.R.D.P. ಸರ್ವೇಯಲ್ಲೂ ಅರ್ಹತೆಯಿದ್ದ ಎಲ್ಲರನ್ನೂ ಜತೆಗೂಡಿಸಿ ಇದರ ಪ್ರಯೋಜನದೊರಕಿಸುವ ವ್ಯವಸ್ಥೆ.
2. ಪೆನ್‌ಶನ್ ದರ ಹೆಚ್ಚಿಸುವುದು. ಅರ್ಜಿ ಸಲ್ಲಿಸಿದವರಿಗೆ ಕೂಡಲೇ ಪೆನ್‌ಶನ್ ವಿತರಿಸುವುದು. ಇದರ ಅಧಿಕಾರ ಪಂಚಾಯತು ವಹಿಸುವುದು.
3. ಪ್ರತಿಯೊಂದು ವಾರ್ಡಿನಲ್ಲೂ ಪ್ರತಿ 1000 ಜನರಿಗೆ ಒಂದರಂತೆ ಅಂಗನವಾಡಿಗಳನ್ನು ಸ್ಥಾಪಿಸುವುದು.
4. ನಿರುದ್ಯೋಗ ನಿವಾರಿಸಲು ಸರಕಾರ ಯೋಗ್ಯ ಕ್ರಮ ಕೈಗೊಂಡು ಕೃಷಿಯಲ್ಲೋ ಇತರ ರಂಗದಲ್ಲೋ ಉದ್ಯೋಗ ಮಾಡಲು ಇಷ್ಮವಿದ್ದವರಿಗೆ ತರಬೇತಿ ಹಾಗೂ ಆರ್ಥಿಕ ಸಹಾಯ ನೀಡುವುದು.
5. ಹೊಗೆರಹಿತ ಒಲೆ ಪ್ರತೀ ಮನೆಯಲ್ಲೂ ಸ್ಥಾಪನೆ
6. ಅಂಗನವಾಡಿ ಕಾರ್ಯಕರ್ತೆಯರನ್ನು Pre-primary Teacher ಆಗಿ ಸರಕಾರ ಅಂಗೀಕರಿಸಿ ಅವರ ವೇತನ ಹೆಚ್ಚಿಸುವುದು.
7. ಸಾಂಸ್ಕೃತಿಕ ಕೇಂದ್ರದ ಸ್ಥಾಪನೆ
8. ಅಂಗವಿಕರಿಗೆ ಸಲಕರಣೆಗಳನ್ನು ನಿರ್ಮಿಸುವ ಘಟಕ ಪಂಚಾಯತಿನಲ್ಲಿ ಸ್ಥಾಪಿಸಬೇಕು.
9. ಮಹಿಳೆಯರಿಗಾಗಿ DWCRA ಯೋಜನೆಯನ್ನು ವಿಸ್ತರಿಸುವುದು

10. ರೋಗ ಪ್ರತಿರೋಧ ಚಿಕಿತ್ಸಾ ಸೌಕರ್ಯ

11. ಪಂಚಾಯತಿನೊಳಗಿನ ಎಲ್ಲಾ ಮನೆಗಳಲ್ಲೂ ಶೀಘ್ರ ಕಕ್ಕುಸು ನಿರ್ಮಾಣ

12. ವೃದ್ಧ ಮಂದಿರದ ಸ್ಥಾಪನೆ

13. ಆವಶ್ಯವಿರುವ ಸ್ಥಳದಲ್ಲಿ ಸ್ಮಶಾನದ ನಿರ್ಮಾಣ.

14. ಸಾರ್ವಜನಿಕ ಗ್ರಂಥಾಲಯ, ಜನವಿದ್ಯಾಕೇಂದ್ರ ಮತ್ತು ಸಾರ್ವಜನಿಕ ಟಿ.ವಿ. ವೀಕ್ಷಣಾ ಕೇಂದ್ರ ಮತ್ತು ಸಾರ್ವಜನಿಕ ಟಿ.ವಿ. ವೀಕ್ಷಣಾ ಕೇಂದ್ರ ಪಂಚಾಯತಿನ ಎಲ್ಲಾ ವಾರ್ಡಿನಲ್ಲೂ ಸ್ಥಾಪಿಸುವುದು.ಮೀಂಜದ ಮೀಯಪದವು ಹರಿಜನ ಕಾಲನಿಗೆ ಒಂದು ಟಿ.ವಿ. ವೀಕ್ಷಣಾ ಕೇಂದ್ರ ಒದಗಿಸುವುದು.

15. ಸ್ವಂತ ಕಟ್ಟಡಗಳಿಲ್ಲದ ಅಂಗನವಾಡಿಗಳಿಗೆ ಮತ್ತು ಇನ್ನು ನಿರ್ಮಿಸಬೇಕಾದ ಅಂಗನವಾಡಿಗಳಿಗೆ ಲೀಸ್ ಭೂಮಿ ಅಥವಾ ಮಿಗತೆ ಭೂಮಿಯನ್ನು ಕಟ್ಟಡ ನಿರ್ಮಿಸಲು ಅನುಮತಿ ನೀಡುವುದು.

16. ಶುಚಿತ್ವ :- ಯಾವುದಾದರೂ ಒಂದು ಜನಾಂಗಕ್ಕೆ ಉಚಿತವಾಗಿ ಶೌಚಾಲಯ ನಿರ್ಮಿಸಿಕೊಡುವುದರಿಂದ ನೈರ್ಮಲ್ಯ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ. ಅದೂ ಅಲ್ಲದೆ ಇಂದು ಜಾರಿಯಲ್ಲಿರುವ ಸಬ್ಸಿಡಿ ಶೌಚಾಲಯ ಕಾರ್ಯಕ್ರಮಗಳಿಗೂ ಪರಿಮಿತಿಗಳಿವೆ. ಆದರೆ ಪ್ರಾದೇಶಿಕ ಮಟ್ಟದಲ್ಲಿ ನಿರ್ಮಾಣ ಕಾರ್ಯಕ್ರಮಗಳನ್ನು ವಹಿಸಿಕೊಂಡು ಪಂಚಾಯತು ಹಾಗೂ ಫಲಾನುಭವಿಗಳ ಸಹ ಭಾಗಿತ್ವದೊಂದಿಗೆ ಕಾರ್ಯಕ್ರಮದ ರೂಪೀಕರಣ ಮತ್ತು ಕಾರ್ಯ ನಿರ್ವಹಣೆ, ಜನರು ಅಂಗೀಕರಿಸುವ ಹಾಗೂ ಪರಿಸರಕ್ಕೆ ತಕ್ಕುದಾದ ಕಡಿಮೆ ವೆಚ್ಚ ಆದರೆ ಸುದೃಢವಾದ ವಿಕೇಂದ್ರೀಕೃತ ಕಾರ್ಯಕ್ರಮಗಳನ್ನು ಜ್ಯಾರಿಗೊಳಿಸಿದರೆ ಈ ವಲಯದಲ್ಲಿ ಅಲ್ಪಾವಧಿಯಲ್ಲಿಯೇ ಹೆಚ್ಚಿನ ಬದಲಾವಣೆ ನಿರೀಕ್ಷಿಸಬಹುದು.

ಸಾರ್ವಜನಿಕ ವಿತರಣಾ ಕೇಂದ್ರ (ಇದರ ತಖ್ತೆ ಮುಂದೆ ಇದೆ)

ಮೀಂಜ ಪಂಚಾಯತಿನ್ನು 9 ಸಾರ್ವಜನಿಕ ವಿತರಣಾ ಕೇಂದ್ರ ಅಥವಾ ರೇಷನ್ ಅಂಗಡಿಗಳಿವೆ. ಇವುಗಳಲ್ಲಿ ಒಟ್ಟು 3268 ಕಾರ್ಡುಗಳಿವೆ. ಇದಲ್ಲದೇ ಒಂದು ಮಾವೇಳಿ ಸ್ಟೋರ್ ಕಡಂಬಾರಿನಲ್ಲಿತ್ತು. ಆದರೆ ಈಗ ಅದು ಕಾರ್ಯಾಚರಿಸುವುದಿಲ್ಲ, ಮಾವೇಳಿ ಸ್ಟೋರ್‌ನ ಮತ್ತು ಮಾರುಕಟ್ಟೆಯ ಧಾರಣೆಯಲ್ಲಿ ವ್ಯತ್ಯಾಸ. ಇಲ್ಲದುದರಿಂದ ಗ್ರಾಹಕರಿಂದ ಅವಗಣಿಸಲ್ಪಟ್ಟು ಮಾವೇಲಿ ಸ್ಟೋರ್ ಮುಚ್ಚಲ್ಪಟ್ಟಿದೆ. ಪಂಚಾಯತಿನೊಳಗಿರುವ ಎಲ್ಲಾ ರೇಷನ್ ಅಂಗಡಿಗಳನ್ನು ಪಂಚಾಯತುಅಧೀನಕ್ಕೆ ತಂದು, ಇದರ ಮೇಲುಸ್ತುವಾರಿ ಪಂಚಾಯತ್ ನೋಡುವಂತೆ ಮಾಡಬೇಕು. ಈಗ ಮಾರಲ್ಪಡುವಂತಹ ಹುಳು, ಹುಪ್ಪಟೆಗಳಿಂದ ಕೂಡಿದ ಅಕ್ಕಿಯ ಬದಲಿಗೆ ಉತ್ತಮ ಕಶ್ಮಲ ರಹಿತ ಅಕ್ಕಿಯನ್ನು ವಿತರಿಸಲು ಕ್ರಮ ಕೈಗೊಳ್ಳಬೇಕು.

ಪಂಚಾಯತಿನ 9 ಕಡೆಯಲ್ಲಾದರೂ ಮಾವೇಲಿ ಸ್ಟೋರ್‌ಗಳನ್ನು ಸ್ಥಾಪಿಸಿ, ಅಲ್ಲಿಂದ ಆವಶ್ಯ ಸಾಮಗ್ರಿಗಳನ್ನು ಕಡಿಮೆ ಬೆಲೆಗೆ ವಿತರಿಸುವ ಮೂಲಕ ಬೆಲೆಯೇರಿಕೆಯನ್ನು ತಡೆಗಟ್ಟಬಹುದು ಮತ್ತು ರೇಷನ್ ಅಂಗಡಿಗಳನ್ನು ಆವಶ್ಯವಿರುವ ಸ್ಥಳಗಳಲ್ಲಿ ತೆರೆಯಬೇಕು.

ರೇಷನ್ ವಿತರಣಾ ರಂಗದಲ್ಲುಂಟಾಗುವ ಆಡಚಣೆ ನಿವಾರಣೆಯಾಗಬೇಕು.

ಕೃಷಿ ಆವಶ್ಯಕತೆಗಾಗಿ ಪರ್ಮಿಟ್ ಮೂಲಕ ಚಿಮಿಣಿ ಎಣ್ಣೆ ವಿತರಿಸಲು ರೇಷನ್ ಅಂಗಡಿಯಲ್ಲಿ ಅಥವಾ ಪಂಚಾಯತು ಕೇಂದ್ರಗಳಲ್ಲಿ ತೆರೆಯಬೇಕು. ವಿತರಣಾ ಕೇಂದ್ರ ಈಗ ಕಾಸರಗೋಡಿಗೆ ಹೋಗಿ ತರುವಲ್ಲಿ ಕೃಷಿಕರು ಅತೀವ ವೇದನೆ ಅನುಭವಿಸುತ್ತಾರೆ. ಇದನ್ನು ತಪ್ಪಿಸಲು ಪಂಚಾಯತು ಕೇಂದ್ರದಲ್ಲಿ ಸ್ಥಾಪಿಸಬೇಕು.

ರೇಷನ್ ವಿತರಣಾ ಕುರಿತಾದ - ವಿವರಗಳು (95-96)

ಹೆಸರು ಮತ್ತು ವಾರ್ಡು	ಕಾರ್ಡುದಾರರ ಸಂಖ್ಯೆ			ಫಲಾನುಭವಿಗಳ ಸಂಖ್ಯೆ			ಪ್ರತೀ ಕೇಂದ್ರದಲ್ಲಿ ವಿತರಿಸಲಾದ ಆಹಾರವಸ್ತು (ಕ್ವಿಂಟಾಲ್‌ನ್ನು)						ಚಿಮಣಿ ಎಣ್ಣೆ(ಲೀಟರ್)		
	NE	E	TOTAL	MAJOR	MINOR UNIT	TOTAL	RICE	WHEAT	MAIDA	SOJI	ಸಕ್ಕರೆ	ಫಾಮೋಲಿನ್	ಫರ್ಮಿಟ್	ಫರ್ಮಿಟನ್ನು ವಿತರಿಸುವ ಚಿಮಿಣಿ ಎಣ್ಣೆ	ಕಾರ್ಡನ್ನು ವಿತರಿಸುವ ಚಿಮಿಣಿ ಎಣ್ಣೆ
1	2	3	4	5	6	7	8	9	10	11	12	13	14	15	16
II ಮೀಯ ಪದವು ARD.NO.-14	315	159	474	2395	496	5286	2537	2537	145	145	138.7	-	78	8919	19280
I- Chigurupade ARD-181	233	50	283	1424	266	3114	1612	161.2	33.6	60.6	88	-	44	665	1265
III-MAJIBAIL ARD-12	458	150	608	2933	873	6862	1125	145	31.50	6.30	201	-	24	3800	31600
1V- SUNKADAKATTE ARD-13	221	47	268	652	139	1443	175	58	-	-	32	-	6	57	1020
V-SUNKADAKATTE ARD-3	108	73	181	412	105	929	93	48	12	12	25	-	11	87	827
IV-MADANGAL ARD-3	135	100	235	1236	292	2764	2764	276	20	20	61	-	9	83	875
VI-SASIBGLI ARD-176	201	159	360	1977	294	4248	760	120	12	4	10.8	-	30	4260	15600
VII-BELA ARD-	165	101	266	1455	237	3147	360	360	63	63	96	-	14	138	9900
IX-KADAMAR ARD-135	253	175	428	2279	431	4989	480	154	36	5	128.8	-	78	8919	19,280

64A

ಸಂಸ್ಕೃತಿ

ಸಂಸ್ಕೃತಿ ಎಂದರೆ ಕೇವಲ ಕಲೆ ಮತ್ತು ಸಾಹಿತ್ಯವಲ್ಲ. ಮಾನವನ ಧಾರ್ಮಿಕ ಮೌಲ್ಯಗಳು ನೈತಿಕ ವಿಚಾರಗಳು. ಕುಟುಂಬ ಸಂಬಂಧಗಳು ಪರಂಪರಾಗತ ನಡವಳಿಕೆಗಳೂ, ಸಂಸ್ಕೃತಿಯಾಗಿವೆ. ಸಾಮಾಜದಲ್ಲಿ ನಡೆಯುವ ಒಗ್ಗಟ್ಟಾದಾರು. ಬಿಕ್ಕಟ್ಟಾದರೂ ಅವುಗಳನ್ನು ಪರಸ್ಪರ ಬಂಧಿಸುವುದು ಸಂಸ್ಕೃತಿಯಾಗಿದೆ. ಮಾನವನ ಹುಟ್ಟಿನಿಂದಲೇ ಸಂಸ್ಕೃತಿಯು ಬೆಳೆದು ಸಮಾಜದ ಉನ್ನತಿಗೆ ಪ್ರೇರಕವಾಗಿಯೂ ಪೋಷಕವಾಗಿಯೂ, ವರ್ತಿಸುತ್ತದೆ. ಧರ್ಮದ ಹೆಸರಿನಲ್ಲಿ, ಮಾನವೀಯತೆಯಲ್ಲಿ, ಮಾನವರ ಮನಸ್ಸಿನಲ್ಲಿ ಪರಿವರ್ತನೆಯನ್ನುಂಟು ಮಾಡಿ ಸಾಂಸ್ಕೃತಿಕ ಪರಿವರ್ತನೆಯ ಮೂಲಕ. ವಿಶ್ವವನ್ನು ಸುಭಿಕ್ಷೆ ಹಾಗೂ, ಶಾಂತಿಯತ್ತ ಸಾಗಿಸುವುದಕ್ಕೆ ಸಹಕಾರಿಯಾಗುವುದೇ ಸಂಸ್ಕೃತಿ.

ಸಮಾಜದಲ್ಲಿ ಸಂಪ್ರದಾಯವಾದಿಗಳು ಶ್ರೇಘುಗಾಮಿಗಳು ತಮ್ಮೊಳಗೆ ಸ್ಪರ್ಧಿಸುವುದರಿಂದ ಸಂಸ್ಕೃತಿಯಲ್ಲೂ ಭೇದಗಳು ಬೆಳೆಯುತ್ತವೆ. ಜಾತಿ, ಧರ್ಮ, ಭಿನ್ನತೆಗಳೂ ಭಾಷಾಭಿನ್ನತೆಗಳೂ, ವರ್ಗ ವೈತ್ಯಾಸಗಳೂ ವಿವಿಧ ಸಾಂಸ್ಕೃತಿಕ ದಾರೆಗಳಿಗೆ ಜನ್ಮವೀಯುತ್ತವೆ. ಇವುಗಳನ್ನು ವಿಶ್ಲೇಷಿಸಿ ಕಾಲೋಚಿತವಾಗಿ ತಿರಸ್ಕಾರ ಪುರಸ್ಕಾರಕ್ಕೆ ಗುರಿಪಡಿಸಿ ಉತ್ತಮ ಅಂಶಗಳನ್ನು ಸ್ವೀಕರಿಸಲು ನಾವು ಪ್ರಯತ್ನಿಸಬೇಕು.

ಈ ಸಂಸ್ಕೃತಿ ಪ್ರಾಚೀನ ಕಾಲದಿಂದಲೇ ಬಾಯಿಯಿಂದ ಬಾಯಿಗೆ ಹರಿದು ಬಂದಿದೆ. ಗುರುಹಿರಿಯರಿಂದ ಪ್ರವರ್ತಿಸುವ ಈ ಸಂಸ್ಕೃತಿ ತಲೆಮಾರಿನಿಂದ ತಲೆಮಾರಿಗೆ ಮುನುಷ್ಯರಿಂದ ಮನುಷ್ಯರಿಗೆ ಹಿಂದೆಯೂ ಇಂದೂ ಹರಿದು ಬಂದರೂ, ಎಲ್ಲರನ್ನೂ ಇದು ತಲಪುತ್ತದೆ ಎಂದು ಹೇಳಲು ಬರುವುದಿಲ್ಲ ಈ ಭಾಗ್ಯ ಸಮಾಜದ ಕೆಲವು ಮಂದಿಗೆ ಮಾತ್ರ ತಲುಪಿತು. ಅವಿದ್ಯಾವಂತರಿಗೆ ಇದರ ಪರಿಚಯವಾಗುವುದಿಲ್ಲ. ಶಿಕ್ಷಣ ವ್ಯಾಪಕವಾದರೂ, ಸಾಕ್ಷರತೆ ಹರಡಿದರೂ, ಅಕ್ಷರ ಜ್ಞಾನ ಸಾರ್ವತ್ರಿಕವಾಯಿತು ಎಂದು ಹೇಳಲು ಸಾಧ್ಯವಿಲ್ಲ. ರೇಡಿಯೋ, ಟೆಲಿವಿಷನ್, ವೀಡಿಯೋ ಮುಂತಾದುವು ಪ್ರಚಾರಕ್ಕೆ ಬಂದುದರಿಂದ ಅರಿವಿನ ವ್ಯಾಪ್ತಿ ಹೆಚ್ಚಾಯಿತು.

ಗುರುಹಿರಿಯರಿಂದ ಕುಟುಂಬಗಳಿಂದ ಸಾಂಸ್ಕೃತಿಕ ಪ್ರವಾಹ ಹರಿದು ಇಷ್ಟರತನಕ ಬರುತ್ತಿದ್ದರೂ, ಈಗ ಕುಟುಂಬ ಸಂಪ್ರದಾಯ ಗ್ರಾಮೀಣ ಒಗ್ಗಟ್ಟು ಕೊನೆಗೊಂಡು ರಾಜಕೀಯ ಪಕ್ಷಗಳು ಸಂಘಟನೆಗಳೂ, ಅಸ್ತಿತ್ವಕ್ಕೆ ಬಂದುದರಿಂದ ಸಾಂಸ್ಕೃತಿಕ ಪ್ರವಾಹದಲ್ಲಿ ಬದಲಾವಣೆಯಾಯಿತು. ಆರಾಧನಾಲಯಗಳೂ ಪರಂಪರಾಗತ ಉತ್ಸವಗಳೂ, ಜಾತಿ ಧಾರ್ಮಿಕ ಸಂಘಗಳೂ ಇಂದು ಕೂಡ ಹಳೆಯ ಸಾಂಸ್ಕೃತಿಕ ಪ್ರವಾಹದಲ್ಲಿ ಮುಂದೆ ಸಾಗುತ್ತವೆ.

ನಮ್ಮ ಪಂಚಾಯತ್ ವಲಯದಲ್ಲಿ ಪ್ರದಾನ ಧಾರ್ಮಿಕ ವಿಭಾಗಳು ಮೂರು. 1ಹಿಂದು 2. ಮುಸ್ಲಿಂ 3. ಕ್ರೈಸ್ತಮತಗಳು. ವಿವರಣೆಗೆ ಬೇಕಾಗಿ ಅವುಗಳನ್ನು ಬೇರೆ ಬೇರೆಯಾಗಿ ತಿಳಿಸಿದರೂ, ಸದಾ ಒಂದಾಗಿ ಬಾಳುತ್ತಿದ್ದಾರೆ ಎಂದು ಹೇಳಲು ಸಂತೋಷವಾಗುತ್ತದೆ.

-: ಹಿಂದೂಗಳ ಪ್ರಧಾನ ದೇವಾಲಯಗಳು :-

ಹೆಚ್ಚಿನ ವಿವರಗಳು ಸಾಂಸ್ಕೃತಿಕ ಹಿನ್ನಲೆಯಲ್ಲಿ ಹೇಳಲ್ಪಟ್ಟಿದೆ. ವಾರ್ಷಿಕ ಉತ್ಸವಗಳು ಜರಗುವ ಪ್ರಸಿದ್ಧ ದೇವಾಲಯಗಳ ಕುರಿತು ಇಲ್ಲಿ ಹೇಳಲ್ಪಡುತ್ತದೆ.

1. ಕೋಳ್ಯೂರಿನಲ್ಲಿ ಶ್ರೀ ಶಂಕರನಾರಾಯಣ ದೇವರ ದೇವಾಲಯವಿದೆ. ಇದು ಸುಮಾರು ನಾನೂರೈವತ್ತು ವರ್ಷಗಳ ಹಿಂದಿನ ದೇವಾಲಯವೆಂದು ಹೇಳಲಾಗುತ್ತದೆ. ಇಲ್ಲಿ ಪ್ರತಿವರ್ಷ ಜನವರಿ ತಾರೀಕು 3 ಮತ್ತು 4ರಂದು ಎರಡು ದಿನ ವಿಜೃಂಭಣೆಯಿಂದ ಉತ್ಸವ ನಡೆಯುತ್ತದೆ. ಮೊದಲನೆಯ ದಿನ ನಡೆಯುವ ಮುಖ್ಯ ಸೇವೆಯೇ ತುಲಾಭಾರ ಸೇವೆಯಾಗಿದೆ. ಬಹಳ ಹಿಂದಿನಿಂದಲೇ ಈ ಉತ್ಸವ ನಡೆಯುತ್ತಿತ್ತು. ಊರ ಪರವೂರ ಜನರು ಅಧಿಕ ಸಂಖ್ಯೆಯಲ್ಲಿ ಈ ಜಾತ್ರೆಗೆ ಬರುತ್ತಿದ್ದರು. ಸುಮಾರು ನಾಲ್ಕೈದು ದಶಕಗಳ ಹಿಂದೆ ಇಲ್ಲಿಯ ಜಾತ್ರೆಯ ದಿನಗಳಲ್ಲಿ ನಡೆಯುವ (ಸಂತೆಗಳು ಪ್ರಾಮುಖ್ಯವಾಗಿದ್ದವು. ಆಗ ಪೇಟೆ, ಪಟ್ಟಣಗಳಿಗೆ ಹೋಗುವ ಸಂಪರ್ಕ ಸಾಧನಗಳು ಇಲ್ಲದುದರಿಂದ ಜಾತ್ರೆಗೆ ಬಂದವರು ಸಂತೆಗಳಿಂದಲೇ ತಮಗೆ ಬೇಕಾದ ವಸ್ತುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ತಾಮ್ರ ಪಾತ್ರೆ, ಹಿತ್ತಾಳೆಯ ಪಾತ್ರೆ, ಕಬ್ಬಿಣದ ಕೃಷಿ ಉಪಕರಣಗಳು, ಬಟ್ಟೆ, ಇತ್ಯಾದಿಗಳನ್ನು ಜನರು ಕ್ರಯಕ್ಕೆ ಪಡೆಯುತ್ತಿದ್ದರು. ಜಾತ್ರೆಯ ಮರುದಿನ ಅಲ್ಲಿ ಸಮೀಪ ಕೋಳಿ ಅಂಕೆ ನಡೆಯುತ್ತದೆ. ಜನರ ಮನರಂಜನೆಯ ಅಂಗವಾಗಿ ಕೋಳಿ ಅಂಕ ಕಂಬಳ ಅಲ್ಲಲ್ಲಿ ಆ ಕಾಲದಲ್ಲಿ ಜರಗುತ್ತಿತ್ತು, ಈ ಕಾಲದಲ್ಲಿ ಜರಗುತ್ತಿದೆ.

2. ಕಡಂಬಾರಿನಲ್ಲಿ ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನ ಬಹಳ ಪುರಾತನವಾದುದು. ಇತ್ತೀಚೆಗೆ ಅದು ನವೀಕರಣಗೊಂಡು ಎಲ್ಲ ರೀತಿಯ ಸೇವೆ. ಉತ್ಸವಗಳು ನಡೆಯುತ್ತದೆ. ಕುಂಭಮಾಸದ ನವಮಿಯಂದು ವರ್ಷಾವಧಿ ಉತ್ಸವವು ವಿಜೃಂಭಣೆಯಿಂದ ಜರಗುತ್ತದೆ.

   ಈ ದೇವಾಲಯದ ಸನಿಹದಲ್ಲಿರುವ ಮಲರಾಯ ಬಂಟ ದೈವಕ್ಕೂ ಸಂಬಂಧವಿದೆ. ವಾರ್ಷಿಕ ಉತ್ಸವಕಾಲದಲ್ಲಿ ದೈವಗಳಿಗೆ ಉತ್ಸವ ಜರಗುತ್ತದೆ.

3. ಚಿಗುರು ಪಾದೆಯಲ್ಲಿರುವ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಬಹು ಪುರಾತನ ಕಾಲದ್ದಾಗಿದೆ. ಇತ್ತೀಚೆಗೆ ಇದರ ಜೀರ್ಣೋದ್ಧಾರವಾಗಿ ಈಗ

ರಂಗಪೂಜೆ ಬಲಿಪಾಡು ಕೂಟಗಳು ಜರಗುತ್ತದೆ.

ಪ್ರಸಿದ್ಧ ದೇವಸ್ಥಾನಗಳಲ್ಲಿ ಈ ಕೆಳಗಿನವುಗಳೂ ಸೇರಿವೆ.

4. ಪಜಿಂಗಾರು ಶಿವ ದೇವಸ್ಥಾನ.

ಮಜಿ ಬೈಲಿನ `ಬೂಡು' ಎಂಬಲ್ಲಿನ ಬ್ರಾಹ್ಮಣ ಮನೆತನದ ಆಡಳಿತೆಯಲ್ಲಿರುವ ಒಂದು ದೇವಸ್ಥಾನ. ವರ್ಷಂಪ್ರತಿ ಉತ್ಸವಾದಿ ಕಾರ್ಯಗಳೂ ನಡೆದುಕೊಂಡು ಬರುತ್ತಿದೆ.

5. ಗೋಪಾಲಕೃಷ್ಣ ದೇವಸ್ಥಾನ. ಮೂಕಮೂಲೆ.

ದಡ್ಡಂಗಡಿಯ ಮೂಂಕ ಮೂಲೆಯ ``ಅಗ್ರಹಾರಮಠದ" ಆಡಳಿತದಲ್ಲಿ ಉತ್ಸವಾದಿಗಳು ನಡೆದುಕೊಂಡು ಬರುತ್ತದೆ.

6. ಮಜಿಬೈಲು ವಿಷ್ಣುಮೂರ್ತಿ ದೇವಸ್ಥಾನ.

75 ವರ್ಷಗಳ ಮೊದಲು ಮುಳಿಹುಲ್ಲಿನ ಛಾವಣಿಯಾಗಿತ್ತು. ಬಳಿಕ ಜೀರ್ಣೋದ್ಧಾರಗೊಂಡು ಉತ್ಸವಗಳು ನಡೆದುಕೊಂಡು ಬರುತ್ತವೆ.

7. ಶಿವ ದೇವಾಲಯ ಕೊಳಂಜ.

ಮಜಿಬೈಲು ಕೊಳಂಜ ಎಂಬಲ್ಲಿ ಶಿವದೇವಾಲಯವಿದೆ. ಇದಕ್ಕೆ ಮೊದಲು ಸರಕಾರದಿಂದ ರೂ.151/- ಸ್ಪಸ್ತಿಕ ಸಿಗುತ್ತಿತ್ತು.

ಕೊಂಕಣ ತೀರದಲ್ಲಿ ಭೂತಾರಾಧನೆ ಮತ್ತು ನಾಗಾರಾಧನೆ ಬಹಳ ಹಿಂದಿನಿಂದಲೂ ನಡೆದು ಒಂದ ಪದ್ಧತಿಯಾಗಿದೆ. ಭಕ್ತರ ಅಭಿಲಾಷೆಯನ್ನು ಪೂರೈಸುವ ದೈವಗಳು ಭಕ್ತರಿಂದ ಸೇವೆಗಳನ್ನು ಪಡೆಯುತ್ತವೆ. ಅನುಗ್ರಹ ಮಾಡುತ್ತವೆ. ದೈವಸ್ಥಾನಗಳಲ್ಲಿ ಪುರಾತನವಾದ ಪ್ರಸಿದ್ಧವಾದುವುಗಳನ್ನು ಇಲ್ಲಿ ನೋಡೋಣ.

ದೈವಸ್ಥಾನಗಳು

1. ಸರಿ ಸುಮಾರು 1100 ವರ್ಷಗಳಷ್ಟು ಪುರಾತನವಾದ ಕಳಿಯೂರು ಗ್ರಾಮದಲ್ಲಿ ನೆಲೆಯಾದ ರಾಜನ್ ದೈವ ಶ್ರೀ ರಕ್ತೇಶ್ವರಿ ದೈವವು ಪ್ರಸಿದ್ಧವಾಗಿದೆ. ಇಲ್ಲಿ ಪವಾಡಗಳು ನಡೆದಿರುವುದರಿಂದ ಭಕ್ತರಿಗೆ ಈ ದೈವದ ಕುರಿತು ಭಕ್ತಿ ಭಾವ ಹುಟ್ಟುತ್ತಿದೆ. ವಾರ್ಷಿಕ ಜಾತ್ರೆಯು ಮೇ ತಿಂಗಳಲ್ಲಿ ಜರಗುತ್ತದೆ. ಇತರ ಸಮಯಗಳಲ್ಲಿ ಚೌತಿ, ನವರಾತ್ರಿ ಪರ್ವಗಳು ನಡೆಯುತ್ತವೆ.

2. ಬೆಜ್ಜದಲ್ಲಿರುವ ಧೂಮಾವತ ಭಂಟ ದೈವ ಈ ದೈವಸ್ಥಾನ ಬಹಳ ಪುರಾತನವಾದುದು. ಆದರೆ ಹಲವು ವರ್ಷ ವಾರ್ಷಿಕ ಉತ್ಸವ ನಿಂತು ದೈವಸ್ಥಾನವು ಬಿದ್ದು ಹೋಗಿತ್ತು. ಸುಮಾರು 18 ವರುಷಗಳ ಹಿಂದೆ ಜೀರ್ಣೋದ್ಧಾರಗೊಂಡು ಈಗ ಎಲ್ಲಾ ಪರ್ವ ಉತ್ಸವಗಳು ಜರಗುತ್ತವೆ. ಆ ದೈವದ ಕುರಿತಾದ ಭಕ್ತಿ ಭಾವಗಳೇ ಇಂದಿನ ಉತ್ತಮ ಸ್ಥಿತಿಗೆ ಕಾರಣವಾಗಿದೆ. ದಶಂಬರ ತಿಂಗಳ ಆದಿಯಲ್ಲಿ ಮಾಗಂದಡಿ ಎಂಬಲ್ಲಿ ``ಪ್ರದುವಾರ್ ಮೆಚ್ಚು" ಉತ್ಸವ ಜರಗುತ್ತವೆ. ಫೆಬವರಿ ತಿಂಗಳಲ್ಲಿ ``ಮದು ಪ್ರದುವಾರ್" ನಡಿಬೈಲು ಎಂಬಲ್ಲಿ ಜರಗುತ್ತದೆ. ದೈವಸ್ಥಾನದಲ್ಲಿ ವಾರ್ಷಿಕ ಉತ್ಸವವು ತುಳು ತಿಂಗಳು ಸುಗ್ಗಿಯಲ್ಲಿ 24 ಮತ್ತು 25ರಲ್ಲೂ ಜರಗುತ್ತದೆ. 8 ದಿನಗಳ ಕೋಳಿ ಅಂಕ ಬಹಳ ಸಂಭ್ರಮದಿಂದ ಜರಗುತ್ತದೆ.

3. ಮದಂಗಲ್ಲಿನ ಧೂಮವತಿ ದೈವಸ್ಥಾನ:- ತಲೆಕೆಳದ ಮದಂಗಲ್ಲಾಯ ಎಂದೇ ಕರೆಯಲ್ಪಡುವ ಧೂಮಾವತೀ ದೈವಸ್ಥಾನವಿದೆ. ಹಲವು ವರ್ಷಗಳಿಂದ ಉತ್ಸವ ಸ್ಥಗಿತಗೊಂಡಿತ್ತು. ಇತ್ತೀಚೆಗೆ ಜೀರ್ಣೋದ್ಧಾರ ಕಾರ್ಯ ನಡೆದು ಉತ್ಸಾವದಿಗಳು ವಿಜೃಂಭಣೆಯಿಂದ ಜರಗುತ್ತದೆ. ಮದಂಗಲಕಟ್ಟೆಯಲ್ಲಿ ದಶಂಬರದಲ್ಲಿ ಕಟ್ಟೆ ಉತ್ಸವೂ, ಎಪ್ರಿಲ್ ತಿಂಗಳಲ್ಲಿ ವಾರ್ಷಿಕ ಉತ್ಸವ ದೈವಸ್ಥಾನದಲ್ಲಿ ವಿಜೃಂಭಣೆಯಿಂದ ಜರಗುತ್ತದೆ.

4. ಬಲ್ಲಂಗುಡೇಲು ಭಗವತೀ ಕ್ಷೇತ್ರ :- ಈ ಕ್ಷೇತ್ರ ಮೊದಲು ``ಮಾಟೆ" ಮನೆಯ ಹತ್ತಿರ ಗುಡ್ಡೆಯಲ್ಲಿತ್ತು ಎಂದು ತಿಳಿದು ಬರುತ್ತಿದೆ. ನಂತರ ಬಲ್ಲಂಗುಡೇಲು ಎಂಬಲ್ಲಿಗೆ ಬಂದು ಸುಮಾರು 150 ವರ್ಷವಾಯಿತು ಎಂದು ಹಿರಿಯರು ಹೇಳುತ್ತಾರೆ. 75 ವರ್ಷಕ್ಕೆ ಮೊದಲು ಮುಳಿ ಹುಲ್ಲು ಹಾಕಿದ ದೈವಸ್ಥಾನವಾಗಿತ್ತು. ಈಗ ನಾಡ ಹಂಚಿನ ಕಟ್ಟಡವಾಗಿದೆ. ವಾರ್ಷಿಕ ಉತ್ಸವು ಮಾರ್ಚ್ ತಿಂಗಳಲ್ಲಿ 7 ದಿನಗಳವರೆಗೆ ವಿಜೃಂಭಣೆಯಿಂದ ಜರಗುತ್ತದೆ. ಊರಪರವೂರವರು ಈ ಉತ್ಸವದಲ್ಲಿ ಭಾಗವಹಿಸುತ್ತಾರೆ. ಈ ಸಮಯದಲ್ಲಿಯೇ ಇಲ್ಲಿ ಕೋಳಿ ಅಂಕ ನಡೆಯುತ್ತಿತ್ತು. ಆದರೆ ಅದಕ್ಕೂ ಈಗ ಪೊಲೀಸರ ಉಪಟಲವು ಮಿತಿಮೀರಿದೆ.

5. ಮೇಲ್ಕಾರು ಉಳ್ಳಾಲ್ತಿ ಅಣ್ಣ ದೈವಗಳ ದೈವಸ್ಥಾನ :- ಇದು ಸುಮಾರು 300 ವರ್ಷಗಳಷ್ಟು ಪುರಾತನವಾದ ಕ್ಷೇತ್ರಗಳೆಂದು ಹೇಳುತ್ತಾರೆ. ನೆರೆಯಿಂದಲೂ ಇತರ ಕಾರಣಗಳಿಂದಲೂ ಇದು ಸಂಪೂರ್ಣ ನಾಶವಾಗಿತ್ತು. ಅದರ ಜೀರ್ಣೋದ್ಧಾರವಾಗಿ ಮಾರ್ಚ್ ತಿಂಗಳಲ್ಲಿ ವಾರ್ಷಿಕ

ಉತ್ಸವವು ಸಂಭ್ರಮದಿಂದ ಜರಗುತ್ತದೆ.

6. ಕೋಡಿ ರಕ್ತೇಶ್ವರಿ ದೈವ :- ಈ ದೈವಸ್ಥಾನ ಬಹಳ ಪುರಾತನ ಕಾಲದಿಂದಾಗಿ ಪ್ರಸಿದ್ಧವಾಗಿದೆ. 5 ವರ್ಷಗಳಿಗೊಮ್ಮೆ ``ಒತ್ತೆಕೊಲ" ಎಂಬ ವಿಶೇಷ ರೀತಿಯ ಉತ್ಸವ ಜರಗುತ್ತಿತ್ತು. ಸುಮಾರು ಆಳೆತ್ತರದ ಬೆಂಕಿಯಲ್ಲಿ ಕುಣಿದಾಡುವ ಈ ದೈವದ ಚಲನವಲನ ಕಂಡರೆ ಯಾರಿಗಾದರೂ ಭಯ ಹುಟ್ಟದಿರದು. ಆದರೆ ಈಗ ಅದೆಲ್ಲ ಚರಿತ್ರೆಗೆ ಸೇರಿದ ವಿಷಯವಾಗಿದೆ. ಈಗ ವಾರ್ಷಿಕ ಜಾತ್ರೆ ಎಪ್ರಿಲ್ ತಿಂಗಳಲ್ಲಿ ಜರಗುತ್ತದೆ.

7. ದರ್ಬೆಯಲ್ಲಿ ಮಲರಾಯ ದೈವ :- ದರ್ಬೆಯಲ್ಲಿ ದರ್ಬೆತ್ರಾಯ ಎಂದೇ ಕರೆಯಿಸಿ ಕೊಳ್ಳುವ ಮಲರಾಯ ದೈವಸ್ಥಾನ ಬಹಳ ಪುರಾತನ ಕಾಲದಲ್ಲೆ ಇಲ್ಲಿ ಸ್ಥಾಪಿಸಲ್ಪಟ್ಟಿತ್ತು. ಕಾಲಕಾಲಕ್ಕೆ ನೇಮ ಪರ್ವ ಉತ್ಸವಗಳು ನಡೆಯುತ್ತವೆ. ಜನವರಿ ತಿಂಗಳಲ್ಲಿ ``ಪ್ರದುವಾರ ಮೆಚ್ಚಿ" ಎಂಬ ನೇಮ. ಮುನ್ನಿಪ್ಪಾಡಿ ಗುತ್ತಿನ ಮನೆಯಲ್ಲೂ, ಮಾರ್ಚಿ ತಿಂಗಳಲ್ಲಿ ಮೊದಲ ದಿನ ದೈವಸ್ಥಾನದಲ್ಲಿ ಸ್ಥಾನ ಜಾತ್ರೆಯು ಜರಗುತ್ತವೆ. ಮೊದಲಿನಿಂದಲೂ ಕೋಳಿ ಅಂಕ ಜರಗುತ್ತದೆ.

8. ಈ ದೈವಸ್ಥಾನಗಳು ಪ್ರಸಿದ್ಧವಾಗಿವೆ:- ಕೊರಗು ತನಿಯ ದೈವ ಚಿಗುರುಪಾದೆ

9. ಕುಳೂರು ಕರಂಬಡೆ ಜುಮಾಡಿ

10. ರಕ್ತೇಶ್ವರಿ -ಕುಳೂರು

11. ಧೂಮಾವತಿ-ನಡುಹಿತ್ಲು

12. ಮಜ್ಜಾರು ಮಹಿಶಂದಾಯ ದೈವ

13. ಕರಿಬೈಲು ಮಹಾಮಲರಾಯ ದೈವಸ್ಥಾನ :- ಇದು ಸುಮಾರು 150 ವರ್ಷಗಳ ಪುರಾತನ ದೈವಸ್ಥಾನ. ಈಗ ಜೀರ್ಣೋದ್ಧಾರಗೊಂಡು ಈಗ ಎಲ್ಲಾ ಸೇವೆಗಳು ನಡೆಯುತ್ತವೆ.

14. ಕೊಡ್ಡೆ ಮಹಾಮಲರಾಯ ದೈವಸ್ಥಾನ :- ಇದು ಸುಮಾರು 100 ವರ್ಷಕ್ಕೆ ಮೊದಲೇ ಸ್ಥಾಪಿಸಲ್ಪಟ್ಟಿದೆ. ಈ ದೈವಸ್ಥಾನ ಕಾಂಕ್ರಿಟ್ ಕಟ್ಟಡದಿಂದ ಶೋಭಿಸುತ್ತದೆ. ಈಗ ಎಲ್ಲಾ ಪರ್ವಗಳೂ ನಡೆಯುತ್ತವೆ.

15. ಉಪ್ಪಳ ಭಗವತೀ ಕ್ಷೇತ್ರ :- ಸುಮಾರು 35-40 ವರ್ಷಗಳ ಹಿಂದೆ ಶ್ರೀ ನಿತ್ಯಾನಂದ ಸ್ವಾಮಿಯವರ ಶಿಷ್ಯ ಅವದೂತಾನಂದ ಸ್ವಾಮಿಯವರು ಬಂದು ಇದರ ಜೀರ್ಣೋದ್ಧಾರವಾಯಿತು. ಈಗ ಬಹಳಷ್ಟು ಭಕ್ತರೇ ಬರುತ್ತಿದ್ದಾರೆ.

16. ತುರ್ತಿ ಮಲರಾಯ ದೈವಸ್ಥಾನ :- 75 ವರ್ಷಗಳ ಮೊದಲೇ ತುರ್ತಿ ಮಲರಾಯ ದೈವಸ್ಥಾನ ಬಿಲ್ಲವ ಸಮಾಜದ ತುರ್ತಿ ಕುಟುಂಬದ ದೈವ ಸ್ಥಳವಾಗಿದ್ದು ಇತ್ತೀಚೆಗೆ ಪುನರುದ್ಧಾರಗೊಂಡು ಭಕ್ತಾದಿಗಳನ್ನು ಆಕರ್ಷಿಸುತ್ತದೆ.

17. ಉಪ್ಪಳ ನಡುಮನೆ ಮಹಾಮಲರಾಯ ದೈವಸ್ಥಾನ :- ಇದು ಇತ್ತೀಚೆಗೆ ಜೀರ್ಣೋದ್ಧಾರಗೊಂಡು ಪರ್ವಾದಿಗಳು ನಡೆಯುತ್ತವೆ.

18. ಧರ್ಮಮಾರು ಮೈಸಂದಾಯ ದೈವಸ್ಥಾನ

19. ಅಡ್ಕಮಾರು ಗುಳಿಗಸ್ಥಾನ

20. ರಕ್ತೇಶ್ವರಿ ದೈವಸ್ಥಾನ

21. ಸಂಕಬೈಲು, ಹೆದ್ದಾರಿ ಕಲ್ಲುರ್ಟಿ ಪಂಜುರ್ಲಿ ದೈವಸ್ಥಾನ

22. ಬುಡ್ತಿಯ ಮಲರಾಯ ದೈವಸ್ಥಾನ

23. ಅರಿಯಾಳ ಭೂತ ಸ್ಥಾನ

ನಮ್ಮ ಮೀಂಜ ಪಂಚಾಯತು ವಲಯದಲ್ಲಿ ಈ ದೈವಸ್ಥಾನಗಳಿದ್ದು ಭಕ್ತಾದಿಗಳಿಂದ ಸೇವೆಯನ್ನು ಸ್ವೀಕರಿಸಿ ನಂಬಿದವರಿಗೆ ಇಷ್ಟಾರ್ಥವನ್ನು ಪೂರೈಸುತ್ತವೆ.

ಮುಸ್ಲಿಂ ಬಾಂಧವರ ಮಸೀದಿ ದರ್ಗಗಳು. ಹಲವು ಪ್ರಸಿದ್ಧವಾಗಿದ್ದು ಎಲ್ಲಾ ಮತಸ್ಥರ ಆರಾಧನಾ ಸ್ಥಳಗಳಾಗಿವೆ. ಇವುಗಳಲ್ಲಿ ಪ್ರಸಿದ್ಧವಾದುದರೆಂದರೆ ಮುನ್ನಿಪ್ಪಾಡಿ ಜುಮ್ಮಾ ಮಸೀದಿ ಮೀಂಜ ಪಂಚಾಯತು ವಲಯದ ಮುನ್ನಿಪ್ಪಾಡಿಯಲ್ಲಿರುವ ಜುಮ್ಮಾ ಮಸೀದಿ ಬಹಳ ಪುರಾತನವೂ ಪ್ರಸಿದ್ಧವೂ ಆಗಿದೆ. ಅಲ್ಲದೆ ಎಲ್ಲ ಧರ್ಮೀಯರೂ, ಇಲ್ಲಿಗೆ ಹರಕೆಗಳನ್ನು ಒಪ್ಪಿಸುತ್ತಾರೆ. ಆರೇಬಿಯದಿಂದ ಕೇರಳಕ್ಕೆ ಬಂದವರ

ಕುಟುಂಬದವರಿಂದ ಕ್ರಿ.ಶ. 726 ಚಾಂದ್ ರಭಿವುಲ್ ಗುವ್ವಾಲ್ 26 ಶುಕ್ರವಾರ ಇದರ ಉದ್ಘಾಟನೆಯಾಯಿತು. ಈ ವಿಚಾರ ಮಸೀದಿಯಲ್ಲಿರುವ ಗೋಲಾಕಾರದ ಹಿತ್ತಾಳೆಯ ಶಾಸನದಿಂದ ತಿಳಿದು ಬರುತ್ತದೆ. ಈ ಮಸೀದಿಯಲ್ಲಿ 3 ಮಕ್ಬರ್‌ಗಳನ್ನು ಕಾಣಬಹುದು. ನೆರೆಯಲ್ಲಿ ಬಂದ ಒಂದು ಕೈಯ ಒಂದು ಮಕ್ಬರ ಇಲ್ಲಿದೆ. ನೆರೆಯಿಂದ ನಾಶಗೊಂಡ ಈ ಮಸೀದಿಯನ್ನು ಕೊಮ್ಮಂಗಳದಲ್ಲಿ ಸ್ಥಾಪಿಸುವುದೆಂದು ನಿರ್ಣಯಿಸಿದರು. ಅಂತೆಯೇ ಅಲ್ಲಿ ಹೋಗಿ ವಿಚಾರಿಸಿದಾಗ ಮೊದಲಿದ್ದ ಮಸೀದಿಯ ಪಂಚಾಂಗದಿಂದ ಒಂದು ಅದ್ಭುತ ದೃಷ್ಟಿ ಕಂಡು ಬಂತು. ಇದನ್ನು ಕಂಡ ಅವರು ಮೊದಲಿನ ಸ್ಥಳದಲ್ಲಿಯೇ ಕ್ರಿ.ಶ. 913 ರಬಿವುಲ್ ಆಕಾರ್ 23ರಂದು ಉದ್ಘಾಟನೆಯಾದ ವಿಷಯವನ್ನು ಲಿಪಿಯಲ್ಲಿ ಕಾಣಬಹುದು. ಇಲ್ಲಿ 2 ವರುಷಕ್ಕೊಮ್ಮೆ ಉರುಸ್ ಕಾರ್ಯಕ್ರಮ ನಡೆಯುತ್ತದೆ.

ಸುದೀರ್ಘ ಕಾಲದ ಇತಿಹಾಸವಿರುವ ಕೋಳ್ಯೂರು ಗ್ರಾಮ ಧಾರ್ಮಿಕ ಸಹೋದರತೆಯ ನೆಲವೀಡು ಎಂಬ ಹೆಗ್ಗಳಿಕೆಯನ್ನು ಪಡೆದಿದೆ.ಇಲ್ಲಿ ಸುಮಾರು 52 ವರ್ಷಗಳಷ್ಟು ಹಳೆಯದಾದ ಇಂದು ಕೋಳಿಯೂರು ಮಸೀದಿಯೆಂದೇ ಪ್ರಸಿದ್ಧವಾಗಿರುವ ಕೋಳಿಯೂರು ``ಮುಹಿಯಾದ್ದೀನ್ ಜುಮಾ ಮಸೀದಿ" ಇಲ್ಲಿ ಮುಸ್ಲಿಂ ಬಾಂಧವರ ಏಕೈಕ ಧಾರ್ಮಿಕ ಕೇಂದ್ರವೂ ಅಧಿಕೃತ ಆರಾಧನಾಲಯವೂ ಆಗಿದೆ.

ನಾಡಿನ ಧಾರ್ಮಿಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಭ್ಯುದಯವನ್ನು ಬಯಸುವ ಈ ಜುಮಾ ಮಸೀದಿಯ ಆಡಳಿತವು ``ನೂರುಲ್ ಇಸ್ಲಾಂ ಮದರಸ" ಎಂಬ ಹೆಸರಿನ ಮದರಸವೊಂದನ್ನು ನಡೆಸುತ್ತಿದ್ದು ಸುಮಾರು 100-150 ವಿದ್ಯಾರ್ಥಿಗಳಿಗೆ ಧಾರ್ಮಿಕ ಶಿಕ್ಷಣವನ್ನು ಕೊಡುತ್ತಿದೆ. ಪ್ರತಿ ವರ್ಷವೂ ಹಿಜರಿ ವರ್ಷದ ರಜಬ್ ತಿಂಗಳಲ್ಲಿ ಈ ಮಸೀದಿಯ ವಠಾರದಲ್ಲಿ ``ದಫರಾತೀಬ್" ಎಂಬ ವಾರ್ಷಿಕ ಸಮಾರಂಭವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಸರ್ವಧರ್ಮೀಯರು ಇಲ್ಲಿ ಆಗಮಿಸುತ್ತಿದ್ದು ಸರ್ವ ಸಹೋದರತ್ವ ಭಾವನೆಯ ದ್ಯೋತಕವಾಗಿದೆ ಎಂದು ಹೇಳಿದರೆ ತಪ್ಪಾಗಲಾರದು.

3. ಪಟ್ಟತ್ತೂರು ಜುಮ್ಮಾ ಮಸೀದಿ :- ಮೊದಲು ಬೂಡು ಮನೆತನದ ಅಧೀನದಲ್ಲಿ ದೈವಸ್ಥಾನವಿತ್ತೆಂದು ತಿಳಿದು ಬರುತ್ತದೆ. ತದನಂತರ ಟಿಪ್ಪುವಿನ ಕಾಲದಿಂದ ಮಸೀದಿಯಾಗಿ ಪರಿವರ್ತನೆಯಾಗಿ ಈ ಪಟ್ಟತ್ತೋರು ಮಸೀದಿಯೆಂದು ಹೆಸಾರಾಗಿದೆ ಎಂದು ಅಲ್ಲಿಯವರು ಹೇಳುತ್ತಾರೆ. ಈಗ ಬಲ್ಲಂಗುಡೇಲು ದೈವಸ್ಥಾನ ದೈವೆಗಳು ದರ್ಶನದಲ್ಲಿ ಪಟ್ಟತ್ತ ಮೋಗರು ಮನೆಗೆ ಬರುವಾಗ ಮಸೀದಿಯ ಹತ್ತಿರ ನಿಂತು ಕ್ರಮ ಇತ್ಯಾದಿಗಳು ನಡೆಸಿ ಪಟ್ಟತ್ತಮೋಗರು ಮನೆಗೆ ಬಂದು ಹೋಗುವ ಕ್ರಮವಿದೆ. ಇದು ಊರವರ ಜಾತಿಮತ ಭೇದವಿಲ್ಲದ ಬಹಳ ಪವಿತ್ರ ಸ್ಥಳವಾಗಿದೆ.

4. ಸೈಯ್ಯಾದ್ ಸೈಪುದ್ದೀನ್ ದರ್ಗ ಮರತಡ್ಕ :- ಈ ಸ್ಥಳದಲ್ಲಿ ಸಾಧಾರಣ 300 ವರ್ಷಗಳ ಹಳೆಯದಾದ ಸಮಾದಿಗಳು ಇವೆ. ಪ್ರಾರ್ಥನೆಯ ಮೂಲಕ ತನಗೆ ಬಂದ ಗುಣವಾಗದ ರೋಗವು ಗುಣವಾಗಿದೆ ಎಂಬ ಪವಾಡವಿಚಾರಗಳು ಇಲ್ಲಿ ಜನಜನಿತವಾಗಿದೆ. ಇಲ್ಲಿಗೆ ಊರ ಪರವೂರ ಜನರು ಬಂದು ಪ್ರಾರ್ಥನೆ ಮಾಡಿ ಹೋಗುತ್ತಾರೆ. ಮೊದಲು ಪ್ರತಿ ವರ್ಷವೂ ಉತ್ಸವ ನಡೆಯುತ್ತಿದ್ದು ಈಗ ಕಾರಣಾಂತರಗಳಿಂದ ಎರಡು ವರುಷಕ್ಕೊಮ್ಮೆ ಫೆಬವರಿ ತಿಂಗಳಲ್ಲಿ ಕೆಲವು ದಿವಸಗಳ ಮತಪ್ರಸಂಗಗಳೊಂದಿಗೆ ಉರುಸು ಉತ್ಸವ ಜರಗುತ್ತದೆ.

5. ಮೀಂಜ ಪಂಚಾಯತ್‌ವಲಯದ ದರ್ಮನಗರ ರಾವಳಿಕೆ ಎಂಬಲ್ಲಿ ಸಾಧಾರಣ 200 ವರುಷಗಳ ಪುರಾತನ ದರ್ಗಾ ಶರೀಫ್ ಇದೆ. ಇದರಲ್ಲಿ 2ಸಮಾಧಿಗಳಿವೆ. ಇದನ್ನು 1956ರಲ್ಲಿ ಜೀರ್ಣೋದ್ಧಾರಮಾಡಲಾಯಿತು. ಇದರ ಹಳೆ ಚರಿತ್ರೆಯನ್ನು ತೋರಿಸುವ ಗ್ರಾಮ ಕಚೇರಿ ರಿಕಾರ್ಡುಗಳಲ್ಲಿ ಬದಿಯಡ್ಕ ಬದಿರು ಪಳ್ಳಿ ಎಂಬ ನಾಮಕರಣ ಕಂಡು ಬರುತ್ತದೆ. ಇಲ್ಲಿ 5ನೇ ಕ್ಲಾಸಿನವರಿಗೆ ಅರೆಬಿಕ್ ಮದರಸ ನಡೆಯುತ್ತದೆ. ಇಲ್ಲಿ ಹಲವು ರೀತಿಯ ಪವಾಡಗಳು ನಡೆದು ಪರವೂರ ಭಕ್ತಾಭಿಮಾನಿಗಳು ಈ ಸ್ಥಳವನ್ನು ಸಂದರ್ಶಿಸುತ್ತಿದ್ದಾರೆ.

6. ಬೆಜ್ಜ ಜಮ್ಮಾಮಸೀದಿ ಬಹಳ ಪುರಾತನದ್ದಾಗಿದ್ದು ವಾರ್ಷಿಕ ಹಬ್ಬಗಳು ನಡೆಯುತ್ತದೆ.

:- ಕ್ರೈಸ್ತ ಬಾಂಧವರ ಪ್ರಸಿದ್ಧ ಇಗರ್ಜಿಗಳ ಕುರಿತು ನೋಡೋಣ:-

1 ಕ್ರೈಸ್ತರ ಮಂದಿರಗಳಲ್ಲಿ ಬಹಳ ಪುರಾತನವಾದ ಪ್ರಸಿದ್ಧವಾದ `ಏಸು ಕ್ರಿಸ್ತರ ಪವಿತ್ರ ಹೃದಯದ ಇಗರ್ಜಿ' ಸುಂಕದಕಟೆಯಲ್ಲಿದೆ. ಕ್ರಿ.ಶ. 1897ರಲ್ಲಿ ಅಂದಿನ ಧರ್ಮಗುರುಗಳು. ಸಣ್ಣ ಮುಳಿ ಹುಲ್ಲಿನ ಪೂಜಾ ಸ್ಥಳದ ರೂಪದಲ್ಲಿ ಕಟ್ಟಿ ಪೂಜೆ ಮಾಡಲು ಪ್ರಾರಂಭಿಸಿದರು. ಮುಂದೆ 1922ರಲ್ಲಿ ಇಂದಿನ ಕಟ್ಟಡ ಕಟ್ಟಲ್ಪಟ್ಟಿತು. ಪ್ರತಿವರ್ಷವೂ ಇಗರ್ಜಿಯಲ್ಲಿ ಹಲವಾರು ಉತ್ಸವವು ನಡೆಯುತ್ತವೆ. ಅದರಲ್ಲಿ ಕನ್ಯಾಮರಿಯಮ್ಮನವರ ಹಬ್ಬ ಸಂತಮರಿಯ ಹಬ್ಬ ಕ್ರಿಸ್‌ಮಸ್, ಗುಡ್‌ಫ್ರೈಡೇ, ಈಸ್ಟರ್ ಮತ್ತು ಇಗರ್ಜಿಯ ದಿನದಂದು ಆಚರಿಸುವ ವಾರ್ಷಿಕೋತ್ಸವಗಳು ಸೇರಿದೆ. ಈ ಸಂದರ್ಭದಲ್ಲಿ ಭಕ್ತರಿಗೆ ಸ್ಪರ್ಧೆ ಕಲಾಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ ಮತ್ತು ಅನ್ನದಾನವಿದೆ ಇಗರ್ಜಿಯವತಿಯಿಂದ 2 ಶಾಲೆಗಳು ನಡೆಸಲ್ಪಡುತ್ತವೆ.

2. ಇತ್ತೀಚೆಗೆ ಮೀಯ ಪದವಿನಲ್ಲಿ ಸಂತ, ಫಾತಿಮಾ ಇಗರ್ಜಿ ಸ್ಥಾಪಿಸಲ್ಪಟ್ಟು ಇಲ್ಲಿಯ ಕ್ರೈಸ್ತ ಬಾಂಧವರು ಇಲ್ಲಿ ಪೂಜೆ ನಡೆಸುತ್ತಾರೆ. ಪ್ರತಿ ವರ್ಷ ದಶಂಬರದಲ್ಲಿ `ಸಂತಮೇರಿ' ಹಬ್ಬ ನಡೆಯುತ್ತವೆ.

ಒಂದು ಸಮಾಜ ಉತ್ತಮ ಸಂಸ್ಕಾರವನ್ನು ಪಡೆದು ಬೆಳಗಬೇಕಾದರೆ ಪ್ರಧಾನ ಮಾಧ್ಯಮ ಶಾಲೆ. ಯಾವ ಸಮಾಜದಲ್ಲಾದರೂ ಶಿಕ್ಷಣವೂ ಸಾಂಸ್ಕೃತಿಕ ವಿನಿಮಯ ಮಾಧ್ಯಮವಾಗಿದೆ. ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ ಮಹತ್ವದ್ದಾಗಿದೆ.

ಶಿಕ್ಷಣ ಸಂಸ್ಥೆಗಳನ್ನು ಹೊರತು ಪಡಿಸಿದರೆ. ಸಾಂಸ್ಕೃತಿಕ ಚಟುವಟಿಕೆಗಳ ಪ್ರಧಾನ ಕೇಂದ್ರಗಳು ಗ್ರಂಥಾಲಯಗಳು ಸಾಹಿತ್ಯ ಕಲಾ ಸಂಘಗಳು ವೃತ್ತಿಪರ ಹಾಗೂ ಹವ್ಯಾಸಿ ಯಕ್ಷಗಾನ ಸಂಘಗಳು, ನಾಟಕ ಸಂಘಗಳು ಹಿಂದೆ ರಾಜಾಶ್ರಯದ ಮೂಲಕ ಪಡೆಯುವ ಪ್ರೋತ್ಸಾಹಗಳು ಇಂದು ಸರಕಾರದಿಂದಲೂ ಅರೆ ಸರಕಾರಿ ಸಂಸ್ಥೆಗಳಿಂದಲೂ ದೊರಕಬೆಕು. ಶಿಕ್ಷಣ ಸಂಸ್ಥೆಗಳಂತೆಯೇ ಈ ಸಂಘಸಂಸ್ಥೆಗಳು ಈಗ ನೆಲೆಯಲ್ಲಿರುವ ಸಾಂಸ್ಕೃತಿಕ ವ್ಯವಸ್ಥೆಯನ್ನು ರಕ್ಷಿಸಿಕೊಂಡು ಹೋಗುವ. ಕೆಲಸಗಳನ್ನು ಮಾತ್ರ ಮಾಡುತ್ತವೆ.

ನಮ್ಮ ಪಂಚಾಯತು ವಲಯದಲ್ಲಿ ಕೆಲವು ಸಂಘ ಸಂಸ್ಥೆಗಳು ಕಾರ್ಯಾಚರಿಸುತ್ತದೆ.

ಕೋಳ್ಯೂರಿನಲ್ಲಿ ಗ್ರಾಮ ಕಲಾ ಸೇವಾ ಸಂಘ 1963ರಲ್ಲಿ ಸ್ಥಾಪನೆಯಾಗಿದೆ. ಇದೊಂದು ನೊಂದಾಯಿಸಲ್ಪಟ್ಟ ಸಂಘ ಊರವರ ಸಹಕಾರದಿಂದ ಸ್ವಂತ ಕಟ್ಟಡವನ್ನು ಹೊಂದಿರುತ್ತವೆ. ಈ ಸಂಘವು ಸಾರ್ವಜನಿಕ ರಂಗದಲ್ಲಿ ಉತ್ತಮ ಸೇವೆಯನ್ನು ಮಾಡುತ್ತದೆ. ಲಲಿತ ಕಲೆಗಳಾದ ಯಕ್ಷಗಾನ, ನಾಟಕ, ಭಜನೆ ಮತ್ತು ಆಟೋಟಗಳನ್ನು ಜರಗಿಸುತ್ತವೆ. ಇದರಲ್ಲಿ ಒಂದು ಗ್ರಂಥಾಲಯವಿದೆ ಸಾಧಾರಣಾ2500 ಪುಸ್ತಕಗಳಿದ್ದು ಅವುಗಳನ್ನು ಓದಲು ಕೊಡುವ ವ್ಯವಸ್ಥೆಯಿದೆ. ಪ್ರಸಿದ್ಧ ಪತ್ರಿಕೆಗಳಿದ್ದು ಜನರಿಗೆ ಓದುವ ಚಟವನ್ನು ಹೆಚ್ಚಿಸುವುದಕ್ಕೆ ಸಹಾಯಕವಾಗಿದೆ.

2. ಸಸಿ ಗೋಳಿಯ ವಾಣೀ ನಗರದಲ್ಲಿ ಜ್ಞಾನೋದಯ ಸಮಾಜವೆಂಬ ಒಂದು ಸಾರ್ವಜನಿಕ ಸಂಸ್ಥೆಯಿದೆ. ಸಾರ್ವಜನಿಕ ಕೆಲಸಗಳನ್ನು ಮಾಡುತ್ತವೆ. ಕಲಾ ಸೇವೆಗಳನ್ನು ನಡೆಸುತ್ತವೆ.

3. ಕುಳೂರು ಗ್ರಾಮದ ಚಾರ್ಲ ಎಂಬಲ್ಲಿ ನವಯುವಕ ಕಲಾ ವೃಂದ ಚಿನಲ ಎಂಬ ಹೆಸರಿನ ಸಂಘವು 1968ರಲ್ಲಿ ನೋಂದಾಯಿಸಲ್ಪಟ್ಟಿದೆ. ಈ ಸಂಘವು `ಸಾರ್ವಜನಿಕ ಸೇವೆಯಲ್ಲಿ ಹೆಚ್ಚಿನ ಒಲವು ತೋರಿಸುತ್ತದೆ. ಶ್ರಮದಾನಗಳ ಮೂಲಕ ಮಾರ್ಗ ಕಾಲುದಾರಿಗಳನ್ನು ಮಾಡಿದೆ. ಊರಜನರ ಸಹಾಯ ಸಹಕಾರ ಇದಕ್ಕೆ ದೊರಕುವುದರಿಂದ ಈ ರೀತಿಯ ಸಾರ್ವಜನಿಕ ಕೆಲಸ ಮಾಡಲು ಸಾಧ್ಯವಾಗಿದೆ. ಯಕ್ಷಗಾನ ಕಲೆಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತದೆ. ಕಳೆದ 5 ವರುಷಗಳಿಂದ ಯಕ್ಷಗಾನ ಬಯಲಾಟ ಏರ್ಪಡಿಸುತ್ತಿದೆ. ಯಕ್ಷಗಾನ ತಾಳೆ ಮದ್ದಲೆಗೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತದೆ. ಪ್ರತಿವರ್ಷ ಮಹಾನವಮಿಯಂದು ಇಲ್ಲ ಯಕ್ಷಗಾನ ಕೂಟ ನಡೆಸುತ್ತದೆ.

ಶ್ರೀ ಕೃಷ್ಣ ಜನ್ಮಾಷ್ಟಮಿಯ ದಿನದಂದು ಮೊಸರು ಕುಡಿಕೆ ಎಂಬ ರಂಜನೀಯ ಕಾರ್ಯಕ್ರಮವಿದೆ. ಎಲ್ಲರ ಸಹಕಾರದಿಂದ ಇಂತಹ ಧಾರ್ಮಿಕ ಕಾರ್ಯಗಳನ್ನು ಆಚರಿಸಿಕೊಂಡು ಬರುತ್ತಾರೆ. ಮಕ್ಕಳಲ್ಲಿ ಕಲಿಯುವ ಆಸಕ್ತಿ ಮೂಡಿಸುವುದಕ್ಕಾಗಿ ಈ ಸಂಸ್ಥೆ ಶ್ರಮವಹಿಸುತ್ತದೆ. ಕುಳೂರು ಶಾಲೆ ಮತ್ತು ಚಿಗುರುಪಾದೆ ಶಾಲೆಗಳ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸಿ ಪಾಸಾದವರನ್ನು ಸನ್ಮಾನಿಸುವ ಮೂಲಕ ಮಕ್ಕಳಿಗೆ ಕಲಿಯಲು ಪ್ರೋತ್ಸಾಹ ಕೊಡುತ್ತದೆ. ಆದರೆ ಇಲ್ಲಿ ಉತ್ತಮ ರೀತಿಯ ಗ್ರಂಥಾಲಯಗಳಿಲ್ಲದಿರುವುದು ಕೊರತೆಯಾಗಿದೆ. ಇಂತಹ ಸಂಘ ಸಂಸ್ಥೆಗಳನ್ನು ಗುರುತಿಸಿ ಪಂಚಾಯತು ಅವುಗಳಿಗೆ ಸರಿಯಾಗಿ ಸಹಾಯಕೊಟ್ಟು ಸಮಾಜಕ್ಕೆ ಬೇಕಾದ ಉತ್ತಮ ಕೆಲಸಗಳನ್ನು ಮಾಡಿಸುವಲ್ಲಿ ಪ್ರೇರಕವಾಗಬೇಕು.

4. ಮುಸ್ಲಿಂ ಸಂಯುಕ್ತ ಸಂಘ ಬಾಳಿಯೂರು :- ಇದು 1988ರಲ್ಲಿ ನೋಂದಾಯಿಸಲ್ಪಟ್ಟ ಸಂಘವಾಗಿದೆ. ಇದು ಮುಸ್ಲಿಂ ಬಾಂಧವರಿಂದಲೇ ನಡೆಸಿಕೊಂಡು ಬರುವ ಸಂಘವಾದರೂ, ಸಾರ್ವಜನಿಕ ಕೆಲಸಗಳಲ್ಲಿ ಜಾತಿಮತ ಭೇದವಿರುವುದಿಲ್ಲ. ತನ್ನ ಊರಿನ ಅಭಿವೃದ್ಧಿಗಾಗಿ ಸಂಘ ಪ್ರಯತ್ನಿಸುವುದು ಸ್ವಾಗತಾರ್ಹ. ಶ್ರಮದಾನದ ಮೂಲಕ ಮಾರ್ಗರಿಪೇರಿ ಹಾಗೂ ಕಾಲ್ವಾರಿಗಳನ್ನು ಮಾಡಿಸುವದರಲ್ಲಿ ಸರಕಾರದಿಂದ ಯಾವ ಸಹಕಾರವನ್ನು ಪಡೆಯುವುದಿಲ್ಲ. S.S.L.C.ಯಲ್ಲಿ ಅತ್ಯಧಿಕ ಅಂಕಗಳಿಸಿದ ಮುಸ್ಲಿಂ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಪ್ರತಿವರ್ಷ ನಗದು ಬಹುಮಾನಗಳನ್ನು ಕೊಡುತ್ತದೆ.

5. `ಈದ್ ಮೀಲಾದ್' ಹಬ್ಬವನ್ನು ತಮ್ಮ ಸಂಘ ಆಚರಿಸುವುದಲ್ಲದೆ ಸಾರ್ವಜನಿಕ ಹಿತಕ್ಕಾಗಿ ದುಡಿಯುತ್ತವೆ. ರಕ್ತದಾನ ಶಿಬಿರಗಳನ್ನು ಜರಗಿಸಿ ಪ್ರಣಾಂತಿಕ ಸಮಯದಲ್ಲಿ ರೋಗಿಗಳಿಗೆ ರಕ್ತ ಒದಗಿಸುವ ಬಹುದೊಡ್ಡ ಸೇವಾ ಕಾರ್ಯದಲ್ಲಿ ತೊಡಗಿರುತ್ತದೆ. ಆರ್ಥಿಕವಾಗಿ ಹಿಂದುಳಿದಿರುವ ಮುಸ್ಲಿಂ ಬಾಂಧವರಿಗೆ ಸಹಾಯವಾಗುವಂತೆ ಸಾಮಾಜಿಕ ಸುನ್ನತ್ ಕಾರ್ಯವನ್ನು ನಡೆಸಿ ಸಹಾಯ ಮಾಡುತ್ತದೆ. ಬಡ ವಿದ್ಯಾರ್ಥಿಗಳಿಗೆ ವಸ್ತ್ರ, ಪುಸ್ತಕ ತೆಗೆಯಲು ಧನ ಸಹಾಯ ಒದಗಿಸುತ್ತದೆ. ಸಾಕ್ಷರತೆಯ ಅಂಗವಾಗಿ ಮಲಯಾಳ ಅಕ್ಷರಾಭ್ಯಾಸ ಮಾಡಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ.

6. ಮೂಡಂಬೈಲ್‌ನಲ್ಲಿ ನವಜೀವನ ಮಿತ್ರ ಮಂಡಲಿ ಎಂಬ ನೋಂದಾಯಿಸಲ್ಪಟ್ಟಿರುವ ಸಂಘವೊಂದಿದೆ. ಇದು ಸಾರ್ವಜನಿಕ ಕೆಲಸಗಳಲ್ಲಿ ತೊಡಗಿ ಕೊಂಡಿದೆ. ಶ್ರಮದಾನದ ಮೂಲಕ ಸಮಾಜ ಸೇವೆ ಮಾಡುವುದರಲ್ಲಿ ಮುಂದಿದೆ. ಸ್ವಾತಂತ್ರ್ಯ ದಿನಾಚರಣೆಗಳಂತಹ ಹಬ್ಬಗಳನ್ನು ಆಚರಿಸಿಕೊಂಡು ಬರುತ್ತದೆ.

ಹೆಚ್ಚಿನ ಎಲ್ಲಾ ಕ್ರೀಡೆಗಳಿಗೆ ಪ್ರೋತ್ಸಾಹ ಕೊಡುತ್ತದೆ. ವಾಲಿಬಾಲ್, ಕ್ರಿಕೆಟ್ ಮೊದಲಾದ ಆಟಗಳನ್ನು ಅಲ್ಲಲ್ಲಿ ಸ್ಪರ್ಧಾ ಮನೋಭಾವದಿಂದ ಜರಗಿಸಿ ತರುಣರಲ್ಲಿ ಕ್ರೀಡೆಯಲ್ಲಿ ಪ್ರೀತಿ ಹುಟ್ಟುವಂತೆ ಮಾಡುತ್ತದೆ.

7. ಕಡಂಬಾರಿನಲ್ಲಿ ರೂರಲ್ ಡೆವೆಲೆಪ್‌ಮೆಂಟ್ ಟ್ರಸ್ಟ್ (ರಿ) ಇದು ನೋಂದಾಯಿಸಲ್ಪಟ್ಟ ಕ್ಲಬ್, ಇದು ಸಕ್ರಿಯವಾಗಿ ಕೆಲಸ ಮಾಡುತ್ತಿರುವುದರಿಂದ ಊರಿನವರಿಗೂ ಇದರ ಮೇಲೆ ಉತ್ತಮ ಅಭಿಪ್ರಾಯವಿದೆ.

ಸ್ವಾತಂತ್ರ್ಯ ದಿನಾಚರಣೆಯನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ತೆಂಗಿನ ಸಸಿ ಮತ್ತು ಇತರ ಗಿಡಗಳನ್ನು ಜನರಿಗೆ ಹಂಚುತ್ತಾರೆ. ಶ್ರಮದಾನದ ಮೂಲಕ ಮಾರ್ಗ, ಕಾಲುದಾರಿ ಮಾಡುತ್ತಾರೆ. ಅಲ್ಲಲ್ಲಿ ಚಿಕ್ಕ ಪುಟ್ಟ ಸಂಕಗಳನ್ನು ಮಾಡುತ್ತಾರೆ.

ಜಾತಿ, ಮತ, ಭೇದವಿಲ್ಲದ ಸಂಘವಿದು. ಎಲ್ಲಾ ಮತಸ್ಥರು ಇದರಲ್ಲಿ ಸದಸ್ಯರಾಗಿರುವರು. ಇದಕ್ಕೆ ಸರಿಯಾದ ಕಟ್ಟಡವಿದ್ದು ವಾಚನಾಲಾಯವಿದೆ.

ಕ್ರೀಡೆಗೆ ಪ್ರೋತ್ಸಾಹ ಕೊಡುತ್ತಿದ್ದಾರೆ. ನಮ್ಮ ವಲಯದಲ್ಲಿ ಉತ್ತಮ ರೀತಿಯ ಕ್ಲಬ್ ಇದಾಗಿದೆ.

8. ತಪೋವನ ಟ್ರಸ್ಟಿ, ಮೀಯಪದವು- ನೋಂದಾಯಿತ ಕ್ಲಬ್ :- ಇದು ಕೆಲವು ವರ್ಷಗಳ ಮೊದಲು ಮೀಯಪದವು ಕೇಂದ್ರದಲ್ಲಿ ಸ್ಥಾಪನೆಯಾಗಿದೆ. ಅದಕ್ಕೆ ಸೇರಿದ ಸ್ಥಳದಲ್ಲಿ ಮರಗಳನ್ನು ಬೆಳೆಸಿದ್ದಾರೆ. ಕ್ರೀಡೆಗೆ ಬಹಳ ಪ್ರೋತ್ಸಾಹ ಕೊಡುತ್ತಿದ್ದರು. ಪ್ರತಿವರ್ಷ ಜನವರಿಯಲ್ಲಿ ವಾಲಿಬೋಲ್ ಸ್ಪರ್ಧೆ ನಡೆಸುತ್ತಿದ್ದರು. ದೂರದೂರದ ಉತ್ತಮ ತರದ ಪಂಗಡಗಳು ಇಲ್ಲಿಗೆ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದರು.

9. ಮಜಿಬೈಲು ಫ್ರೆಂಡ್ಸ್ ಎಂಬ ಸಂಸ್ಥೆಯು ಉತ್ತಮ ರೀತಿಯಲ್ಲಿ ಕಾರ್ಯವೆಸಗುತ್ತದೆ. ಬಸ್‌ಸ್ಟೇಂಡ್ ನಿರ್ಮಿಸಿಕೊಡುವ ಮೂಲಕ ಸಮಾಜಸೇವೆ ಮಾಡುತ್ತದೆ.

ಸಾಧ್ಯತೆಗಳು :-

1. ಎಲ್ಲಾ ಕ್ಲಬ್‌ಗಳನ್ನು ಒಗ್ಗೂಡಿಸಿ ಒಂದು ಸಾಂಸ್ಕೃತಿಕ ಕೇಂದ್ರವನ್ನು ಸ್ಥಾಪಿಸಬೇಕು.
2. ಭೂತಕಟ್ಟುವ, ನಲಿಕೆ, ಕೋಲಾಟ ಮೊದಲಾದ ಪ್ರಾಚೀನ ಕಲಾರೂಪಗಳಿಗೆ ಪ್ರೋತ್ಸಾಹ ಕೊಡುವುದು.
3. ಜನರಲ್ಲಿ ಓದುವ ಹವ್ಯಾಸವನ್ನು ಬೆಳೆಸುವುದಕ್ಕಾಗಿ ಸಾಕ್ಷರತೆ ಪ್ರಕ್ರಿಯೆಯನ್ನು ಸಜೀವವಾಗಿಡಲು ಜನ ವಿಧ್ಯಾ ಕೇಂದ್ರವನ್ನು ಸ್ಥಾಪಿಸುವುದು.
4. ಸಂಘ ಸಂಸ್ಥೆಗಳಿಗೆ ಪೋತ್ಸಾಹ ಕೊಡುವುದಕ್ಕಾಗಿ ಪಂಚಾಯತು ವಲಯಗಳಲ್ಲಿ ಉತ್ತಮ ಕ್ಲಬ್‌ಗಳಿಗೆ ಪಾರಿತೋಷಕಗಳನ್ನು ಕೊಡುವುದು.
5. ಸಾರ್ವಜನಿಕ ಸೇವೆ ಗೈಯುವ ಕ್ಲಬ್‌ಗಳಿಗೆ ಸರಕಾರ ಧನಸಹಾಯ ಮಾಡುವುದು.
6. ಅಲ್ಲಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸುವುದು.
7. ಶಾಲಾ ಮಟ್ಟದಲ್ಲಿ ಮಕ್ಕಳಲ್ಲಿ ಕ್ರೀಡೆಯ ಆಭಿರುಚಿಯನ್ನು ಗುರುತಿಸಿ ಅದರಲ್ಲಿ ಮುಂದುವರಿಯುವಂತೆ ಪೋತ್ಸಾಹಿಸುವುದು.
8. ಹೆಚ್ಚಿನ ಕ್ಲಬ್‌ಗಳಿಗೆ ಸ್ವಂತ ಕಟ್ಟಡಗಳಿರುವುದಿಲ್ಲ. ಗ್ರಂಥಾಲಯಕ್ಕೆ ಕಟ್ಟಡವಿರುವುದಿಲ್ಲ. ಇವುಗಳನ್ನು ನಿರ್ಮಿಸುವ ಕೆಲಸ ಸರಕಾರ ಭರಿಸಬೇಕು.

ಸಮಸ್ಯೆಗಳು :-

1. ಜನವಿದ್ಯಾ ಕೇಂದ್ರಗಳಿಲ್ಲ
2. ಬಾಲವಾಡಿ ನರ್ಸರಿ ನಡೆಸುವುದು ಕಷ್ಟಕರವಾಗಿದೆ
3. ಸಾರ್ವಜನಿಕ ಮೈದಾನು ಇಲ್ಲ
4. ಇದ್ದ ಚಿಕ್ಕ ಮೈದಾನಿನ ಸಂರಕ್ಷಣೆಯಿಲ್ಲ
5. ಸರಿಯಾದ ಲೈಬ್ರರಿಯಿಲ್ಲ
6. ಸಂಚಾರಿ ಲೈಬ್ರರಿಯ ವ್ಯವಸ್ಥೆ ಮಾಡಲು ಸಾಧ್ಯವಾಗುವುದಿಲ್ಲ
7. ಯಕ್ಷಗಾನ, ನಾಟಕ, ಸಂಗೀತ. ಇವುಗಳ ತರಬೇತಿಗೆ ಸಂಘ ಸಂಸ್ಥೆಗಳು ಕೆಲಸ ಮಾಡುವುದಿಲ್ಲ.
8. ಸರಿಯಾದ ರಂಗಮಂದಿರ, ಸಮಾಜಮಂದಿರಗಳಿಲ್ಲ.

9. ಪ್ರಾಚ್ಯ ವಸ್ತುಗಳ ಸಂಗ್ರಹಣೆ ಮತ್ತು ರಕ್ಷಣೆಗೆ ವ್ಯವಸ್ಥೆಗಳಿಲ್ಲ.

ನಿರ್ದೇಶನಗಳು

1. ರಂಗಮಂದಿರದ ಅಥವಾ ಸಮಾಜದ ಮಂದಿರದ ಸ್ಥಾಪನೆ ಈ ಪಂಚಾಯತು ಕೇಂದ್ರದಲ್ಲಿ ಆಗಬೇಕು.

2. ಪರಂಪರಾಗತ ಯಕ್ಷಗಾನ ಕಲೆಯ ಅಂಗಗಳಾದ ನಾಟ್ಯ, ಮಾತುಗಾರಿಕೆ, ವೇಷಭೂಷಣ, ಹಾಡುಗಾರಿಕೆ, ಇವುಗಳಿ ಪ್ರಾತ್ಯಕ್ಷಿಕೆ. ನಡೆಸುವಂತಹ ವ್ಯವಸ್ಥೆ ಮಾಡಬೇಕು. ತರಬೇತಿ ಕೇಂದ್ರಗಳನ್ನು ರಚಿಸುವುದು.

3. ಬಹಳ ಹಿಂದಿನಿಂದಲೂ ನಡೆದು ಬರುತ್ತಿದ್ದ ಕಂಬಳ ಈಗ ಎಲ್ಲಿಯೂ ಕಾಣಬರುವುದಿಲ್ಲ.

   ಮೀಂಜವಲಯದಲ್ಲಿ ಅದಕ್ಕಾಗಿ ಸ್ಟೇಡಿಯಂ ಒಂದರ ರಚನೆಯಾಗಿ ಕಂಬಳಕ್ಕೆ ಪ್ರೋತ್ಸಾಹ ಕೊಡಬೇಕು. ಇದು ಪಂಚಾಯತಿನ ಮೇಲ್ತನಿಕೆಯಲ್ಲಿ ನಡೆಸಬೇಕು.

4. ಹಿಂದಿನಿಂದಲೂ ಭೂತರಾಧನೆಯ ಸಂದರ್ಭದಲ್ಲಿ ಆ ಸ್ಥಳಕ್ಕೆ ಸಮೀಪ ಕೋಳಿ ಅಂತ ನಡೆಯುತ್ತಿತ್ತು. ದೈವಕ್ಕೆ ರಕ್ತದ ಆಹಾರ ಆಗಬೇಕೆನ್ನುವುದು ಹಿರಿಯರ ಅಭಿಪ್ರಾಯವಾಗಿದೆ. ಈಗ ಅದರಲ್ಲಿ ಜೂಜು ತಲೆದೊರುವುದಿದ್ದರೂ ಅದಕ್ಕಾಗಿ ಹಳ್ಳಿಯವರ ಮನರಂಜನೆಯಾದ ಕೋಳಿ ಅಂಕವನ್ನು ಇಲ್ಲಿದಂತೆ ಮಾಡುವುದು ಸರಿಯಲ್ಲ. ಸರಿಯಾದ ಮೇಲ್ತನಿಕೆಯನ್ನು ಸಂಘ ಸಂಸ್ಥೆ ಅಥವಾ ಪಂಚಾಯತಿಕೆ ಕೊಡಬಹುದು.

5. ವೇದ ವೇದಾಂಗ ಉಪನಿಷತ್ತುಗಳ ಪಠನಕ್ಕೆ ತಕ್ಕ ವ್ಯವಸ್ಥೆ ಮಾಡುವುದು

6. ಯೋಗ ತರಬೇತಿಗೆ ತಕ್ಕ ವ್ಯವಸ್ಥೆ ಮಾಡುವುದು.

7. ನೇಜಿ ನಡೆವಾಗ ಹೇಳುವ ಓಬೇಲೆ..... ಇತ್ಯಾದಿ ಜ್ಞಾನಪದ ಪದ್ಯಗಳನ್ನು ಭೂತರಾಧನೆಯ, ಪಾಡ್ದನಗಳನ್ನು ನುರಿತವರಿಂದ ಹೇಳಿಸಿ ಧ್ವನಿ ಸುರುಳಿ ಮಾಡಿ ರಕ್ಷಿಸಬೇಕು.

8. ಸಂಚಾರಿ ಲೈಬ್ರರಿ ವ್ಯವಸ್ಥೆಯನ್ನು ಪಂಚಾಯತು ವಹಿಸಿಕೊಳ್ಳಬೇಕು.

9. ಗ್ರಂಥಾಯಲದ ಸ್ಥಾಪನೆಯಾಗಿ ಅಲ್ಲಿ ಪುಸ್ತಕಗಳೂ, ಪತ್ರಿಕೆಗಳೂ, ಸರ್ವರಿಗೂ ಓದಲು ದೊರಕುವಂತೆ ಮಾಡಬೇಕು.

10. ಚಿಕ್ಕಪ್ರಾಯದಲ್ಲಿ ಮಕ್ಕಳಲ್ಲಿ ಕ್ರೀಡಾ ಮನೋಭಾವನೆ ಬೆಳೆಸುವುದಕ್ಕಾಗಿ ಕೋಚುಗಳ ಮೂಲಕ ತರಬೇತಿ ಕೊಡಿಸುವ ವ್ಯವಸ್ಥೆ ಆಗಬೇಕು.

ವನಿತಾ

ಮೀಂಜ ಪಂಚಾಯತ್ ಅಧಿಕಾರಕ್ಕೆ ಬಂದು 4 ದಶಕಗಳೂ ಕಳೆದರೂ ಮಹಿಳೆಯರ ಅಭಿವೃದ್ಧಿಯ ಬಗ್ಗೆ ಇದುವರೆಗೆ ಗಮನ ಹರಿಸಲಿಲ್ಲವೆಂಬುದು ಖೇದಕರ ಸಂಗತಿ. " ಅಡುಗೆ ಮನೆಯೇ ನಮ್ಮ ಸರ್ವಸಿದ್ಧ ಹಕ್ಕು" ಎಂದು ತಿಳಿದ ಮಹಿಳೆಯರೇ ಹೆಚ್ಚು. ಬೀಡಿಯ ಗಮನದಿಂದ ಸ್ವಲ್ಪ ಮಟ್ಟಿಗೆ ಮಹಿಳೆಯರ ಸ್ಥಿತಿ ಸುಧಾರಿಸಲು ಕಾರಣವಾಯಿತು. ಮಹಿಳೆಯವರಿಗೆ ಅಧಿಕಾರದಲ್ಲೂ ಭಾಗವಹಿಸುವ ಅಧಿಕಾರ ಇರಲಿಲ್ಲ ಎನ್ನುವಷ್ಟು ಪುರುಷರ ದಬ್ಬಾಳಿಕೆ ಆಡಳಿತರೂಢವಾಗಿತ್ತು. ಕೃಷಿರಂಗದಲ್ಲಿ ಮೊದಮೊದಲು ಮಹಿಳೆಯರ ಪಾಲುದಾರಿಕೆಯಿದ್ದರೂ, ಸಂಬಳದ ತಾರತಮ್ಯ ಮತ್ತು ಬೀಡಿಸುತ್ತುವಿಕೆ ತೊಡಗಿರುವುದರಿಂದ ಕೃಷಿ ವಲಯದಿಂದ ಹೆಚ್ಚಿನ ಸಂಖ್ಯೆಯ ಮಹಿಳೆಯರು ಹಿಂದೆ ಸರಿದರು. ಇನ್ನಿತರ ಕುಲಕಸುಬುಗಳಲ್ಲೂ ಮಹಿಳೆಯರ ಪಾಲುಗಾರಿಕೆ ಇದ್ದಿರಲಿಲ್ಲ. ವಿದ್ಯಾಭ್ಯಾಸದ ಕೊರತೆ, ಹೊರ ಜಗತ್ತಿನ ಆಗು-ಹೋಗುಗಳ ಬಗ್ಗೆ ವಿಷಯ ತಿಳಿಯದಿರುವುದು ಇವರ ಹಿನ್ನಡೆಗೆ ಕಾರಣವಾಯಿತು. ಪುರುಷರಷ್ಟೇ ಶ್ರಮ ವಹಿಸಿ ಕೆಲಸ ಮಾಡಿದರೂ ಸಂಬಳದಲ್ಲಿ ಈಗಲೂ ತಾರತಮ್ಯವಿದೆ. ಇದು ಮಹಿಳೆಯರು ಹಿಂದೆ ಸರಿಯುವುದಕ್ಕೆ ಕಾರಣವಾದರೆ, ಹೆಚ್ಚಿನ ಮಹಿಳೆಯವರು ಅಡುಗೆ ಕೋಣೆಯನ್ನು ನೆಚ್ಚಿದ್ದರು.

1991ರ ಸೆನ್ಸಸ್ (ಜನಗಣನೆ) ಪ್ರಕಾರ ಮೀಂಜ ಪಂಚಾಯತಿನ ಮಹಿಳೆಯವರ ಸಂಖ್ಯೆ 8868, ಪುರುಷರ ಸಂಖ್ಯೆಗಿಂತಲೂ 1312 ಮಹಿಳೆಯರು ಹೆಚ್ಚು. ಮಹಿಳೆಯರ ಬಗ್ಗೆ ಹೇಳುವುದಾದರೆ "ಮಹಿಳೆಯೇ ಮನೆಯ ಆರ್ಥಿಕ ಮಂತ್ರಿ" ಒಬ್ಬ ಮನುಷ್ಯನ ಉನ್ನತಿಯ ಹಿಂದೆ ಒಬ್ಬ ಮಹಿಳೆಯ ಪರಿಶ್ರಮ ಇದ್ದೇ ಇದೆ. ಹಾಗೆಯೇ ಒಬ್ಬ ಮನುಷ್ಯನ ಅವನತಿಯ ಹಿಂದೆಯೂ ಮಹಿಳೆಯ ಕೈವಾಡ ಇದೆ. ಇದು ಹಿಂದಿನಿಂದಲೂ ಕೇಳಿ ಬರುವ ಮಾತು.

ದರಿದ್ರ ಕುಟುಂಬದ ಉಸ್ತುವಾರಿ ಮಹಿಳೆಗೇ ಬರುವುದು ಮತ್ತೊಂದು ವಿಶೇಷವಾಗಿದೆ. ದರಿದ್ರರಾದ ಕುಟುಂಬದವರಲ್ಲಿ ಮಹಿಳೆಯವರ ಆದಾಯವೇ ಅವರ ಆಗು-ಹೋಗುಗಳಿಗೆ ಬೇಕಾಗುವುದು. ಇದು ಎಲ್ಲೆಡೆಯಾಗಿ ಕಾಣಬರುವ ವಾಸ್ತವಾಂಶವಾಗಿದೆ. ಸಮಯಕ್ಕೆ ಸರಿಯಾಗಿ ಊಟ ಉಪಹಾರಗಳ ತಯಾರಿ, ಮನೆಗೆ ಬೇಕಾದ ಅತ್ಯಾವಶ್ಯ ಕಟ್ಟಿಗೆ ಶೇಖರಿಸುವುದು, ಆಕಳುಗಳನ್ನು ಪರಿಪಾಲಿಸುವುದು, ಮನೆಯ ಸುತ್ತಮುತ್ತ ಶುಚಿಗೊಳಿಸುವುದು ಇದನ್ನೆಲ್ಲಾ ಗೃಹಿಣಿಯೇ ಮಾಡಬೇಕು. ಸರಕಾರದ ಕೆಲಸಕ್ಕೋ, ಕೂಲಿ ಕೆಲಸಕ್ಕೋ ಹೋದರೂ ಕೂಡ ಇದು ಅತ್ಯಗತ್ಯ ಮಾಡಲೇ ಬೇಕಾದ ಸ್ಥಿತಿ.

ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸೌಕರ್ಯಗಳು 1936ರಲ್ಲೇ ಪಂಚಾಯತಿನೊಳಗೆ ಲಭಿಸಿದರೂ, ಉನ್ನತ ವಿದ್ಯಾಭ್ಯಾಸಕ್ಕೆ ಹೊರನಾಡನ್ನು ಆಶ್ರಯಿಸಬೇಕಾದ ಪರಿಸ್ಥಿತಿ ಬಂದುದರಿಂದ ಸ್ತ್ರೀಯರ ವಿದ್ಯಾಭ್ಯಾಸವು ಪ್ರಾಥಮಿಕ ತರಗತಿಯಲ್ಲೇ ಮುರುಟಿ ಕೊಂಡಿತು. ವಿದ್ಯಾಭ್ಯಾಸ ರಂಗದಲ್ಲಿ, ಪುರುಷರ ಹತ್ತಿರ ಬರಲು ಇದುವರೆಗೆ ಈ ಪಂಚಾಯತಿನ ಮಹಿಳೆಯರಿಗೆ ಸಾಧ್ಯವಾಗಲಿಲ್ಲ.

ಉದ್ಯೋಗದಲ್ಲಿ ಮಹಿಳೆಯರು

ಉದ್ಯೋಗ ವಲಯ	ಮಹಿಳೆಯರು	ಪುರುಷರು
ಕೃಷಿ ಕಾರ್ಮಿಕರ್ರು	255	925
ಮೃಗ ಸಂರಕ್ಷಣೆ	35	50
ಬೀಡಿಸುತ್ತುವಿಕೆ	800	125
ಸಣ್ಣ ಕೈಗಾರಿಕೆ	20	60
ನಿರ್ಮಾಣ ಕೆಲಸ	10	135
ವ್ಯಾಪಾರ	20	225
ಕೃಷಿ	206	499
ಇನ್ನಿತರ	165	520

ಮಹಿಳೆಯರು ಉದ್ಯೋಗವಲಯದಲ್ಲಿ ತೀರಾ ಕಡಿಮೆ, ಬೀಡಿ ಮತ್ತು ಕೃಷಿಯನ್ನು ಬಿಟ್ಟರೇ ಉಳಿದ ವಲಯದಲ್ಲಿ ಇವರ ಆಧಿಪತ್ಯ ಬಾರೀ ಕಡಿಮೆ. ನಮ್ಮ ಪಂಚಾಯತಿನಲ್ಲಿ ಇದುವರೆಗೆ ಯಾವುದೇ ಮಹಿಳಾ ಸಮಾಜಗಳು ಅಂಗೀಕಾರವಾಗಿಲ್ಲ ಶಾಲಾಮಟ್ಟದಲ್ಲಿ ಮದರ್ P.T.A (ಮಾತೃಸಂಗಮ) ಕಾರ್ಯವೆಸಗುತ್ತಿದ್ದರೂ ಮಹಿಳೆಯರು ಎಲ್ಲರೂ ಇದರಲ್ಲಿ ಭಾಗವಹಿಸುವುದಿಲ್ಲ. ಪಂಚಾಯತ್ ಮಟ್ಟದಲ್ಲಿ ಸಮಗ್ರ ವಿಕಸನ

ಯಜ್ಞದ ಭಾಗವಾಗಿ ನಡೆದ ಸರ್ವೇಯಲ್ಲಿ ಕೂಡ ಮಹಿಳೆಯರು ಭಾಗವಹಿಸಲಿಲ್ಲ ಎಂಬುದೂ ಖೇದಕರ ಸಂಗತಿ.

ಒಂದೇ ಕೆಲಸಗಳಿಗೆ ಪುರುಷ ಮತ್ತು ಸ್ತ್ರೀಯರ ಸಂಬಳದ ಅಂತರದ ಪಟ್ಟಿ

ಉದ್ಯೋಗ	ಮಹಿಳೆಯರು	ಪುರುಷರು
ಕೃಷಿ ಮಜೂರು	35	60
ನಿರ್ಮಾಣ ಮಜೂರಿ	60	120

ಸಮಸ್ಯೆಗಳು :

1. ಉದ್ಯೋಗದಲ್ಲಿ ಅವಗಣನೆ
2. ಸಮಾಜ ಸೇವಾರಂಗಕ್ಕೆ ಸ್ತ್ರೀಯರ ಪ್ರವೇಶವಿಲ್ಲದಿರುವಿಕೆ
3. ಸ್ವಂತ ಉದ್ಯೋಗ ರಂಗದಲ್ಲಿ ಸ್ತ್ರೀಯರ ಅನಾಸ್ಥೆ
4. ವಿದ್ಯಾಭ್ಯಾಸದ ಕೊರತೆ
5. ವೇತನದಲ್ಲಿ ತಾರತಮ್ಯ
6. ಉದ್ಯೋಗ ನೇಮಕಾತಿಯಲ್ಲಿ ಮಹಿಳೆಯರಿಗೆ ಮೀಸಲಾತಿ ಇಲ್ಲದಿರುವುದು.
7. ಸಾಂಕೇತಿಕತೆಯ ಕೊರತೆ
8. ಸರಿಯಾದ ತರಬೇತಿ ಇಲ್ಲದಿರುವುದು
9. ಹೆರಿಗೆಗೆ ಆಸ್ಪತ್ರೆಗಳ ಕೊರತೆ
10. ಮದ್ಯಪಾನ ಇತ್ಯಾದಿ ಕೆಟ್ಟ ಚಟಗಳಿಗೆ ಸ್ತ್ರೀಯರೇ ಬಲಿಯಾಗುವುದು.
11. ವರ್ತಮಾನ ಪತ್ರಿಕೆಗಳನ್ನು ಸ್ತ್ರೀಯರು ಉಪಯೋಗಿಸದಿರುವುದು
12. ಅಂಗವಿಕಲ ಸ್ತ್ರೀಯರಿಗೆ ಸೂಕ್ತ ಸೌಲಭ್ಯವಿಲ್ಲದಿರುವುದು
13. ಸ್ತ್ರೀಯರ ಮೇಲೆ ನಡೆಯುವ ದೌರ್ಜನ್ಯ

ನಿರ್ದೇಶಗಳು

1. ಸ್ತ್ರೀಯರನ್ನು ಸಂಪೂರ್ಣ ಸಾಕ್ಷರರನ್ನಾಗಿಸುವುದು ಮತ್ತು ಆ ಮೂಲಕ ವೃತ್ತ ಪತ್ರಿಕೆಗಳನ್ನು ಮತ್ತು ಸುದ್ದಿ ಮಾಧ್ಯಮಗಳನ್ನು ಓದಿ ಲೋಕದ ಆಗು-ಹೋಗುಗಳನ್ನು ತಿಳಿದು ಕೊಳ್ಳಲು ಪ್ರೇರೇಪಿಸುವುದು
2. ಸ್ತ್ರೀಯರ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮತ್ತು ಪೌಷ್ಟಿಕ ಆಹಾರಗಳ ವಿತರಣೆಗಾಗಿ ಅಂಗನವಾಡಿ, ಬಾಲವಾಡಿಗಳನ್ನು ಸ್ಥಾಪಿಸುವುದು.
3. ಮಹಿಳೆಯರ ಮೇಲಿನ ಅತ್ಯಾಚಾರಗಳನ್ನು ತಡೆಗಟ್ಟಲು ಹೆಚ್ಚಿನ ಸಂಖ್ಯೆಯಲ್ಲಿಮಹಿಳಾ ಸಂಘಟನೆಯನ್ನು ಸ್ಥಾಪಿಸಿ ಅತ್ಯಾಚಾರದ ವಿರುದ್ಧ ಹೋರಾಡಲು ಅಣಿಗೊಳಿಸುವುದು.
4. ಮಹಿಳೆಯರಿಗೆ ಸೂಕ್ತ ಉದ್ಯೋಗವನ್ನು ಕಲ್ಪಿಸುವ ಉದ್ಯೋಗ ಸಂಸ್ಥೆಗಳನ್ನು ಸ್ಥಾಪಿಸುವುದು.
5. ಮಹಿಳೆಯರು ಕೇವಲ ಭೋಗದ ವಸ್ತು ಮತ್ತು ಅಡುಗೆ ಮನೆಯೇ ಅವರ ಸರ್ವಸ್ವ ಎಂಬ ಮನೋಭಾವವನ್ನು ಸಾಮಾಜಿಕ ಕಾರ್ಯಗಳಿಗೂ ಪ್ರೇರೇಪಿಸುವುದು.

"ಸಹಕಾರಿ" "ವಲಯ"

ಮುನ್ನುಡಿ : ನಮ್ಮ ದೇಶದ ವಿವಿಧ ರಂಗಗಳಲ್ಲಿ ಕಾರ್ಯವೆಸಗುತ್ತಿರುವ ಸಹಕಾರಿ ಕ್ಷೇತ್ರವು ಕೇರಳದಲ್ಲೂ ಪ್ರತ್ಯೇಕವಾಗಿ ಕಾಸರಗೋಡು ತಾಲೂಕಿನ ಮೀಂಜ ಪಂಚಾಯತಿನಲ್ಲಿ ಕೂಡಾ ಕೃಷಿಕರ ಬೇಡಿಕೆಗಳನ್ನು ಪೂರೈಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಕ್ರಿ.ಶ. 1920ರ ಕಾಲದಲ್ಲಿ ನಮ್ಮ ಪಂಚಾಯತಿನ ವಿವಿಧ ಗ್ರಾಮಗಳಲ್ಲಿ ವಿವಿದೋದ್ದೇಶ ಸಹಕಾರಿ ಸಂಘಗಳೆಂಬ ಹೆಸರಿನಲ್ಲಿ ಕಾರ್ಯವೆಸಗುತ್ತಿದ್ದ ಸಹಕಾರಿ ಸಂಘಗಳಿದ್ದುವು ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಈ ತರದ ಸಹಕಾರಿ ಸಂಸ್ಥೆಗಳು ಕೃಷಿಕರ ಆವಶ್ಯಕತೆಗಳನ್ನು ಮಾತ್ರ ಪೂರೈಸುತ್ತಿದ್ದ ಸಹಕಾರಿ ಸಂಸ್ಥೆಗಳಾಗಿದ್ದುವು. ಉದಾ : ಮುಳಿಂಜ ರಾಮ ನಾಮ ವಿವಿದ್ದೋದ್ದೇಶ ಸಹಕಾರೀ ಸಂಘ" ಎಂಬ ಸಂಸ್ಥೆಯು 1920ರಲ್ಲೇ ಸ್ಥಾಪಿಸಲ್ಪಟ್ಟು ಈಗಿನ ಮಂಗಲ್ಪಾಡಿ ಪಂಚಾಯತಿಗೆ ಸೇರಿದ ಮುಳಿಂಜಗ್ರಾಮವನ್ನು ಕೇಂದ್ರವನ್ನಾಗಿಸಿ ನಮ್ಮ ಪಂಚಾಯತಿನ ಮಜಿಬೈಲು ಮೂಡಂಬೈಲು ಗ್ರಾಮಗಳನ್ನು ಕಾರ್ಯ ಕ್ಷೇತ್ರವನ್ನಾಗಿರಿಸಿ ಕೊಂಡು ಕಾರ್ಯವೆಸಗುತ್ತಿತ್ತು. ಕೃಷಿಕರಿಗೆ ರೂ. 25/-ರಿಂದ ರೂ. 100/-ರವರೆಗೆ ಸಾಲ ಸೌಲಭ್ಯವನ್ನು ಒದಗಿಸುತ್ತಿತ್ತು. ಈ ರೀತಿಯ ಸಹಕಾರಿ ಸಂಸ್ಥೆಗಳು ನಮ್ಮ ಪಂಚಾಯತಿನ ಇನ್ನೂ ಕೆಲವು ಗ್ರಾಮಗಳಲ್ಲಿ ಕಾರ್ಯವೆಸಗುತ್ತಿತ್ತು ಎಂಬುದಕ್ಕೆ ಪುರಾವೆಗಳಿವೆ. ಮೀಂಜ ವಿವಿದ್ದೋದ್ದೇಶ ಸಹಕಾರಿ ಸಂಘವೆಂಬ ಮೀಂಜ ಗ್ರಾಮವನ್ನು ಮಾತ್ರ ಕಾರ್ಯ ಕ್ಷೇತ್ರವನ್ನಾಗಿರಿಸಿ 1951ರಿಂದ ಕೆಲಸ ಮಾಡುತ್ತಿದ್ದರೆ, ತಲೆಕ್ಕೆಳ ವಿವಿದ್ದೋದ್ದೇಶ ಸಹಕಾರೀ ಸಂಘ ತಲೆಕ್ಕೆಳ ಗ್ರಾಮವನ್ನು ಮಾತ್ರ ತನ್ನ ಕಾರ್ಯ ಕ್ಷೇತ್ರವನ್ನಾಗಿರಿಸಿದರೆ, ಕಡಂಬಾರು ವಿವಿದ್ದೋದ್ದೇಶ ಸಹಕಾರಿ ಸಂಘ ಕಡಂಬಾರು ಗ್ರಾಮವನ್ನು, ಕಳಿಯೂರು ಕೋಳ್ಯೂರು ಗ್ರಾಮಗಳನ್ನು ಕಾರ್ಯಕ್ಷೇತ್ರವನ್ನಾಗಿರಿಸಿ 1917ರಿಂದಲೇ ವರ್ಕಾಡಿ ವಿವಿದ್ದೋದ್ದೇಶ ಸಹಕಾರಿ ಸಂಘವು ಕಾರ್ಯವೆಸಗುತ್ತಿತ್ತು. ಈ ಸಂಘಗಳು ಸ್ವಾತಂತ್ರ್ಯದ ತನಕ ಅಭಿವೃದ್ಧಿ ಸಾಧಿಸಿ, ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮಂದಗತಿಯಿಂದ ಮುಂದುವರಿದು 1960ನೇ ಇಸವಿಗೆ ಆಗುವಾಗ ಹೆಚ್ಚಿನ ಸಂಘಗಳು ಕೇವಲ ನಾಮ ಮಾತ್ರವಾಗಿ ಉಳಿದುವು. ಈ ರೀತಿ ಪತನದ ಅಂಚಿನಲ್ಲಿದ್ದ ಸಹಕಾರಿ ಸಂಘಗಳು ಕೆಲವೊಂದು ಮುಚ್ಚುವ ದುಸ್ಥಿತಿಗೆ ಬಂದುವು. ಈ ಸಂದರ್ಭದಲ್ಲಿ 1962ನೇ ಇಸವಿಯಲ್ಲಿ ಸರಕಾರವು ಇಂಥ ಸಹಕಾರಿ ಸಂಘಗಳನ್ನು ಪುನಃಶ್ಚೇತನಗೊಳಿಸುವ ದೃಷ್ಟಿಯಿಂದ ಯೋಜನೆಗಳನ್ನು ಹಾಕಿತು.

ಕಾಸರಗೋಡು ತಾಲೂಕು ಸರ್ಕಲ್ ಕೋ ಓಪರೇಟಿವ್ ಯೂನಿಯನ್ ಮೂಲಕ ಈ ತಾಲೂಕಿನ ಸಹಕಾರೀ ಸಂಘಗಳ ಅಭಿವೃದ್ಧಿಗಾಗಿ ಹಾಕಿಕೊಂಡ ಯೋಜನೆಗಳಂತೆ ಸಂಘಗಳಿಗೆ ಸಹಕಾರಿ ಜಿಲ್ಲಾ ಬೇಂಕುಗಳಿಂದ ದೊರೆಯುವ ಕೃಷಿಸಾಲಗಳ ನಿಬಂಧನೆಗಳನ್ನು ಸರಳಗೊಳಿಸಿ ಹೆಚ್ಚಿನ ಸಾಲ ದೊರಕುವಂತೆ ಪ್ರಯತ್ನಿಸಲಾಯಿತು.

ಸ್ವಾತಂತ್ರ್ಯಾ ನಂತರ ಆಹಾರ ಉತ್ಪಾದನೆಯಲ್ಲಿ ನಮ್ಮೀ ಸಂಸ್ಥಾನವಾದ ಕೇರಳ ಆಹಾರ ಸಾಮಾಗ್ರಿಗಳ ವಿತರಣೆಗೆ ಹೊಸವಿಧಾನದ ಯೋಜನೆಗಳನ್ನು ಹಾಕಿಕೊಂಡು ಸಹಕಾರಿ ಸಂಘಗಳಿಗೆ ಹೊಸ ಆದೇಶಗಳನ್ನು ನೀಡಿತು. 1964ರಲ್ಲಿ ಆಹಾರ ಸಾಮಾಗ್ರಿಗಳನ್ನು ವಿತರಿಸುವ ನ್ಯಾಯ ಬೆಲೆ ಅಂಗಡಿಗಳನ್ನು ಸಹಕಾರಿ ಸಂಘಗಳು ಕೈಗೆತ್ತಿ ಕೊಳ್ಳಬೇಕೆಂದು ಸರಕಾರವು ನೀಡಿದ ನಿರ್ದೇಶನಗಳನ್ನು ಸ್ವೀಕರಿಸಿಕೊಂಡು ಹೆಚ್ಚಿನ ಸಂಘಗಳು ತಮ್ಮ ಕಾಯ ಕ್ಷೇತ್ರಗಳನ್ನು ಈ ರಂಗಕ್ಕೆ ವಿಸ್ತರಿಸಿದವು. ಮೇಲೆ ಸೂಚಿಸಿದ ಎಲ್ಲಾ ಸಹಕಾರಿ ಸಂಘಗಳು ನ್ಯಾಯ ಬೆಲೆ ಅಂಗಡಿಗಳನ್ನು ನಡೆಸುವ ಜವಾಬ್ದಾರಿಯನ್ನು ವಹಿಸಿಕೊಂಡವು. ಬಳಿಕ ಕೇರಳದಲ್ಲಿ ಜಾರಿಗೊಳಿಸಲ್ಪಟ್ಟ ಶಾಸ್ತ್ರೀಯ ರೇಶನಿಂಗ್ ಪದ್ಧತಿಯಲ್ಲಿ ಸಹಕಾರಿ ಸಂಘಗಳನ್ನು ಭಾಗವಹಿಸುವಂತೆ ನಿರ್ದೇಶನ ನೀಡಲಾಯಿತು. ನ್ಯಾಯ ಬೆಲೆ ಅಂಗಡಿಗಳನ್ನು ರೇಶನ್ ಅಂಗಡಿಗಳಾಗಿ ಮಾರ್ಪಡಿಸಿ ಎಲ್ಲಾ ಕುಟುಂಬಗಳಿಗೂ ಆಹಾರ ವಸ್ತುಗಳು ಮತ್ತು ದಿನಬಳಕೆ ವಸ್ತುಗಳನ್ನು ವಿತರಿಸುವ ಜವಾಬ್ದಾರಿಯನ್ನು ಸಹಕಾರಿ ಸಂಘಗಳಿಗೆ ನೀಡಿದುದರ ಬೆನ್ನಲ್ಲೆ ಕೃಷಿಕರಿಂದ ಲೆವಿ ಸಂಗ್ರಹಣಾ ವ್ಯವಸ್ಥೆಯನ್ನು ಜಾರಿಗೊಳಿಸಿತು. ಈ ಲೆವಿ ಸಂಗ್ರಹಣಾ ಜವಾಬ್ದಾರಿಯನ್ನು ಸಹಕಾರಿ ಸಂಘಗಳು ಕೈಗೆತ್ತಿಕೊಂಡು ತಮ್ಮ ಕಾರ್ಯಕ್ಷೇತ್ರವನ್ನು ಇನ್ನಷ್ಟು ಹೆಚ್ಚಿಸಿತು. 1967ರ ಕಾಲದಲ್ಲಿ ವಿವಿದ್ದೋದ್ದೇಶ ಸಹಕಾರಿ ಸಂಘಗಳನ್ನು ಸೇವಾ ಸಹಕಾರಿ ಸಂಘಗಳಾಗಿ ಮಾರ್ಪಡಿಸಿ ಒಂದು ಗ್ರಾಮವನ್ನು ಪರಿಧಿಯನ್ನಾಗಿಸಿಕೊಂಡ ಸಂಘಗಳನ್ನು ಸಂಯೋಜಿಸಿಕೊಂಡು ಒಂದು ಪಂಚಾಯತಿನಲ್ಲಿ ಒಂದು ಅಥವಾ ಎರಡು ಸೇವಾ ಸಹಕಾರಿ ಸಂಘಗಳನ್ನು ಸ್ಥಾಪಿಸುವ ಪದ್ಧತಿಯನ್ನು ಜಾರಿಗೊಳಿಸಲಾಯಿತು. ಪರಿಣಾಮವಾಗಿ ತಲೆಕ್ಕಳ ವಿವಿದ್ದೋದ್ದೇಶ ಸಹಕಾರ ಸಂಘವನ್ನು ಮೀಂಜ ಸೇವಾ ಸಹಕಾರ ಸಂಘದೊಂದಿಗೆ, ಮುಳಿಂಜ ರಾಮನಾಮ ವಿವಿದ್ದೋದ್ದೇಶ ಸಹಕಾರಿ ಸಂಘದ ಪರಿಧಿಯಿಂದ ಮುಳಿಂಜ ಗ್ರಾಮವನ್ನು ಮಂಗಲ್ಪಾಡಿ ಸಹಕಾರಿ ಸಂಘಕ್ಕೆ ಸೇರಿಸಿ ಮಜಿಬೈಲ್ ಸೇವಾ ಸಹಕಾರಿ ಸಂಘ ಎಂಬ ಹೆಸರಿನಲ್ಲಿ ಮಾರ್ಪಾಡುಗೊಳಿಸಲಾಯಿತು. ಈ ಸಂಘದೊಂದಿಗೆ ಕಡಂಬಾರು ವಿವಿದ್ದೋದ್ದೇಶ ಸಹಕಾರಿ ಸಂಘವನ್ನು ವಿಲೀನಗೊಳಿಸಲಾಯಿತು. ಈ ಸಂಘಗಳು ಇತರ ಚಟುವಟಿಕೆಗಳೊಂದಿಗೆ, ಕೃತಕಗೊಬ್ಬರ, ಕೀಟನಾಶಕಗಳನ್ನು ವಿತರಿಸುವ ಜವಾಬ್ದಾರಿಯನ್ನು ವಹಿಸಿದುವು.

1967ರಲ್ಲಿ ಸೇವಾ ಸಹಕಾರಿ ಸಂಘಗಳು ತಮ್ಮ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡು ಸೇವಾ ಸಹಕಾರಿ ಬೇಂಕುಗಳಾಗಿ ಪರಿವರ್ತನೆಗೊಂಡು ಕಾರ್ಯವೆಸಗಲು ಆರಂಭಿಸಿದವು. ಯಾವುದೇ ರೀತಿಯ ಕೈಗಾರಿಕೆಗಳಿಲ್ಲದ ಈ ಪ್ರದೇಶದಲ್ಲಿ ಬೀಡಿ ಕೆಲಸವನ್ನು ನಂಬಿಕೊಂಡು ಜೀವನವನ್ನು ನಡೆಸುತ್ತಿದ್ದ ಎಷ್ಟೋ ಕುಟುಂಬಗಳು ನೆರೆರಾಜ್ಯವಾದ ಕರ್ನಾಟಕದ ಖಾಸಗಿ ಬೀಡಿ ಕಂಪೆನಿಗಳು ಕೆಲಸಗಾರರಿಗೆ ಕೆಲಸ ನಿಷೇಧಿಸಿ ಕೇರಳದಿಂದ ಕರ್ನಾಟಕಕ್ಕೆ ಪಲಾಯನಗೈದುವು. ಪರಿಣಾಮವಾಗಿ ಇಂದಿನ ಕಾಸರಗೋಡು, ಕಣ್ಣೂರು ಜಿಲ್ಲೆಗಳ ಹನ್ನೆರಡು ಸಾವಿರಕ್ಕಿಂತಲೂ ಮಿಕ್ಕಿ ಬೀಡಿ

ಕಾರ್ಮಿಕರು ಉದ್ಯೋಗರಹಿತರಾದರು. ಇಷ್ಟು ದೊಡ್ಡ ಸಂಖ್ಯೆಯ ಕಾರ್ಮಿಕರ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲಿಕ್ಕಾಗಿ ಅಂದಿನ ಕೇರಳ ಸರಕಾರವು ಬೀಡಿ ಕೆಲಸಗಾರರ ಸಹಕಾರಿ ಸಂಘಗಳನ್ನು ಸ್ಥಾಪಿಸುವ ತೀರ್ಮಾನ ಕೈಗೊಂಡಿತು. ಪರಿಣಾಮವಾಗಿ ಮಂಜೇಶ್ವರ ಬೀಡಿಕೆಲಸಗಾರರ ಸಹಕಾರಿ ಸಂಘ ಎಂಬ ಹೆಸರಿನಲ್ಲಿ ಮಂಜೇಶ್ವರವನ್ನು ಕೇಂದ್ರವಾಗಿರಿಸಿಕೊಂಡು ಬೀಡಿ ಕೆಲಸಗಾರರ ಸಹಕಾರಿ ಸಂಘವನ್ನು ಸ್ಥಾಪಿಸಲಾಯಿತು.

ಈ ಸಂಘದ ಡಿಪೋಗಳನ್ನು ನಮ್ಮ ಪಂಚಾಯತ್ ಪರಿಧಿಯಲ್ಲಿ ಮಜಿಬೈಲು, ಉಪ್ಪಳ, ಮೂಡಂಬೈಲು, ಕಡಂಬಾರು ಮತ್ತು ಕೂಡ್ಲಮೊಗರು ಎಂಬ ಸ್ಥಳದಲ್ಲಿ ಸ್ಥಾಪಿಸಲಾಯಿತು.

ಹೈನುಗಾರಿಕೆಯ ರಂಗದಲ್ಲಿ ತೊಡಗಿರುವ ಉತ್ಸಾಹಿ ಸದಸ್ಯರನ್ನು ಸೇರಿಸಿಕೊಂಡು ನಮ್ಮ ಪಂಚಾಯತಿನ ಕೋಳ್ಯೂರು ವಾರ್ಡಿನ ಮಜಿರ್‌ಪಳ್ಳ ಎಂಬ ಪ್ರದೇಶವನ್ನು ಕೇಂದ್ರವಾಗಿರಿಸಿಕೊಂಡು ಹಾಲು ಉತ್ಪಾದಕರ ಸಹಕಾರಿ ಸಂಘವನ್ನು ಸ್ಥಾಪಿಸಿ ಹಾಲು ಖರೀದಿ ಮತ್ತು ಮಾರಾಟದ ವ್ಯವಸ್ಥೆಯನ್ನು ಕೈಗೆತ್ತಿಕೊಳ್ಳಲಾಯಿತು. ಸ್ವಲ್ಪ ಕಾಲದ ತನಕ ಉತ್ತಮ ರೀತಿಯಲ್ಲಿ ಕಾರ್ಯಾಚರಿಸುತ್ತಿದ್ದ ಈ ಸಂಘವು ಕ್ರಮೇಣ ಪ್ರವರ್ತನವು ಮಂದಗತಿಯಿಂದ ಸಾಗಿತು. ಪಶು ಆಹಾರಗಳು ದುಬಾರಿ ಆದ ಕಾರಣದಿಂದ ಉತ್ಪಾದನ ವೆಚ್ಚವು ಅಧಿಕಗೊಂಡಿದ್ದರಿಂದಲೂ ಹಾಲು ಖರೀದಿ ಮತ್ತು ಮಾರಾಟಕ್ಕೆ ಸರಿಯಾದ ವ್ಯವಸ್ಥೆ ಇಲ್ಲದಿದ್ದುದರಿಂದಲೂ ಈ ಸಂಘವು ನಷ್ಟದ ಹಾದಿಯಲ್ಲಿ ಸಾಗಿ ಕ್ರಮೇಣ ಮೂಲೆಪಾಲಾಯಿತು.

ನಮ್ಮ ಪಂಚಾಯತಿನ 8ನೇ ವಾರ್ಡಿಗೆ ತಾಗಿಕೊಂಡಿರುವ ಮಂಗಲ್ಪಾಡಿ ಪಂಚಾಯತಿನ ಬೇಕೂರು ಗ್ರಾಮದಲ್ಲಿ ಹಾಲು ಉತ್ಪಾದನೆ ಸಹಕಾರಿ ಸಂಘವೊಂದು ಪ್ರವರ್ತಿಸುತ್ತಿದ್ದು ನಮ್ಮ 1ನೇ ಮತ್ತು 8ನೇ ವಾರ್ಡಿನ ಹಾಲು ಉತ್ಪಾದಕರು ಸದಸ್ಯರಾಗಿ ಪ್ರಯೋಜನ ಪಡೆಯುತ್ತಿದ್ದಾರೆ.

ಕೇರಳದಲ್ಲಿ ಪಾನನಿಷೇಧ ರದ್ದತಿಗೆ ಮೊದಲು ಓಲೆ ಬೆಲ್ಲ ಉತ್ಪಾದಕರ ಸಹಕಾರಿ ಸಂಘವು ಪ್ರವರ್ತಿಸುತ್ತಿದ್ದವು. ನಮ್ಮ ಪಂಚಾಯತಿನ ಎಲ್ಲಾ ಗ್ರಾಮಗಳನ್ನು ಕಾರ್ಯಕ್ಷೇತ್ರದಲ್ಲಿ ಸೇರಿಸಿಕೊಂಡು ಉಪ್ಪಳವನ್ನು ಕೇಂದ್ರೀಕರಿಸಿ ಕಾರ್ಯಾಚರಿಸುತ್ತಿದ್ದ ಮೂರ್ತೆದಾರರ ಸಹಕಾರಿ ಸಂಘದಲ್ಲಿ ನಮ್ಮ ಪಂಚಾಯತಿನ ಮೂರ್ತೆಕೆಲಸ ಮಾಡುವವರು ಸದಸ್ಯರಾಗಿ ಸದ್ರಿ ಸಹಕಾರಿ ಸಂಘದ ಪ್ರಯೋಜನ ಪಡೆಯುತ್ತಿದ್ದರು. ತಾಳೆಯ ಮರಗಳಿಂದ ಲಹರಿ ರಹಿತ ಸಿಹಿಕಳ್ಳನ್ನು ತೆಗೆದು ಓಲೆ ಬೆಲ್ಲ ಉತ್ಪಾದಿಸುವ ಧಾರಾಳ ಕುಟುಂಬಗಳು ನಮ್ಮ ಪಂಚಾಯತಿನ ವಿವಿಧ ಗ್ರಾಮಗಳಲ್ಲಿದ್ದವು. ಪಾನನಿಷೇಧದ ಬಳಿಕ ಲಹರಿ ಭರಿತ ಶೇಂದಿ ಉತ್ಪಾದಿಸಿ ಶೇಂದಿ ಕಂಟ್ರಾಕ್ಟುದಾರರಿಗೆ ನೀಡಲು ಮೂರ್ತೆದಾರರು ನಿರ್ಭಂದಿತರಾದರು. ಬೆಲ್ಲ ಉತ್ಪಾದನೆ ಪೂರ್ಣ ನಿಂತುಹೋಯಿತು. ಶೇಂದಿ ಕಂಟ್ರಾಕ್ಟುದಾರರು ಮೂರ್ತೆದಾರರಿಗೆ ಶೇಂದಿಗೆ ಸರಿಯಾದ ಬೆಲೆ ನೀಡದಿರುವುದರಿಂದ ತಾಳೆ ಮರದಿಂದ ಶೇಂದಿ ತೆಗೆಯುವ ಮೂರ್ತೆದಾರ ಸಂಖ್ಯೆ ಕಡಿಮೆಯಾಗುತ್ತ ಬಂದು ಈಗ ಸಂಪೂರ್ಣ ಇಲ್ಲದಾಗಿದೆ.

ಪಾನನಿಷೇದ ಜಾರಿಗೊಂಡಂದಿನಿಂದ ಮೂರ್ತೆದಾರರ ಸಹಕಾರಿ ಸಂಘವು ಇಲ್ಲದಾಯಿತು.

ಸಹಕಾರಿ ಸಂಘಗಳ ಇಂದಿನ ಸ್ಥಿತಿ

ನಮ್ಮ ಪಂಚಾಯತಿನ ಪರಿದಿಯಲ್ಲಿ ಕೃಷಿಕರಿಗೆ ಸಾಲ ಸೌಲಭ್ಯಗಳನ್ನು ಒದಗಿಸುವ 3 ಸೇವಾ ಸಹಕಾರಿ ಬೇಂಕುಗಳು ಕಾಯಾಚರಿಸುತ್ತಿವೆ.

(1) ಮಜಿಬೈಲ್ ಸೇವಾ ಸಹಕಾರಿ ಬೇಂಕು

(2) ಮೀಯಪದವು ಸೇವಾ ಸಹಕಾರಿ ಬೇಂಕು

(3) ವರ್ಕಾಡಿ ಸೇವಾ ಸಹಕಾರಿ ಬೇಂಕು

ಮಜಿಬೈಲು, ಮೂಡಂಬೈಲು, ಕಡಂಬಾರು, ಕುಳೂರು ಗ್ರಾಮಗಳು ಮಜಿಬೈಲು ಸೇವಾ ಸಹಕಾರಿ ಬೇಂಕಿನ ಪ್ರವರ್ತನ ಪರಿಧಿಯಲ್ಲಿ ಮೀಂಜ, ತಲೇಕ್ಕಳ ಗ್ರಾಮಗಳನ್ನು ಪ್ರವರ್ತನ ಪರಿಧಿಯಲ್ಲಿ ಸೇರಿಸಿಕೊಂಡು ಮೀಂಜ ಸಹಕಾರಿ ಬೇಂಕು, ಕೋಳ್ಯೂರು, ಕಳಿಯೂರು ಗ್ರಾಮಗಳನ್ನು ಪ್ರವರ್ತನ ಪರಿಧಿಯಲ್ಲಿ ಸೇರಿಸಿಕೊಂಡು ವರ್ಕಾಡಿ ಸೇವಾ ಸಹಕಾರಿ ಬೇಂಕು ಪ್ರವರ್ತಿಸುತ್ತಿವೆ. ವರ್ಕಾಡಿ ಪಂಚಾಯತಿನ ವರ್ಕಾಡಿ ಮತ್ತು ಪಾವೂರು ಗ್ರಾಮಗಳನ್ನು ತನ್ನ ಪ್ರವರ್ತನ ಪರಿಧಿಯಲ್ಲಿ ಸೇರಿಸಿಕೊಂಡಿವೆ.

ಕೈಗಾರಿಕಾ ಸಹಕಾರಿ ಸಂಘ

ಮಂಜೇಶ್ವರ ಬೀಡಿ ಕೆಲಸಗಾರರ ಸಹಕಾರಿ ಸಂಘದ 5 ಡಿಪೋಗಳು ಕಾರ್ಯಾಚರಿಸುತ್ತಿದ್ದು 500ಕ್ಕಿಂತಲೂ ಮಿಕ್ಕಿದ ಕಾರ್ಮಿಕರು ಸದಸ್ಯರಾಗಿಯೂ ಕೆಲಸಗಾರರಾಗಿಯೂ ದುಡಿಯುತ್ತಿದ್ದಾರೆ. ಈ ಪಂಚಾಯತಿನ ಪರಿಧಿಯಲ್ಲಿ ಹಾಲು ಉತ್ಪಾದನಾ ಸಹಕಾರಿ ಸಂಘಗಳು ಇಲ್ಲಿ ನಮ್ಮ ಪಂಚಾಯತಿನ ಮತ್ತು 8ನೇ ವಾರ್ಡಿನ ಹಾಲು ಉತ್ಪಾದಕರೂ ಮಂಗಲ್ಪಾಡಿ ಪಂಚಾಯತಿನ ಬೇಕೂರು ಸಂಘದ ಸದಸ್ಯರಾಗಿರುತ್ತಾರೆ.

ಕೃಷಿ ರಂಗ

ನಮ್ಮ ಪಂಚಾಯತಿನಲ್ಲಿ 3097 ಕೃಷಿ ಕುಟುಂಬಗಳು ವಾಸಿಸುತ್ತಿದ್ದು ಕೃಷಿಸಾಲಕ್ಕಾಗಿ ಸಹಕಾರಿ ಬೇಂಕುಗಳನ್ನು ಹಾಗೂ ನೋರ್ತ್‌ಮಲಬಾರ್

ಗ್ರಾಮೀಣ ಬೇಂಕಿನ ಮೀಯಪದವು ಶಾಖೆಯನ್ನು ಪಂಚಾಯತಿನ ಹೊರಗಿರುವ ಸಿಂಡಿಕೇಟ್ ಬೇಂಕು ಮತ್ತು ಗ್ರಾಮೀಣ ಬೇಂಕಿನ ಜೋಡು ಕಲ್ಲು ಶಾಖೆಯನ್ನು ಆಶ್ರಯಿಸಿಕೊಂಡಿವೆ.

1. ಮಜಿಬೈಲ್ ಸೇವಾ ಸಹಕಾರಿ ಬೇಂಕು : 1200/-ರ ತನಕ ಕೃಷಿಕರ ಕುಟುಂಬಗಳು ಈ ಬೇಂಕಿನ ಪ್ರವರ್ತನ ಪರಿದಿಯಲ್ಲಿದ್ದಾರೆ. ಈ ಕೃಷಿ ಕುಟುಂಬಗಳ ಕೃಷಿಗೆ ಅವಶ್ಯಕವಾಗಿ 60 ಲಕ್ಷಕ್ಕಿಂತಲೂ ಮಿಕ್ಕಿದ ಸಾಲದ ಸೌಲಭ್ಯದ ಅವಶ್ಯಕತೆಯಿದೆ. ಈ ಅವಶ್ಯಕತೆಯನ್ನು ಸಂಪೂರ್ಣವಾಗಿ ಪೂರೈಸಲು ಈ ಬ್ಯಾಂಕಿನಿಂದ ಸಾಧ್ಯವಾಗುವುದು ಕಷ್ಟಕರ. ಈ ಬೇಂಕಿನ ಪರಿಧಿಯಲ್ಲಿ ಗ್ರಾಮೀಣ ಬೇಂಕಿನ ಮೀಯಪದವು ಮತ್ತು ಜೋಡುಕಲ್ಲು ಶಾಖೆಯೂ, ಸಿಂಡಿಕೇಟ್ ಬೇಂಕಿನ ಮಂಜೇಶ್ವರ ವರ್ಕಾಡಿ ಶಾಖೆಗಳೂ ಆಯಾ ಶಾಖೆಗಳ ಪರಿದಿಯಲ್ಲಿ ಈ ಬೇಂಕಿನ ಪರಿಧಿಯಲ್ಲಿ ಬರುವ ಗ್ರಾಮಗಳಿಗೆ ಸಾಲದ ಸೌಲಭ್ಯವನ್ನು ಒದಗಿಸುತ್ತದೆ. ಕೃಷಿಕರಿಗೆ ದೊರೆಯಬೇಕಾದ ಸಾಲದ 25% ಮಾತ್ರ ಸಹಕಾರಿ ಬೇಂಕುಗಳ ಮೂಲಕ ವಿತರಣೆಯಾಗುತ್ತದೆ. ಒಟ್ಟು ಅವಶ್ಯಕತೆಯ 25% ಶತಮಾನದಷ್ಟು ಗ್ರಾಮೀಣ ಬೇಂಕು ಮತ್ತು ಸಿಂಡಿಕೇಟ್ ಬೇಂಕಿನಿಂದ ಲಭಿಸುತ್ತಿದೆ.

2. ಮೀಯಪದವು ಸಹಕಾರಿ ಬೇಂಕು : ಸಾವಿರದ ತನಕ ಕೃಷಿ ಕುಟುಂಬಗಳು ವಾಸಿಸುತ್ತಿದ್ದು ಕೃಷಿ ಸಾಲಕ್ಕಾಗಿ ಸಹಕಾರಿ ಬೇಂಕು ಮತ್ತು ನೋರ್ತ್‌ಮಲಬಾರು ಗ್ರಾಮೀಣ ಬೇಂಕನ್ನು ಆಶ್ರಯಿಸಿದೆ. ಈ ಕೃಷಿ ಕುಟುಂಬಗಳಿಗೆ, 50,00000/- ಮಿಕ್ಕಿದ ಸಾಲ ಸೌಲಭ್ಯದ ಅವಶ್ಯಕತೆಯಿದೆ. ಈ ಅವಶ್ಯಕತೆಯನ್ನು ಸಂಪೂರ್ಣವಾಗಿ ಪೂರೈಸಲು ಈ ಬ್ಯಾಂಕಿನಿಂದ ಕಷ್ಟಕರವಾದುದು. ಕೃಷಿಕರಿಗೆ ಕೃಷಿ ಅವಶ್ಯಕತೆಗೆ ಸಾಲದ ಸೌಲಭ್ಯ 25% ಮಾತ್ರ ದೊರೆಯುವುದು. ಮತ್ತು ಬೇಂಕುಗಳ ಮೂಲಕ ವಿತರಣೆಯಾಗುವುದು. ಅವಶ್ಯಕತೆಯ ಒಂದು ಭಾಗವನ್ನು ನೋರ್ತುಮಲಬಾರು ಗ್ರಾಮೀಣ ಬೇಂಕು ಮಾತ್ರ ವಿತರಿಸುತ್ತದೆ.

3. ವರ್ಕಾಡಿ ಸೇವಾ ಸಹಕಾರಿ ಬೇಂಕು : 600ರ ತನಕ ಕೃಷಿ ಕುಟುಂಬಗಳು ವಾಸಿಸುತ್ತಿದ್ದು ಕೃಷಿ ಸಾಲಕ್ಕಾಗಿ ಸಹಕಾರಿ ಬೇಂಕು ವರ್ಕಾಡಿ ಮತ್ತು ಸಿಂಡಿಕೇಟು ಬೇಂಕು ವರ್ಕಾಡಿಯನ್ನು ಆಶ್ರಯಿಸಿವೆ. ಈ ಕೃಷಿ ಕುಟುಂಬಗಳ ಅವಶ್ಯಕತೆಗಾಗಿ 35,000/- ಮಿಕ್ಕಿದ ಸಾಲದ ಅವಶ್ಯಕತೆಯಿದೆ. ಈ ಅವಶ್ಯಕತೆಯನ್ನು ಸಂಪೂರ್ಣವಾಗಿ ಪೂರೈಸಲು ಸಹಕಾರಿ ಬೇಂಕಿನಿಂದ ಅಸಾಧ್ಯವಾದುದು. ಕೃಷಿಕರಿಗೆ ಕೃಷಿ ಯೋಜಜನೆಗೆ ಅವಶ್ಯಕತೆಯ 25% ಮಾತ್ರ ದೊರೆಯುವುದು. ಮತ್ತು ಬೇಂಕುಗಳ ಮೂಲಕ ವಿತರಣೆಯಾಗುವುದು ಅವಶ್ಯಕತೆಯ ಒಂದು ಭಾಗವನ್ನು ನೋರ್ತು ಮಲಬಾರು ಗ್ರಾಮೀಣ ಬೇಂಕು ಮಾತ್ರ ವಿತರಿಸುತ್ತಿದೆ.

1. ಕೃಷಿ ಸಾಲ ನೀಡುವ ಸಹಕಾರಿ ಸಂಘಗಳು

ಕ್ರಮ ಸಂಖ್ಯೆ	ಹೆಸರು	ಪ್ರವರ್ತನ ಆರಂಭಿಸಿದ ವರ್ಷ	ಪ್ರವರ್ತನ ಪರಿಧಿ	ವ್ಯಕ್ತಿಗಳ ಸಂಖ್ಯೆ	ಪಾಲು ಬಂಡವಾಳ	ಸಾಲಗಳು	ನಿಕ್ಷೇಪಗಳು	ಸಾಲಗಳು		ಪ್ರವರ್ತನ ಮೂಲ ಧನ	ಲಾಭವೋ ನಷ್ಟವೋ		ಉದ್ಯೋಗಸ್ಥರ ಸಂಖ್ಯೆ
								ಕೃಷಿಗೆ	ಕೃಷಿಯೇತರ		ಲಾಭ	ನಷ್ಟ	
1.	ಮಜಿಬೈಲ್ ಸಹಕಾರಿ ಸೇವಾ ಸಂಘ	1920	ಮಜಿಬೈಲ್ ಮೂಂಡಬೈಲ್ ಕಂಡಬಾರ್ ಕೂಳೂರು	1083	3,54,000/-	1,97,00000	1,29,0000/-	41,97,00/-	1,55,0000/-	2,10,0000/-		118334/-	6+1
2.	ಮೀಯಪದವು ಸಹಕಾರಿ ಬೇಂಕು	1920	ಮೀಂಜ ತಲೇಕ್ಕಳ	1684	3,40,000/-	48,31,000	30,94,000	38,8000/-	2496000/-	78,71,000/-		5,97,292/-	3
3.	ವರ್ಕಾಡಿ ಸರ್ವೀಸ್ ಕೋ. ಒಪರೇಟಿವ್ ಬೇಂಕ್ ವರ್ಕಾಡಿ	1917	ಕೋಳಿಯಾರು ಕಳಿಯೂರು	1007	5,12,000/-	3,89,200	62,10,000/-	20,6000/-	16,40000/-	1600000/-		62,593/-	4

ಬೀಡಿ ಕೆಲಸಗಾರರ ಸಹಕಾರಿ ಸಂಘ

ಕ್ರಮ ಸಂಖ್ಯೆ	ಸಂಘದ ಹೆಸರು	ಶಾಖೆಗಳು	ಸದಸ್ಯರ ಸಂಖ್ಯೆ	ಗಂಡು	ಹೆಣ್ಣು ಒಟ್ಟು
1	ಮಂಜೇಶ್ವರ ಬೀಡಿ ಸಹಕಾರಿ ಸಂಘ (ಮಂಜೇಶ್ವರ ಪಂಚಾಯತು)	ಕೊಡ್ಲಮೊಗರು	8	99	107
2		ಮಜಿಬೈಲು	5	130	135
3		ಕಡಂಬಾರ್	6	60	66
4		ಮೂಡಂಬೈಲು	9	70	79
5		ಉಪ್ಪಳ	5	110	115

ಕೈಗಾರಿಕಾ ರಂಗದಲ್ಲಿ ಕಾರ್ಯವೆಸಗುತ್ತಿರುವ ಸಹಕಾರೀ ಸಂಘಗಳ ಪಟ್ಟಿಯಲ್ಲಿ ಬೀಡಿ ಕೆಲಸಗಾರರ ಸಹಕಾರಿ ಸಂಘ ಹೊರತು ಬೇರೆ ಸಂಘಗಳಿಲ್ಲ. ಮೇಲಿನ ಪಟ್ಟಿಯಲ್ಲಿ ಸೂಚಿಸಿದಂತೆ ಮಂಜೇಶ್ವರ ಬೀಡಿ ಕೆಲಸಗಾರರ ಸಂಘದ 5 ಡಿಪೋಗಳಲ್ಲಿ ಒಟ್ಟು 502 ಬೀಡಿ ಕೆಲಸಗಾರರಿದ್ದು ಅವುಗಳಲ್ಲಿ 469 ಹೆಂಗಸರು ಹಾಗೂ 33 ಮಂದಿ ಗಂಡಸರು ಕೆಲಸ ಮಾಡಿಕೊಂಡಿರುತ್ತಾರೆ.

ಗೃಹ ನಿರ್ಮಾಣ ಸಮಸ್ಯೆಗಳು : ನಮ್ಮ ಪಂಚಾಯತಿನಲ್ಲಿ ಗೃಹನಿರ್ಮಾಣ ಸಹಕಾರಿ ಸಂಘಗಳು ಅಸ್ತಿತ್ವದಲ್ಲಿಲ್ಲ. ಗೃಹ ನಿರ್ಮಾಣ ಪದ್ಧತಿಗೆ ಸಾಲ ನೀಡುವ ಒಂದು ಸಹಕಾರಿ ಸಂಘವು ಕುಂಬಳೆ ಪಂಚಾಯತನ್ನು ಕೇಂದ್ರವಾಗಿರಿಸಿ ಪ್ರವರ್ತಿಸುತ್ತದೆ. ಈ ಸಂಘದ ಮೂಲಕ ಒಂದು ಸಣ್ಣ ವಿಭಾಗದ ಉಪಭೋಗದಾರರು ಸಾಲ ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಗೃಹ ನಿರ್ಮಾಣದ ಸಂಘದ ಹೊರತು ಈ ರಂಗಕ್ಕೆ ಸಾಲ ಸೌಲಭ್ಯ ದೊರೆಯುತಿರುವುದು ಹೌಸಿಂಗ್ ಬೋರ್ಡಿನ ಮೂಲಕ. ಗೃಹ ನಿರ್ಮಾಣ ಸಂಘಗಳು ಈ ಪಂಚಾಯತಿನ ಪರಿಧಿಯಲ್ಲಿಲ್ಲ. ಇನ್ನು ಗೃಹ ನಿರ್ಮಾಣಕ್ಕಾಗಿ ಸಾಲಸೌಲಭ್ಯಗಳನ್ನು ಒದಗಿಸುವ ಭೂ ಅಭಿವೃದ್ಧಿ ಬೇಂಕು (ಕಾಸರಗೋಡು) ಒಂದು ಸಣ್ಣ ಪರಿಧಿಯೊಳಗೆ ಸಾಲ ವಿತರಣೆ ಮಾಡುತ್ತದೆ. ಕಾಸರಗೋಡು ಜಿಲ್ಲಾ ಸಹಕಾರಿ ಬೇಂಕ್ ಈ ಪಂಚಾಯತಿನ ಪರಿಧಿಯಲ್ಲಿ ಗೃಹ ನಿರ್ಮಾಣಕ್ಕಾಗಿ ಸಾಲ ವಿತರಣೆ ಮಾಡುತ್ತಿದೆ. ಹೀಗಿದ್ದರೂ ಉಪಭೋಗದಾರರ ಅವಶ್ಯಕತೆಗಳನ್ನೂ ಪೂರೈಸಿಕೊಳ್ಳಲಿಕ್ಕಾಗಿ ಈ ಮೇಲಿನ ಎಲ್ಲಾ ಸಂಸ್ಥೆಯಿಂದ ಸಾಧ್ಯವಾಗುವುದಿಲ್ಲ ಎಂಬುದು ಸತ್ಯ.

ಸೇವಾ ಸಹಕಾರಿ ಬೇಂಕುಗಳ ಇಂದಿನ ಸ್ಥಿತಿಗತಿ ಮತ್ತು ಸಮಸ್ಯೆಗಳು

ಕೃಷಿ ಸಾಲಕ್ಕಾಗಿ ಸಹಕಾರಿ ಬೇಂಕುಗಳು ಜಿಲ್ಲಾ ಬೇಂಕನ್ನು ಆಶ್ರಯಿಸಿಕೊಂಡು ಕೃಷಿಕರಿಗೆ ಸಾಲಸೌಲಭ್ಯ ಒದಗಿಸುತ್ತವೆ.

ಸಾಕಷ್ಟು ಠೇವಣಿ ಸಂಗ್ರಹಿಸಿ ಸಹಕಾರಿ ಬೇಂಕುಗಳ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸಿಕೊಳ್ಳುವರೇ ಸಾಧ್ಯಾವಾಗುವುದಿಲ್ಲ. ಸಂಗ್ರಹಿಸಿದ ಠೇವಣಿಯನ್ನು ಕೃಷಿ ಕ್ಷೇತ್ರಕ್ಕೆ ಮಾತ್ರ ಸಾಲ ನೀಡುವುದು ಕಷ್ಟಕರವೆಂದೂ ಅಭಿಪ್ರಾಯ ಪಡಲಾಗಿದೆ. ಕಾರಣ ಕೃಷಿ ಸಾಲದ ಬಡ್ಡಿಯು ಠೇವಣಿ ಸಂಗ್ರಹದ ಬಡ್ಡಿಗಿಂತ ಕಡಿಮೆ ಇರುವುದು. ಉದಾ : ಕೃಷಿ ಸಾಲದ ಬಡ್ಡಿ ಹನ್ನೊದುವರೆ ಶತಮಾನಕ್ಕೆ ಮಿತಿ ನಿರ್ಣಯಿಸಿದ್ದರೆ ಠೇವಣಿಯ ಬಡ್ಡಿ ದರವು ಹದಿಮೂರು ಶತಮಾನಕ್ಕಿಂತಲೂ ಹೆಚ್ಚು.

(1) ಕೃಷಿ ಸಾಲವು ಸಕಾಲದಲ್ಲಿ ವಸೂಲಾಗದೆ ಹೋದರೆ ಠೇವಣಿಯ ಮರುಪಾವತಿಗೆ ಕಷ್ಟಸಾಧ್ಯವೆಂದು ಮನಗಂಡು ಠೇವಣಿಯ ಮೊತ್ತವನ್ನು ಕೃಷಿ ಸಾಲಕ್ಕೆ ವಿನಿಯೋಗಿಸಲು ಹಿಂದೇಟು ಹಾಕುತ್ತದೆ. ಜಿಲ್ಲಾ ಬೇಂಕಿನ ಕೃಷಿ ಸಾಲದ ಮೇಲೆ ನೀಡಬೇಕಾದ ಬಡ್ಡಿ ಮತ್ತು ಕೃಷಿಕರಿಂದ ಸಂಗ್ರಹಿಸ ಬೇಕಾದ ಬಡ್ಡಿಯ ದರಗಳ ಅಂತರ ಬಹಳ ಕಡಿಮೆ. ಈ ಅಂತರದಿಂದ ಬೇಂಕಿನ ಪ್ರವರ್ತನ ವೆಚ್ಚವನ್ನು ಭರಿಸುವುದೇ ಸಾಧ್ಯವಾಗುವುದಿಲ್ಲ.

ಕೃಷಿ ಸಾಲದ ಕೃಷಿಕರಿಗೆ ವಿತರಣೆಗೊಳಿಸುವ ಮೊಬಲಗಿನ ಮೇಲೆ ಸಹಕಾರಿ ಸಂಘಗಳಿಗೆ ಸಹಾಯಧನ ಲಭಿಸುವುದಿಲ್ಲ. ಹೀಗಾಗಿ ಈ ಪಂಚಾಯತಿನ ಪರಿಧಿಯಲ್ಲಿ ಕಾರ್ಯವೆಸಗುತ್ತಿರುವ ಸಹಕಾರಿ ಸಂಘಗಳ ಲಾಭದಾಯಕವಾಗಿ ನಡೆಯುವುದಿಲ್ಲ. ಬದಲಾಗಿ ವರ್ಷಗಳು ಕಳೆದಂತೆ ನಷ್ಟದ ಮೊತ್ತವನ್ನು ಹೆಚ್ಚಿಸುತ್ತದೆ.

ಸಾಧಾರಣ ಉತ್ತಮ ರೀತಿಯಲ್ಲಿ ಕಾರ್ಯವೆಸಗುತ್ತಿರುವ ಸೇವಾ ಸಹಕಾರಿ ಸಂಘವಾಗಿವೆ ಮಜಿಬೈಲು ಸೇವಾ ಸಹಕಾರಿ ಬೇಂಕ್. ಈ ಸಂಘವು ನಿರೀಕ್ಷಿಸಿದಷ್ಟು ಲಾಭದಲ್ಲಿ ನಡೆಯುವುದಿಲ್ಲ ಎಂಬುದು ತಿಳಿಯುತ್ತದೆ.

ವರ್ಕಾಡಿ ಸೇವಾ ಸಹಕಾರಿ ಬೇಂಕು ಈ ಪಂಚಾಯತಿನ ಕೃಷಿಕರಿಗೆ ಸಾಲ ವಿತರಣೆ ಮಾಡುತ್ತಿದ್ದು ಈ ಸಂಘವು ಲಾಭದಾಯಕವಾಗಿ ನಡೆಯದೆ ನಷ್ಟದ ಹಾದಿಯಲ್ಲಿ ಮುಂದುವರಿಯುತ್ತಿದೆ.

ಮೀಯಪದವು ಸೇವಾ ಸಹಕಾರಿ ಬೇಂಕು ಕೃಷಿಕರಿಗೆ ಸಾಲ ನೀಡುವ ಇನ್ನೊಂದು ಸಹಕಾರಿ ಸಂಸ್ಥೆಯಾಗಿರುತ್ತದೆ. ಈ ಬೇಂಕಿನ ಸ್ಥಿತಿಯೂ ಕೂಡ ಮೇಲೆ ವಿವರಿಸಿದ್ದಂತೆ ನಷ್ಟದ ಹಾದಿಯಲ್ಲೇ ಸಾಗುತ್ತಿದೆ. ನಷ್ಟಗಳನ್ನು ತುಂಬಿಸದೇ ವಿನಹ ಬೇಂಕುಗಳು ಮುಂದುವರಿಯುವುದು ಕಷ್ಟದ ವಿಷಯವಾಗಿದೆ. ಆದುದರಿಂದ ಬೇಂಕುಗಳ ನಷ್ಟಗಳನ್ನು ತುಂಬಿಸಲು ಬಡ್ಡಿ ರಹಿತ ದೀರ್ಘಕಾಲದ ಸಾಲವನ್ನೂ, ಮೂಲಧನವನ್ನೂ ಒದಗಿಸಬೇಕಾಗುತ್ತದೆ. ಕೃಷಿ ಸಾಲಗಳ ಮೇಲೆ ಸಹಕಾರಿ ಸಂಘಗಳಿಗೆ ಸಹಾಯಧನ ನೀಡಿ ಕೃಷಿರಂಗಕ್ಕೆ ಸಾಲ ನೀಡಲು ಪ್ರೋತ್ಸಾಹ ಒದಗಿಸಬೇಕು.

ಪಾಲು ಬಂಡವಾಳ ಮತ್ತು ಠೇವಣಿ ಸಂಗ್ರಹಣ ಇವುಗಳಿಂದ ಸಂಘಗಳ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸೆಕೊಳ್ಳುವರೇ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕು. ಮತ್ತು ಈ ಮೊತ್ತವನ್ನು ಲಾಭದಾಯಕವಾಗಿ ವಿನಿಯೋಗಿಸಬೇಕು. ಕೃಷಿ ಸಾಲಗಳಲ್ಲದೇ ಉಪಭೋಕ್ತರ ಸಾಲ, ಗೃಹ ನಿರ್ಮಾಣ ಸಾಲ ಇವುಗಳ ವಿತರಣೆಯ ಕಾರ್ಯಕ್ರಮವನ್ನು ಕೈಗೊಳ್ಳಬೇಕು.

ಭತ್ತದ ಕೃಷಿಯು ಲಾಭದಾಯಕವಲ್ಲದ ಕಾರಣ ಭತ್ತ ಬೆಳೆಯುವ ಪ್ರದೇಶಗಳು ವಾಣಿಜ್ಯ ಬೆಳೆಗಳ ತೋಟಗಳಾಗಿ ಮಾರ್ಪಾಟು ಹೊಂದುತ್ತದೆ. ಭತ್ತದ ಕೃಷಿಗೆ ಸರಕಾರದಿಂದ ಲಭಿಸುವ ಸಹಾಯಧನ ನಾಮಮಾತ್ರವಾಗಿದೆ. ಸಬ್ಸಿಡಿ ಮೊತ್ತವನ್ನು ಹೆಕ್ಟೇರಿಗೆ 2000 ರೂ.ದಂತೆ (ಎಕ್ರೆಗೆ ರೂ. 800ರಂತೆ) ಒದಗಿಸಬೇಕು. ಕೃಷಿ ಬೆಳೆಯನ್ನು ಸಂರಕ್ಷಿಸಲು ಉತ್ತಮ ತಳಿಯ ಬೀಜ, ಕೃತಕಗೊಬ್ಬರ, ಕೀಟನಾಶಿನಿ, ಪವರ್‌ಟಿಲ್ಲರ್ ಮೊದಲಾದ ಕೃಷಿ ಸಲಕರಣೆಗಳನ್ನು ಪ್ರೋತ್ಸಾಹ ಸಹಾಯಧನದೊಂದಿಗೆ ಲಭಿಸುವಂತಾಗಬೇಕು. ಇದಕ್ಕಾಗಿ ಪಾಡಶೇಖರಗಳನ್ನು ಕೇಂದ್ರೀಕರಿಸಿ ಗ್ರೂಪ್ ಫಾರ್ಮಿಂಗ್ ಸಹಕಾರ ಸಂಘಗಳನ್ನು ರೂಪೀಕರಿಸಬೇಕು. ಈ ಸಂಘಗಳ ಮೂಲಕ ಭತ್ತದ ಕೃಷಿಯನ್ನು ಲಭಿವೃದ್ಧಿಗೊಳಿಸುವ ಯೋಜನೆಗಳನ್ನು ತಯಾರಿಸಬೇಕು.

ಕ್ಷೀರೋತ್ಪಾದನ ರಂಗ

ಈ ಪಂಚಾಯತಿನ ಪರಿಧಿಯಲ್ಲಿ ಕ್ಷೀರ ಉತ್ಪಾದನಾ ಸಹಕಾರಿ ಸಂಘವು ಇಲ್ಲದ ಕಾರಣ ಎರಡು ಹಾಲು ಉತ್ಪಾದನ ಸಹಕಾರಿ ಸಂಘಗಳನ್ನು ಸ್ಥಾಪಿಸಿ ಹಾಲು ಉತ್ಪಾದನೆಗೆ ಪ್ರೋತ್ಸಾಹ ನೀಡಬೇಕು.

I,II,VII, VIII, IV ಎಂಬೀ ವಾರ್ಡುಗಳನ್ನು ಸೇರಿಸಿಕೊಂಡು ಒಂದು ಹಾಲು ಉತ್ಪಾದನ ಸಂಘವು III, V, VI, IX ಎಂಬೀ ವಾರ್ಡುಗಳನ್ನು ಸೇರಿಸಿಕೊಂಡು ಇನ್ನೊಂದು ಹಾಲು ಉತ್ಪಾದನಾ ಸಂಘವನ್ನು ಈ ಪಂಚಾಯತಿನ ಪರಿದಿಯಲ್ಲಿ ಸ್ಥಾಪಿಸಬೇಕು.

ಕೋಳಿ ಸಾಕಣೆ ಸಹಕಾರಿ ಸಂಘ : ನಮ್ಮ ಈ ಪ್ರದೇಶದಲ್ಲಿ ವಿತರಣೆಯಾಗುತ್ತಿರುವ ಮಾಂಸದ ಕೋಳಿ, ಮೊಟ್ಟೆ, ಅನ್ಯಸಂಸ್ಥಾನದಿಂದ ಖರೀದಿಸಿ ಇಲ್ಲಿ ಮಾರಲ್ಪಡುತ್ತದೆ. ಇದಕ್ಕಾಗಿ ಒಂದು ದೊಡ್ಡ ಮೊತ್ತದ ಆರ್ಥಿಕ ಸಂಪತ್ತನ್ನು ವಿನಿಯೋಗಿಸಿ ನೆರೆರಾಜ್ಯಗಳಿಗೆ ಕಳುಹಿಸಿ ಕೊಡಲಾಗುತ್ತಿದೆ. ಈ ಪಂಚಾಯತಿನ ಒಂದೆರೆಡು ಸ್ಥಳಗಳಲ್ಲಿ ಕೆಲವರು ಮಾಂಸಕ್ಕಾಗಿ ಕೋಳಿಸಾಕಣೆ ನಡೆಸುತ್ತಿದ್ದಾರೆ. ಕೋಳಿ ಸಾಕಣೆ ವ್ಯವಸ್ಥೆಗಳಲ್ಲಿ ತೊಡಗಲು ಆಸಕ್ತಿ ಉಳ್ಳವರನ್ನು ಸೇರಿಸಿಕೊಂಡು ನಮ್ಮ ಪಂಚಾಯತಿನ ಎಲ್ಲಾ ವಾರ್ಡುಗಳಲ್ಲಿ ಕೋಳಿ ಸಾಕಣಾ ಸಹಕಾರಿ ಸಂಘಗಳನ್ನು ಸ್ಥಾಪಿಸಿ ಈ ಸಂಘಗಳ ಮುಖಾಂತರ ಪಂಚಾಯತಿನ ಪರಿದಿಯಲ್ಲಿರುವ ಮನೆಗಳಲ್ಲಿ ಸಣ್ಣ ಕೋಳಿಸಾಕಣಾ ಯೂನಿಟ್‌ಗಳನ್ನು ಸ್ಥಾಪಿಸಬೇಕು. ಇದರ ಅಗತ್ಯವಿರುವ ಮೃಗಸಂರಕ್ಷಣಾ ಉದ್ಯೋಗಸ್ಥರ ಸೇವೆ ಮತ್ತು ಆರ್ಥಿಕ ಸಹಾಯ ಲಭಿಸುವಂತೆ ಮಾಡಬೇಕು.

ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಸಹಕಾರಿ ಸಂಘ : ಈ ಪಂಚಾಯತಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕೆಲಸ ಕೊಡಿಸುವಂತೆ ಮತ್ತು ಆ ವಿಭಾಗದ ಕ್ಷೇಮ ಕಾರ್ಯಗಳಿಗಾಗಿ ಒಂದು ಸೇವಾ ಸಹಕಾರಿ ಸಂಘವನ್ನು ಸ್ಥಾಪಿಸಬೇಕಾಗಿದೆ.

ದಿನಕೂಲಿ ಕೆಲಸಗಾರರ ಸಹಕಾರಿ ಸಂಘ : ಅಸಂಘಟಿತರಾದ ಸಾಕಷ್ಟು ಕೆಲಸಗಾರರು ಈ ಪಂಚಾಯತಿನ ವಿವಿಧ ವಾರ್ಡುಗಳಲ್ಲಿರುವರು. ಎಲ್ಲಾ ತರದ ಕೆಲಸಗಳನ್ನು ಮಾರ್ಗ, ಕೆರೆ, ಬಾವಿ ನಿರ್ಮಾಣ ಕೆಲಸ ಇತ್ಯಾದಿಗಳನ್ನು ಮಾಡಬಲ್ಲ ಕೆಲಸಗಾರರನ್ನು ಸೇರಿಸಿಕೊಂಡು ಕೆಲಸಗಾರರ ಗುತ್ತಿಗೆ ಸಹಕಾರಿ ಸಂಘ ನಿರ್ಮಿಸಿ ಪಂಚಾಯತಿನ ಮುಖಾಂತರವೂ ನಿರ್ಮಾಣ ಕಾರ್ಯಗಳನ್ನು ಮತ್ತು ಖಾಸಗೀ ಕಲಸಕಾರ್ಯಗಳನ್ನು ವಹಿಸಿ ಈ ವಿಭಾಗದ ಕಾರ್ಮಿಕರಿಗೆ ಸ್ಥಿರ ಕೆಲಸ ಕೊಡಿಸಲು ಸಾಧ್ಯವಾಗಬಹುದು.

ಗುಡಿ ಕೈಗಾರಿಕಾ ಕೆಲಸಗಾರರ ಸಂಘ : ಈ ಪಂಚಾಯತಿನಲ್ಲಿ ಗುಡಿ ಕೈಗಾರಿಕಾ ಕೆಲಸಗಳಾದ ಹಪ್ಪಳ, ಉಪ್ಪಿನಕಾಯಿ, ಸಂಡಿಗೆ, ಚಕ್ಕುಲಿ, ಹುರಿಯ ಅಕ್ಕಿ, ಮಸಾಲ ಹುಡಿ ತಯಾರಿಕೆ, ಬೇಕರಿ ವಸ್ತುಗಳು, ಸಿದ್ಧ ಉಡುಪುಗಳ ತಯಾರಿ, ಹಣ್ಣು ಹಂಪಲು ಸಂರಕ್ಷಣಾ ಘಟಕ ಇವುಗಳನ್ನು ಸಹಕಾರಿ ಸಂಘದ ಚಟುವಟಿಕೆಗಳಾಗಿ ಸೇರಿಸಿಕೊಂಡು ಅಧಿಕ ಸಂಖ್ಯೆಯ ಮಹಿಳೆಯರಿಗೆ ಸ್ವಯಂ ಉದ್ಯೋಗ ಒದಗಿಸಿಕೊಡಲು ಸಾಧ್ಯವಾಗುವುದು. ಗ್ರಾಮ ಪ್ರದೇಶಗಳಲ್ಲಿ ಆರ್ಥಿಕ, ಸಾಮೂಹಿಕ ಲಭಿವೃದ್ಧಿ ಕಾರ್ಯಗಳಲ್ಲಿ ನಿರ್ಣಾಯಕರ ಪಾತ್ರ ವಹಿಸಲು ಸಾಧ್ಯವಿರುವ ಕ್ಷೇತ್ರ ಎಂಬ ನೆಲೆಯಲ್ಲಿ ಸಹಕಾರಿ ವಿಭಾಗವನ್ನು ಶಕ್ತಿ ಪಡಿಸಿ ಕಾರ್ಯ ಪ್ರವರ್ತವಾಗಿರಿಸಲು ಚರ್ಚಿಸಿ ಮುಂಗಡಣೆ ಪ್ರಕಾರ ತೀರ್ಮಾನ ಕೈಗೊಳ್ಳಬೇಕಾಗಿದೆ.

ಜೇನು ಸಹಕಾರಿ ಸಂಘ : ಜೇನು ಕೃಷಿ ಲಭಿವೃದ್ಧಿ ಪಡಿಸಲು ಸಾಧ್ಯವಿರುವ ವಲಯವಾಗಿದೆ ಈ ಪ್ರದೇಶ. ಜೇನು ಕೃಷಿಯ ಸಹಕಾರಿ ಸಂಘವನ್ನು ನಿರ್ಮಿಸಿ ಜೇನು ಕೃಷಿಗೆ ತರಬೇತಿ ಮತ್ತು ಪ್ರೋತ್ಸಾಹ ನೀಡುವುದರೊಂದಿಗೆ ಎಲ್ಲಾ ವಾರ್ಡುಗಳಲ್ಲಿಯೂ ಈ ಕೃಷಿ ಲಭಿವೃದ್ಧಿ ಪಡಿಸಲು ಸಾಧ್ಯವಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ

ಮೀಂಜ ಪಂಚಾಯತಿನ ಒಟ್ಟು ಜನಸಂಖ್ಯೆಯ ಶೇಕಡಾ 7.2ರಷ್ಟು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಯ ಜನರಿದ್ದಾರೆ. ಇವರ ಒಟ್ಟು ಜನಸಂಖ್ಯೆ 1275 ಆಗಿರುತ್ತದೆ. ಇದರಲ್ಲಿ 7 ವಿಭಾಗದ ಬುಡಕಟ್ಟಿನ ಜನಾಂಗದವರು ಈ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ.

1. ನಲ್ಕೆದಾಯ
2. ಮೊಗೇರ
3. ಬಾಕುಡ
4. ಪನಿಕರು
5. ಬಾರಿಗ
6. ನಾಯ್ಕ
7. ಕೊರಗರು

ಇದರಲ್ಲಿ ಒಂದೊಂದು ಪಂಗಡದ ಜನರು ಒಂದೊಂದು ರೀತಿಯ ಕೆಲಸಗಳನ್ನು ಮಾಡುತ್ತಿದ್ದಾರೆ. ಪ್ರಾಚೀನ ಕಾಲದಿಂದಲೇ ನಲ್ಕೆದಾಯ ಸಮುದಾಯದವರು ವಂಶಪಾರಂಪರ್ಯವಾಗಿ ಬಂದಂತಹ ತಮ್ಮ ಕುಲಕಸುಬುಗಳಾದ ಕಂಗಿನ ಹಾಳೆಯಿಂದ ತಯಾರಿಸಲ್ಪಡುವ ಒಂದು ತರ ಟೋಪಿಯನ್ನು (ಮುಟ್ಟಾಳೆ) ತಯಾರಿಸುತ್ತಾರೆ. ಈ ಟೋಪಿಯು ಜನರ ತಲೆಗಳಿಗೆ ಮಳೆ ಬಿಸಿಲು ತಾಗದಂತೆಯೂ ಹೊರೆಯನ್ನು ಹೊರಲು ಅನುಕೂಲವಾಗುತ್ತದೆ. ಮಹಿಳೆಯರು ಕಡಲ ತೀರದಲ್ಲಿ ಬೆಳೆಯುವ ಒಂದು ತರದ ಮುಳ್ಳಿನ ಸೋಗೆಯ ಮುಳ್ಳನ್ನು ತೆಗೆದು ಅದರಿಂದ ಚಾಪೆಗಳನ್ನು ಮಾಡುತ್ತಾರೆ. ಭೂತಾರಾಧನೆಯಲ್ಲಿ ವಿಶೇಷ ರೀತಿಯ ಭಕ್ತಿಯುಳ್ಳವರಾದ ಇವರು ಪ್ರಾಚೀನ ಕಾಲದಿಂದಲೇ ಪ್ರಜೆಗಳು ನಂಬಿಕೊಂಡು ಬರುವಂತಹ ಕೆಲವು ವಿಶಿಷ್ಟ ದೈವಗಳ ಕೋಲಗಳನ್ನು ಕಡಿಮೆ ಖರ್ಚಿನ ಆದಾಯದಲ್ಲಿ ಕಟ್ಟಿ ಜನರ ಮನಸ್ಸನ್ನು ಆ ದೈವಗಳೆಡೆಗೆ ಆಕರ್ಷಿಸುತ್ತಾರೆ. ಅಲ್ಲದೆ ಜಾನಪದ ಕಲೆಗಳಾದ ಕನ್ಯಪು, ಆಟಿಕಳಂಜ, ಜೋಗಿ ಮುಂತಾದುಗಳನ್ನು ಕಟ್ಟಿಕೊಂಡು ಕೇಳಲು ಮಧುರವಾದ ಪಾಡ್ದನಗಳನ್ನು ಹಾಡಿಕೊಂಡು ಮನೆ ಮನೆಗಳಿಗೆ ಹೋಗುವ ಸಂಪ್ರದಾಯವನ್ನು ಈಗಲೂ ಆಚರಿಸಿಕೊಂಡು ಬರುತ್ತಿದ್ದಾರೆ. ಇವರಿಗೆ ದೈವದ ಕೋಲಗಳನ್ನು ಕಟ್ಟುವುದೇ ನಲ್ಕೆದಾಯ ಸಮುದಾಯದವರ ಪ್ರಧಾನ ಉದ್ಯೋಗ ಎಂಬಂತೆ ಅವರ ಕುಟುಂಬಗಳಿಗೆ ಪ್ರತ್ಯೇಕ ಕಾರ್ಯಪರಿದಿ ()ಗಳಿವೆ. ಇವರು ಹಾಡುವಂತಹ ಪಾಡ್ದನಗಳಿಗೆ ಯಾವುದೇ ರೀತಿಯ ಲಿಪಿಗಳಿಲ್ಲ.

2. ಪ್ರಾಚೀನ ಕಾಲದ ವೈದ್ಯಕೀಯ ಪದ್ಧತಿಯನ್ನು ಇವರು ಅಳವಡಿಸಿಕೊಂಡಿದ್ದಾರೆ. ಪನಿಕರು ಬುಡಕಟ್ಟಿನ ಜನಾಂಗದವರು ಮಲೆಯಾಳ ಶೈಲಿಯಲ್ಲಿ ಕೆಲವು ವಿಶಿಷ್ಟ ರೀತಿಯ ದೈವದ ಕೋಲಗಳನ್ನು ಅದಕ್ಕೆ ಸಂಬಂಧಿಸಿದ ಚರಿತ್ರೆಯನ್ನು ಹೇಳಿಕಂಡು ಭೂತ ಸೇವೆಯನ್ನು ಮಾಡುತ್ತಾರೆ. ಕೆಲವರು ನಾಡವೈದ್ಯಕೀಯವನ್ನು ಮಾಡುತ್ತಾರೆ. ಇತರ ಪರಿಶಿಷ್ಟ ಜಾತಿ, ವರ್ಗದ ಬುಡಕಟ್ಟಿನ ಜನರು ಕೂಲಿ ಕೆಲಸಗಳನ್ನು ಮಾಡಿ ತಮ್ಮ ಜೀವನ ಸಾಗಿಸುತ್ತಾರೆ.

ಈ ಪಂಚಾಯತಿನ ಒಟ್ಟು 12 ಕಾಲನಿಗಳಲ್ಲಿ ಇವರು ವಾಸ ಮಾಡುತ್ತಾರೆ. ತೀರಾ ಹಿಂದುಳಿದವರೂ, ಬಡವರೂ, ಬಡತನ ರೇಖೆಗಿಂತ ಕೆಳಗೆ. ವಾಸಿಸುವವರೇ ಇದರಲ್ಲಿ ಅಧಿಕ ಸಂಖ್ಯೆಯಲ್ಲಿರುವವರು. ಇವರಲ್ಲಿ ಕೆಲವರು ವಿದ್ಯೆ ಪಡೆದು ಉನ್ನತ ಪದವಿಯಲ್ಲಿದ್ದರೂ, ಕೀಳು ಮಟ್ಟದವರನ್ನು ಅವರು ಕೂಡ ಕೀಳಾಗಿ ಕಾಣುತ್ತಾರೆ.

ವಿದ್ಯಾಭ್ಯಾಸ

ವಿದ್ಯಾಭ್ಯಾಸ ಮಟ್ಟದಲ್ಲಿ ಈ ಜನಾಂಗದವರು ತುಂಬಾ ಹಿಂದುಳಿದವರಾಗಿದ್ದಾರೆ. ಹಿಂದುಳಿಯಲು ಮುಖ್ಯ ಕಾರಣವೇನೆಂದರೆ ಇವರು ತಮ್ಮ ಮಕ್ಕಳನ್ನು ವಿದ್ಯಾರ್ಜನೆಗೆ ಕಳುಹಿಸಲು ಪ್ರೋತ್ಸಾಹ ನೀಡುವುದಿಲ್ಲ. ಹಿಂದಿನ ಕಾಲದಲ್ಲಿ ಈ ವರ್ಗದವರ ಮಕ್ಕಳನ್ನು ಭೂಮಾಲಕರು ತಮ್ಮ ತೊತ್ತಾಗಿ (ದಾಸಿ) ಇಟ್ಟುಕೊಂಡಿದ್ದರು. ಇವರ ಮಕ್ಕಳನ್ನು ತಮ್ಮ ಮನೆಯ ದನಕರುಗಳನ್ನು ಮೇಯಿಸಲು ನೇಮಿಸುತ್ತಿದ್ದರು. ಇವರು ಮೊದಲು ಸಮತಲ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು. ವಿದ್ಯಾಭ್ಯಾಸದ ಕೊರತೆಯಿಂದಾಗಿ ಮುಂದೆ ಬೆಟ್ಟ ಗುಡ್ಡೆಗಳಲ್ಲಿ ಸೋಗೆಯ ಮನೆಗಳನ್ನು ನಿರ್ಮಿಸಿ ಅದರಲ್ಲಿ ವಾಸಿಸುತ್ತಿದ್ದರು. ಈ ರೀತಿಯ ದಾಸ್ಯ ಜೀನದಿಂದಾಗಿ ಅವರ ವಂಶದಲ್ಲಿ ಹುಟ್ಟಿ ಬೆಳೆದಂತಹ ಮಕ್ಕಳಿಗೆ ವಿದ್ಯಾಭ್ಯಾಸದ ಗಂಧಗಾಳಿಯೂ ಇಲ್ಲದಂತಾಗಿತ್ತು.

ಇವರ ಶಿಕ್ಷಣದ ಸಂಖ್ಯೆ ಈ ಕೆಳಗಿನ ಪಟ್ಟಿಯಲ್ಲಿದೆ.

Section	Children	percentage
L.P. Section	173	8%
U.P. Section	150	10.8%
High School	33	7.2%
Total	356	8.9%

3. ಇವರ ವಿದ್ಯಾಭ್ಯಾಸದ ಮಟ್ಟ ಹೆಚ್ಚಿಸಲು ಸರಕಾರ ಶೀಘ್ರ ಕ್ರಮ ಕೈಗೊಳ್ಳಬೇಕಾಗಿದೆ. ಇವರಿಗೆ ಎಲ್ಲಾ ರೀತಿಯ ಪ್ರೋತ್ಸಾಹ ನೀಡುವುದಲ್ಲದೇ ಅವರ ಹೆತ್ತವರ ಮನಸ್ಸನ್ನು ಪರಿವರ್ತನೆಗೊಳಿಸಿದ್ದಲ್ಲಿ ಮಾತ್ರ ಮುಂದಕ್ಕೆ ವಿದ್ಯಾವಂತ ಕುಟುಂಬವಾದೀತು.

ಮೀಂಜ ಪಂಚಾಯತಿನಲ್ಲಿ ಈ ವರ್ಗದವರು ಆರೋಗ್ಯದ ಬಗ್ಗೆ ವಿಶೇಷ ಗಮನ ಹರಿಸುವುದಿಲ್ಲ. ಇವರು ಅವರದ್ದೇ ಆದ ಸಾಂಪ್ರದಾಯಿಕ ರೀತಿಯನ್ನೇ ಅನುಸರಿಸುವರೇ ಹೊರತು ಉತ್ತಮ ಔಷಧಗಳ ಬಳಕೆಯನ್ನು ಮಾಡುವುದಿಲ್ಲ ಮತ್ತು ಯೋಗ್ಯ ಡಾಕ್ಟರರ ಸಲಹೆ ಪಡೆಯುವಲ್ಲಿ ಉತ್ಸಾಹತೋರುವುದಿಲ್ಲ. ಇವರ ಆರೋಗ್ಯ ಕ್ರಮವನ್ನು ಉತ್ತಮ ಪಡಿಸಲು ಪಂಚಾಯತು ತುಂಬಾ ಕಾರ್ಯಗಳನ್ನು ಮಾಡಬೇಕಾಗಿದೆ. ಕುಡಿತ ಮೊದಲಾದ ದುಶ್ಚಟಗಳು, ಇವರ ಆರ್ಥಿಕ ದುಃಸ್ಥಿತಿಗೆ ಒಂದು ಕಾರಣವಾಗಿದೆ. ಇದರಿಂದಾಗಿ ಅವರಿಗೆ ಕ್ಷಯ ಮೊದಲಾದ ಮಾರಕ ರೋಗಗಳಿಂದ ಪೀಡಿತರಾಗಿದ್ದಾರೆ.

ವಸತಿ

ಹಿಂದಿನ ಕಾಲದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೇ ಸರಿಯಾಗಿ ಉಳಕೊಳ್ಳಲು ಅವರದೇ ಆದ ಸ್ವಂತ ಸ್ಥಳಗಳಿರಲಿಲ್ಲ. ಆವಾಗ ಅವರಿಗೆ ಸರಿಯಾದ ವಸತಿ ಗೃಹಗಳು ಇರಲಿಲ್ಲ. ಈಗ ಕೃಷಿ ಯೋಗ್ಯವಲ್ಲದ ಸ್ಥಳವಾದರೂ ಅತ್ಯಲ್ಪ ಜನರಿಗೆ ದೊರಕಿರುತ್ತದೆ. ಅವರಲ್ಲಿ ತಮ್ಮದೇ ಆದ ದುಡಿಮೆಯಿಂದ ವಸತಿ ನಿರ್ಮಿಸಲು ಸಾಧ್ಯವಾಗದವರೂ ಇದ್ದಾರೆ. ಸರಕಾರ ಈಗಿನ ನಿಯಮಾನುಸಾರವಾಗಿ ಕೆಲವರಿಗಾದರೂ ವಸತಿ ನಿರ್ಮಿಸಿ ಕೊಟ್ಟಿದೆ. ಇನ್ನೂ ಕೂಡ ಅತೀ ಹೆಚ್ಚಿನ ಜನರಿಗೆ ಇದರ ಅವಶ್ಯಕತೆ ಅಗತ್ಯವಿದೆ. ಈ ಗ್ರಾಮ ಪಂಚಾಯತಿನಲ್ಲಿ 12 ಕಾಲನಿಗಳಿವೆ. ಆದರೂ ಈ ಕಾಲನಿಗಳಲ್ಲಿ ಈಗಲೂ ಯಾವುದೇ ಸೌಲಭ್ಯಗಳಿಲ್ಲದೇ ಕಲನಿವಾಸಿಗಳು ನರಕಯಾತನೆ ಅನುಭವಿಸುತ್ತಾರೆ. ಅವರಿಗೆ ಕುಡಿಯಲು ಶುದ್ಧನೀರು ಮತ್ತು ಶುಚಿತ್ವ ಕಾಪಾಡಲು ಯೋಗ್ಯ ಕ್ರಮಗಳನ್ನು ಮಾಡಿ ಕೂಡಲೇ ಇವರಿಗೆ ಇಲ್ಲಿಂದ ವಿಮೋಚನೆ ಲಭಿಸಲು ಸರಕಾರ ಸಹಾಯ ಮಾಡಬೇಕು.

ಸಮಸ್ಯೆಗಳು

1. ಕಾಲನಿಗಳಲ್ಲಿ ಮೂಲಭೂತ ಸೌಕರ್ಯಗಳಿರುವ ಕೊರತೆಗಳು. ನೀರು, ಶುದ್ಧವಾಯು, ಶುಚಿತ್ವ, ಬಡತನಗಳಿಂದ ಕಾಡುತ್ತಿದೆ.
2. ಶಿಕ್ಷಣ ರಂಗದಲ್ಲಿ ಹಿಂದುಳಿದ ಸ್ಥಿತಿ, ಇವರಿಗೆ ಯೋಗ್ಯ ಶಿಕ್ಷಣ ಲಭಿಸುವುದಿಲ್ಲ ಮತ್ತು ವಿದ್ಯೆಗೆ ಪ್ರೋತ್ಸಾಹ ನೀಡುವುದಿಲ್ಲ.
3. ನೌಕರರ ಸಂಖ್ಯೆ ಕಡಿಮೆ. ಇವರು ತಮ್ಮ ಕುಲಕಸುಬನ್ನೇ ಮಾಡುತ್ತಾರೆ ವಿನಹ ಇತರ ಉದ್ಯೋಗಕ್ಕೆ ಹೋಗುವುದಿಲ್ಲ.
4. ಅಂಧ ವಿಶ್ವಾಸ, ಅನಾಚಾರದಿಂದ ಮುಕ್ತಿ ಹೊಂದಿಲ್ಲ.
5. ಮೇಲು-ಕೀಳು ಭಾವನೆ ಈಗಲೂ ಅಸ್ತಿತ್ವದಲ್ಲಿದೆ. ಇದರಿಂದಾಗಿ ಯೋಗ್ಯ ಸೌಲಭ್ಯವನ್ನು ಗಳಿಸುವಲ್ಲಿ ಯಶಸ್ವಿಯಾಗುವುದಿಲ್ಲ.
6. ಅರ್ಹವಾದ ಸೌಲಭ್ಯವನ್ನು ದೊರಕಿಸಿ ಕೊಡುವುದರಲ್ಲಿರುವ ತಡೆಗಳು ಮತ್ತು ಯೋಗ್ಯಕ್ರಮ ಜನರಿಗೆ ಮನದಟ್ಟು ಮಾಡುವಲ್ಲಿ ವಿಫಲ.
7. ಸಹಾಯ ಸೌಲಭ್ಯಗಳು ಮಧ್ಯವರ್ತಿಗಳ ಪಾಲಾಗಿ, ಅದರ ಯಥಾರ್ಥ ಲಾಭವೂ ಅವರಿಗೆ ಲಭಿಸದೆ ಮಧ್ಯವರ್ತಿಗಳ ಕೈಗೆ ಹೋಗುವುದು.

ಇವುಗಳನ್ನು ತಡೆಗಟ್ಟಲು ಈ ಮುಂದಿನ ಸಾಧ್ಯತೆಗಳನ್ನು ಮಾಡಬಹುದು.

ಸಾಧ್ಯತೆಗಳು

1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ವಾಸಿಸಲು ಯೋಗ್ಯವಾದ ಮನೆಗಳನ್ನು ನಿರ್ಮಿಸುವುದು.
2. ಶೈಕ್ಷಣಿಕ ಸೌಲಭ್ಯಗಳನ್ನು ಸೂಕ್ತ ಕ್ರಮದಲ್ಲಿ, ಕ್ಲಪ್ತ ಸಮಯದಲ್ಲಿ ಒದಗಿಸುವುದರಿಂದ ಅವರನ್ನು ವಿದ್ಯಾವಂತರನ್ನಾಗಿ ಮಾಡಬಹುದು.
3. ಮೂಡಂಬೈಲಿನ ಚಿಗ್ರುಪಾದೆ, ಕೋಳಿಯೂರಿನ ಬಟ್ರಮೂಲೆ, ಕಡಂಬಾರು ಶಾಲೆ ಬಳಿ, ಹಾಗೂ ದೇವಸ್ಥಾನದ ಬಳಿ, ಕಳಿಯೂರಿನ

ಕೋರಿಕ್ಕಾರ್, ಮೂಡಂಬೈಲಿನ ಬೇಳ, ಮುಜಿಕೆಲ್, ಗುಂಡಿಬೈಲಿನಲ್ಲಿ ಉತ್ತಮ ಸೌಕರ್ಯವಿರುವ ಕಾಲನಿಗಳ ನಿರ್ಮಾಣ.

4. ಪ್ರತೀ ಕಾಲನಿಗೆ ಆರೋಗ್ಯ ಇಲಾಖೆಯಿಂದ ತಪಾಸಣಾ ಶಿಬಿರಗಳನ್ನು ಏರ್ಪಡಿಸುವುದು.
5. ಸರಕಾರದಿಂದ ಲಭಿಸುವ ಸರ್ವ ಸವಲತ್ತುಗಳನ್ನು ಸಕಾಲಕ್ಕೆ ಯೋಗ್ಯರೀತಿಯಲ್ಲಿ ದೊರಕಿಸುವುದು.
6. ಭೂದಾಖಲೆ ಪತ್ರ ಕೂಡಲೇ ಒದಗಿಸುವುದು.
7. I. H. D. P ಕಾಲನಿಗೆ ಯೋಗ್ಯ ಸೌಕರ್ಯಗಳನ್ನು ಒದಗಿಸುವುದು.
8. ವಿದ್ಯಾವಂತರಾದ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಸ್ವ-ಉದ್ಯೋಗದಲ್ಲಿ ತೊಡಗಲು ತರಬೇತಿಯನ್ನು ನೀಡುವುದು.
9. ಎಲ್ಲಾ ಕಾಲೊನಿಗಳಿಗೆ ಕುಡಿಯುವ ನೀರು ಮತ್ತು ವಿದ್ಯುತ್ ಸೌಕರ್ಯ ಒದಗಿಸುವುದು.
10. ವರಮಾನ ಹೆಚ್ಚಿಸಲು ಕುಟುಂಬ ಮಟ್ಟದ ಸ್ಕೀಂಗಳು.
11. ಪ್ರಾದೇಶಿಕ ಹಿನ್ನಲೆ ಸೌಕರ್ಯ ಹೆಚ್ಚಿಸಲು ಅಗತ್ಯವಾದ ನೀರಾವರಿ, ಗ್ರಾಮೀಣ ವಿದ್ಯುತ್ ಸಂಪರ್ಕ, ಮಹಿಳಾ ಸಂರಕ್ಷಣೆ, ಇತ್ಯಾದಿಗಳಿಗೆ ಸ್ಕೀಂಗಳು.
12. ಬಡತನ ನಿವಾರಣಾ ಕಾರ್ಯಕ್ರಮಗಳು
13. ಪರಿಶಿಷ್ಟ ಜಾತಿ ಸಹಕಾರೀ ಸಂಘ ನೇಮಕ
14. ಈ ಪ್ರದೇಶದಲ್ಲಿ ವಾಸಿಸುವ ನರ್ಸರಿ ಸಮುದಾಯವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕು.
15. ಕೋಳಿಯೂರು ಗ್ರಾಮದಲ್ಲಿ ವಾಸಿಸುವ ಸೇರಿಗಾರರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕು.

4338
INSTITUTE OF LOCAL ADMINISTRATION ★ KERALA ★ THRISSUR-680 581 LIBRARY

ಸಂಪನ್ಮೂಲ ಸಂಗ್ರಹ

ನಮ್ಮ ಮೀಂಜ ಪಂಚಾಯತು ಎರಡನೇ ಗ್ರೇಡು ಪಂಚಾಯತು ಆಗಿರುತ್ತದೆ. ಈ ಪಂಚಾಯತ್ತಿಗೊಳಪಟ್ಟ ಹೆಚ್ಚಿನವರು ಬಡವರಾಗಿರುತ್ತಾರೆ. ನಮ್ಮ ಪಂಚಾಯತ್ತಿನ ಸಮಸ್ಯೆಗಳಲ್ಲಿ ನಿರುದ್ಯೋಗವೂ ಒಂದಾಗಿರುತ್ತದೆ. ಹೆಚ್ಚಾಗಿ ಕೃಷಿಯನ್ನು ಅವಲಂಭಿಸಿರುತ್ತಾರೆ. ಪ್ರಾಕೃತಿಕ ತೊಂದರೆಗಳಾದ ಅನಾವೃಷ್ಟಿ, ಅತಿವೃಷ್ಟಿಯಿಂದ ಕೃಷಿ ಉತ್ಪಾದನೆ ಕುಂಠಿತವಾಗಿರುತ್ತದೆ. ಕೃಷಿ ಉತ್ಪಾದನೆಗಳ ಧಾರಣೆಗಳಲ್ಲಿ ಇಳಿತವೂ ಆರ್ಥಿಕ ಸಂಕಷ್ಟಕ್ಕೆ ಕಾರಣವಾಗಿದೆ. ಈ ಪಂಚಾಯತಿನಲ್ಲಿ ಯಾವುದೇ ಕೈಗಾರಿಕೆ ಇಲ್ಲ.

ನಮ್ಮ ಪಂಚಾಯತಿನ ವರಮಾನ ಮತ್ತು ವೆಚ್ಚಗಳ ತಖ್ತೆಯನ್ನು ಕೆಳಗೆ ಕೊಡಲಾಗಿದೆ.

ವರಮಾನ

ಕ್ರ.ಸಂ.	ವರಮಾನ	1993-94	1994-95	1995-96
1	ತೆರಿಗೆ ಮತ್ತು ದರಗಳು	3,39,005-60	2,80,126-15	2,44,410-35
2	ಪ್ರತ್ಯೇಕ ನಿಯಮಾನುಸಾರ ಲಭಿಸಿದ ಹಣ	1,060-00	2,844-00	729-00
3	ಪಂಚಾಯತ್ ಫೀಸ್	4,846-00	4,892-95	5,587-00
4	ಸರಕಾರದ ಸಹಾಯಧನ	1,48,547-00	2,05,759-00	3,79,355-00
5	ಇನ್ನಿತರ ವರಮಾನ	99,981-40	3,781-70	61,084-30
6	ಅನ್‌ಟೈಡ್ ಫಂಡ್	2,54,000-00	3,55,700-00	3,69,140-00
7	ಡಿಪೋಸಿಟ್ ವಾಪಸ್ಸು ಪಡೆದದ್ದು	25,000-00	1,00,000-00	1,25,000-00
8	ಒಟ್ಟು	8,72,440-00	9,53,103-80	11,85,305-60
9	ಜವಾಹರ್ ರೋಜ್‌ಗಾರ್ ಯೋಜನೆ	4,01,319-00	3,55,268-00	3,66,473-00

ವೆಚ್ಚ

ಕ್ರ.ಸಂ.	ಖರ್ಚು	1993-1994	1994-95	1995-96
1	ಪಂಚಾಯತ್ ಮೇಲ್ನೋಟ	296069-70	4,55,892-50	3,64,756-00
2	ಸಾರ್ವಜನಿಕ ಕೆಲಸಗಳು	5,90,129-50	3,62,988-00	4,00,269-00
3	ಕುಡಿಯುವ ನೀರು	--	1,847-00	14,168-00
4	ವಿದ್ಯಾಭ್ಯಾಸ	2,251-00	2,300-00	4,904-00
5	ಆರೋಗ್ಯ	10,766-00	18,810-00	19,505-00
6	ಸಾಮೂಹಿಕ ಸೇವೆ	3,650-00	15,180-00	3,150-00
7	ಪಂಚಾಯತಿನ ವಸ್ತುಗಳಿಂದ ಬಂದ ಆದಾಯ	1,629-00	1,525-00	13,624-00
8	ಭಂಡವಾಳ ಲೆಕ್ಕ	100-00	--	1,25,000-00
9	ಇನ್ನಿತರ ಖರ್ಚು	64,405-20	76,935-00	38,568-25
	Total	9,69,000-40	9,35,478-00	9,83,944-25
	ಜವಾಹರ್ ರೋಜ್‌ಗಾರ್ ಯೋಜನೆಯ ಕೆಲಸಗಳು	4,01,319-00	3,55,268-00	3,66,473-00

ಬ್ಯಾಂಕುಗಳಲ್ಲಿ ನಮ್ಮ ಪಂಚಾಯತಿನ ನಿಕ್ಷೇಪ ಮತ್ತು ಸಾಲದ ತಖ್ತೆ

ಬ್ಯಾಂಕು	ನಿಕ್ಷೇಪ	ಸಾಲ
ಮಜಿಬೈಲು Co-op ಬ್ಯಾಂಕು	50,000	Nill
ವರ್ಕಾಡಿ C0-op ಬ್ಯಾಂಕು	50,000	"
ಮೀಯಪದವು Co-op	25,000	"

ಸಮಸ್ಯೆಗಳು

ಪ್ರಕೃತ ಈ ಪಂಚಾಯತು ಎದುರಿಸುವ ಏಕೈಕ ಸಮಸ್ಯೆ ಕೇವಲ ಆರ್ಥಿಕ ಸಮಸ್ಯೆಯಾಗಿರುತ್ತದೆ.

ಬಸ್ಟೇಂಡಿನಲ್ಲಿ ವ್ಯಾಪಾರ ಕಟ್ಟಡ ಇದ್ದರೂ ಬಾಡಿಗೆಗೆ ಕೊಡಲಿಲ್ಲ.

ಪರಿಹಾರ ನಿರ್ದೇಶನಗಳು

1. ಕೈಗಾರಿಕೆಗಳಿಗೆ ಪ್ರೋತ್ಸಾಹ ಮತ್ತು ತೆರಿಗೆ ಸಂಗ್ರಹಣೆ
2. ಕೃಷಿಯೋಗ್ಯ ಪರಂಬೋಕು ಸ್ಥಳಗಳನ್ನು ಲೀಸ್‌ಗೆ ಕೊಡುವುದು.
3. ಮೀನು ಮಾರ್ಕೆಟ್ ಮತ್ತು ವಾರದ ಸಂತೆಯನ್ನು ಸ್ಥಾಪಿಸಿ ತೆರಿಗೆ ಸಂಗ್ರಹ
4. ಕೆಂಪು ಕಲ್ಲು ಕಡಿಯುವ ಕೋರೆಯುವವರಿಂದ ತೆರಿಗೆ ಸಂಗ್ರಹ
5. ಪಂಚಾಯತು ಉದ್ಯೋಗಸ್ಥರಿಗೆ ಸಿಗುವ ಸಂಬಳವನ್ನು ಸರಕಾರವೇ ಬರಿಸಬೇಕು.
6. ಶ್ರಮದಾನಕ್ಕೆ ಪ್ರೋತ್ಸಾಹ
7. ಸಾರ್ವಜನಿಕ ದೇಣಿಗೆ ಸಂಗ್ರಹ
8. ಕಾಂಪ್ಲೆಕ್ಸ್ ನಿರ್ಮಿಸಿ ಬಾಡಿಗೆ ಸಂಗ್ರಹ
9. ಬಹುಜನ ಸಂಘಟನೆ ಮೂಲಕ ಶ್ರಮದಾನ
10. ಭೂ ದಾನಿಗಳಿಂದ ಭೂಮಿಗಳನ್ನು ಪಡೆಯುವುದು.
11. ಸಂವಿಧಾನ ಪ್ರಕಾರ ಸರಿಯಾದ ರೀತಿಯಲ್ಲಿ ಕಟ್ಟಡ, ವೃತ್ತಿ, ವಾಣಿಜ್ಯ ತೆರಿಗೆಗಳನ್ನು ಕ್ಲಪ್ತ ಸಮಯದಲ್ಲಿ ವಸೂಲು ಮಾಡುವುದು.
12. ಪರಂಬೋಕು ಸ್ಥಳಗಳಲ್ಲಿರುವ ಮರಗಳ ಫಲಗಳನ್ನು ಏಲಂ ಮಾಡುವುದರ ಮೂಲಕ ಸಂಪನ್ಮೂಲ ಸಂಗ್ರಹ
13. ಶ್ರೀಮಂತರಿಂದ ದತ್ತಿ ಸಂಗ್ರಹ

ಉಪಸಂಹಾರ

ಪ್ರಸ್ತುತ ಜಾರಿಯಲ್ಲಿರುವ ಯೋಜನೆಗಳು ಜನಸಾಮಾನ್ಯರ ಪ್ರಾಥಮಿಕ ಅವಶ್ಯಕತೆಗಳನ್ನು ಸರಕಾರ ಗ್ರಹಿಸಿದಷ್ಟರ ಮಟ್ಟಿಗೆ ಜಯಪ್ರದಗೊಳಿಸಲಾಗಲಿಲ್ಲವೆಂಬ ದೃಷ್ಟಿಯಿಂದ 9ನೇ ಯೋಜನೆಯ ತಯಾರಿಯಲ್ಲಿ ಸ್ವಲ್ಪ ಬದಲಾವಣೆಯನ್ನು ತಂದಿರುತ್ತದೆ. ಈ ಮೊದಲು ತಯಾರಾದ ಅಥವಾ ಜಾರಿಯಾದ ಎಲ್ಲಾ ಯೋಜನೆಗಳು ಕೇಂದ್ರದಿಂದಲೇ ತಯಾರಾಗಿ ರಾಜ್ಯ ಮಟ್ಟದಿಂದ ಜಿಲ್ಲಾಮಟ್ಟಕ್ಕೆ ಬೋಕ್ಲ್ಗೆ ನಂತರ ಪಂಚಾಯತು ಮಟ್ಟಕ್ಕೆ ಬರುತ್ತಿತ್ತು. ಇದು ಕೇಂದ್ರೀಕೃತ ಯೋಜನೆಯಾಗಿತ್ತು. ಆದರೆ ಈಗ ತಯಾರಿಸಿದ ಯೋಜನೆಯು ವಿಕೇಂದ್ರಿಕೃತ ಯೋಜನೆಯಾಗಿದೆ. ವಿಕೇಂದ್ರಿಕೃತ ಯೋಜನೆ ಎಂದರೆ ಎಲ್ಲಾ ವಿಷಯಗಳ ಕುರಿತು ಕೆಳಗಿನ ಹಂತದಲ್ಲೇ ತೀರ್ಮಾನ ಕೈಗೊಳ್ಳುವುದು ಎಂದರ್ಥವಲ್ಲಯ ವಿದ್ಯುತ್, ಬೃಹತ್ ಕೈಗಾರಿಕೆ, ಬೃಹತ್ ಜಲ ವಿದ್ಯುತ್ ಯೋಜನೆ ಮುಂತಾದವುಗಳ ಕುರಿತಾದ ಯೋಜನೆಗಳನ್ನು ಪ್ರಾಂತ್ಯ ಮಟ್ಟದಲ್ಲಿ ಮಾತ್ರ ರೂಪೀಕರಿಸಲು ಸಾಧ್ಯ. ಇತರ ಹಲವು ವಲಯಗಳ ಕುರಿತು ಕೆಳಗಿನ ಹಂತಗಳಲ್ಲಿ ತೀರ್ಮಾನ ಕೈಗೊಳ್ಳಲಾಗುವುದು. ಹೀಗೆ ಒಂದೇ ವೇಳೆಯಲ್ಲಿ ಹಲವು ಹಂತಗಳಾಗಿ ಅಭಿವೃದ್ಧಿ ಯೋಜನೆಗಳನ್ನು ರೂಪೀಕರಿಸಿ ಅವುಗಳನ್ನು ಕ್ರೋಢೀಕರಿಸಿ ಅಭಿವೃದ್ಧಿ ಯೋಜನೆಗೆ ರೂಪರೇಖೆಯನ್ನೀಡಲಾಗುವುದು.

ಗ್ರಾಮ ಸಭೆಗಳಲ್ಲಿ ಮೂಡಿಬಂದ ಸಮಸ್ಯೆಗಳು ಹಾಗೂ ನಿರ್ದೇಶನಗಳನ್ನು ಆಧಾರವಾಗಿ ಇಟ್ಟುಕೊಂಡು ಈ ಪಂಚಾಯತಿನ ಪರಿಧಿಗೆ ವ್ಯಾಪ್ತವಾಗಿರುವ ಭೂಪ್ರಕೃತಿ, ಜನ ಪ್ರಗತಿ ಹಾಗೂ ಜಲ ಪ್ರಕೃತಿಯನ್ನು ಉಪಯೋಗಿಸಿಕೊಂಡು ಈ ಪಂಚಾಯತಿನ ಸಮಗ್ರ ಅಭಿವೃದ್ಧಿ ಯೋಜನೆಯ ವರದಿಯನ್ನು ರೂಪಿಸಲಾಗಿದೆ. ಈ ಪ್ರದೇಶದ ಬೇರೆ ಬೇರೆ ವಲಯಗಳಿಂದ ಮೂಡಿಬಂದ ಆಕಾಂಕ್ಷೆಗಳೆಲ್ಲವೂ ಈಡೇರಲು ಸಾಧ್ಯವಿಲ್ಲ. ಅವುಗಳಲ್ಲಿ ಕೆಲವು ಮಾತ್ರ ಅದರ ಆದ್ಯತೆಗನುಸಾರವಾಗಿ ಹಂತ ಹಂತವಾಗಿ ಜಾರಿಯಾಗುವುದು. ಕೃಷಿ ಪ್ರಧಾನವಾದ ಈ ಪ್ರದೇಶಕ್ಕೆ ಮೊದಲನೆ ಆಧ್ಯತೆ ಕೃಷಿಗೆ ಸಿಗಬಹುದು.

ಅಭಿವೃದ್ಧಿ ರಂಗದಲ್ಲಿ 9ನೇ ಯೋಜನೆಯಲ್ಲಿ ಕೃಷಿಗೆ ಹೆಚ್ಚು ಪ್ರಾಧಾನ್ಯತೆ ಕೊಡುವುದು.

ಜನರಿಗಾಗಿ ಜನರಿಂದಲೇ ರೂಪೀಕರಿಸಲ್ಪಟ್ಟ ಈ ಜನಕೀಯ ಯೋಜನೆಯು ಉತ್ತಮ ಮಟ್ಟದಲ್ಲಿ ಜಾರಿಯಾಗುವುದು ಎಲ್ಲಾ ಕಚೇರಿಗಳ ಪೂಣ ಸಹಕಾರ ಸಹಭಾಗಿತ್ವದೊಂದಿಗೆ ಮಾತ್ರ ಸಾಧ್ಯ.

ಈಗ ನಾವು ತಿಳಿದಿರುವಂತೆ ಪಂಚಾಯತಿಗೆ ವರ್ಷಕ್ಕೆ ಒಂದು ಕೋಟಿಯಂತೆ ಹಣ ದೊರಕಬಹುದೆಂದು ಅಂದಾಜು ಮಾಡಲಾಗಿರುವುದು. ಆದರೆ ಅದನ್ನೇ ನಂಬಿಕೊಂಡು ನಮ್ಮ ವಲಯದ ಅಭಿವೃದ್ಧಿಯ ಯೋಜನೆಯನ್ನು ಮಾಡುವುದರಲ್ಲಿ ತೊಡಗಬಾರದು. ಪಂಚಾಯತಿನ ಸಂಪನ್ಮೂಲ ಸಂಗ್ರಹದಲ್ಲಿ ನಾವೆಲ್ಲರೂ ಸಹಭಾಗಿಗಳಾಗಬೇಕು. ದತ್ತಿಗಳ ಮೂಲಕ, ದಾನಗಳ ಮೂಲಕ ಉದಾರಿಗಳಿಂದ ಹಣ ಸಂಗ್ರಹಿಸಬೇಕು. ನಮ್ಮ ವಲಯ ಕೃಷಿ ಭೂಮಿಯಾಗಿದೆ. ಇದಕ್ಕೆ ಬೇಕಾದ ಸಾಲದ ಹಣವನ್ನು ಸಹಕಾರಿ ಸಂಘಗಳಿಂದ ಪಡೆಯಬೇಕು. ಇದಕ್ಕಾಗಿ ಎಲ್ಲರೂ ಕೂಡಿ ಸಹಕಾರಿ ವಲಯವನ್ನು ವೃದ್ಧಿಸಬೇಕು. ಆ ಮೂಲಕ ಹಣ ಪಡೆದು ಕೃಷಿಯ ಅಭಿವೃದ್ಧಿಗೆ ತೊಡಗಬಹುದು. ಸಹಕಾರಿ ರಂಗದ ಮೂಲಕ ಹಾಲು, ಹಣ್ಣು, ತರಕಾರಿ, ಅಡಿಕೆ, ಅಕ್ಕಿ ಮುಂತಾದ ವಸ್ತುಗಳನ್ನು ಮಾರುವ ವ್ಯವಸ್ಥೆ ಮಾಡಿ ಮಧ್ಯವರ್ತಿಗಳ ಕಾಟವನ್ನು ತಪ್ಪಿಸಬೇಕು. ಕೃಷಿಗೆ ಮತ್ತು ಕುಡಿಯುವ ನೀರಿಗೆ ಸರಿಯಾದ ವ್ಯವಸ್ಥೆ ಮಾಡಬೇಕು. ಆದರೆ ಇದಕ್ಕೆ ಇಡೀ ಸಮಾಜದ ಸಹಕಾರ ಅಗತ್ಯ.

ಗ್ರಾಮಸಭೆಗಳ ಮೂಲಕ ಬಂದ ನಿರ್ದೇಶನಗಳನ್ನು ಸಂಪೂರ್ಣವಾಗಿ ಅಲ್ಲವಾದರೂ ಎಪ್ಪತ್ತೈದು ಶೇಕಡಾ ಪೂರೈಸುವಂತೆ ಸರಕಾರದ ಮೇಲೆ ಒತ್ತಡ ಹಾಕಬೇಕು. ಸರಕಾರದಿಂದ ಸಿಗಬಹುದಾದ ಅತ್ಯಧಿಕ ಪಾಲನ್ನು ಪಡೆದು ಅದರೊಂದಿಗೆ ಮಾನವ ಸಂಪನ್ಮೂಲವನ್ನು ಸೇರಿಸಿ ಯೋಜನೆಗಳನ್ನು ಪೂರ್ತಿಗೊಳಿಸಲು ನಾವೆಲ್ಲರೂ ಪ್ರಯತ್ನಿಸಬೇಕು. ಭ್ರಷ್ಟಾಚಾರವನ್ನು ಕೊನೆಗೊಳಿಸಿ, ಸಂತೃಪ್ತಿಯ ಸಮೃದ್ಧಿಯ ಸಮಾಜ ನಿರ್ಮಾಣಗೊಳ್ಳುವುದಕ್ಕೆ ಎಲ್ಲರ ಸಹಕಾರವನ್ನು ಕೋರುತ್ತ ಈ ಭಾಗವನ್ನು ಅಂತ್ಯಗೊಳಿಸುತ್ತೇನೆ.

ಮೀಂಜ ಗ್ರಾಮ ಪಂಚಾಯತಿನಲ್ಲಿ ತಾ. 1-12-1996ರಂದು ಜರಗಿದ ಅಭಿವೃದ್ಧಿ ಸೆಮಿನಾರಿನಲ್ಲಿ ಸೂಚಿಸಲ್ಪಟ್ಟ ನಿರ್ದೇಶನಗಳ ಹೆಚ್ಚುವರಿ ವರದಿ

ಕೃಷಿಯೂ ಜಲಸೇಚನವೂ

1. ಈ ಪಂಚಾಯತು ವಲಯದ ಖಾಸಗೀ ಮತ್ತು ಸರಕಾರಿ ಸ್ಥಳಗಳಲ್ಲಿ ಜನರ ಸಹಕಾರದೊಂದಿಗೆ ಸಸಿಗಳನ್ನು ನೆಟ್ಟು ಬೆಳೆಸುವುದು.
2. ಅಣೆಕಟ್ಟುಗಳು
   i) ನಾಡು ರಸ್ತಿಯಲ್ಲಿರುವ ಮಡಂದೂರಿನ ಅಣೆಕಟ್ಟನ್ನು ದುರಸ್ತಿಗೊಳಿಸುವುದು.
   ii) ಕುಳೂರು ಗ್ರಾಮದ ಚಿನಾಲ ಕೂಳಿಮೇರು, ಕೊಡಿಮಾರು ಎಂಬಲ್ಲಿ ಅಣೆಕಟ್ಟು.
   iii) ಮಜಿಬೈಲು ಗ್ರಾಮದ ಕಟ್ಟೆ ಮತ್ತು ನೆಲ್ಲಿಮಾರು ಎಂಬಲ್ಲಿ ಅಣೆಕಟ್ಟು ಮಂಜಹಿತ್ಲು ಕನ್ನಿವಳಚ್ಚಿಲು ಎಂಬಲ್ಲಿ ಅಣೆಕಟ್ಟು ನಿರ್ಮಿಸುವುದು.
   iv) ತಲೆಕಳ ಗ್ರಾಮದ ಕಲ್ಕುಟ್ಟಿಮಾರು ಮತ್ತು ಕೆಳಗಿನ ತಲೆಕಳದಲ್ಲಿ ಅಣೆಕಟ್ಟು.
   v) ಕಾಡೂರಿನಲ್ಲಿ ಬಾರೆಟ್ಟು-ದುಗ್ಗಟ್ಟು ಎಂಬಲ್ಲಿ ವೆಂಟೆಡ್ ಡೇಮ್ ನಿರ್ಮಿಸಿ ಇಲ್ಲಿ ಪಂಪುಸೆಟ್ಟು ಅಳವಡಿಸಿ ಭತ್ತದ ಕೃಷಿಗೆ ನೀರೊದಗಿಸುವುದು.
   vi) ಚಾರ್ಲ ಎಂಬಲ್ಲಿ ಉಪ್ಪಳ ಹೊಳೆಗೆ ಅಣೆಕಟ್ಟು.

ಮದಕ ಮತ್ತು ಕೆರೆಗಳ ರಿಪೇರಿ

   i) ನಡುಹಿತ್ಲಿನಲ್ಲಿ ಮದಕ ರಿಪೇರಿ
   ii) ತಲೆಗಳ ಕಾವುಡೆಲು ಕೆರೆ, ನೀಡಿಬೈಲು ಕೆರೆ, ಪೊಳ್ಳಕಜೆ ಕೆರೆ ರಿಪೇರಿ
   iii) ಮಜಿಬೈಲು ಕೊಡ್ಡೆ ಎಂಬಲ್ಲಿ ಎರಡು ಕೆರೆ ರಿಪೇರಿ.
   iv) ಮಜಿಬೈಲು ಕೊಡ್ಡೆ ಎಂಬಲ್ಲಿ ಹಳೆ ಮದಕ ರಿಪೇರಿ ಮತ್ತು ಚೆಕ್‌ಡೇಮ್ ಮಾಡಿಸುವುದು.

ಕಟ್ಟಪುಣಿಗಳು

   i) ಕಳ್ಳಿಗೆ ಕಟ್ಟಪುಣಿಯನ್ನು ಎತ್ತರಿಸುವುದು.
   ii) ಕೃಷಿ ಭೂಮಿಯ ವಿವರ ಹೊಂದಿರುವ ಹಸಿರು ಕಾರ್ಡುಗಳನ್ನು ಎಲ್ಲಾ ಕೃಷಿಕರಿಗೆ ಒದಗಿಸುವುದು.
   iii) ಕೃಷಿಯನ್ನು ನಾಶಮಾಡುವ ಹಂದಿಯ ಹಾವಳಿಯನ್ನು ನಿವಾರಿಸಲು ವಿದ್ಯುತ್ ಅಥವಾ ಸೋಲಾರ್ ಮುಳ್ಳುತಂತಿಯ ಬೇಲಿಗೆ ಸಹಾಯ ಧನದ ಮೂಲಕ ಸಹಕರಿಸುವುದು.

ಪಶು ಸಂಗೋಪನೆಯೂ ಮೀನುಗಾರಿಕೆಯೂ

1) ಪಶು ಸಂಗೋಪನೆ ಮತ್ತು ಮೀನುಗಾರಿಕೆಗಾಗಿ ಸಾಲದ ಸೌಲಭ್ಯ ದೊರಕಲು ಇಂತಿಷ್ಟೇ ಭೂಮಿ ಇರಬೇಕೆಂಬ ಈಗ ಚಾಲ್ತಿಯಲ್ಲಿರುವ ನಿಯಮವನ್ನು ರದ್ದುಗೊಳಿಸಿ ಎಲ್ಲರಿಗೂ ಈ ಸೌಲಭ್ಯ ದೊರಕುವಂತೆ ಮಾಡಬೇಕು.
2) ಜೈವಿಕ ಗೊಬ್ಬರದ ಶೇಖರಣೆ ಮತ್ತು ವಿತರಣೆಗೆ ವ್ಯವಸ್ಥೆ.

ವಿದ್ಯಾಭ್ಯಾಸ

1. ರಾಜಕೀಯದಿಂದ ಶಾಲೆಯನ್ನು ಸಂಪೂರ್ಣ ಮುಕ್ತಗೊಳಿಸುವುದು.
2. ಶಾಲಾ ಕಟ್ಟಡಗಳು

   ಜಿ.ಯು.ಪಿ ಸ್ಕೂಲು ಕಡಂಬಾರಿನಲ್ಲಿ ಏಳು ತರಗತಿಗಳಿಗೆ ಇಪ್ಪತ್ತೊಂದು ಡಿವಿಜನುಗಳಿವೆ. ಸಾಕಷ್ಟು ಕಟ್ಟಡಗಳನ್ನು ಒದಗಿಸಬೇಕು.
3. ತಲೆಕಳ ಎಲ್.ಪಿ. ಶಾಲೆಗೆ ಶಾಶ್ವತ ಕಟ್ಟಡ ಒದಗಿಸುವುದು.
4. ಜಿ.ಎಲ್.ಪಿ. ಶಾಲೆ ಮಜಿಬೈಲು, ಇದಕ್ಕೆ ಶಾಶ್ವತ ಕಟ್ಟಡ ಏರ್ಪಡಿಸುವುದು.
5. ಎಲ್ಲಾ ಶಾಲೆಗಳಲ್ಲಿ ವಾಚನಾಲಯಗಳನ್ನು ಒದಗಿಸುವುದು.
6. ವಿದ್ಯಾವರ್ಧಕ ಯು.ಪಿ. ಶಾಲೆ, ಮೀಯಪದವು

   ಶ್ರೀ ಶಂಕರ ನಾರಾಯಣ ಎಲ್.ಪಿ. ಶಾಲೆ ಕೊಳ್ಯೂರು

   ಸರಕಾರಿ ಎಲ್.ಪಿ. ಶಾಲೆ, ತಲಕಳ

   ಸರಕಾರಿ ಯು.ಪಿ. ಶಾಲೆ, ಮೂಡಂಬೈಲು

   ಈ ಶಾಲೆಗಳಿಗೆ ಮೂತ್ರಾಲಯಗಳನ್ನು ಒದಗಿಸುವುದು.
7. ಫಾಣೇವಿಲಾಸ ಎ.ಎಲ್.ಪಿ. ಶಾಲೆ, ತೊಟ್ಲೆತೋಡಿ

   ಶ್ರೀ ಶಂಕರನಾರಾಯಣ ಎ.ಎಲ್.ಪಿ. ಶಾಲೆ, ಕೋಳ್ಯೂರು

   ಸರಕಾರಿ ಕಿರಿಯ ಪ್ರಾಥಮಿಕ ಶಾಲೆ, ತಲೆಕಳ

   ಸರಕಾರಿ ಯು.ಪಿ. ಶಾಲೆ, ಮೂಡಂಬೈಲು ಈ ಶಾಲೆಗಳಿಗೆ ಕಕ್ಕುಸು ಒದಗಿಸುವುದು.
8. ಜಿ.ಯು.ಪಿ. ಶಾಲೆ, ಕಡಂಬಾರು

   ಜಿ.ಯು.ಪಿ. ಶಾಲೆ, ಮೂಡಂಬೈಲು

   ಜಿ.ಎಲ್.ಪಿ. ಶಾಲೆ, ತಲೆಕಳ, ಕುಳೂರು, ಮಜಿಬೈಲು

   -ಇವುಗಳಿಗೆ ಆಟದ ಬೈಲು ಒದಗಿಸುವುದು.

ಕೈಗಾರಿಕೆ

1. ಕುಲಕಸಬುದಾರರಿಗೆ ತಮ್ಮ ಕೆಲಸಗಳಿಗೆ ಬೇಕಾದ ತಾಂತ್ರಿಕ ಉಪಕರಣಗಳನ್ನು ಕೊಂಡುಕೊಳ್ಳಲು ಕಡಿಮೆ ಬಡ್ಡಿಯಲ್ಲಿ ಸಾಲ ಒದಗಿಸುವುದು.
2. ಮುದ್ರಣಾಲಯ ತೆರೆಯುವವರಿಗೆ ಕಡಿಮೆ ಬಡ್ಡಿಯಲ್ಲಿ ಸಾಲ ಒದಗಿಸುವುದು.
3. ಅಣಬೆ ವ್ಯವಸಾಯಕ್ಕೆ ಪ್ರೋತ್ಸಾಹ ಮತ್ತು ಮಾರುಕಟ್ಟೆಗೆ ಪ್ರೋತ್ಸಾಹ.
4. ಎಣ್ಣೆ ಮತ್ತು ಹಿಟ್ಟಿನ ಗಿರಣಿಗೆ ಸೌಲಭ್ಯ ಒದಗಿಸುವುದು.
5. ನೇಕಾರರಿಗೆ ಬೇಕಾದ ಉಪಕರಣಗಳನ್ನು ಪಡಕೊಳ್ಳಲು ಸಹಾಯಧನದ ಮೂಲಕ ಸಾಲ ಒದಗಿಸುವುದು. ಮಗ್ಗದ ಬಟ್ಟೆಗಳನ್ನು ಮಾರಲು ಮಾರ್ಕೆಟು ಒದಗಿಸುವುದು.

ಆರೋಗ್ಯ - ಕುಡಿ ನೀರು

1. ಈ ಕೆಳಗಿನ ಪ್ರದೇಶಗಳಲ್ಲಿ ಬಾವಿ ಅಥವಾ ಕೊಳವೆ ಬಾವಿ ನಿರ್ಮಿಸುವುದು.

1. ಅಡ್ಡಂತರ ಕಾಡು 2. ಕುಂಬೆಹಿತ್ಲು 3. ಕೋರಿಕ್ಕಾರ್ 4. ಸುಣ್ಣಾರ ಮತ್ತು ತಲೆಕ್ಕಿ

2. ಕುಡಿಯುವ ನೀರಿನ ಬಾವಿಗಳಿಗೆ ನಿಯಮಿತವಾಗಿ ಬ್ಲೀಚಿಂಗ್ ಪೌಡರ್ ಬಳಸುವುದು.

3. ಕನಿಷ್ಟ ಎರಡು ವಾರ್ಡುಗಳಿಗೆ ಒಂದರಂತೆ ಪ್ರೈಮರಿ ಹೆಲ್ತ್ ಸೆಂಟರನ್ನು ಸ್ಥಾಪಿಸುವುದು.

   III ಮತ್ತು VIIನೇ ವಾರ್ಡಿಗೆ ಮೂಡಂಬೈಲು ಶಾಲಾ ಬಳಿಯಲ್ಲೂ, VIನೇ ವಾರ್ಡಿಗೆ ಕೋಳ್ಯೂರು ಶಾಲೆಯ ಸಮೀಪವೂ IV, V ಮತ್ತು IXನೇ ವಾರ್ಡಿಗೆ ಬಟ್ಯಪದವಿನಲ್ಲಿಯ PHCಯನ್ನು ಸ್ಥಾಪಿಸಬೇಕು.

4. ಎಲ್ಲಾ ವಾರ್ಡುಗಳಲ್ಲಿ ಸಹಕಾರಿ ಆಸ್ಪತ್ರೆ ಸ್ಥಾಪಿಸುವುದು.

5. ಪ್ರತೀ ಮನೆಗೆ ಕಕ್ಕುಸು ನಿರ್ಮಾಣ ಮತ್ತು ಪಂಚಾಯತ್ ಪ್ರದೇಶದ ಎಲ್ಲಾ ಮನೆಗಳಿಗೆ ನಿಯಮಿತವಾಗಿ ಬೇಟಿ ನೀಡಿ ವಠಾರ ಶುಚಿತ್ವ ಆರೋಗ್ಯದ ಕುರಿತು ಮಾಹಿತಿ ಒದಗಿಸುವರೆ ವಾರ್ಡು ಮಟ್ಟದಲ್ಲಿ ಸ್ವಯಂ ಸೇವಾ ಸಮಿತಿಗಳನ್ನು ರೂಪೀಕರಿಸುವುದು. ಸೊಳ್ಳೆಗಳ ನಿವಾರಣೆಗೆ ಆಗಿಂದಾಗೆ ಔಷಧಿ ಸಿಂಪಡಿಸುವುದು.

ಸಾರಿಗೆ ಚೈತನ್ಯ ಮತ್ತು ಮಾರ್ಕೆಟ್

1. ನೀರೊಳಿಕೆ - ಸಾಲೆದೇರದ ವರೆಗೆ ಕಾಲುದಾರಿ ರಚನೆ.

2. ಚಿಗುರುಪಾದೆದಿಂದ ಎಲಿಯಾಣದ ವರೆಗೆ ರಸ್ತೆ ಡಾಮರೀಕರಣ.

3. ಬಟ್ಯಪದವಿನಿಂದ ಬಪ್ಪಾಯಿ ತೊಟ್ಟಿಯ ವರೆಗೆ ಮಾರ್ಗಕ್ಕೆ ಡಾಮರೀಕರಣ ಮತ್ತು ಬಪ್ಪಾಯಿ ತೊಟ್ಟಿಯಿಂದ ಕಾವುಡೇಲು ತನಕ ಮಾರ್ಗ ನಿರ್ಮಾಣ.

4. ತೋಡುಪಳ್ಳದಿಂದ ತಲೇಕಲ ಬಯಲಿನ ವರೆಗೆ ಮಾರ್ಗ ನಿರ್ಮಾಣ.

5. ಮೀಯಪದವಿನಿಂದ ಪೊಳ್ಳಕಜೆಯ ಮೂಲಕ ಕೋಳ್ಯೂರಿಗೆ ಸಂಪರ್ಕವಿರುವ ಕಾಲುದಾರಿಯನ್ನು ಮಾರ್ಗವಾಗಿ ಪರಿವರ್ತಿಸುವುದು.

6. ಬಟ್ಯಪದವಿನಿಂದ ಕಾನದ ವರೆಗೆ ಮಾರ್ಗ ನಿರ್ಮಾಣ.

7. ಕುಂಬೆ ಹಿತ್ತಿಲುನಲ್ಲಿ ಮೀಯಪದವು ಮಂಜೇಶ್ವರ ಮಾರ್ಗಕ್ಕೆ ಸಂಪರ್ಕ ಕಲ್ಪಿಸಲು ಒಂದು ಕಾಲು ಸಂಕದ ನಿರ್ಮಾಣ.

8. ಕರಿಬೈಲು ಕಮ್ಯೂನಿಟಿ ಸೆಂಟರ್‌ನ ಬಳಿಯಿಂದ ಮೇಲಿನ ಮಜಿಬೈಲು ಕಾಲು ಸಂಕದ ವರೆಗೆ ಮಾರ್ಗ ನಿರ್ಮಾಣ.

9. ಕಾವುಡೇಲಿನಿಂದ ತಲೇಕಳ ಬಯಲಿನ ವರೆಗೆ ಸುಮಾರು ಎರಡು ಕಿಲೋ ಮೀಟರ್ ವರೆಗೆ ಕಾಲು ದಾರಿಯ ನಿರ್ಮಾಣ.

10. ಬೆಜ್ಜ-ಕೊಳಂಜ-ಕೌಡೂರು ಕಟ್ಟದ ವರೆಗೆ ಮಾರ್ಗ ದುರಸ್ತಿ.

ಚೈತನ್ಯ

1. ಕುಳೂರು ಚಿನಾಲದಲ್ಲಿ ಒಂದು ಟ್ರಾನ್ಸ್‌ಫಾರ್ಮರ್ ಸ್ಥಾಪನೆ.

2. ಮಜಿಬೈಲು ಕಡಂಬಾರು ಮೂಡಂಬೈಲು ಗ್ರಾಮದ ಕೃಷಿಕರಿಗೆ ವಿದ್ಯುತ್ ಸಂಪರ್ಕ ಒದಗಿಸಲು 1990ರಲ್ಲಿ ಅಂಗೀಕರಿಸಿದ ಮಿನಿಮಮ್ ಗ್ಯಾರಂಟಿ ಪ್ರಕಾರ ಕೂಡಲೇ ವಿದ್ಯುತ್ ಸಂಪರ್ಕ ಒದಗಿಸಬೇಕು.

3. ಬುಡ್ರಿಯ ಕೆದುವಾರು ಬಳಿಯಲ್ಲಿ ಟ್ರಾನ್ಸ್‌ಫಾರ್ಮರ್ ಸ್ಥಾಪಿಸುವುದು.

4. ಕಳಿಯೂರು ಗ್ರಾಮದ ಕೊನಿಲ ಎಂಬಲ್ಲಿ ಒಂದು ಟ್ರಾನ್ಸ್‌ಫಾರ್ಮರ್.

ಭವನ ನಿರ್ಮಾಣ ಮತ್ತು ಸಾಮಾಜಿಕ ಕ್ಷೇಮ

1. ವಸತಿ ರಹಿತರನ್ನು ಗುರುತಿಸಿ ಅವರಿಗೆ ಬೇಕಾದ ವ್ಯವಸ್ಥೆಯನ್ನು ಕಲ್ಪಿಸುವುದು.

2. D.W.C.R.A.ಯನ್ನು ವ್ಯಾಪಕವಾಗಿ ಅನುಷ್ಠಾನಗೊಳಿಸಿ ಮಹಿಳೆಯರನ್ನು ಆರ್ಥಿಕವಾಗಿ ಅಭಿವೃದ್ಧಿಗೊಳಿಸುವುದು.
3. ಪಂಚಾಯತ್ ಅಧೀನದಲ್ಲಿರುವ ಸ್ಥಳಗಳಲ್ಲಿ ವಸತಿ ರಹಿತರಿಗೆ ನಿವೇಶನಗಳನ್ನು ಹಂಚುವುದು.
4. ಪರಂಬೋಕು ಸ್ಥಳಗಳಲ್ಲಿ ವಸತಿ ಹೊಂದಿರುವವರಿಗೆ ರೇಷನ್ ಕಾರ್ಡಿಗೆ ಪಂಚಾಯತಿನಿಂದ ಮನೆ ನಂಬ್ರ ವಿತರಿಸುವುದು.
5. ಭೂಮಿ ಇದ್ದು ಪಟ್ಟೆ ಸಿಗದವರಿಗೆ ಪಟ್ಟೆ ವಿತರಣೆ ವ್ಯವಸ್ಥೆ ಮಾಡುವುದು.

ಸಂಸ್ಕೃತಿ

1. ಪ್ರತೀ ವಾರ್ಡಿಗೊಂದು ಸಾರ್ವಜನಿಕ ಆಟದ ಮೈದಾನು ನಿರ್ಮಿಸುವುದು.
2. ಪ್ರತೀ ವಾರ್ಡಿಗೊಂದರಂತೆ ವಾಚನಾಲಯಗಳನ್ನು ನಿರ್ಮಿಸಿ ಸ್ಥಳೀಯ ರಿಜಿಸ್ಟರ್ಡ್ ಸಂಘ ಸಂಸ್ಥೆಗಳಿಗೆ ವಹಿಸಿಕೊಡುವುದು.
3. ಗ್ರಾಮ ಪಂಚಾಯತ್ ಕೇಂದ್ರದಲ್ಲಿ ಯಕ್ಷಗಾನ ನಾಟಕ ಸಂಗೀತ ಇತ್ಯಾದಿ ಕಲೆಗಳ ತರಬೇತಿ ಕೇಂದ್ರವನ್ನು ಸ್ಥಾಪಿಸುವುದು.
4. ಸಾರ್ವಜನಿಕ ಮೈದಾನಗಳಲ್ಲಿ ಬಯಲು ರಂಗ ಮಂದಿರವನ್ನು ಸ್ಥಾಪಿಸಿ T.V. ವೀಕ್ಷಣೆ ಹಾಗೂ ಇನ್ನಿತರ ಕಲಾ ಕಾರ್ಯಕ್ರಮವನ್ನು ಏರ್ಪಡಿಸಬೇಕು.
5. ಪ್ರತೀ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಧ್ವನಿವರ್ಧಕದ ಪರವಾನಿಗೆಯನ್ನು ಪಂಚಾಯತಿನಿಂದಲೇ ನೀಡುವ ಸೌಕರ್ಯ ಒದಿಗಿಸುವುದು.
6. ಜನ ವಿದ್ಯಾ ಕೇಂದ್ರ ಪ್ರಸ್ತುತ ಎರಡಿದ್ದು ಇದು ಎಲ್ಲಾ ವಾರ್ಡಿನಲ್ಲಿ ಸ್ಥಾಪಿಸಲ್ಪಡಬೇಕು.

ವನಿತಾ

1. ಪೂರ್ಣ ಮದ್ಯಪಾನ ನಿಷೇಧ ಜ್ಯಾರಿಗೊಳಿಸಬೇಕು.
2. ಉದ್ಯೋಗದಲ್ಲಿ ಅರ್ಹ ಮಹಿಳಾ ಅಭ್ಯರ್ಥಿಗಳಿಗೆ ಮೀಸಲಾತಿ ಇರಿಸಿ ಕೆಲಸ ದೊರೆಯಬೇಕು. (ಸರಕಾರ ಅಂಗೀಕರಿಸಿದ ಮಹಿಳಾ ಮೀಸಲಾತಿ ಶೇಕಡಾ ಪ್ರಕಾರ 3:1)
3. ಮಹಿಳೆಯರಿಗೆ ಉದ್ಯೋಗ ಒದಗಿಸುವರೇ ಸ್ಥಳೀಯ ಆಡಳಿತ ಸಂಸ್ಥೆಯಾದ ಪಂಚಾಯತಿನ ಮುಖಾಂತರ ಹೆಸರು ನೊಂದಾಯಿಸುವ ಪದ್ಧತಿ ಜಾರಿಗೊಳಿಸಬೇಕು.
4. ಸಾರ್ವಜನಿಕ ಕ್ಷೇತ್ರದಲ್ಲಿ ಮಹಿಳೆಯರು ಕಾರ್ಯ ಪ್ರವೃತ್ತವಾಗುವಂತೆ ಪ್ರೋತ್ಸಾಹ ನೀಡುವ ಕ್ರಮ ಜ್ಯಾರಿಗೊಳಿಸಬೇಕು.
5. ಸಾಕ್ಷರತಾ ಆಂದೋಲನದ ರೀತಿಯಲ್ಲಿ ವರದಕ್ಷಿಣೆಯ ಪಿಡುಗನ್ನು ನಿಲ್ಲಿಸಲು 9ನೆಯ ಯೋಜನೆಯ ಅಂಗವಾಗಿ ವರದಕ್ಷಿಣೆ ನಿವಾರಣಾ ಆಂದೋಳನಕ್ಕೆ ರೂಪು ನೀಡಬೇಕು.
6. ಮೀಂಜ ಪಂಚಾಯತಿನ ಎಲ್ಲಾ ವಾರ್ಡ್‌ಗಳಿಗೆ ಮಹಿಳಾ ಸಹಕಾರಿ ಸಂಘವನ್ನು ಸ್ಥಾಪಿಸಬೇಕು.
7. ಗಂಡು ಮಕ್ಕಳು ಇರುವ ವಿಧವೆಯರಿಗೆ ಸಹಾ ವಿಧವಾ ವೇತನ ದೊರೆಯಬೇಕು.
8. ಬೀಡಿ ಕ್ಷೇತ್ರದಲ್ಲಿ ಖಾಸಗಿ ಬೀಡಿ ಹಾಗೂ ದಿನೇಶ್ ಬೀಡಿ ಕಾರ್ಮಿಕರಿಗೆ ಸಮಾನ ಮಜೂರಿ ದೊರೆಯಬೇಕು.
9. ಮಹಿಳೆಯರಿಗೆ ತಾಂತ್ರಿಕ ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸಬೇಕು.

ಸಹಕಾರಿ ವಲಯ

1. ಅರ್ಹತೆಯುಳ್ಳವರಿಗೆ ಸಹಕಾರಿ ರಂಗದಲ್ಲಿ ಸದಸ್ಯತ್ವ ನೀಡಿ ಸಾಲ ಸೌಲಭ್ಯ ಒದಗಿಸುವುದು.
2. ಖಾಸಗಿ ಹಣಕಾಸು ಸಂಸ್ಥೆಗಳಿಗೆ ಪರವಾನಗಿ ಕೊಡುವುದನ್ನು ನಿಲ್ಲಿಸುವುದು.

3. ಮಹಿಳೆಯರಿಗೆ ಉದ್ಯೋಗ ಕಲ್ಪಿಸಲು ಅನುಕೂಲವಾಗುವಂತೆ ಮಹಿಳಾ ಸಹಕಾರಿ ಸಂಘಗಳನ್ನು ಸ್ಥಾಪಿಸುವುದು.

4. ಕೃಷಿ ಉತ್ಪನ್ನಗಳ ಮಾರಾಟಕ್ಕೆ ಸಹಕಾರಿ ಮಾರ್ಕೆಟಿಂಗ್ ಸೊಸೈಟಿ ಸ್ಥಾಪಿಸುವುದು.

5. "ಕೇಂಪ್ಕೊ"ದ ಶಾಖೆಯನ್ನು ಈ ಪಂಚಾಯತು ವಲಯದಲ್ಲಿ ಸ್ಥಾಪಿಸುವುದು.

6. ಪಂಚಾಯತಿನ ನಿಕ್ಷೇಪಗಳನ್ನು ಸಹಕಾರಿ ಬೇಂಕುಗಳಲ್ಲಿ ನಿಕ್ಷೇಪಿಸಬೇಕು.

ಪರಿಶಿಷ್ಟ ಮತ್ತು ಪರಿಶಿಷ್ಟ ವರ್ಗ ಕ್ಷೇಮ

1. ಈ ಪಂಚಾಯತಿನ ಎಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಕೊಲನಿಗಳಲ್ಲಿ ಒಂದೊಂದು ನರ್ಸರಿ ಶಾಲೆಗಳನ್ನು ಸ್ಥಾಪಿಸುವುದು.

2. ಈ ಕೊಲನಿಗಳಲ್ಲಿ ಇಲ್ಲದ ಕಡೆ ಕಮ್ಯೂನಿಟಿ ಹಾಲ್‌ಗಳನ್ನು ಸ್ಥಾಪಿಸುವುದು.

3. ಟಿ.ವಿ. ವ್ಯವಸ್ಥೆಯನ್ನು ಒದಗಿಸುವುದು.

ಸಂಪನ್ಮೂಲ ಸಂಗ್ರಹ

1. ವೃತ್ತಿ ತೆರಿಗೆ ಮತ್ತು ಕಟ್ಟಡ ತೆರಿಗೆಯನ್ನು ಕ್ರಮವತ್ತಾಗಿ ವಿಧಿಸಿ ವರಮಾನ ಹೆಚ್ಚಿಸುವುದು.

2. ಪರಂಬೋಕು ಸ್ಥಳಗಳಲ್ಲಿರುವ ಫಲ ಮರಗಳ ಬೆಳೆಯನ್ನು ಆಯಾ ಕಾಲದಲ್ಲಿ ಏಲಂ ಮಾಡಿ ಅಥವಾ ಸ್ವಾಧೀನವಿರುವವರಿಗೆ ಗೇಣಿಗೆ ಕೊಡುವುದು.

3. ವಾಹನ ತೆರಿಗೆಗಳ ವಿಹಿತ ಪಂಚಾಯತುಗಳಿಗೆ ದೊರಕುವಂತೆ ಮಾಡುವುದು.

4. ಪರಂಬೋಕು ಸ್ಥಳಗಳಲ್ಲಿ ಮರಗಳನ್ನು ಬೆಳೆಸುವುದು.